ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 239
2. ಸದಸ್ಯರ ಹೆಸರು : ಶ್ರೀ ಪ್ರಿಯಾಂಕ್ ಎಂ. ಖರ್ಗೆ (ಚಿತ್ತಾಪುರ)
3. ಉತ್ತರಿಸಬೇಕಾದ ದಿನಾಂಕ : 25.09.2020
4. ಉತ್ತರಿಸುವ ಸಚಿವರು : ಸಹಕಾರ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಕಲಬುರಗಿ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನ ಬೆಳೆಗಳಾದ ಹೆಸರುಕಾಳು ಮತ್ತು ಉದ್ದಿನಬೇಳೆ ಬೆಳೆಯನ್ನು ಬಿತ್ತನೆ ಮಾಡಿ, ಹಲವು ಕಡೆ ಬೆಳೆಗಳನ್ನು ಕಟಾವು ಮಾಡಲಾಗಿದ್ದು ರೈತರ ಹಿತ ಕಾಪಾಡುವ ನಿಟ್ಟಿನಲ್ಲಿ ಆದಷ್ಟು ಬೇಗನೇ ಖರೀದಿ ಕೇಂದ್ರಗಳನ್ನು ಪ್ರಾರಂಭಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; ಹಾಗೂ ವಿಳಂಬವಾಗಲು ಕಾರಣವೇನು?	ಹೆಸರುಕಾಳು ಹಾಗೂ ಉದ್ದಿನಕಾಳು ಉತ್ಪನ್ನವನ್ನು ಬೆಳೆಯುವ ರಾಜ್ಯದ ಪ್ರಮುಖ ಜಿಲ್ಲೆಗಳಲ್ಲಿ ಸದರಿ ಉತ್ಪನ್ನಗಳ ಧಾರಣೆ ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದ ಕೂಡಲೇ, ಬೆಂಬಲ ಬೆಲೆ ಯೋಜನೆಯಡಿ ಖರೀದಿಸಲು ಕೇಂದ್ರ ಸರ್ಕಾರದ ಅನುಮೋದನೆ ಕೋರಿ ದಿನಾಂಕ:27-8-2020ರಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಕೇಂದ್ರ ಸರ್ಕಾರವು ದಿನಾಂಕ:14.09.2020ರಂದು ಬೆಂಬಲ ಬೆಲೆ ಯೋಜನೆಯಡಿ ಗರಿಷ್ಠ 21,725 ಮೆಟ್ರಿಕ್ ಟನ್ ಎಫ್.ಎ.ಕ್ಯೂ ಗುಣಮಟ್ಟದ ಹೆಸರುಕಾಳು ಹಾಗೂ ಗರಿಷ್ಠ 6,575 ಮೆಟ್ರಿಕ್ ಟನ್ ಎಫ್.ಎ.ಕ್ಯೂ ಗುಣಮಟ್ಟದ ಉದ್ದಿನಕಾಳು ಖರೀದಿಸಲು ಅನುಮೋದನೆ ನೀಡಿರುತ್ತದೆ. ಕೇಂದ್ರ ಸರ್ಕಾರದ ಅನುಮೋದನೆಯ ಮೇರೆಗೆ ರಾಜ್ಯ ಸರ್ಕಾರವು ದಿನಾಂಕ:15.09.2020ರಂದು ಎಫ್.ಎ.ಕ್ಯೂ ಗುಣಮಟ್ಟದ ಹೆಸರುಕಾಳು ಉತ್ಪನ್ನಕ್ಕೆ ಬೆಂಬಲ ಬೆಲೆ ಪ್ರತಿ ಕ್ವಿಂಟಾಲ್‌ಗೆ ರೂ.7196/- ರಂತೆ ಹಾಗೂ ಉದ್ದಿನಕಾಳು ಉತ್ಪನ್ನಕ್ಕೆ ಪ್ರತಿ ಕ್ವಿಂಟಾಲ್‌ಗೆ ರೂ.6000/- ರಂತೆ ಖರೀದಿಸಲು ಅನುಮತಿ ನೀಡಿ ಆದೇಶಿಸಿದ್ದು, ರೈತ ನೋಂದಣಿ ಕಾಲಾವಧಿಯನ್ನು 30 ದಿನಗಳವರೆಗೆ ಹಾಗೂ ನೋಂದಣಿ ಕಾರ್ಯದ ಜೊತೆಯಲ್ಲಿಯೇ ಖರೀದಿ ಕಾಲಾವಧಿಯನ್ನು 60 ದಿನಗಳವರೆಗೆ ನಿಗದಿಪಡಿಸಿ ಖರೀದಿಸಲು ಕ್ರಮ ವಹಿಸಲಾಗಿದೆ.

ಸಇ 484 ಎಂಆರ್‌ಇ 2020

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	475
ಸದಸ್ಯರ ಹೆಸರು	:	ಶ್ರೀ ಸತೀಶ್ ಎಲ್.ಜಾರಕಿಹೊಳಿ (ಯಮಕನಮರಡಿ)
ಉತ್ತರಿಸಬೇಕಾದ ದಿನಾಂಕ	:	25.09.2020
ಉತ್ತರಿಸಬೇಕಾದ ಸಚಿವರು	:	ಮಾನ್ಯ ನಗರಾಭಿವೃದ್ಧಿ ಸಚಿವರು

ಪ್ರಶ್ನೆ	ಉತ್ತರ
ರಾಜ್ಯದ ಮಹಾನಗರಪಾಲಿಕೆಗಳ ವ್ಯಾಪ್ತಿಯಲ್ಲಿ ಅನುಮತಿಯಿಲ್ಲದೆ ಕಟ್ಟಡ ನಿರ್ಮಾಣ ಮಾಡಿದರೆ ಅದನ್ನು ಸಕ್ರಮಗೊಳಿಸುವ ಅಧಿಕಾರ ಮಹಾನಗರಪಾಲಿಕೆಗೆ ಇದೆಯೇ?	ಕರ್ನಾಟಕ ಮಹಾನಗರಪಾಲಿಕೆಗಳ ಅಧಿನಿಯಮ 1976ರ ಕಲಂ 321-ಎ ರಂತೆ ಕಲಂ 300, 321 ರಡಿ ಕಟ್ಟಡ ಪರವಾನಿಗೆ ಅನುಮತಿ ಹಾಗೂ ಕಲಂ 423 ರಡಿ ರಚಿಸಲಾದ ಕಟ್ಟಡ ಉಪವಿಧಿಗಳನ್ನು ಉಲ್ಲಂಘಿಸಿ ಯಾವುದೇ ಕಟ್ಟಡ ನಿರ್ಮಾಣವನ್ನು ಪೂರ್ಣಗೊಳಿಸಿದ್ದಲ್ಲಿ, ಮಹಾನಗರಪಾಲಿಕೆಯ ಆಯುಕ್ತರು ನಿರ್ಬಂಧಗಳು ಮತ್ತು ನಿಯಮಿಸಬಹುದಾದ ನಿಯಮಗಳಿಗೆ ಒಳಪಟ್ಟು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಕೆಲವು ಇತರೆ ಕಾನೂನುಗಳ (ತಿದ್ದುಪಡಿ) ಅಧಿನಿಯಮ 2013ರ ಪ್ರಾರಂಭದ ದಿನಾಂಕಕ್ಕೆ ಮೊದಲು ನಿರ್ಮಿಸಿದ ಕಟ್ಟಡಗಳನ್ನು ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಮತ್ತು ಕರ್ನಾಟಕ ಮಹಾನಗರಪಾಲಿಕೆ ಅಧಿನಿಯಮ 1976 ರಲ್ಲಿ ವಿಧಿಸಿರುವ ಷರತ್ತುಗಳಿಗೆ ಒಳಪಟ್ಟು ಸಕ್ರಮಗೊಳಿಸಲು ಅವಕಾಶವಿರುತ್ತದೆ.

ಸಂಖ್ಯೆ: ನಅಇ 107 ಎಂಎನ್‌ಇ 2020(ಇ)

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	476
ಸದಸ್ಯರ ಹೆಸರು	:	ಶ್ರೀ ಸತೀಶ್ ಎಲ್. ಜಾರಕಿಹೊಳಿ (ಯಮಕನಮರಡಿ)
ಉತ್ತರಿಸಬೇಕಾದ ದಿನಾಂಕ	:	25.09.2020
ಉತ್ತರಿಸಬೇಕಾದ ಸಚಿವರು	:	ನಗರಾಭಿವೃದ್ಧಿ ಸಚಿವರು

	ಪ್ರಶ್ನೆ	ಉತ್ತರ
ಅ)	ಬೆಳಗಾವಿ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಛತ್ರಪತಿ ಶಾಹೂ ಮಹಾರಾಜರ ಪುತ್ಥಳಿ ಅನಾವರಣ ಮಾಡಲು ಪಾಲಿಕೆ ನಿರ್ಣಯ ಕೈಗೊಂಡಿದೆಯೇ ;	ಹೌದು. ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ದಿನಾಂಕ 10.08.2018 ರಂದು ನಡೆದ ಪರಿಷತ್ ಸಭೆಯ ನಡವಳಿ ಸಂಖ್ಯೆ: 325 ರಲ್ಲಿ ಗೊತ್ತುವಳಿಯನ್ನು ಅಂಗೀಕರಿಸಲಾಗಿದೆ.
ಆ)	ಹಾಗಿದ್ದಲ್ಲಿ, ವಿಳಂಬವಾಗಲು ಕಾರಣವೇನು ;	ಬೆಳಗಾವಿ ಮಹಾನಗರ ಪಾಲಿಕೆಯ ಪರಿಷತ್ ಸಭೆಯಲ್ಲಿ ಈ ಬಗ್ಗೆ ಠರಾವು ಪಾಸಾಗುವುದು ಬಾಕಿ ಇರುತ್ತದೆ ಹಾಗೂ ಪ್ರತಿಮೆ ಸ್ಥಾಪನೆಗೆ ಸಂಬಂಧಿಸಿದಂತೆ ಪೌರಾಡಳಿತ ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ: ಪೌನಿ/ಜಿಪಿಎಸ್/ಪ್ರತಿಮೆ/ನಾಮ/ಸಿಆರ್/2012-13, ದಿನಾಂಕ 17.12.2012 ರನ್ವಯ ನಿಗಧಿಪಡಿಸಲಾದ ಪ್ರಕ್ರಿಯೆಗಳು ಜಾರಿಯಲ್ಲಿರುತ್ತದೆ.
ಇ)	ಪುತ್ಥಳಿ ಅನಾವರಣಕ್ಕೆ ತಗಲುವ ವೆಚ್ಚವೆಷ್ಟು ? (ವಿವರ ನೀಡುವುದು)	ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ದಿನಾಂಕ 10.08.2018 ರಂದು ನಡೆದ ಪರಿಷತ್ ಸಭೆಯ ನಡವಳಿ ಸಂಖ್ಯೆ: 325 ರಲ್ಲಿ 14 ನೇ ಹಣಕಾಸು ಯೋಜನೆಯಡಿ ರೂ. 1 ಕೋಟಿ ಅನುದಾನವನ್ನು ಕಾಯ್ದಿರಿಸಲಾಗಿದೆ.

ನಅಇ 31 ಎಸಿಬಿ 2020 (ಇ)

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ : 479

ಸದಸ್ಯರ ಹೆಸರು : ಶ್ರೀ.ಕುಮಾರ ಬಂಗಾರಪ್ಪ ಎಸ್.

ಉತ್ತರಿಸುವ ದಿನಾಂಕ : 25-09-2020

ಉತ್ತರಿಸಬೇಕಾದ ಸಚಿವರು : ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು.

ಕ್ರಮ ಸಂ.	ಪ್ರಶ್ನೆ	ಉತ್ತರ
1.	ಸೊರಬ ತಾಲ್ಲೂಕಿನಲ್ಲಿ ಅನಾನಸ್ – ಬಾಳೆ ಪಪ್ಪಾಯಿ ಇತ್ಯಾದಿ ತೋಟಗಾರಿಕೆ ಬೆಳೆಗಳನ್ನು ಅತ್ಯಾಧಿಕವಾಗಿ ರೈತರು ಬೆಳೆಯುತ್ತಿದ್ದು, ರೈತರಿಗೆ ಅನುಕೂಲ ಕಲ್ಪಿಸುವ ದೃಷ್ಟಿಯಿಂದ ಹಾಪ್ ಕಾಮ್ಸ್ ಕೇಂದ್ರ ತೆರೆಯುವ ಉದ್ದೇಶವನ್ನು ಸರ್ಕಾರ ಹೊಂದಿದೆಯೇ;	ಹೌದು, ಕೇಂದ್ರವನ್ನು ತೆರೆಯಲು ಉದ್ದೇಶಿಸಲಾಗಿದೆ.
2.	ಹಾಗಿದ್ದಲ್ಲಿ, ಹಾಪ್ ಕಾಮ್ಸ್ ತೆರೆಯಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು).	ರೈತರಿಗೆ ಹಾಗೂ ಗ್ರಾಹಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸೂಕ್ತ ಜಾಗವನ್ನು ಗುರುತಿಸಿ, ಹಾಪ್ ಕಾಮ್ಸ್ ಗೆ ಮಂಜೂರು ಮಾಡಿಕೊಡಲು ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯಿತಿ, ಸೊರಬ ರವರಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಸ್ಥಳ ಮಂಜೂರಾದ ನಂತರ ಹಾಪ್ ಕಾಮ್ಸ್ ಕೇಂದ್ರ / ಮಳಿಗೆಗಳನ್ನು ತೆರೆಯಲು ಅಗತ್ಯ ಕ್ರಮವಹಿಸಲಾಗುತ್ತದೆ.

ಸಂಖ್ಯೆ: HORTI 479 HGM 2020

(ನಾರಾಯಣಗೌಡ)
ಪೌರಾಡಳಿತ, ತೋಟಗಾರಿಕೆ
ಮತ್ತು ರೇಷ್ಮೆ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	483
ಸದಸ್ಯರ ಹೆಸರು	:	ಶ್ರೀ ಕುಮಾರ ಬಂಗಾರಪ್ಪ ಎಸ್. (ಸೊರಬ)
ಉತ್ತರಿಸಬೇಕಾದ ದಿನಾಂಕ	:	25-09-2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	ಸೊರಬ ಪಟ್ಟಣವನ್ನು ಸರಕಾರವು ಈಗಾಗಲೇ ಪುರಸಭೆಗೆ ಮೇಲ್ದರ್ಜೆಗೇರಿಸಿದ್ದು, ಪುರಸಭೆಗೆ ನೂತನ ಕಟ್ಟಡವನ್ನು ಯಾವಾಗ ಮಂಜೂರಾತಿ ಮಾಡಲಾಗುವುದು;	ಸೊರಬ ಪಟ್ಟಣದ ಪುರಸಭೆ ಕಟ್ಟಡ ನಿರ್ಮಾಣಕ್ಕೆ ಅನುದಾನ ಲಭ್ಯತೆ ಆಧರಿಸಿ, ಮುಂದಿನ ಕ್ರಮವಹಿಸಲಾಗುವುದು.
ಆ.	ಪುರಸಭೆ ಪ್ರಕ್ರಿಯೆಯ ಮೊದಲ ಹಂತವಾಗಿ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ನಿಯೋಜಿಸಿ ಸಂಪೂರ್ಣ ಪುರಸಭೆಯು ಕಾರ್ಯರೂಪಕ್ಕೆ ತರಲು ಸಮಯ ನಿಗಧಿಪಡಿಸಲಾಗಿದೆಯೇ; ಈ ಬಗ್ಗೆ ಕೈಗೊಂಡ ಕ್ರಮವೇನು ?	ಸೊರಬ ಪಟ್ಟಣ ಪಂಚಾಯತಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಕ್ರಿಯೆಯು ಸರ್ಕಾರದ ಹಂತದಲ್ಲಿ ಚಾಲನೆಯಲ್ಲಿರುವುದರಿಂದ ಅಂತಿಮಗೊಂಡ ನಂತರ ಅಧಿಕಾರಿ/ ಸಿಬ್ಬಂದಿಗಳನ್ನು ನಿಯೋಜಿಸುವ ಕುರಿತು ನಿಯಮಾನುಸಾರ ಕ್ರಮ ವಹಿಸಲಾಗುವುದು.

ಕಡತ ಸಂಖ್ಯೆ:ನಅಇ 308 ಎಸ್.ಎಫ್.ಸಿ 2020

(ಡಾ|| ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಹಾಗೂ
ರೇಷ್ಮೆ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 487
ಸದಸ್ಯರ ಹೆಸರು : ಶ್ರೀ ಗೌರಿಶಂಕರ್ ಡಿ.ಸಿ. (ತುಮಕೂರು ಗ್ರಾಮಾಂತರ)
ಉತ್ತರಿಸುವವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು
ಉತ್ತರಿಸುವ ದಿನಾಂಕ : 25.09.2020

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ತುಮಕೂರು ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕೈಗಾರಿಕೆ ಪ್ರದೇಶಗಳ ಅಭಿವೃದ್ಧಿಗಾಗಿ ಕಳೆದ 3 ವರ್ಷಗಳಲ್ಲಿ ಸರ್ಕಾರ ಮಂಜೂರು ಮಾಡಿ ಬಿಡುಗಡೆ ಮಾಡಿರುವ ಅನುದಾನದ ಮೊತ್ತವೆಷ್ಟು; (ಸಂಪೂರ್ಣ ವಿವರ ನೀಡುವುದು)	ತುಮಕೂರು ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಹಿರೇಹಳ್ಳಿ ಕೈಗಾರಿಕಾ ಪ್ರದೇಶ, ವಸಂತನರಸಾಪುರ ಕೈಗಾರಿಕಾ ಪ್ರದೇಶ ಹಂತ-1 (ಭಾಗಶಃ) ಮತ್ತು ಪ್ರಸ್ತಾವಿತ ವಸಂತನರಸಾಪುರ ಕೈಗಾರಿಕಾ ಪ್ರದೇಶ ಹಂತ-4 ರ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿಗಾಗಿ ಕಳೆದ ಮೂರು ವರ್ಷಗಳಲ್ಲಿ ಸರ್ಕಾರದಿಂದ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ ಹಾಗೂ ಸರ್ಕಾರಿ ಅನುದಾನದಿಂದ ಯಾವುದೇ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ.
ಆ	ಸದರಿ ಅನುದಾನದಲ್ಲಿ ಯಾವ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ: (ಸಂಪೂರ್ಣ ವಿವರ ನೀಡುವುದು)	ಯಾವುದೇ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ
ಇ	ಕಳೆದ 3 ವರ್ಷಗಳಲ್ಲಿ ಪ್ರಾರಂಭವಾಗಿ ಬರುವ ಕಾಮಗಾರಿಗಳು ಪ್ರಸ್ತುತ ಯಾವ ಹಂತದಲ್ಲಿದೆ: ಇವುಗಳಲ್ಲಿ ಪೂರ್ಣಗೊಂಡಿರುವ ಮತ್ತು ಅಪೂರ್ಣಗೊಂಡಿರುವ ಕಾಮಗಾರಿಗಳು ಯಾವುವು? (ಸಂಪೂರ್ಣ ವಿವರ ನೀಡುವುದು)	ಅನ್ವಯಿಸುವುದಿಲ್ಲ

ಸಿಐ 254 ಎಸ್‌ಪಿಐ 2020

(ಜಗದೀಶ್ ಶೆಟ್ಟರ್)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಸಾರ್ವಜನಿಕ ಉದ್ದಿಮೆಗಳ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: : 505

ಸದಸ್ಯರ ಹೆಸರು : ಶ್ರೀ. ಸೋಮಶೇಖರ ರೆಡ್ಡಿ ಜಿ. (ಬಳ್ಳಾರಿ ನಗರ)

ಉತ್ತರಿಸುವ ದಿನಾಂಕ : 25.09.2020

ಉತ್ತರಿಸುವ ಸಚಿವರು : ಮಾನ್ಯ ನಗರಾಭಿವೃದ್ಧಿ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಬಳ್ಳಾರಿ ನಗರದ ಹೊರ ವಲಯದಲ್ಲಿ ಹೊರ ವರ್ತುಲ ರಸ್ತೆ (Outer Ring Road) ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಬಳ್ಳಾರಿ ನಗರದ ಹೊರ ವಲಯದಲ್ಲಿ ಹೊರ ವರ್ತುಲ ರಸ್ತೆ (Outer Ring Road) ನಿರ್ಮಾಣ ಮಾಡುವ ಕಾಮಗಾರಿಯನ್ನು ಬಳ್ಳಾರಿ ಮಹಾನಗರಪಾಲಿಕೆ ವತಿಯಿಂದ ಕೈಗೊಂಡಿರುವುದಿಲ್ಲ.
ಆ)	ಹಾಗಿದ್ದಲ್ಲಿ, ಸದರಿ ಕಾಮಗಾರಿಯ ನೀಲಿನಕ್ಷೆ ತಯಾರು ಮಾಡಲಾಗಿದೆಯೇ;	ಅನ್ವಯಿಸುವುದಿಲ್ಲ.
ಇ)	ಹಾಗಿದ್ದಲ್ಲಿ ಯಾವ ಕಾಲಮಿತಿಯಲ್ಲಿ ಸದರಿ ಪ್ರಸ್ತಾವನೆಗೆ ಮಂಜೂರಾಗಿ ನೀಡಿ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು;	ಅನ್ವಯಿಸುವುದಿಲ್ಲ.
ಈ)	ಇಲ್ಲದಿದ್ದಲ್ಲಿ ಕಾರಣಗಳೇನು? ವಿವರ ನೀಡುವುದು.	ಅನ್ವಯಿಸುವುದಿಲ್ಲ

ಕಡತ ಸಂಖ್ಯೆ: ನಅಇ 13 ಎಬಿಸಿ 2020 (ಇ)

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರು : ಶ್ರೀ ಬಸವನಗೌಡ ದದ್ದಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 506

ಉತ್ತರಿಸಬೇಕಾದ ದಿನಾಂಕ : 25.09.2020

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಕಳೆದ ಸಾಲಿನಲ್ಲಿ ರಾಯಚೂರು ಜಿಲ್ಲೆಯಲ್ಲಿ ಸಾಲಮನ್ನಾ ಯೋಜನೆಯಡಿ ಸಾಲ ಮನ್ನಾ ಆಗಿರುವ ಮೊತ್ತವೆಷ್ಟು;	ಕಳೆದ ಸಾಲಿನಲ್ಲಿ ರಾಯಚೂರು ಜಿಲ್ಲೆಯಲ್ಲಿ ಸಾಲಮನ್ನಾ ಯೋಜನೆಯಡಿ 51,015 ರೈತರಿಗೆ ರೂ.24,656.92 ಲಕ್ಷಗಳ ಮೊತ್ತದ ಸಾಲ ಮನ್ನಾ ಆಗಿರುತ್ತದೆ.
ಆ)	ಜಿಲ್ಲೆಯ ರೈತರಿಗೆ ಸದರಿ ಯೋಜನೆಯು ಸಮರ್ಪಕವಾಗಿ ತಲುಪದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು? (ಸಂಪೂರ್ಣ ವಿವರ ನೀಡುವುದು)	ಹೌದು. ಈ ಬಗ್ಗೆ ದಿನಾಂಕ: 18-09-2020 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ ಹಾಗೂ ಕಾರ್ಯದರ್ಶಿ, ಡಿಪಿಎಆರ್ ಹಾಗೂ ಬೆಳೆ ಸಾಲಮನ್ನಾ ವಿಶೇಷ ಕೋಶ ಇವರೊಂದಿಗೆ ಸಭೆ ಜರುಗಿಸಿದ್ದು, ಇನ್ನೂ ಅರ್ಹತೆ ಬರದೇ ಇರುವ ರೈತರ ದಾಖಲಾತಿಗಳನ್ನು ತಾಲ್ಲೂಕು ಮಟ್ಟದ ಸಮಿತಿಯಲ್ಲಿ ಗುರುತಿಸಲು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲು ತೀರ್ಮಾನಿಸಲಾಗಿದ್ದು, ಈ ಬಗ್ಗೆ ಆದಷ್ಟು ಶೀಘ್ರವಾಗಿ ಪರಿಹಾರ ಮಾಡಲಾಗುವುದು.

ಸಂಖ್ಯೆ: ಸಿಒ 342 ಸಿಎಲ್ಎಸ್ 2020

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು : ಶ್ರೀ ಐಹೋಳೆ ಡಿ. ಮಹಾಲಿಂಗಪ್ಪ (ರಾಯಭಾಗ)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 508

ಉತ್ತರಿಸಬೇಕಾದ ದಿನಾಂಕ : 25-09-2020

ಉತ್ತರಿಸಬೇಕಾದವರು : ನಗರಾಭಿವೃದ್ಧಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬೆಳಗಾವಿ ಜಿಲ್ಲೆ, ರಾಯಭಾಗ ಮತಕ್ಷೇತ್ರದ ಕೇಂದ್ರ ಸ್ಥಳವಾದ ರಾಯಭಾಗ ಪಟ್ಟಣಕ್ಕೆ ಕೃಷ್ಣಾ ನದಿಯಿಂದ 24/7 ಕುಡಿಯುವ ನೀರು ಸರಬರಾಜು ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿದೆ.
ಆ)	ಹಾಗಿದ್ದಲ್ಲಿ, ಈ ಯೋಜನೆಯ ಪ್ರಸ್ತಾವನೆ ಪ್ರಸ್ತುತ ಯಾವ ಹಂತದಲ್ಲಿದೆ; ಯಾವ ಕಾಲಮಿತಿಯಲ್ಲಿ ಈ ಪ್ರಸ್ತಾವನೆಗೆ ಅನಮೋದನೆ ನೀಡಿ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು;	ರಾಯಭಾಗ ಪಟ್ಟಣಕ್ಕೆ ಕೃಷ್ಣಾ ನದಿಯಿಂದ ನೀರು ಸರಬರಾಜು ಮಾಡುವ ಯೋಜನೆಯ ರೂ.6560.00 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಪ್ರಸ್ತಾವನೆಯು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ದಿನಾಂಕ 18.05.2020 ರಂದು ಸರ್ಕಾರಕ್ಕೆ ಸ್ವೀಕೃತವಾಗಿದ್ದು, ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲು ಕೆಲವೊಂದು ಹೆಚ್ಚುವರಿ ಮಾಹಿತಿಯನ್ನು ಒದಗಿಸುವಂತೆ ದಿನಾಂಕ 25.06.2020 ರಂದು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯನ್ನು ಕೋರಲಾಗಿದ್ದು, ಮಾಹಿತಿಯು ಸ್ವೀಕೃತವಾದ ನಂತರ, ಸದರಿ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆ ನೀಡಲು ಕ್ರಮವಹಿಸಲಾಗುವುದು.
ಇ)	ಈ ಯೋಜನೆಗೆ ತಗಲುವ ಅಂದಾಜು ಮೊತ್ತವೆಷ್ಟು;	
ಈ)	ಯಾವ ಕಾಲಮಿತಿಯಲ್ಲಿ ಈ ಯೋಜನೆಯಿಂದ ರಾಯಭಾಗ ಪಟ್ಟಣದ ಸಾರ್ವಜನಿಕರಿಗೆ 24/7 ಕುಡಿಯುವ ನೀರು ಸರಬರಾಜು ಮಾಡಲಾಗುವುದು;	
ಉ)	ಇಲ್ಲದಿದ್ದಲ್ಲಿ, ಕಾರಣಗಳೇನು? (ವಿವರ ನೀಡುವುದು)	

ಸಂಖ್ಯೆ ನಅಇ 145 ಯುಎಂಎಸ್ 2020

(ಬಿ. ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	509
ಸದಸ್ಯರ ಹೆಸರು	ಶ್ರೀ. ಐಹೋಳೆ ಡಿ. ಮಹಾಲಿಂಗಪ್ಪ (ರಾಯಭಾಗ)
ಉತ್ತರಿಸಬೇಕಾದ ದಿನಾಂಕ	25.09.2020
ಉತ್ತರಿಸುವವರು	ಮಾನ್ಯ ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬೆಳಗಾವಿ ಜಿಲ್ಲೆ, ರಾಯಭಾಗ ಪಟ್ಟಣ ಪಂಚಾಯತಿ ವ್ಯಾಪ್ತಿಯ ಮೀನುಗಾರಿಕೆ ಕಛೇರಿಯ ನಿವೇಶನ ಹಾಗೂ ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯದ ನಿವೇಶನಗಳಿಗೆ ಖಾಸಗಿ ವ್ಯಕ್ತಿಗಳ ಹೆಸರಿನಲ್ಲಿ ನಕಲಿ ದಾಖಲೆ ಸೃಷ್ಟಿಸಿರುವುದು ಹಾಗೂ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬೆಳಗಾವಿ ಜಿಲ್ಲೆ, ರಾಯಭಾಗ ಪಟ್ಟಣ ಪಂಚಾಯತಿ ವ್ಯಾಪ್ತಿಯ ಮೀನುಗಾರಿಕೆ ಕಛೇರಿಯ ನಿವೇಶನ ಹಾಗೂ ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯದ ನಿವೇಶನಗಳಿಗೆ ಖಾಸಗಿ ವ್ಯಕ್ತಿಗಳ ಹೆಸರಿನಲ್ಲಿ ನಕಲಿ ದಾಖಲೆ ಸೃಷ್ಟಿಸಿರುವ ಹಾಗೂ ನೀಡಿರುವ ಕುರಿತು ಪರಿಶೀಲನೆಗಾಗಿ, ತಹಶೀಲ್ದಾರ, ರಾಯಭಾಗ ಹಾಗೂ ಪಟ್ಟಣ ಪಂಚಾಯತ್ ಸಿಬ್ಬಂದಿಗಳು ಮತ್ತು ಭೂಮಾಪನ ಇಲಾಖೆಯ ಸಿಬ್ಬಂಧಿಗಳು ಸ್ಥಳ ಪರಿಶೀಲನೆ ಮಾಡಿ, ಯಾವುದೇ ರೀತಿಯ ಒತ್ತುವರಿಯಾಗಿರುವುದಿಲ್ಲ ಎಂದು ವರದಿ ನೀಡಿರುತಾರೆ.
ಆ)	ಬಂದಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಳ್ಳುವ ಕಾನೂನಾತ್ಮಕ ಕ್ರಮಗಳೇನು; (ವಿವರ ನೀಡುವುದು)	ಯಾವುದೇ ರೀತಿಯ ಒತ್ತುವರಿ ಆಗದೆ ಇರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.
ಇ	ಈ ನಿವೇಶನಗಳಿಗೆ ಸೃಷ್ಟಿಸಿರುವ ನಕಲಿ ದಾಖಲೆಗಳನ್ನು ರದ್ದುಪಡಿಸಿ, ನಿವೇಶನಗಳನ್ನು ಸರ್ಕಾರ ತನ್ನ ವಶಕ್ಕೆ ಪಡೆಯಲು ಕ್ರಮ ಕೈಗೊಳ್ಳುವುದೇ;	
ಈ	ಈ ನಿವೇಶನಗಳಿಗೆ ನಕಲಿ ದಾಖಲೆಗಳನ್ನು ಸೃಷ್ಟಿಸಿದ, ಸೃಷ್ಟಿಸಲು ಸಹಕರಿಸಿದ ಅಧಿಕಾರಿ/ನೌಕರರುಗಳ ಮೇಲೆ ಸರ್ಕಾರ ಕೈಗೊಳ್ಳುವ ಕಾನೂನಾತ್ಮಕ ಕ್ರಮಗಳೇನು? (ವಿವರ ನೀಡುವುದು)	

ಕಡತ ಸಂಖ್ಯೆ: ನಅಇ 110 ಜಿಇಎಲ್ 2020(ಇ)

(ಡಾ॥ ನಾರಾಯಣಗೌಡ)

ಪೌರಾಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 512
ಸದಸ್ಯರ ಹೆಸರು : ಶ್ರೀ ರಾಜಕುಮಾರ್ ಪಾಟೀಲ್ (ಸೇಡಂ)
ಉತ್ತರಿಸುವವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು
ಉತ್ತರಿಸುವ ದಿನಾಂಕ : 25.09.2020

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಸೇಡಂ ತಾಲ್ಲೂಕಿನ ಗಣಾಪುರ ಮತ್ತು ಬುರಗಪಳ್ಳಿ ಗ್ರಾಮಗಳ ರೈತರ ಜಮೀನನ್ನು ಐಸಿಎಲ್ ಕಂಪನಿಯವರು 1800 ಎಕರೆ ಜಮೀನನ್ನು ಲೀಸ್ ಮುಖಾಂತರ ಖರೀದಿಸುವುದಾಗಿ ತಿಳಿಸಿ ಈಗ ಕೇವಲ 400 ಎಕರೆಯಷ್ಟು ಜಮೀನನ್ನು ಖರೀದಿಸಿದ್ದು, ಇದರಿಂದಾಗಿ ಇನ್ನಿತರೆ ರೈತರು ಯಾವುದೇ ಬೆಳೆಯನ್ನು ಬೆಳೆಯದೆ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿದೆ. ಸರ್ಕಾರದ ಅಧಿಸೂಚನೆ ಸಂಖ್ಯೆ:ಕಂಇ/70/ಎಲ್‌ಆರ್‌ಎಂ/2010, ದಿನಾಂಕ: 30/08/2011 ರ ಮೂಲಕ ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಗಣಾಪುರ ಗ್ರಾಮದ ವಿಸ್ತೀರ್ಣ:1036-33(ಎ-ಗುಂ) ಮತ್ತು ಬುರಗನಪಳ್ಳಿ ಗ್ರಾಮದ ವಿಸ್ತೀರ್ಣ:629-27(ಎ-ಗುಂ) ಜಮೀನುಗಳನ್ನು ಸಿಮೆಂಟ್ ಉತ್ಪಾದನಾ ಘಟಕ ಸ್ಥಾಪಿಸಲು ಮೆ: ದಿ ಇಂಡಿಯಾ ಸಿಮೆಂಟ್ಸ್(ಲಿ) ಚೆನ್ನೈ ಇವರಿಗೆ ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961ರ ಕಲಂ 109(1)ರಡಿ ಖರೀದಿಸಲು ಅನುಮತಿ ನೀಡಲಾಗಿದೆ. ಅದರ ಪೈಕಿ ಅಂದಾಜು 430 ಎಕರೆ ಜಮೀನು ಖರೀದಿಸಿದ್ದು ಹಾಗೂ 330 ಎಕರೆ ಜಮೀನಿಗೆ ರೈತರಿಂದ ಒಪ್ಪಂದ ಮಾಡಿಕೊಂಡಿರುವುದು ದಿನಾಂಕ: 08/11/2019 ರಂದು ಜರುಗಿದ ಸಭೆಯಲ್ಲಿ ಕಂಪನಿಯವರು ತಿಳಿಸಿರುತ್ತಾರೆ.
ಆ)	ಬಂದಿದ್ದಲ್ಲಿ ಐಸಿಎಲ್ ಕಂಪನಿಯವರ ವಿರುದ್ಧ ಸರ್ಕಾರ ಕೈಗೊಂಡ ಕ್ರಮವೇನು; (ವಿವರವಾದ ಮಾಹಿತಿ ನೀಡುವುದು)	ಈ ವಿಷಯವಾಗಿ ದಿನಾಂಕ 31/01/2017 ರಂದು ಡಾ: ಶರಣಪ್ರಕಾಶ ಪಾಟೀಲ್, ಮಾನ್ಯ ಮಾಜಿ ಶಾಸಕರು ಸೇಡಂ, ಮಾಜಿ ವೈದ್ಯಕೀಯ ಶಿಕ್ಷಣ ಸಚಿವರು ಹಾಗು ಮಾಜಿ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ಸಭೆ ಜರುಗಿರುತ್ತದೆ. ಶ್ರೀ ರಾಜಕುಮಾರ್ ಪಾಟೀಲ್, ಮಾನ್ಯ ಶಾಸಕರು ಸೇಡಂ ರವರ ಮನವಿಯಂತೆ ದಿನಾಂಕ: 08/11/2019 ರಂದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮಾನ್ಯ ಶಾಸಕರು ಸೇಡಂ, ಐಸಿಎಲ್ ಕಂಪನಿ ಪ್ರತಿನಿಧಿಗಳು ಹಾಗೂ ರೈತರೊಂದಿಗೆ ಸಭೆ ಜರುಗಿಸಲಾಗಿರುತ್ತದೆ.
ಇ)	ಐಸಿಎಲ್ ಕಂಪನಿಯವರು ಜಮೀನು ಖರೀದಿಗಾಗಿ ಗಣಾಪುರ ಮತ್ತು ಬುರಗಪಳ್ಳಿ ಗ್ರಾಮಗಳ ರೈತರೊಂದಿಗೆ ಮಾಡಿಕೊಂಡ ಲೀಸ್‌ನ್ನು ರದ್ದುಪಡಿಸಿ ಬೇರೆ ಕಂಪನಿಯವರೊಂದಿಗೆ ಲೀಸ್ ಮಾಡಿಕೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಸದರಿ ಕಂಪನಿಯು ನಿಯಮಾನುಸಾರ ಜಮೀನು ಖರೀದಿಸಿ ಕಾರ್ಖಾನೆಯನ್ನು ಸ್ಥಾಪಿಸದಿದ್ದಲ್ಲಿ, ಕಂದಾಯ ಇಲಾಖೆಯು ಕೆ.ಎಲ್.ಆರ್ ಕಾಯ್ದೆ 109 ರಡಿ ಖರೀದಿಸಿರುವ ಜಮೀನನ್ನು ಹಿಂಪಡೆಯಬೇಕಾಗಿರುತ್ತದೆ.
ಈ)	ಇದ್ದಲ್ಲಿ ಯಾವಾಗ ಲೀಸ್ ಒಪ್ಪಂದ ಮಾಡಿಕೊಳ್ಳಲಾಗುವುದು?	

ಸಂಖ್ಯೆ: ಸಿಐ 253 ಎಸ್‌ಪಿಐ 2020

(ಜಗದೀಶ್ ಶೆಟ್ಟರ್)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಸಾರ್ವಜನಿಕ ಉದ್ದಿಮೆಗಳ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 614
ಸದಸ್ಯರ ಹೆಸರು : ಶ್ರೀಮತಿ ಅಂಜಲಿ ಹೇಮಂತ್ ನಿಂಬಾಳ್ಕರ್
ಉತ್ತರಿಸುವ ದಿನಾಂಕ : 25/09/2020
ಉತ್ತರಿಸುವ ಸಚಿವರು : ಮಾನ್ಯ ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

	ಪ್ರಶ್ನೆ	ಉತ್ತರ
ಅ	ಬೆಳಗಾವಿ ಜಿಲ್ಲೆ ಖಾನಾಪುರ ಪಟ್ಟಣ ಪಂಚಾಯಿತಿಯನ್ನು ಮೇಲ್ದರ್ಜೆಗೇರಿಸುವ ಅಗತ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿರುವುದಿಲ್ಲ.
ಆ	ಪಟ್ಟಣ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಇರುವ ಮಾನದಂಡಗಳೇನು;	ಪಟ್ಟಣ ಪಂಚಾಯಿತಿಯಿಂದ ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಕರ್ನಾಟಕ ಪುರಸಭೆಗಳ ಅಧಿನಿಯಮ 1964ರ ಕಲಂ ನಿಯಮ 3(1), 3(2) ಮತ್ತು 9 ಗಳನ್ವಯ ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುವುದು. 1. ಆ ಪ್ರದೇಶದ ಜನಸಂಖ್ಯೆ 20,000ಕ್ಕೆ ಕಡಿಮೆ ಇಲ್ಲದಂತೆ ಹಾಗೂ 50,000 ಕ್ಕೆ ಹೆಚ್ಚಿಲ್ಲದಂತಿರಬೇಕು; 2. ಅಂತಹ ಪ್ರದೇಶದ ಜನಸಂಖ್ಯೆಯ ಜನಸಾಂದ್ರತೆಯು ಆ ಪ್ರದೇಶದ ಒಂದು ಚದರ ಕಿ.ಮೀ. ವಿಸ್ತೀರ್ಣಕ್ಕೆ 1,500ಕ್ಕಿಂತ ಕಡಿಮೆ ಇಲ್ಲದಿರುವುದು; 3. ಹಿಂದಿನ ನಿಕಟಪೂರ್ವ ಜನಗಣತಿಯಲ್ಲಿ ಅಂತಹ ಪ್ರದೇಶದಿಂದ ಸ್ಥಳೀಯ ಆಡಳಿತಕ್ಕಾಗಿ ತೆರಿಗೆ ಮತ್ತು ತೆರಿಗೆಯಲ್ಲದ ಇತರ ಸಂಪನ್ಮೂಲಗಳಿಂದ ಉತ್ಪಾದಿತವಾದ ರಾಜಸ್ವ ವಾರ್ಷಿಕ ಒಂಬತ್ತು ಲಕ್ಷ ಅಥವಾ ವಾರ್ಷಿಕ ತಲಾ ಒಬ್ಬರಿಗೆ 45 ರೂಪಾಯಿಗಳ ದರದಂತೆ ಲೆಕ್ಕಹಾಕಲಾದ ಮೊತ್ತ ಇವೆರಡರಲ್ಲಿ ಯಾವುದು ಹೆಚ್ಚೋ ಆ ಮೊತ್ತಕ್ಕಿಂತ ಕಡಿಮೆ ಇರದ ಹೊರತು; 4. ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗಾವಕಾಶಗಳ ಶೇಕಡಾವಾರು ಪ್ರಮಾಣವು ಒಟ್ಟು ಉದ್ಯೋಗದ ಪ್ರಮಾಣಕ್ಕಿಂತ ಶೇ.50 ಕ್ಕಿಂತ ಕಡಿಮೆ ಇಲ್ಲದಿರುವುದು.
ಇ	ಸದರಿ ಪಟ್ಟಣ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಅಗತ್ಯವಿರುವ ಜನಸಂಖ್ಯೆಯನ್ನು ಈಗಾಗಲೇ ಮೀರಿದ್ದರೂ ಮೇಲ್ದರ್ಜೆಗೇರಿಸದಿರಲು ಕಾರಣಗಳೇನು; (ಸಂಪೂರ್ಣ ಮಾಹಿತಿಯನ್ನು ಒದಗಿಸುವುದು)	2011 ರ ಜನಗಣತಿಯನುಸಾರ ಖಾನಾಪೂರ ಪಟ್ಟಣ ಪಂಚಾಯಿತಿಯ ಜನಸಂಖ್ಯೆಯು 19309 ಇರುತ್ತದೆ. ಪುರಸಭೆಯನ್ನಾಗಿ ಪರಿವರ್ತಿಸಲು ನಿಗದಿಪಡಿಸಿದ ಕನಿಷ್ಠ ಜನಸಂಖ್ಯೆ 20,000 ಹೊಂದಿರುವುದಿಲ್ಲ.
ಈ	ಯಾವ ಕಾಲಮಿತಿಯೊಳಗೆ ಖಾನಾಪುರ ಪಟ್ಟಣ ಪಂಚಾಯಿತಿಯನ್ನು ಪುರಸಭೆಯಾಗಿ ಮೇಲ್ದರ್ಜೆಗೇರಿಸಲಾಗುವುದು?	ಉದ್ಭವಿಸುವುದಿಲ್ಲ.

ಸಂಖ್ಯೆ:ನಅಇ 56 ಎಲ್‌ಎಕ್ಯೂ 2020.

(ಡಾ॥ ನಾರಾಯಣ ಗೌಡ)

ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 886
2. ಸದಸ್ಯರ ಹೆಸರು : ಶ್ರೀಮತಿ ಸೌಮ್ಯರೆಡ್ಡಿ (ಜಯನಗರ)
3. ಉತ್ತರಿಸಬೇಕಾದ ದಿನಾಂಕ : 25-09-2020
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ನಮ್ಮ ಮೆಟ್ರೋ ಕಾಮಗಾರಿಯಿಂದ ಜಯನಗರ ಕ್ಷೇತ್ರದಲ್ಲಿ ನೂರಕ್ಕೂ ಅಧಿಕ ಮರಗಳನ್ನು ಕಡಿಯಲಾಗಿದ್ದು, ಇದರ ಬದಲಾಗಿ ಸರ್ಕಾರ ಪೂರಕ ಗಿಡಗಳನ್ನು ನೆಡಲು ಕ್ರಮ ಕೈಗೊಂಡಿದೆಯೇ;	ಬೆಂಗಳೂರು ಮೆಟ್ರೋ ರೈಲು ನಿಗಮವು ನಮ್ಮ ಮೆಟ್ರೋ ಕಾಮಗಾರಿಗಳಿಗೆ ಮರಗಳನ್ನು ಕಡಿಯಲಾದ ಸಂಖ್ಯೆಗೆ ಬದಲಾಗಿ 1:10 (1 ಮರವನ್ನು ಕಡಿದು 10 ಸಸಿಗಳನ್ನು ನೆಡಲಾಗುತ್ತದೆ) ಅನುಪಾತದಲ್ಲಿಹೊಸ ಸಸಿಗಳನ್ನು ನೆಟ್ಟು ಸರಿದೂಗಿಸುವ ಪ್ರಕ್ರಿಯೆಯನ್ನು ತೆಗೆದುಕೊಂಡಿದೆ.
ಆ)	ಹಾಗಿದ್ದಲ್ಲಿ, ಒಟ್ಟು ಎಷ್ಟು ಗಿಡಗಳನ್ನು ಯಾವ ಯಾವ ಪ್ರದೇಶದಲ್ಲಿ ನೆಡಲಾಗಿದೆ? (ವಿವರ ನೀಡುವುದು)	ಬಿ.ಎಂ.ಆರ್.ಸಿ.ಎಲ್ ಸಂಸ್ಥೆಯು ಜಯನಗರ ಕ್ಷೇತ್ರದಲ್ಲಿ 81 ಮರಗಳನ್ನು ಕಡಿಯಲಾಗಿದ್ದು, ಅದರ ಬದಲಾಗಿ 860 ಸಂಖ್ಯೆಯ ಸಸಿಗಳನ್ನು ಈ ಕೆಳಕಂಡ ಸ್ಥಳಗಳಲ್ಲಿ ನೆಡಲಾಗಿದೆ; 1. ಡೈರಿಸರ್ಕಲ್ - 450 ಸಸಿಗಳು 2. ಸಾರಕ್ಕಿಕೆರೆ, ಜೆ.ಪಿ. ನಗರ - 410 ಸಸಿಗಳು

ಕಡತ ಸಂಖ್ಯೆ: ನಅಇ 203 ಪಿ.ಆರ್.ಜೆ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿಗಳು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 889
ಸದಸ್ಯರ ಹೆಸರು : ಶ್ರೀ. ಲಾಲಾಜಿ ಆರ್. ಮೆಂಡನ್ (ಕಾಪು)
ಉತ್ತರಿಸುವ ದಿನಾಂಕ : 25.09.2020
ಉತ್ತರಿಸುವ ಸಚಿವರು : ನಗರಾಭಿವೃದ್ಧಿ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಕಾಪು ಯೋಜನಾ ಪ್ರಾಧಿಕಾರ ಅಸ್ತಿತ್ವಕ್ಕೆ ಬರುವ ಮೊದಲು ಗ್ರಾಮ ಪಂಚಾಯತ್ ಹಂತದಲ್ಲಿ ವಿಂಗಡಿಸಿ, ವಿನ್ಯಾಸ ಅನುಮೋದನೆ ಪಡೆದ ವಸತಿ ನಿವೇಶನಗಳಿಗೆ ಪ್ರಸ್ತುತ ಏಕ ವಿನ್ಯಾಸ ಅನುಮೋದನೆ ನೀಡಲು ಸಾಧ್ಯವಾಗದೇ ಸಾರ್ವಜನಿಕರು ಸಂಕಷ್ಟ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಆ)	ಬಂದಿದ್ದಲ್ಲಿ, ಪ್ರಸ್ತುತ ಕಾಪು ನಗರ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಇಂತಹಾ ಎಷ್ಟು ಪ್ರಕರಣಗಳು ಬಾಕಿ ಇವೆ;	ಕಾಪು ಯೋಜನಾ ಪ್ರಾಧಿಕಾರದ ವರದಿಯನ್ವಯ, ಪ್ರಾಧಿಕಾರದ ವ್ಯಾಪ್ತಿಯಲ್ಲಿ ಈವರೆಗೆ 35 ಪ್ರಕರಣಗಳು ಬಾಕಿ ಇರುತ್ತವೆ.
ಇ)	ವಸತಿ ನಿವೇಶನಗಳಿಗೆ ಏಕ ವಿನ್ಯಾಸ ಅನುಮೋದನೆಗೆ ಬಾಕಿ ಇರುವ ಎಲ್ಲ ಪ್ರಕರಣಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)	ಯೋಜನಾ ಪ್ರಾಧಿಕಾರಗಳು ಅಸ್ತಿತ್ವಕ್ಕೆ ಬರುವ ಪೂರ್ವದಲ್ಲಿ ಸ್ಥಳೀಯ ಸಂಸ್ಥೆಯು ಯೋಜನಾ ಪ್ರಾಧಿಕಾರ / ನಗರ ಯೋಜನಾ ಇಲಾಖೆಯಿಂದ ತಾಂತ್ರಿಕ ಅನುಮೋದನೆ / ಅಭಿಪ್ರಾಯ ಪಡೆಯದೆ ರಚಿಸಿರುವ ವಿನ್ಯಾಸಗಳಲ್ಲಿನ ನಿವೇಶನಗಳಿಗೆ ತೆರೆದಿರುವ ಖಾತೆಗಳನ್ನು ಅನಧಿಕೃತ ಅಭಿವೃದ್ಧಿಗಳೆಂದು ಪರಿಗಣಿಬೇಕಿರುತ್ತದೆ. ಇಂತಹ ನಿವೇಶನಗಳಿಗೆ ಕಟ್ಟಡ ನಕ್ಷೆ ಅನುಮೋದನೆಗೆ ತಾಂತ್ರಿಕ ಅಭಿಪ್ರಾಯ ನೀಡಲು ಬರುವುದಿಲ್ಲ. ಇಂತಹ ಸ್ವತ್ತುಗಳಿಗೆ ಸ್ಥಳೀಯ ಸಂಸ್ಥೆಗಳಿಂದ ನೀಡಿರುವ ಖಾತಾ / ಇ-ಖಾತಾ ಕುರಿತಂತೆ ಪರ್ಯಾಯೋಚಿಸಲು ಸಚಿವ ಸಂಪುಟದ ಉಪಸಮಿತಿ ರಚಿಸಲಾಗಿರುತ್ತದೆ..

ಸಂಖ್ಯೆ: ನಅಇ 52 ಎಲ್‌ಎಕ್ಯೂ 2020 (ಇ-ಕಡತ)

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	890
ಸದಸ್ಯರ ಹೆಸರು	:	ಶ್ರೀ ಮಂಜುನಾಥ್.ಎ
ಉತ್ತರಿಸಬೇಕಾದ ದಿನಾಂಕ	:	25-09-2020
ಉತ್ತರಿಸುವವರು	:	ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕ್ರ ಸಂ	ಪ್ರಶ್ನೆಗಳು	ಉತ್ತರ
ಅ	ರಾಮನಗರದಲ್ಲಿರುವ ರೇಷ್ಮೆ ಗೂಡಿನ ಮಾರುಕಟ್ಟೆಯು ಏಷ್ಯಾದಲ್ಲಿಯೇ ಪ್ರಸಿದ್ಧಿಯನ್ನು ಹೊಂದಿದ್ದು, ಪ್ರತಿ ನಿತ್ಯ ಕೋಟ್ಯಾಂತರ ರೂಪಾಯಿಗಳ ವಹಿವಾಟನ್ನು ನಡೆಸುತ್ತಿದ್ದು, ಮೂಲಭೂತ ಸೌಕರ್ಯಗಳನ್ನು ಒದಗಿಸಿ ನೂತನವಾಗಿ ಹೈಟೆಕ್ ರೇಷ್ಮೆ ಗೂಡಿನ ಮಾರುಕಟ್ಟೆಯನ್ನು ನಿರ್ಮಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ;	ಹೌದು
ಆ	ಹಾಗಿದ್ದಲ್ಲಿ, ನೂತನವಾಗಿ ಹೈಟೆಕ್ ರೇಷ್ಮೆ ಗೂಡಿನ ಮಾರುಕಟ್ಟೆಯನ್ನು ನಿರ್ಮಿಸಲು ಎಷ್ಟು ಅನುದಾನವನ್ನು ನಿಗದಿಪಡಿಸಲಾಗಿದೆ; ಹಾಗೂ ಯಾವ ಕಾಲಮಿತಿಯೊಳಗೆ ಇದನ್ನು ಪೂರ್ಣಗೊಳಿಸಲಾಗುವುದು?	ನೂತನವಾಗಿ ಹೈಟೆಕ್ ರೇಷ್ಮೆ ಗೂಡಿನ ಮಾರುಕಟ್ಟೆಯನ್ನು ನಿರ್ಮಿಸಲು ನಬಾರ್ಡ್ ವತಿಯಿಂದ ರೂ.35.00 ಕೋಟಿಗಳ ಅನುದಾನವನ್ನು ನಿಗದಿಪಡಿಸಲಾಗಿದೆ. ಪ್ರಸ್ತುತ ಕಾಮಗಾರಿಗೆ ವಿನ್ಯಾಸ ಮತ್ತು ವಿಸ್ತೃತ ಯೋಜನಾ ವರದಿಯನ್ನು ಪಡೆಯಲು ನುರಿತ ನೊಂದಾಯಿತ ವಾಸ್ತು ಶಿಲ್ಪಿಗಳ ನೇಮಕಕ್ಕೆ ದಿನಾಂಕ: 14/09/2020 ರಂದು ಟೆಂಡರ್ ಆಹ್ವಾನಿಸಲಾಗಿದೆ. ವಿನ್ಯಾಸ ಮತ್ತು ವಿಸ್ತೃತ ಯೋಜನಾ ವರದಿಗಳನ್ನು ನಬಾರ್ಡ್ ಸಂಸ್ಥೆಗೆ ಸಲ್ಲಿಸಿ, ಅನುಮೋದನೆ ದೊರೆತ ಕೂಡಲೇ ಟೆಂಡರ್ ಮೂಲಕ ಕಾಮಗಾರಿ ನಿರ್ವಹಿಸಲು ಕಾಲಮಿತಿಯನ್ನು ನಿಗದಿಪಡಿಸಿ ಪೂರ್ಣಗೊಳಿಸಲಾಗುವುದು.

ರೇಷ್ಮೆ 124 ರೇಕೃವಿ 2020

(ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಮತ್ತು
ರೇಷ್ಮೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	897
ಸದಸ್ಯರ ಹೆಸರು	:	ಶ್ರೀ ಅಮರೇಗೌಡ ಲಿಂಗನಗೌಡ ಪಾಟೀಲ್ ಬಯ್ಯಾಪುರ್ (ಕುಷ್ಟಗಿ)
ಉತ್ತರಿಸಬೇಕಾದ ದಿನಾಂಕ	:	25.09.2020
ಉತ್ತರಿಸುವವರು	:	ಮಾನ್ಯ ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ಗ್ರಾಮ ಪಂಚಾಯತ್, ಪಟ್ಟಣ ಪಂಚಾಯತ್ ಹಾಗೂ ಪುರಸಭೆ ವ್ಯಾಪ್ತಿಯಲ್ಲಿ ಬರುವ ಕಂದಾಯ ನಿವೇಶನಗಳನ್ನು ನೋಂದಣಿ ಮಾಡುವ ಪ್ರಕ್ರಿಯೆಯು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕರ್ನಾಟಕ ಮಹಾನಗರಪಾಲಿಕೆಗಳ ಅಧಿನಿಯಮ, 1976 ರ ಕಲಂ 114 ಮತ್ತು ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 ರ ಕಲಂ. 111, 112, 113 ಮತ್ತು 114 ರ ರೀತ್ಯಾ ಮಹಾನಗರಪಾಲಿಕೆಗಳಲ್ಲಿ / ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅಧಿಕೃತವಾಗಿರುವ ಆಸ್ತಿಗಳ ಮಾಲೀಕತ್ವ ಹಕ್ಕು ವರ್ಗಾವಣೆಯಾದವರ ಹೆಸರನ್ನು ಸ್ವತ್ತು ತೆರಿಗೆ ರಿಜಿಸ್ಟರ್‌ನಲ್ಲಿ ನಿಯಮಾನುಸಾರ ನಮೂದಿಸಲು ಕ್ರಮವಹಿಸಲಾಗುತ್ತಿದೆ. ಅನಧಿಕೃತ ಆಸ್ತಿಗಳ ಖಾತೆ ಮಾಡಲು ಕಾಯ್ದೆ/ನಿಯಮಗಳಲ್ಲಿ ಪ್ರಸ್ತುತ ಅವಕಾಶವಿರುವುದಿಲ್ಲ.
ಆ	ಅಕ್ರಮ-ಸಕ್ರಮದಡಿ ಸದರಿ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಡಿಯಲ್ಲಿನ ಕಂದಾಯ ನಿವೇಶನಗಳನ್ನು ನೋಂದಣಿಗೆ ಪರಿಗಣಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ.	ಸ್ಥಳೀಯ ಯೋಜನಾ ಪ್ರದೇಶ ಘೋಷಣೆಯಾದ ಪ್ರದೇಶಗಳಲ್ಲಿ ಬಂದಿರುವ ಅನಧಿಕೃತ ಬೆಳವಣಿಗೆಗಳನ್ನು ಸಕ್ರಮಗೊಳಿಸುವ ಸಂಬಂಧ ಅಧಿಸೂಚನೆ ಸಂಖ್ಯೆ: ನಅಇ 556 ಮೈಅಪ್ರಾ 2013 (1) ದಿ: 28.05.2014 ರಲ್ಲಿ ಅಕ್ರಮ-ಸಕ್ರಮ ನಿಯಮಗಳನ್ನು ಜಾರಿಗೆ ತಂದಿದ್ದು, ಸದರಿ ನಿಯಮಗಳಿಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುತ್ತದೆ.
ಇ	ನೋಂದಣಿ ಪ್ರಕ್ರಿಯೆಯು ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು; ವಿಳಂಬವನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮವೇನು? (ವಿವರ ನೀಡುವುದು)	ಗ್ರಾಮೀಣ ಪ್ರದೇಶಗಳಲ್ಲಿ ಇ-ಸ್ವತ್ತು ಮತ್ತು ನಗರ ಪ್ರದೇಶಗಳಲ್ಲಿ ಇ-ಖಾತಾ (Form-3) ನೀಡುವ ಕುರಿತು ಪರಾಮರ್ಶಿಸಲು ಸಚಿವ ಸಂಪುಟದ ಉಪಸಮಿತಿಯೊಂದನ್ನು ರಚಿಸಲಾಗಿದೆ.

ಸಂಖ್ಯೆ: ನಅಇ 106 ಜಿಇಎಲ್ 2020

(ಡಾ|| ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ : 898

ಸದಸ್ಯರ ಹೆಸರು : ಶ್ರೀ ಅಮರೇಗೌಡ ಲಿಂಗನಗೌಡ ಪಾಟೀಲ್ ಬಯ್ಯಾಪುರ್ (ಕುಷ್ಟಗಿ)

ಉತ್ತರಿಸಬೇಕಾದ ದಿನಾಂಕ : 25-09-2020

ಉತ್ತರಿಸುವವರು : ಮಾನ್ಯ ನಗರಾಭಿವೃದ್ಧಿ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಕುಷ್ಟಗಿ ತಾಲ್ಲೂಕು, ತಾವರಗೇರಾ ಪಟ್ಟಣಕ್ಕೆ ತುಂಗಭದ್ರಾ ನದಿಯ ಮೂಲಕ ಶಾಶ್ವತ ಕುಡಿಯುವ ನೀರಿನ ಯೋಜನೆಯನ್ನು ಕಾರ್ಯಗತಗೊಳಿಸುವ ಪ್ರಸ್ತಾವನೆಯು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿದೆ. ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲ್ಲೂಕಿನ ತಾವರಗೇರಾ ಪಟ್ಟಣಕ್ಕೆ ತುರುವಿಹಳ್ಳ ಹತ್ತಿರ, ತುಂಗಭದ್ರಾ ಎಡದಂಡೆ ಕಾಲುವೆ ಮೂಲದಿಂದ ನೀರು ಸರಬರಾಜು ಮಾಡಲು, ರೂ.88.16 ಕೋಟಿಗಳ ಅಂದಾಜು ಪಟ್ಟಿಗೆ ದಿನಾಂಕ 15.07.2019 ರಂದು ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ತದನಂತರ ಆಡಳಿತಾತ್ಮಕ ಕಾರಣಗಳಿಂದ ಸದರಿ ಯೋಜನೆಯನ್ನು ಸದ್ಯಕ್ಕೆ ತಡೆಹಿಡಿಯಲಾಗಿದೆ.
ಆ)	ಸದರಿ ಯೋಜನೆಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಮೂಲಕ ಅನುಷ್ಠಾನಗೊಳಿಸುತ್ತಿದ್ದು, ಈ ಯೋಜನೆಯ ಅಂದಾಜು ವೆಚ್ಚವೆಷ್ಟು;	
ಇ)	ಸದರಿ ಯೋಜನೆಯನ್ನು ಯಾವಾಗ ಪ್ರಾರಂಭಿಸಲು ಉದ್ದೇಶಿಸಲಾಗಿದೆ; ಹಾಗೂ ಎಷ್ಟು ಕಾಲಾವಧಿಯಲ್ಲಿ ಪೂರ್ಣಗೊಳಿಸಲಾಗುವುದು? (ವಿವರ ನೀಡುವುದು)	

ಸಂಖ್ಯೆ ನಅಇ 140 ಯುಎಂಎಸ್ 2020

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1474

ವಿಧಾನ ಸಭೆ ಸದಸ್ಯರ ಹೆಸರು : ಶ್ರೀ ಎಸ್.ಎನ್. ನಾರಾಯಣಸ್ವಾಮಿ ಕೆ.ಎಂ.(ಬಂಗಾರಪೇಟೆ)

ಉತ್ತರಿಸಬೇಕಾದ ದಿನಾಂಕ : 25.09.2020

ಉತ್ತರಿಸುವ ಸಚಿವರು : ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ಬಂಗಾರಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿ ಹಾಲಿ ವಿತರಣೆಯಾಗಿರುವ ಒಟ್ಟು ಬಿಪಿಎಲ್ ಪಡಿತರ ಚೀಟಿಗಳ ಸಂಖ್ಯೆ ಎಷ್ಟು; (ಅಂತ್ಯೋದಯ ಒಳಗೊಂಡಂತೆ)	ಬಂಗಾರಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿ ಹಾಲಿ ವಿತರಣೆಯಾಗಿರುವ ಬಿಪಿಎಲ್ ಪಡಿತರ ಚೀಟಿಗಳ ವಿವರ: (ಕೆಳಗಿನ ಕೋಷ್ಟಕ 1 ನೋಡಿ)
ಆ	ಕಳೆದ 2 ವರ್ಷಗಳ ಅವಧಿಯಲ್ಲಿ ಬಿಪಿಎಲ್ ಕಾರ್ಡ್ ಕೋರಿ ಸಲ್ಲಿಕೆಯಾದ ಅರ್ಜಿಗಳ ಸಂಖ್ಯೆ ಎಷ್ಟು; ಹಾಗೂ ವಿತರಿಸಲಾದ ಪಡಿತರ ಚೀಟಿ ಸಂಖ್ಯೆ ಎಷ್ಟು;	2018 ರಿಂದ 2020 ರವರೆಗೆ ರಾಜ್ಯದಲ್ಲಿ ಆದ್ಯತಾ (ಬಿಪಿಎಲ್) ಪಡಿತರ ಚೀಟಿ ಕೋರಿ ಸಲ್ಲಿಕೆಯಾದ ಅರ್ಜಿಗಳು ಹಾಗೂ ವಿಲ್ಲೇವಾರಿಯಾದ ಅರ್ಜಿಗಳ ವಿವರ ಈ ಕೆಳಕಂಡಂತಿದೆ. (ಕೆಳಗಿನ ಕೋಷ್ಟಕ 2 ನೋಡಿ)
ಇ	ವಿತರಿಸಬೇಕಾದ ಬಾಕಿ ಪಡಿತರ ಚೀಟಿಗಳ ಸಂಖ್ಯೆ ಎಷ್ಟು ಮತ್ತು ತಿರಸ್ಕರಿಸಲಾದ ಅರ್ಜಿಗಳ ಸಂಖ್ಯೆ ಎಷ್ಟು? (ವಿವರಗಳನ್ನು ನೀಡುವುದು)	ಪಡಿತರ ಚೀಟಿ ವಿತರಿಸಲು ಬಾಕಿ ಇರುವ ಪಿ.ಹೆಚ್.ಹೆಚ್(ಬಿ.ಪಿ.ಎಲ್) ಮತ್ತು ಎನ್.ಪಿ.ಹೆಚ್.ಹೆಚ್(ಎ.ಪಿ.ಎಲ್) ಪಡಿತರ ಚೀಟಿಗಳ ಸಂಖ್ಯೆ:2,03,398 ತಿರಸ್ಕರಿಸಲಾದ ಪಿ.ಹೆಚ್.ಹೆಚ್ ಮತ್ತು ಎನ್.ಪಿ.ಹೆಚ್.ಹೆಚ್ ಅರ್ಜಿಗಳ ಸಂಖ್ಯೆ: 3,05,701

ಕ್ರ.ಸಂ	ಪಡಿತರ ಚೀಟಿ ವಿವರ	ಸಂಖ್ಯೆ
1	ಅಂತ್ಯೋದಯ (ಎಎವೈ)	7733
2	ಪಿ.ಹೆಚ್.ಹೆಚ್(ಆದ್ಯತಾ)	54,962
	ಒಟ್ಟು	62,695

ಸಲ್ಲಿಕೆಯಾದ ಅರ್ಜಿಗಳು	ವಿಲೇವಾರಿಯಾದ ಅರ್ಜಿಗಳ ವಿವರ	ವಿತರಿಸಲಾದ ಪಡಿತರ ಚೀಟಿಗಳು
11,21,111	9,89,282	7,43,690

ಅನಾಸ 256 ಡಿಆರ್ಎ 2020 (ಇ-ಆಫೀಸ್)

(ಕೆ.ಗೋಪಾಲಯ್ಯ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1478
ಸದಸ್ಯರ ಹೆಸರು	:	ಶ್ರೀ ವೆಂಕಟರಮಣಯ್ಯ. ಟಿ
ಉತ್ತರಿಸಬೇಕಾದ ದಿನಾಂಕ	:	25-09-2020
ಉತ್ತರಿಸುವವರು	:	ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕ್ರ ಸಂ	ಪ್ರಶ್ನೆಗಳು	ಉತ್ತರ
ಅ	ರಾಜ್ಯದಲ್ಲಿ ರೇಷ್ಮೆ ಉದ್ಯಮದ ಅವಲಂಬಿತರ ಬಗ್ಗೆ ಸಮೀಕ್ಷೆ ನಡೆಸಲಾಗಿದೆಯೇ;, ಹಾಗಿದ್ದಲ್ಲಿ, ರಾಜ್ಯದಲ್ಲಿರುವ ರೇಷ್ಮೆ ಅವಲಂಬಿತರ ಸಂಖ್ಯೆ ಎಷ್ಟು ; (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು)	ರೇಷ್ಮೆ ಇಲಾಖೆಯಿಂದ ರೇಷ್ಮೆ ಕೃಷಿ ಅವಲಂಬಿತರ ಸಮೀಕ್ಷೆಯನ್ನು ನಡೆಸಿರುವುದಿಲ್ಲ. ಆದಾಗ್ಯೂ, ಮಾರ್ಚ್ 2020 ರ ಅಂತ್ಯಕ್ಕೆ 1,38,848 ರೇಷ್ಮೆ ಬೆಳೆಗಾರರ ಕುಟುಂಬಗಳು ಮತ್ತು 7250 ರೇಷ್ಮೆ ನೂಲು ಬಿಚ್ಚಾಣಿಕೆದಾರ ಕುಟುಂಬಗಳು ರೇಷ್ಮೆ ಉದ್ಯಮವನ್ನು ಅವಲಂಬಿಸಿರುತ್ತಾರೆ.
ಆ	ಲಾಕ್‌ಡೌನ್ ಅವಧಿಯಲ್ಲಿ ನಷ್ಟಕ್ಕೆ ಗುರಿಯಾದವರಿಗೆ ವಿಶೇಷ ಅನುದಾನವನ್ನು ಸರ್ಕಾರ ನೀಡಿದೆಯೇ; (ವಿಧಾನಸಭಾವಾರು ವಿವರಗಳನ್ನು ನೀಡುವುದು)	ಕೋವಿಡ್-19 ರ ಲಾಕ್‌ಡೌನ್ ಅವಧಿಯಲ್ಲಿ ರೇಷ್ಮೆ ಉದ್ಯಮವು ನಷ್ಟಕ್ಕೆ ಗುರಿಯಾಗದಂತೆ ರಾಜ್ಯದಲ್ಲಿ ಎಲ್ಲಾ 41 ರೇಷ್ಮೆ ಗೂಡು ಮಾರುಕಟ್ಟೆಗಳಲ್ಲಿ ರೇಷ್ಮೆ ಗೂಡು ವಹಿವಾಟನ್ನು ಸುಲಲಿತವಾಗಿ ನಡೆಸಲಾಗಿದೆ. ಈ ಸಂದರ್ಭದಲ್ಲಿ ರೇಷ್ಮೆ ಗೂಡಿನ ಧಾರಣೆಯಲ್ಲಿ ಕುಸಿತವುಂಟಾಗಿದ್ದು, ರೇಷ್ಮೆ ಬೆಳೆಗಾರರಿಗೆ ನೆರವು ನೀಡಲು ಪ್ರೋತ್ಸಾಹಧನ ವಿತರಿಸುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ರೇಷ್ಮೆ ಗೂಡಿನ ಪ್ರೋತ್ಸಾಹಧನ ಪ್ರತಿ ಕೆ.ಜಿ ಮಿಶ್ರ ತಳಿಗೆ ರೂ.30/- ಮತ್ತು ದ್ವಿತಳಿಗೆ ರೂ.50/- ರಂತೆ ನೀಡಲು ಆದೇಶಿಸಲಾಗಿದೆ. ಪ್ರಸ್ತುತ, ಪ್ರೋತ್ಸಾಹಧನ ನೀಡಲು ರೂ.30.00 ಕೋಟಿಗಳ ಅನುದಾನವನ್ನು ಮಾರುಕಟ್ಟೆಗಳಿಗೆ ಬಿಡುಗಡೆಗೊಳಿಸಿ ರೇಷ್ಮೆ ಬೆಳೆಗಾರರಿಗೆ ನೆರವು ನೀಡಲು ಕ್ರಮ ವಹಿಸಲಾಗುತ್ತಿದೆ. ಲಾಕ್‌ಡೌನ್‌ನಿಂದಾಗಿ ರೇಷ್ಮೆ ಸಾಗಾಣಿಕೆ ಇಲ್ಲದಿರುವುದರಿಂದ, ರೀಲರುಗಳು ಉತ್ಪಾದಿಸಿದ ರೇಷ್ಮೆ ಮಾರಾಟವಾಗದೇ ಇದ್ದ ಸಂದರ್ಭದಲ್ಲಿ ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ವತಿಯಿಂದ ರೀಲರುಗಳ ಬಳಿ ಇರುವ ಕಚ್ಚಾ ರೇಷ್ಮೆಯನ್ನು ಒತ್ತೆ ಇರಿಸಿಕೊಂಡು ಒತ್ತೆ ಸಾಲ ನೀಡಲು ಹಾಗೂ ರೇಷ್ಮೆ ನೂಲು ಬಿಚ್ಚಾಣಿಕೆದಾರರಿಂದ ಕಚ್ಚಾ ರೇಷ್ಮೆ ಖರೀದಿಸಲು ಕ್ರಮವಹಿಸಿದ್ದು, ಇದಕ್ಕಾಗಿ ಕರ್ನಾಟಕ ರೇಷ್ಮೆ ಮಂಡಳಿಗೆ ರೂ.20.00 ಕೋಟಿ ಅನುದಾವನ್ನು ಒದಗಿಸಲಾಗಿದೆ.
ಇ	ಇಲ್ಲದಿದ್ದಲ್ಲಿ, ಕಾರಣವೇನು?	ಉದ್ಭವಿಸುವುದಿಲ್ಲ.

ರೇಷ್ಮೆ 125 ರೇಕೃವಿ 2020

(ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಮತ್ತು
ರೇಷ್ಮೆ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ :: 1483
ಸದಸ್ಯರ ಹೆಸರು :: ಶ್ರೀ ಸುಬ್ಬಾರೆಡ್ಡಿ ಎನ್. ಎಸ್.
ಉತ್ತರಿಸಬೇಕಾದ ದಿನಾಂಕ :: 25/09/2020
ಉತ್ತರಿಸಬೇಕಾದ ಸಚಿವರು :: ಸಹಕಾರ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ)	ಬಾಗೇಪಲ್ಲಿ ಎ.ಪಿ.ಎಂ.ಸಿ. ಮಾರುಕಟ್ಟೆಗೆ ಮಂಜೂರಾಗಿರುವ ಒಟ್ಟು ಹುದ್ದೆಗಳ ಸಂಖ್ಯೆ ಎಷ್ಟು?	ಬಾಗೇಪಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಕೆಳಕಂಡ ಒಟ್ಟು 11 ಹುದ್ದೆಗಳು ಮಂಜೂರಾಗಿರುತ್ತವೆ.
ಆ)	ಈ ಪೈಕಿ ಎಷ್ಟು ಹುದ್ದೆಗಳನ್ನು ಭರ್ತಿ ಮಾಡಲಾಗಿದೆ	ಈ ಪೈಕಿ ಯಾವುದೇ ಹುದ್ದೆಗಳಲ್ಲಿ ಖಾಯಂ ಅಧಿಕಾರಿ / ನೌಕರರು ನೇಮಕಾತಿ ಆಗಿರುವುದಿಲ್ಲ.
ಇ)	ಸದರಿ ಎ.ಪಿ.ಎಂ.ಸಿ ಗೆ ಮಂಜೂರಾಗಿರುವ ಎಲ್ಲಾ ಹುದ್ದೆಗಳು ಖಾಲಿ ಇರುವ ಕಾರಣ ಕಾರ್ಯನಿರ್ವಹಣೆಯನ್ನು ಯಾರು ಮಾಡುತ್ತಿದ್ದಾರೆ?	ಬಾಗೇಪಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿ ಹುದ್ದೆಗೆ ಚಿಕ್ಕಬಳ್ಳಾಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿಯವರನ್ನು ಪ್ರಭಾರದಲ್ಲಿರಿಸಲಾಗಿದೆ ಹಾಗೂ ಸಹಾಯಕ ಕಾರ್ಯದರ್ಶಿ ಹುದ್ದೆಗೆ ಶ್ರೀನಿವಾಸಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಸಹಾಯಕ ಕಾರ್ಯದರ್ಶಿಯವರನ್ನು ಪ್ರಭಾರದಲ್ಲಿರಿಸಿದ್ದು, ಕಾರ್ಯ ನಿರ್ವಹಣೆಗೆ ವ್ಯವಸ್ಥೆ ಕಲ್ಪಿಸಲಾಗಿದೆ.
ಈ)	ಕಳೆದ ಮೂರು ವರ್ಷಗಳಿಂದ ಹುದ್ದೆಗಳನ್ನು ಭರ್ತಿ ಮಾಡುವಂತೆ ಮನವಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದರೆ ಖಾಲಿ ಹುದ್ದೆಗಳನ್ನು ಭರ್ತಿ ಮಾಡದೇ ಇರಲು ಕಾರಣಗಳೇನು? (ವಿವರ ನೀಡುವುದು)	ಬಂದಿದೆ ಬಾಗೇಪಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿನ ಖಾಲಿ ಹುದ್ದೆಗಳು ಸೇರಿದಂತೆ ಎಲ್ಲಾ ಸಮಿತಿಗಳಲ್ಲಿ ಖಾಲಿಯಿರುವ ವಿವಿಧ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು.

ಕಡತ ಸಂಖ್ಯೆ: ಸಇ 485 ಎಂಆರ್‌ಇ 2020

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1492
ವಿಧಾನಸಭೆ ಸದಸ್ಯರ ಹೆಸರು	:	ಶ್ರೀ ಅಬ್ಬಯ್ಯ ಪ್ರಸಾದ್(ಹುಬ್ಬಳ್ಳಿ-ಧಾರವಾಡ ಪೂರ್ವ)
ಉತ್ತರಿಸುವವರು	:	ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು
ಉತ್ತರಿಸಬೇಕಾದ ದಿನಾಂಕ	:	25.09.2020

<table>
<tr><th>ಕ್ರಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಧಾರವಾಡ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಎಷ್ಟು ಶೆಡ್ ಮತ್ತು ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ; (ವಿವರ ನೀಡುವುದು)</td><td>ಧಾರವಾಡ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಹಂಚಿಕೆಯಾದ ನಿವೇಶನ/ಮಳಿಗೆಯ ವಿವರಗಳು:

KIADB ವತಿಯಿಂದ ಹಂಚಿಕೆಯಾದ ನಿವೇಶನಗಳು:
<table>
<tr><th rowspan="2">ಕೆ.ಐ.ಎ.ಡಿ.ಬಿ.</th><th colspan="3">ಪರಿಶಿಷ್ಟ ಜಾತಿ</th><th colspan="3">ಪರಿಶಿಷ್ಟ ಪಂಗಡ</th></tr>
<tr><th>ಸಂಖ್ಯೆ</th><th>ವಿಸ್ತೀರ್ಣ (ಎಕರೆ)</th><th>ಸಹಾಯಧನ (ರೂ. ಲಕ್ಷಗಳು)</th><th>ಸಂಖ್ಯೆ</th><th>ವಿಸ್ತೀರ್ಣ (ಎಕರೆ)</th><th>ಸಹಾಯ ಧನ (ರೂ. ಲಕ್ಷಗಳು)</th></tr>
<tr><td></td><td>86</td><td>41.24</td><td>724.99</td><td>39</td><td>15.71</td><td>320.39</td></tr>
</table>
KSSIDC ವತಿಯಿಂದ ಹಂಚಿಕೆಯಾದ ನಿವೇಶನ/ಮಳಿಗೆಗಳು:
<table>
<tr><th rowspan="2">ಕೆ.ಎಸ್.ಎಸ್.ಐ.ಡಿ.ಸಿ</th><th colspan="2">ಪರಿಶಿಷ್ಟ ಜಾತಿ</th><th colspan="2">ಪರಿಶಿಷ್ಟ ಪಂಗಡ</th></tr>
<tr><th>ಮಳಿಗೆ</th><th>ನಿವೇಶನ</th><th>ಮಳಿಗೆ</th><th>ನಿವೇಶನ</th></tr>
<tr><td></td><td>22</td><td>130</td><td>01</td><td>71</td></tr>
</table>
</td></tr>
<tr><td>ಆ)</td><td>ಶೆಡ್ ಮತ್ತು ನಿವೇಶನ ಹಂಚಿಕೆಯಲ್ಲಿ ಸರ್ಕಾರದಿಂದ ಶೇ.50 ರಷ್ಟು ಸಹಾಯಧನ ಮಂಜೂರು ಮಾಡಲಾಗಿದೆಯೇ? (ಸಂಪೂರ್ಣ ಮಾಹಿತಿ ನೀಡುವುದು)</td><td>ಶೆಡ್ ಮತ್ತು ನಿವೇಶನ ಹಂಚಿಕೆಯಲ್ಲಿ ಸರ್ಕಾರದಿಂದ ಶೇ.50 ರಷ್ಟು ಸಹಾಯಧನವನ್ನು ದಿನಾಂಕ:01.04.2016 ರಿಂದ ಮಂಜೂರು ಮಾಡಲಾಗಿದೆ.
KIADB ವತಿಯಿಂದ ಹಂಚಿಕೆಯಾದ ನಿವೇಶನಗಳು:
<table>
<tr><th rowspan="2">ಕೆ.ಐ.ಎ.ಡಿ.ಬಿ</th><th colspan="2">ಪರಿಶಿಷ್ಟ ಜಾತಿ</th><th colspan="2">ಪರಿಶಿಷ್ಟ ಪಂಗಡ</th></tr>
<tr><th>ಸಂಖ್ಯೆ</th><th>ವಿಸ್ತೀರ್ಣ(ಎಕರೆ)</th><th>ಸಂಖ್ಯೆ</th><th>ವಿಸ್ತೀರ್ಣ(ಎಕರೆ)</th></tr>
<tr><td></td><td>33</td><td>16.50</td><td>13</td><td>7.00</td></tr>
</table>
KSSIDC ವತಿಯಿಂದ ಶೇ.50 ರಷ್ಟು ಸಹಾಯಧನವನ್ನು ಧಾರವಾಡ ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಒಟ್ಟು 17 ಹಂಚಿಕೆದಾರರಿಗೆ ಒದಗಿಸಲಾಗಿದೆ.
<table>
<tr><th rowspan="2">ಕೆ.ಎಸ್.ಎಸ್.ಐ.ಡಿ.ಸಿ</th><th colspan="2">ಪರಿಶಿಷ್ಟ ಜಾತಿ</th><th colspan="2">ಪರಿಶಿಷ್ಟ ಪಂಗಡ</th></tr>
<tr><th>ಸಂಖ್ಯೆ</th><th>ಸಹಾಯಧನ (ರೂ. ಲಕ್ಷಗಳು)</th><th>ಸಂಖ್ಯೆ</th><th>ಸಹಾಯಧನ (ರೂ. ಲಕ್ಷಗಳು)</th></tr>
<tr><td></td><td>11</td><td>312.37</td><td>06</td><td>175.28</td></tr>
</table>
</td></tr>
</table>

(ಜಗದೀಶ ಶೆಟ್ಟರ)

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **1494**

ವಿಧಾನ ಸಭೆ ಸದಸ್ಯರ ಹೆಸರು : ಶ್ರೀ ಅಬ್ಬಯ್ಯ ಪ್ರಸಾದ್ (ಹುಬ್ಬಳ್ಳಿ-ಧಾರವಾಡ ಪೂರ್ವ)

ಉತ್ತರಿಸಬೇಕಾದ ದಿನಾಂಕ : 25.09.2020

ಉತ್ತರಿಸುವ ಸಚಿವರು : ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ಹೊಸದಾಗಿ ಪಡಿತರ ಚೀಟಿ ವಿತರಣೆ ಮಾಡುವಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಪಡಿತರ ಚೀಟಿಯನ್ನು ಫಲಾನುಭವಿಗಳಿಗೆ ನೀಡುವ ಮುನ್ನ ಕುಟುಂಬದ ಎಲ್ಲಾ ಸದಸ್ಯರ ಬಯೋಮೆಟ್ರಿಕ್ ಪಡೆಯುವುದು ಕಡ್ಡಾಯವಾಗಿರುತ್ತದೆ. ಆದರೇ, Covid-19ರ ಹಿನ್ನೆಲೆಯಲ್ಲಿ ಬಯೋಮೆಟ್ರಿಕ್ ವ್ಯವಸ್ಥೆಯನ್ನು ಬಳಸುವುದಕ್ಕೆ ಅಡಚಣೆ ಯಾದ ಕಾರಣದಿಂದ ಹಾಗೂ ಪಡಿತರ ಚೀಟಿಯನ್ನು ವಿತರಿಸುವ ಮುನ್ನ ಅರ್ಜಿದಾರರ ಅರ್ಹತೆಯ ಬಗ್ಗೆ ಸ್ಥಳ ತನಿಖೆಯನ್ನು ಸಹ ಇಲಾಖೆಯ ಕಾರ್ಯ ನಿರ್ವಾಹಕ ಸಿಬ್ಬಂದಿ ಮುಖಾಂತರ ನಡೆಸುವುದು ಕಡ್ಡಾಯವಾಗಿರುತ್ತದೆ. ಕೋವಿಡ್ -19 ಸಾಂಕ್ರಾಮಿಕ ರೋಗವು ತೀವ್ರವಾಗಿ ಪಸರಿಸುತ್ತಿರುವುದರಿಂದ ಸುಗಮ ಚಲನವಲನಗಳಿಗೆ ಅಡಚಣೆ ಉಂಟಾಗಿರುತ್ತದೆ ಈ ಹಿನ್ನಲೆಯಲ್ಲಿ ಹೊಸ ಪಡಿತರ ಚೀಟಿ ವಿತರಣೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿರುತ್ತದೆ.
ಆ	ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು;	ಉದ್ಭವಿಸುವುದಿಲ್ಲ.
ಇ	ಪ್ರಸ್ತುತ ಹೊಸದಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಅವಕಾಶವಿದೆಯೇ; ಇಲ್ಲದಿದ್ದಲ್ಲಿ, ಆನ್‌ಲೈನ್‌ನಲ್ಲಿ ಅರ್ಜಿ ಸಲಿಸಲು ಕೈಗೊಂಡ ಕ್ರಮವೇನು? (ವಿವರ ನೀಡುವುದು)	ಎಪಿಎಲ್(ಎನ್ ಪಿ ಹೆಚ್ ಹೆಚ್) ಹೊಸ ಪಡಿತರ ಚೀಟಿಗಳಿಗೆ ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ. ಆದ್ಯತಾ (ಪಿ.ಹೆಚ್.ಹೆಚ್) ಪಡಿತರ ಚೀಟಿಯನ್ನು ಕೋರಿ ಹೊಸದಾಗಿ ಆನ್‌ಲೈನ್ ಅರ್ಜಿ ಸಲ್ಲಿಸುವುದನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ವೈದ್ಯಕೀಯ ಕಾರಣಗಳು ಮುಂತಾದ ತುರ್ತು ಸಂದರ್ಭದಲ್ಲಿ ತಕ್ಷಣವೇ ಪಡಿತರ ಚೀಟಿ ನೀಡುವ ಅವಕಾಶವನ್ನು ಚಾಲ್ತಿಗೊಳಿಸಲಾಗಿದೆ

ಆನಾಸ 257 ಡಿಆರ್‌ಎ 2020 (ಇ-ಆಫೀಸ್)

(ಕೆ.ಗೋಪಾಲಯ್ಯ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕರ್ನಾಟಕ ಸರ್ಕಾರ

ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1506

ಸದಸ್ಯರ ಹೆಸರು : ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ)

ಉತ್ತರಿಸಬೇಕಾದ ದಿನಾಂಕ : 25-09-2020

ಕ್ರ.ಸಂ.	ಪ್ರಶ್ನೆಗಳು	ಉತ್ತರ
ಅ	ರಾಜ್ಯದಲ್ಲಿ ಒಟ್ಟು ಎಷ್ಟು ಸಾರ್ವಜನಿಕ ಉದ್ದಿಮೆಗಳು ಇರುತ್ತವೆ; ಅವುಗಳು ಯಾವುವು;	ಕರ್ನಾಟಕ ರಾಜ್ಯದಲ್ಲಿ ಸಾರ್ವಜನಿಕ ಉದ್ದಿಮೆಗಳ ವ್ಯಾಪ್ತಿಯಲ್ಲಿ ಒಟ್ಟು 60 ಸಾರ್ವಜನಿಕ ಉದ್ದಿಮೆಮಗಳಿವೆ. ಈ ಉದ್ದಿಮೆಗಳು 22 ವಿವಿಧ ಆಡಳಿತ ಇಲಾಖೆಗಳ ಕಾರ್ಯವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ 60 ಸಾರ್ವಜನಿಕ ಉದ್ದಿಮೆಗಳ ಪಟ್ಟಿಯನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.
ಆ	ಯಾವ ಸಾರ್ವಜನಿಕ ಉದ್ದಿಮೆಗಳು ಲಾಭ ನಷ್ಟದಲ್ಲಿರುತ್ತವೆ; (ಅವುಗಳ ನಷ್ಟದ ಪ್ರಮಾಣ ತಿಳಿಸುವುದು)	18 ಸಾರ್ವಜನಿಕ ಉದ್ದಿಮೆಗಳು ನಷ್ಟ ಅನುಭವಿಸುತ್ತಿವೆ. ನಷ್ಟದ ಪ್ರಮಾಣದೊಂದಿಗೆ ಪಟ್ಟಿಯನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ.
ಇ	ನಷ್ಟದಲ್ಲಿರುವ ಸಾರ್ವಜನಿಕ ಉದ್ದಿಮೆಗಳನ್ನು ಸ್ಥಗಿತಗೊಳಿಸಲಾಗಿದೆಯೇ;	ಇಲ್ಲ
ಈ	ಸ್ಥಗಿತಗೊಳಿಸದಿದ್ದಲ್ಲಿ, ಅವುಗಳ ಪುನಶ್ಚೇತನಕ್ಕಾಗಿ ಸರ್ಕಾರ ಕೈಗೊಂಡಿರುವ ಮತ್ತು ಕೈಗೊಳ್ಳಲಿರುವ ಕ್ರಮಗಳೇನು;	ನಷ್ಟ ಅನುಭವಿಸುತ್ತಿರುವ 18 ಉದ್ದಿಮೆಗಳ ಪೈಕಿ, 13 ಉದ್ದಿಮೆಗಳು ಸಾರ್ವಜನಿಕ ಸಾರಿಗೆ, ವಿದ್ಯುತ್ ಪ್ರಸರಣ, ನೀರಾವರಿ, ಮೂಲಭೂತ ಸೌಲಭ್ಯ ಅಭಿವೃದ್ಧಿ ಮತ್ತು ಸಾಮಾಜಿಕ ಅಭಿವೃದ್ಧಿ(ವಾಣಿಜ್ಯ) ಕ್ಷೇತ್ರದ ಉದ್ದಿಮೆಗಳಾಗಿದ್ದು, ಈ ಎಲ್ಲಾ ಉದ್ದಿಮೆಗಳು ಸಮಾಜದ ಎಲ್ಲಾ ಸ್ತರದ ನಾಗರಿಕರಿಗೆ ಮೂಲಭೂತ ಸೌಕರ್ಯ ಕಲ್ಪಿಸುವ ಉದ್ದಿಮೆಗಳಾಗಿರುತ್ತವೆ. ಈ ಉದ್ದಿಮೆಗಳ ಪುನಶ್ಚೇತನಕ್ಕೆ ಸಾರ್ವಜನಿಕ ಉದ್ದಿಮೆಗಳ ಇಲಾಖೆಯು ಪ್ರತೀ ವರ್ಷ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಮುಖಾಂತರ, ನಷ್ಟದಲ್ಲಿರುವ ಉದ್ದಿಮೆಗಳ ಮೌಲ್ಯಮಾಪನ ನಡೆಸುತ್ತದೆ. ಸದರಿ ಪ್ರಾಧಿಕಾರವು ಸೂಚಿಸುವ ಕ್ರಮಗಳನ್ನು ಕಾರ್ಯಗತಗೊಳಿಸಿ, ಉದ್ದಿಮೆಗಳ ಪುನಶ್ಚೇತನಕ್ಕೆ ಸಂಬಂಧಪಟ್ಟ ಆಡಳಿತ ಇಲಾಖೆಗಳು ನಿರಂತರವಾಗಿ ಕ್ರಮವಹಿಸುತ್ತಿವೆ.
ಉ	ಯಾವ ಯಾವ ಸಾರ್ವಜನಿಕ ಉದ್ದಿಮೆಗಳನ್ನು ಪುನಶ್ಚೇತನಗೊಳಿಸಲಾಗುತ್ತಿದೆ? (ವಿವರ ನೀಡುವುದು)	ಅನುಬಂಧ-2 ರಲ್ಲಿ ಹೆಸರಿಸಿರುವ ಉದ್ದಿಮೆಗಳಲ್ಲಿ, ಮೈಸೂರು ಕಾಗದ ಕಾರ್ಖಾನೆ ನಿಯಮಿತ ಮತ್ತು ಮೈಸೂರು ಸಕ್ಕರೆ ಕಂಪನಿ ನಿಯಮಿತ ಗಳನ್ನು ಹೊರತುಪಡಿಸಿ, ಉಳಿದ 16 ಉದ್ದಿಮೆಗಳ ಪುನಶ್ಚೇತನಕ್ಕೆ ಸಂಬಂಧಿಸಿದಂತೆ, ಸಾರ್ವಜನಿಕ ಉದ್ದಿಮೆಗಳ ಇಲಾಖೆಯು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಮುಖಾಂತರ ನಡೆಸುವ ಮೌಲ್ಯಮಾಪನದ ನಂತರ, ಪ್ರಾಧಿಕಾರವು ನೀಡುವ ಮೌಲ್ಯಮಾಪನ ವರದಿಗಳಲ್ಲಿ ಸೂಚಿಸುವ ಪುನಶ್ಚೇತನ ಕ್ರಮಗಳನ್ನು ಕಾರ್ಯಗತಗೊಳಿಸಿ, ಸದರಿ ಉದ್ದಿಮೆಗಳ ಪುನಶ್ಚೇತನವು, ಸಂಬಂಧಿಸಿದ ಆಡಳಿತ ಇಲಾಖೆಗಳಿಗೆ ನಿರಂತರ ಪ್ರಕ್ರಿಯೆಯಾಗಿರುತ್ತದೆ.

(ಜಗದೀಶ್ ಶೆಟ್ಟರ್)

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ

ಸಾರ್ವಜನಿಕ ಉದ್ದಿಮೆಗಳ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1509

ವಿಧಾನ ಸಭೆ ಸದಸ್ಯರ ಹೆಸರು : ಶ್ರೀ ಗಣೇಶ್ ಜೆ.ಎನ್ (ಕಂಪ್ಲಿ)

ಉತ್ತರಿಸಬೇಕಾದ ದಿನಾಂಕ : 25.09.2020

ಉತ್ತರಿಸುವ ಸಚಿವರು : ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ವರ್ಷಕ್ಕೊಂದು ಬಾರಿ ಆಹಾರ ಸುರಕ್ಷಾ ಮಾಹೆಯನ್ನು ಏರ್ಪಡಿಸಲು ಉದ್ದೇಶಿಸಿ, ಅದರಲ್ಲಿ ಪಡಿತರ ಚೀಟಿಗಳನ್ನು ಪರಿಶೀಲಿಸಿ ಅರ್ಹತೆಯುಳ್ಳವರಿಗೆ ಪಡಿತರ ಚೀಟಿಗಳನ್ನು ವಿತರಿಸಲು ಪ್ರತಿ ವರ್ಷ ಸರ್ಕಾರ ಕ್ರಮಗಳನ್ನು ಕೈಗೊಂಡಿದೆಯೇ;	ಪಡಿತರ ಚೀಟಿದಾರರ ಅರ್ಹತೆ ಮತ್ತು ಅನರ್ಹತೆಗಳನ್ನು ಪರಿಶೀಲಿಸಲು ಪ್ರತಿ ವರ್ಷ ಸೆಪ್ಟೆಂಬರ್ ಮಾಹೆಯಲ್ಲಿ "ಆಹಾರ ಸುರಕ್ಷಾ ಮಾಹೆ" ಆಚರಿಸಲು ಕ್ರಮವಹಿಸಲಾಗಿದೆ. ಅದರಂತೆ ರಾಜ್ಯಾದ್ಯಂತ ಪರಿಶೀಲನಾ ಕಾರ್ಯ ನಡೆಯುತ್ತಿದೆ. ಅನರ್ಹ ಪಡಿತರ ಚೀಟಿ ಪತ್ತೆ ಹಚ್ಚುವ ಮತ್ತು ರದ್ದು ಮಾಡುವ ಪ್ರಕ್ರಿಯೆ ನಿರಂತರವಾಗಿರುತ್ತದೆ.
ಆ	ಹಾಗಿದ್ದಲ್ಲಿ, ಎಷ್ಟು ಜನರ ಅನರ್ಹ ಪಡಿತರ ಚೀಟಿಗಳನ್ನು ರದ್ದುಪಡಿಸಲಾಗಿದೆ;	2018 ರಿಂದ ಇಲ್ಲಿಯವರೆಗೆ ಒಟ್ಟು 2,28,190 ಪಿಹೆಚ್‌ಹೆಚ್ ಮತ್ತು ಅಂತ್ಯೋದಯ ಅನರ್ಹ ಪಡಿತರ ಚೀಟಿಗಳನ್ನು ರದ್ದುಪಡಿಸಲಾಗಿದೆ.
ಇ	ಇನ್ನೂ ಎಷ್ಟು ಅಧಿಕೃತ ಪಡಿತರ ಚೀಟಿಗಳನ್ನು ರದ್ದುಪಡಿಸಬೇಕಿದೆ; ಸರ್ಕಾರ ಕೈಗೊಂಡ ಕ್ರಮದ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು?	ಅನರ್ಹ ಪಡಿತರ ಚೀಟಿ ಪತ್ತೆ ಹಚ್ಚುವ ಮತ್ತು ರದ್ದು ಮಾಡುವ ಪ್ರಕ್ರಿಯೆ ನಿರಂತರವಾಗಿದ್ದು, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅನರ್ಹ ಪಡಿತರ ಚೀಟಿ ರದ್ದು ಮಾಡುವ ಕಾರ್ಯ ನಿರಂತರವಾಗಿರುತ್ತದೆ. ನಿಗಧಿತ ಅವಧಿಯೊಳಗೆ ಅಕ್ರಮ ಕಾರ್ಡ್ ಗಳನ್ನು ಒಪ್ಪಿಸಲು ಅನರ್ಹ ಪಡಿತರ ಚೀಟಿದಾದರಿಗೆ ಸಮಯಾವಕಾಶವನ್ನು ನೀಡಿದೆ. ಅದರಂತೆ ಒಪ್ಪಿಸಿದ ಅನರ್ಹ ಕಾರ್ಡ್‌ಗಳ ರದ್ದತಿಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಆನಾಸ 258 ಡಿಆರ್ ಎ 2020 (ಇ-ಆಫೀಸ್)

(ಕೆ.ಗೋಪಾಲಯ್ಯ)

ಆಹಾರ, ನಾಗರಿಕ ಸರಬರಾಜು ಮತ್ತು

ಗ್ರಾಹಕರ ವ್ಯವಹಾರಗಳ ಹಾಗೂ

ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ : 1514

ಸದಸ್ಯರ ಹೆಸರು : ಶ್ರೀಮತಿ ಕುಸುಮಾವತಿ ಚನ್ನಬಸಪ್ಪ ಶಿವಳ್ಳಿ (ಕುಂದಗೋಳ)

ಉತ್ತರಿಸಬೇಕಾದ ದಿನಾಂಕ : 25-09-2020

ಉತ್ತರಿಸುವವರು : ನಗರಾಭಿವೃದ್ಧಿ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಧಾರವಾಡ ಜಿಲ್ಲೆ ಕುಂದಗೋಳ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಯೋಜನೆಗೆ ಸಿದ್ಧಪಡಿಸಿರುವ ರೂ.7000.00 ಲಕ್ಷಗಳ ಅಂದಾಜು ಪಟ್ಟಿ ಆಡಳಿತಾತ್ಮಕ ಅನುಮೋದನೆ ನೀಡುವ ಪ್ರಸ್ತಾವನೆಯು ಯಾವ ಹಂತದಲ್ಲಿದೆ;	ಕುಂದಗೋಳ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ರೂ.7000.00 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಪ್ರಸ್ತಾವನೆಯು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಸ್ವೀಕೃತವಾಗಿದ್ದು, ಸದರಿ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.
ಆ)	ಸದರಿ ಯೋಜನೆಯ ಅನುಮೋದನೆಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ;	

ಸಂಖ್ಯೆ ನಅಇ 136 ಯುಎಂಎಸ್ 2020

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1516

ವಿಧಾನ ಸಭೆ ಸದಸ್ಯರ ಹೆಸರು : ಡಾ|| ಅಜಯ್ ಧರ್ಮ ಸಿಂಗ್ (ಜೇವರ್ಗಿ)

ಉತ್ತರಿಸಬೇಕಾದ ದಿನಾಂಕ : 25.09.2020

ಉತ್ತರಿಸುವ ಸಚಿವರು : ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ಕಳೆದ ಮೂರು ವರ್ಷಗಳಲ್ಲಿ ಯಾದಗಿರಿ ಮತ್ತು ಕಲಬುರಗಿಯಲ್ಲಿ ಸರ್ಕಾರದ ನ್ಯಾಯಬೆಲೆ ಅಂಗಡಿಗಳಲ್ಲಿ ಅಕ್ರಮವಾಗಿ ಅಕ್ಕಿಯನ್ನು ತೆಗೆದುಕೊಂಡು, ರೀ ಪಾಲಿಷ್ ಮಾಡಿ ಮಾರ್ಕೆಟ್ ನಲ್ಲಿ ಹೆಚ್ಚಿನ ಬೆಲೆಗೆ ವ್ಯಾಪಾರ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೇಯೆ; ಹಾಗಿದ್ದಲ್ಲಿ, ಅಕ್ರಮ ನಡೆಸುವವರ ಮೇಲೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿವೆ;	ಬಂದಿರುವುದಿಲ್ಲ.
ಆ	ಸದರಿ ಜಿಲ್ಲೆಗಳಲ್ಲಿ ಇಂತಹ ಎಷ್ಟು ಪ್ರಕರಣಗಳು ದಾಖಲಾಗಿವೆ; ಯಾರ ಮೇಲೆ ಎಷ್ಟೆಷ್ಟು ಪ್ರಕರಣ ದಾಖಲಾಗಿವೆ; (ತಾಲ್ಲೂಕುವಾರು ಸಂಪೂರ್ಣ ಮಾಹಿತಿ ಒದಗಿಸುವುದು)	ಉದ್ಭವಿಸುವುದಿಲ್ಲ.

ಆನಾಸ 52 ಆನಾಸ 2020 (ಇ-ಆಫೀಸ್)

(ಕೆ.ಗೋಪಾಲಯ್ಯ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **1523**
2. ಸದಸ್ಯರ ಹೆಸರು : ಶ್ರೀ.ಶ್ರೀನಿವಾಸ್ ಎಂ.
3. ಉತ್ತರಿಸುವ ಸಚಿವರು : ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು
4. ಉತ್ತರಿಸಬೇಕಾದ ದಿನಾಂಕ : **25-09-2020**

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಮಂಡ್ಯ ತಾಲ್ಲೂಕು ಕಸಬಾ ಹೋಬಳಿ ಬಿ.ಗೌಡಗೆರೆ ಗ್ರಾಮದಲ್ಲಿ ತೋಟಗಾರಿಕೆ ಇಲಾಖೆಗೆ 4-00 ಎಕರೆ ಜಾಗ ಮಂಜೂರಾಗಿ 25 ವರ್ಷಗಳೇ ಕಳೆದರೂ ಇದುವರೆಗೂ ತೋಟಗಾರಿಕೆ ಕ್ಷೇತ್ರದ ಕಾರ್ಯಗಳು ಪ್ರಾರಂಭವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು;	ಸದರಿ ಜಾಗವು ಕಡಿದಾದ ಇಳಿಜಾರು ಪ್ರದೇಶ ಹಾಗೂ ಹಳ್ಳದಿಂದ ಕೂಡಿದ್ದು, ಗ್ರಾಮದ ಸರಹದ್ದಿಗೆ ಅಂಟಿಕೊಂಡಿದ್ದು, ಈ ಜಾಗವನ್ನು ಆದ್ಯತೆಯ ಮೇಲೆ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ.
ಇ)	ಮಂಜೂರಾಗಿರುವ ಜಾಗದಲ್ಲಿ ತೋಟಗಾರಿಕೆ ಇಲಾಖೆಯು ಕಾರ್ಯಕ್ರಮಗಳನ್ನು ಪ್ರಾರಂಭಿಸಲು ಸರ್ಕಾರ ಯಾವಾಗ ಕ್ರಮ ಕೈಗೊಳ್ಳಲಿದೆ? (ವಿವರ ನೀಡುವುದು)	ಸದರಿ ಜಾಗವು ಕಡಿದಾದ ಇಳಿಜಾರು ಪ್ರದೇಶ ಹಾಗೂ ಹಳ್ಳದಿಂದ ಕೂಡಿರುವುದರಿಂದ ಕ್ಷೇತ್ರವನ್ನು ಅಭಿವೃದ್ಧಿಪಡಿಸಿರುವುದಿಲ್ಲ. ಈ ಜಾಗವನ್ನು ಸಮತಟ್ಟು ಮಾಡಿ, ಉತ್ತಮ ಗುಣಮಟ್ಟದ ತೆಂಗಿನಸಸಿಗಳನ್ನು ಅಭಿವೃದ್ಧಿಪಡಿಸಲು ಅಗತ್ಯ ಕ್ರಮ ವಹಿಸಲಾಗುತ್ತಿದೆ.

ಸಂಖ್ಯೆ: HORTI 374 HGM 2020

(ನಾರಾಯಣಗೌಡ)
ಪೌರಾಡಳಿತ,
ತೋಟಗಾರಿಕೆ ಮತ್ತು
ರೇಷ್ಮೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ	1525
ಸದಸ್ಯರ ಹೆಸರು	ಯತೀಂದ್ರ ಸಿದ್ದರಾಮಯ್ಯ ಡಾ||
ಉತ್ತರಿಸುವ ಸಚಿವರು	ತೋಟಗಾರಿಕೆ ಸಚಿವರು
ಉತ್ತರಿಸುವ ದಿನಾಂಕ	25.09.2020

ಕ್ರ. ಸಂ	ಪ್ರಶ್ನೆ	ಉತ್ತರ
(ಅ)	ರಾಜ್ಯದಲ್ಲಿ ತೋಟಗಾರಿಕೆ ಇಲಾಖೆಯಿಂದ ಕೃಷಿ ಭಾಗ್ಯ ಯೋಜನೆಯನ್ನು ಅನುಷ್ಠಾನ ಮಾಡಲಾಗುತ್ತಿದೆಯೇ;	ಪ್ರಸಕ್ತ ವರ್ಷದಲ್ಲಿ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತಿಲ್ಲ. 2020-21ನೇ ಸಾಲಿನಲ್ಲಿ ಕೃಷಿಭಾಗ್ಯ ಯೋಜನೆಯಡಿ ನಿಗದಿಯಾದ ಅನುದಾನವನ್ನು ಕೋವಿಡ್-19 ಕಾರಣದಿಂದಾಗಿ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿರುವ ಹಣ್ಣು ಮತ್ತು ತರಕಾರಿ ಬೆಳೆದಿರುವ ರೈತರಿಗೆ ಪರಿಹಾರ ನೀಡುವ ಸಲುವಾಗಿ ಬಳಸಿಕೊಳ್ಳಲಾಗುತ್ತಿದೆ.
(ಆ)	ಹಾಗಿದ್ದಲ್ಲಿ, ಯಾವ ಬೆಳೆಗಳಿಗೆ ಸಹಾಯಧನ ಸೌಲಭ್ಯವನ್ನು ನೀಡಲಾಗುತ್ತಿದೆ; ಹಾಗೂ ಈ ಕುರಿತಾದ ಮಾರ್ಗಸೂಚಿಗಳೇನು;	ಅನ್ವಯಿಸುವುದಿಲ್ಲ.
(ಇ)	ಕಳೆದ 3 ವರ್ಷಗಳಲ್ಲಿ ಈ ಕಾರ್ಯಕ್ರಮಕ್ಕೆ ನಿಗದಿಪಡಿಸಿದ ಅನುದಾನ ಹಾಗೂ ಖರ್ಚು ಮಾಡಿದ ಮೊತ್ತವೆಷ್ಟು? (ವಿವರ ನೀಡುವುದು)	ಕಳೆದ 3 ವರ್ಷಗಳಲ್ಲಿ ಈ ಕಾರ್ಯಕ್ರಮಕ್ಕೆ ನಿಗದಿಪಡಿಸಿದ ಅನುದಾನ ಹಾಗೂ ಖರ್ಚು ಮಾಡಿದ ವಿವರಗಳು ಕೆಳಕಂಡಂತಿದೆ.

ವರ್ಷ	ನಿಗದಿಯಾದ ಅನುದಾನ (ರೂ.ಲಕ್ಷಗಳಲ್ಲಿ)	ಪ್ರಗತಿ (ರೂ.ಲಕ್ಷಗಳಲ್ಲಿ)
2017-18	12900.00	12673.073
2018-19	7867.00	7761.963
2019-20	6000.00	5911.338

ಸಂಖ್ಯೆ: HORTI 375 HEG 2020

(ನಾರಾಯಣಗೌಡ)

ಪೌರಾಡಳಿತ, ತೋಟಗಾರಿಕೆ ಮತ್ತು

ರೇಷ್ಮೆ ಸಚಿವರು

/

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರು : ಶ್ರೀ ಡಿ.ಸಿ. ತಮ್ಮಣ್ಣ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1537
ಉತ್ತರಿಸಬೇಕಾದ ದಿನಾಂಕ : 25.09.2020

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಮದ್ದೂರು ತಾಲ್ಲೂಕಿನ ಮಣಿಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಕೇಂದ್ರ ಸರ್ಕಾರದ ಬಡ್ಡಿ ರಿಯಾಯಿತಿ ಪಡೆಯುವ ಸಂದರ್ಭದಲ್ಲಿ ಆಗಿರುವ ಲೋಪದೋಷದ ಬಗ್ಗೆ ಸಿ.ಎ.ಜಿ. ಆರೋಪ ಮಾಡಿರುವುದು ನಿಜವೇ;	ಮಣಿಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಮದ್ದೂರು ತಾಲ್ಲೂಕು ಇಲ್ಲಿ ಕೇಂದ್ರ ಸರ್ಕಾರದ ಸಾಲ ಮನ್ನಾ/ಪರಿಹಾರ ಯೋಜನೆ-2008ರಡಿಯಲ್ಲಿ ಲೋಪದೋಷ ಉಂಟಾಗಿದ್ದ ಬಗ್ಗೆ ಮಹಾಲೇಖಪಾಲರು, ಬೆಂಗಳೂರು ರವರು ಆಕ್ಷೇಪಿಸಿದ್ದು ನಿಜವಾಗಿರುತ್ತದೆ.
ಆ)	ಸದರಿ ಪ್ರಕರಣದಲ್ಲಿ ಸಂಘಕ್ಕೆ ಹಾಗೂ ಬ್ಯಾಂಕಿಗೆ ಆಗಿರುವ ಆರ್ಥಿಕ ನಷ್ಟವೆಷ್ಟು; ನಷ್ಟವನ್ನು ಯಾವ ರೀತಿ ಭರಿಸಲಾಗಿದೆ; (ವಿವರ ನೀಡುವುದು)	ದುರುಪಯೋಗವಾಗಿರುವ ಮೊತ್ತ ರೂ. 19,68,258/-ಗಳನ್ನು ಮಣಿಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನಲ್ಲಿ ಹೊಂದಿರುವ ಬೆಳೆ ಸಾಲದ ಖಾತೆಯಿಂದ ಡ್ರಾ ಮಾಡಿ ನಬಾರ್ಡ್ ಮೂಲಕ ಕೇಂದ್ರ ಸರ್ಕಾರಕ್ಕೆ ಪಾವತಿಸಲಾಗಿರುತ್ತದೆ. ಮಣಿಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಅಷ್ಟರ ಮಟ್ಟಿಗೆ ನಷ್ಟವಾಗಿರುತ್ತದೆ. ಈ ಮೊತ್ತದ ವಸೂಲಾತಿಗೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮಂಡ್ಯ ಉಪ ವಿಭಾಗ, ಮಂಡ್ಯ ಇವರ ನ್ಯಾಯಾಲಯದಲ್ಲಿ ಸಂಬಂಧಪಟ್ಟ ನೌಕರರು ಹಾಗೂ ಆಡಳಿತ ಮಂಡಳಿ ವಿರುದ್ಧ ಕಾಯ್ದೆ ಕಲಂ 69ರಡಿ ಅಧಿಭಾರ ಅರ್ಜಿ ದಾಖಲಾಗಿದ್ದು, ವಿಚಾರಣೆಯಲ್ಲಿರುತ್ತದೆ.
ಇ)	ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಸಂಬಂಧಪಟ್ಟ ಬ್ಯಾಂಕಿನ ಅಧಿಕಾರಿ ಹಾಗೂ ಸಂಘದ ಮೇಲೆ ಯಾವ ರೀತಿ ಶಿಸ್ತು ಕ್ರಮ ಕೈಗೊಳ್ಳಲಾಗಿದೆ? (ವಿವರ ನೀಡುವುದು)	ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಬ್ಯಾಂಕಿನ ಅಂದಿನ ವೃತ್ತ ಮೇಲ್ವಿಚಾರಕರಾಗಿದ್ದ ಶ್ರೀ ಬಸವರಾಜು ರವರನ್ನು ದಿನಾಂಕ:24-04-2015ರಂದು ಅಮಾನತುಗೊಳಿಸಲಾಗಿದ್ದು, ಈ ಅಮಾನತ್ತು ಆದೇಶವನ್ನು ಸಹಕಾರ ಸಂಘಗಳ ಜಂಟಿ ನಿಬಂಧಕರು, ಮೈಸೂರು ಪ್ರಾಂತ, ಇವರ ನ್ಯಾಯಾಲಯದಲ್ಲಿ ಕಾಯ್ದೆ ಕಲಂ 70 ರಡಿ ದಾವೆ ಹೂಡಿ ಪ್ರಶ್ನಿಸಿದ್ದು, ದಿನಾಂಕ: 28-04-2017 ರಂದು ಜಂಟಿ ನಿಬಂಧಕರ ನ್ಯಾಯಾಲಯದಲ್ಲಿ ಅಂತಿಮ ಆದೇಶ ಹೊರಡಿಸಲಾಗಿದ್ದು, ಅಮಾನತ್ತು ಆದೇಶವನ್ನು ರದ್ದುಗೊಳಿಸಿರುತ್ತಾರೆ. ಸಂಘದ ಮುಖ್ಯಕಾರ್ಯನಿರ್ವಹಣಾಧಿಕಾರಿಯಾಗಿದ್ದ ಶ್ರೀ ದೊಡ್ಡತಮ್ಮೇಗೌಡ ಇವರು ಸೇವೆಯಿಂದ ದಿನಾಂಕ: 30-06-2015ರಂದು ನಿವೃತ್ತಗೊಂಡಿರುತ್ತಾರೆ. ಆದರೆ ಸದರಿಯವರ ವಿರುದ್ಧ ಜೆ.ಎಂ.ಎಫ್.ಸಿ. ನ್ಯಾಯಾಲಯ, ಮದ್ದೂರು ಇಲ್ಲಿ ಕ್ರೈಂ ನಂ.1657/2017ರಂತೆ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಿದ್ದು, ವಿಚಾರಣೆ ಪ್ರಗತಿಯಲ್ಲಿರುತ್ತದೆ.

ಸಂಖ್ಯೆ: ಸಿಒ 345 ಸಿಎಲ್‌ಎಸ್ 2020

ಎಸ್.ಟಿ. ಸೋಮಶೇಖರ್
(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ : 1543
ಸದಸ್ಯರ ಹೆಸರು : ಶ್ರೀ ಸುರೇಶ್ ಗೌಡ (ನಾಗಮಂಗಲ)
ಉತ್ತರಿಸಬೇಕಾದ ದಿನಾಂಕ : 25-09-2020
ಉತ್ತರಿಸುವವರು : ಮಾನ್ಯ ನಗರಾಭಿವೃದ್ಧಿ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ನಾಗಮಂಗಲ ಪುರಸಭೆ ವ್ಯಾಪ್ತಿಯಲ್ಲಿ ಎಷ್ಟು ಮೊತ್ತದ ಸಮಗ್ರ ಒಳಚರಂಡಿ ನಿರ್ಮಾಣ ಯೋಜನೆ ತಯಾರಿಸಲಾಗಿದೆ; ಪ್ರಸ್ತುತ ಯಾವ ಹಂತದಲ್ಲಿದೆ;	ನಾಗಮಂಗಲ ಪಟ್ಟಣಕ್ಕೆ (ನಾಗಮಂಗಲ ಹಾಗೂ ಹೊಸದಾಗಿ ಸೇರ್ಪಡೆಯಾಗಿರುವ 14 ಹಳ್ಳಿಗಳಿಗೆ) ಸಮಗ್ರ ಒಳಚರಂಡಿ ಯೋಜನೆಯನ್ನು ಕೈಗೊಳ್ಳಲು ರೂ.34.60 ಕೋಟಿಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ದಿನಾಂಕ:26.07.2019 ರಂದು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಪ್ರಸ್ತಾವನೆ ಸ್ವೀಕೃತವಾಗಿದ್ದು, ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲು ಉಪ ಅಂದಾಜುಗಳನ್ನು ಸೇರಿಸಿ ಮರು ಪ್ರಸ್ತಾವನೆ ಸಲ್ಲಿಸುವಂತೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ತಿಳಿಸಲಾಗಿದ್ದು, ಪರಿಷ್ಕೃತ ಪ್ರಸ್ತಾವನೆ ಸ್ವೀಕೃತವಾದ ನಂತರ ಆಡಳಿತಾತ್ಮಕ ಅನುಮೋದನೆ ನೀಡಲು ಕ್ರಮವಹಿಸಲಾಗುವುದು.
ಆ)	ಈ ಯೋಜನೆಗೆ ಅನುಮತಿ ನೀಡಿದ್ದರೂ ಕಾಮಗಾರಿ ಪ್ರಾರಂಭಿಸದೇ ಇರಲು ಕಾರಣವೇನು?	

ಸಂಖ್ಯೆ ನಅಇ 137 ಯುಎಂಎಸ್ 2020

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು : ಶ್ರೀ ಸುರೇಶ್‌ಗೌಡ (ನಾಗಮಂಗಲ)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1542

ಉತ್ತರಿಸಬೇಕಾದ ದಿನಾಂಕ : 25-09-2020

ಉತ್ತರಿಸಬೇಕಾದವರು : ನಗರಾಭಿವೃದ್ಧಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ನಾಗಮಂಗಲ ಪುರಸಭೆ ವ್ಯಾಪ್ತಿಯಲ್ಲಿ ಎಷ್ಟು ಮೊತ್ತದ ಸಮಗ್ರ ಕುಡಿಯುವ ನೀರು ಸರಬರಾಜು ಯೋಜನೆ (24X7) ತಯಾರಿಸಲಾಗಿದೆ: ಪ್ರಸ್ತುತ ಈ ಯೋಜನೆಯು ಯಾವ ಹಂತದಲ್ಲಿದೆ.	ನಾಗಮಂಗಲ ಪುರಸಭೆ ವ್ಯಾಪ್ತಿಯಲ್ಲಿ (ನಾಗಮಂಗಲ ಹಾಗೂ ಹೊಸದಾಗಿ ಸೇರ್ಪಡೆಯಾಗಿರುವ 14 ಹಳ್ಳಿಗಳಿಗೆ) ಸಮಗ್ರ ಕುಡಿಯುವ ನೀರು ಸರಬರಾಜು ಯೋಜನೆಯನ್ನು ಕೈಗೊಳ್ಳಲು ರೂ.150.00 ಕೋಟಿಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಪ್ರಸ್ತಾವನೆಯು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ದಿನಾಂಕ 05.03.2019 ರಂದು ಸರ್ಕಾರಕ್ಕೆ ಸ್ವೀಕೃತವಾಗಿದ್ದು, ಆರ್ಥಿಕ ಇಲಾಖೆಯ ನಿರ್ದೇಶನದನ್ವಯ ಸದರಿ ಪ್ರಸ್ತಾವನೆಯನ್ನು ಮಂಡಳಿಗೆ ಹಿಂದಿರುಗಿಸಲಾಗಿದೆ.
ಆ)	ಈ ಯೋಜನೆಗೆ ಅನುಮೋದನೆ ನೀಡಿದ್ದರೂ ಕಾಮಗಾರಿ ಪ್ರಾರಂಭಿಸದೇ ಇರಲು ಕಾರಣಗಳೇನು?	

ಸಂಖ್ಯೆ ನಅಇ 143 ಯುಎಂಎಸ್ 2020

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ	:	1544
ಸದಸ್ಯರ ಹೆಸರು	:	ಶ್ರೀ ಸುರೇಶ್ ಗೌಡ (ನಾಗಮಂಗಲ)
ಉತ್ತರಿಸಬೇಕಾದ ದಿನಾಂಕ	:	25-09-2020
ಉತ್ತರಿಸುವವರು	:	ಮಾನ್ಯ ನಗರಾಭಿವೃದ್ಧಿ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಬೆಳ್ಳೂರು ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ ಎಷ್ಟು ಮೊತ್ತದ ಸಮಗ್ರ ಒಳಚರಂಡಿ ಯೋಜನೆ ತಯಾರಿಸಲಾಗಿದೆ; ಪ್ರಸ್ತುತ ಯೋಜನೆ ಯಾವ ಹಂತದಲ್ಲಿದೆ;	ಬೆಳ್ಳೂರು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಸಮಗ್ರ ಒಳಚರಂಡಿ ಕಾಮಗಾರಿ ಕೈಗೊಳ್ಳಲು ರೂ.44.00 ಕೋಟಿಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡುವಂತೆ ದಿನಾಂಕ 26.07.2019 ರಂದು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಪ್ರಸ್ತಾವನೆ ಸ್ವೀಕೃತವಾಗಿದ್ದು, ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲು ಉಪ ಅಂದಾಜುಗಳನ್ನು ಸೇರಿಸಿ ಮರು ಪ್ರಸ್ತಾವನೆ ಸಲ್ಲಿಸುವಂತೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ತಿಳಿಸಲಾಗಿದ್ದು, ಪರಿಷ್ಕೃತ ಪ್ರಸ್ತಾವನೆ ಸ್ವೀಕೃತವಾದ ನಂತರ ಆಡಳಿತಾತ್ಮಕ ಅನುಮೋದನೆ ನೀಡಲು ಕ್ರಮವಹಿಸಲಾಗುವುದು.
ಆ)	ಈ ಯೋಜನೆಗೆ ಅನುಮತಿ ನೀಡಿದ್ದರೂ ಕಾಮಗಾರಿಯನ್ನು ಪ್ರಾರಂಭ ಮಾಡದೇ ಇರಲು ಕಾರಣವೇನು? (ವಿವರ ನೀಡುವುದು)	

ಸಂಖ್ಯೆ ನಅಇ 138 ಯುಎಂಎಸ್ 2020

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1549
2. ಸದಸ್ಯರ ಹೆಸರು : ಶ್ರೀ ಮುನಿಯಪ್ಪ ವಿ. (ಶಿಡ್ಲಘಟ್ಟ)
3. ಉತ್ತರಿಸುವ ದಿನಾಂಕ : 25.09.2020
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ.	ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರದಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಕೈಗಾರಿಕಾ ಪ್ರದೇಶ ಸ್ಥಾಪನೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.
ಆ.	ಹಾಗಿದ್ದಲ್ಲಿ, ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಕೆ.ಐ.ಎ.ಡಿ.ಬಿ. ಯಿಂದ ಯಾವುದಾದರೂ ಜಮೀನು ಗುರುತಿಸಲಾಗಿದೆಯೇ; (ವಿವರ ನೀಡುವುದು)	ಉದ್ಭವಿಸುವುದಿಲ್ಲ
ಇ.	ಜಮೀನು ಗುರುತಿಸಿದ್ದಲ್ಲಿ, ಅದನ್ನು ಕೆ.ಐ.ಎ.ಡಿ.ಬಿ. ವಶಕ್ಕೆ ಪಡೆಯಲಾಗಿದೆಯೇ; (ವಿವರ ನೀಡುವುದು)	ಉದ್ಭವಿಸುವುದಿಲ್ಲ
ಈ.	ಹಾಗಿದ್ದಲ್ಲಿ, ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರದಲ್ಲಿ ರೈತರಿಂದ ಎಷ್ಟು ಜಮೀನು ಕೆ.ಐ.ಎ.ಡಿ.ಬಿ. ವಶಕ್ಕೆ ಪಡೆಯಲಾಗಿದೆ? (ಸಂಪೂರ್ಣ ವಿವರ ನೀಡುವುದು)	ಉದ್ಭವಿಸುವುದಿಲ್ಲ

ಸಂಖ್ಯೆ: ಸಿಐ 170 ಐಎಪಿ (ಇ) 2020

(ಜಗದೀಶ ಶೆಟ್ಟರ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :	1551
ಸದಸ್ಯರ ಹೆಸರು :	ಶ್ರೀ ಗುತ್ತೇದಾರ್ ಸುಭಾಷ್ ರುಕ್ಮಯ್ಯ (ಅಳಂದ)
ಉತ್ತರಿಸಬೇಕಾದ ದಿನಾಂಕ :	25.09.2020
ಉತ್ತರಿಸುವವರು :	ಮಾನ್ಯ ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ಆಳಂದ ಪುರಸಭೆಯ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಹೊಸದಾಗಿ ಮನೆ, ವಾಣಿಜ್ಯ ಕಟ್ಟಡ ನಿರ್ಮಾಣ ಮಾಡಲು ಪುರಸಭೆಯಿಂದ ಎಷ್ಟು ಪರವಾನಗಿಯನ್ನು ನೀಡಲಾಗಿರುತ್ತದೆ.	ಕ್ರ.ಸಂ / ವರ್ಷ / ಪುರಸಭೆಯಿಂದ ನೀಡಲಾದಕಟ್ಟಡ ಪರವಾನಿಗೆಗಳ ಸಂಖ್ಯೆ: 1. / 2017-18 / 51 2. / 2018-19 / 33 3. / 2019-20 / 27
ಆ	ಹೊಸದಾಗಿ ಮನೆ/ವಾಣಿಜ್ಯ ಕಟ್ಟಡ ನಿರ್ಮಾಣಕ್ಕೆ ಪರವಾನಗಿ ಪಡೆಯಲು ಇರುವ ಮಾನದಂಡಗಳೇನು; (ಸಂಪೂರ್ಣ ವಿವರ ನೀಡುವುದು)	ಅಧಿಕೃತ"ಖಾತಾ" ಹೊಂದಿದ ಸ್ವತ್ತುಗಳಿಗೆ ನಾಗರೀಕರು/ಆರ್ಕಿಟೆಕ್ಟ್‌ಗಳು Land and Building Plan Approval System (LBPAS) ತಂತ್ರಾಂಶದಲ್ಲಿ ಆನ್‌ಲೈನ್ ಮೂಲಕ ಕಟ್ಟಡ ಪರವಾನಿಗೆ ಅರ್ಜಿಯನ್ನು ಸಲ್ಲಿಸಬೇಕಿರುತ್ತದೆ. ಅರ್ಜಿಯೊಂದಿಗೆ ಖಾತಾ ನಕಲು ಪ್ರತಿ, ತೆರಿಗೆ ಪಾವತಿಸಿದ ರಶೀದಿ, ಅಂದಾಜು ವೆಚ್ಚದ ವಿವರ ಮತ್ತು ನಿಯಮಾನುಸಾರ ತಯಾರಿಸಿದ ಕಟ್ಟಡದ ನಕ್ಷೆ ಸಲ್ಲಿಸಬೇಕಾಗುತ್ತದೆ. ತಂತ್ರಾಂಶದಲ್ಲಿ ಕಟ್ಟಡ ಉಪವಿಧಿ ಮತ್ತು ವಲಯವಾರು ನಿಯಮಾವಳಿ ಪ್ರಕಾರ ಕಟ್ಟಡ ನಕ್ಷೆಯನ್ನು ಆನ್‌ಲೈನಲ್ಲಿ ಪರಿಶೀಲಿಸಿ ಸಕಾಲ ಸೇವೆಯಡಿ ಕಟ್ಟಡ ಪರವಾನಿಗೆಯನ್ನು 30 ದಿನಗಳ ಒಳಗೆ ನೀಡಲಾಗುವುದು.
ಇ	ಆಳಂದ ಪುರಸಭೆಯ ವ್ಯಾಪ್ತಿಯಲ್ಲಿ ಪುರಸಭೆಯಿಂದ ಪರವಾನಗಿ ಪಡೆಯದೇ ಮನೆ/ವಾಣಿಜ್ಯ ಕಟ್ಟಡ ನಿರ್ಮಾಣ ಮಾಡುತ್ತಿರುವುದು, ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ? (ಸಂಪೂರ್ಣ ವಿವರ ನೀಡುವುದು)	ಆಳಂದ ಪುರಸಭೆ ವ್ಯಾಪ್ತಿಯಲ್ಲಿ ಪುರಸಭೆಯಿಂದ ಪರವಾನಿಗೆ ಪಡೆಯದೇ ಅನಧಿಕೃತವಾಗಿ ಕಟ್ಟಡ ನಿರ್ಮಾಣ ಮಾಡುತ್ತಿರುವ ಕುರಿತು ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲವೆಂದು ಮುಖ್ಯಾಧಿಕಾರಿ, ಪುರಸಭೆ, ಆಳಂದ ರವರು ವರದಿ ಮಾಡಿರುತ್ತಾರೆ. ನಗರ ಸ್ಥಳೀಯ ಸಂಸ್ಥೆಯಿಂದ ಪರವಾನಿಗೆ ಪಡೆಯದೇ ಅನಧಿಕೃತವಾಗಿ ಕಟ್ಟಡ ನಿರ್ಮಾಣ ಮಾಡಿರುವ ಪ್ರಕರಣಗಳಿಗೆ ಕರ್ನಾಟಕ ಪೌರಸಭೆಗಳ ಅಧಿನಿಯಮ1964, ಕಲಂ 107 ರೀತ್ಯ ಸ್ವತ್ತು ತೆರಿಗೆಯ ಎರಡರಷ್ಟಕ್ಕೆ ಸಮನಾದ ದಂಡವನ್ನು ವಸೂಲಾತಿ ಮಾಡಲಾಗುವುದು.

ಸಂಖ್ಯೆ: ನಅಇ 108 ಜಿಇಎಲ್ 2020

(ಡಾ. ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1554
ಸದಸ್ಯರ ಹೆಸರು	:	ಶ್ರೀಮತಿ ಸೌಮ್ಯ ರೆಡ್ಡಿ (ಜಯನಗರ)
ಉತ್ತರಿಸಬೇಕಾದ ದಿನಾಂಕ	:	25-09-2020
ಉತ್ತರಿಸಬೇಕಾದ ಸಚಿವರು	:	ಮಾನ್ಯ ಮುಖ್ಯಮಂತ್ರಿಯವರು

****

ಕ್ರಮ ಸಂ.	ಪ್ರಶ್ನೆ	ಉತ್ತರ
ಅ)	ಜಯನಗರ ಮತಕ್ಷೇತ್ರದಲ್ಲಿ ಶುದ್ಧ ಕುಡಿಯುವ ನೀರಿನ ಸಮಸ್ಯೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಜಯನಗರ ಮತಕ್ಷೇತ್ರಕ್ಕೆ ಬೆಂಗಳೂರು ಜಲಮಂಡಳಿಯಿಂದ ಎರಡು ದಿನಕ್ಕೊಮ್ಮೆ ಸಮರ್ಪಕವಾಗಿ ನೀರು ಸರಬರಾಜು ಮಾಡುತ್ತಿದ್ದು, ಶುದ್ಧ ಕುಡಿಯುವ ನೀರಿನ ಸಮಸ್ಯೆ ಕಂಡು ಬಂದಿರುವುದಿಲ್ಲ.
ಆ)	ಹಾಗಿದ್ದಲ್ಲಿ, ಶುದ್ಧ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? (ವಿವರ ನೀಡುವುದು)	ಉದ್ಭವಿಸುವುದಿಲ್ಲ.

ಸಂಖ್ಯೆ: ನಅಇ 105 ಎಂಎನ್ಐ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್. ಯಡಿಯೂರಪ್ಪ)

ಮುಖ್ಯಮಂತ್ರಿ

<u>ಕರ್ನಾಟಕ ವಿಧಾನ ಸಭೆ</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ : 1555
ಸದಸ್ಯರ ಹೆಸರು : ಶ್ರೀ ಶರಣಬಸಪ್ಪ ಗೌಡ ದರ್ಶನಾಪುರ್ (ಶಹಾಪುರ)
ಉತ್ತರಿಸಬೇಕಾದ ದಿನಾಂಕ : 25-09-2020
ಉತ್ತರಿಸುವವರು : ನಗರಾಭಿವೃದ್ಧಿ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಯಾದಗಿರಿ ಜಿಲ್ಲೆಯ ಶಹಾಪುರ ನಗರದಲ್ಲಿ ಮತ್ತು ಸುತ್ತಲಿನ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿದೆ.
ಆ)	ಬಂದಿದ್ದರೆ, ಸಮಸ್ಯೆ ಪರಿಹರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;	ಶಹಪೂರ ನಗರದ ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಿಸಲು, ಭೀಮಾ ನದಿಗೆ ಅಡ್ಡಲಾಗಿ ಕಟ್ಟಿರುವ ಸನ್ನತಿ ಬ್ಯಾರೇಜಿನಿಂದ 21.50 ಎಮ್.ಎಲ್.ಡಿ ನೀರನ್ನು ಸರಬರಾಜು ಮಾಡಲು ರೂ.5686.50 ಲಕ್ಷ ಮೊತ್ತದ ಅಂದಾಜು ಪಟ್ಟಿಗೆ ಅನುಮೋದನೆ ನೀಡುವಂತೆ ದಿನಾಂಕ 15.07.2019 ರಂದು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಪ್ರಸ್ತಾವನೆಯು ಸ್ವೀಕೃತವಾಗಿದ್ದು, ಅನುದಾನ ಕೊರತೆಯಿರುವ ಕಾರಣ, ಸದರಿ ಪ್ರಸ್ತಾವನೆಯನ್ನು ಪರಿಗಣಿಸಿರುವುದಿಲ್ಲ.
ಇ)	ಶಹಾಪುರ ನಗರದಲ್ಲಿ ಒಳಚರಂಡಿ ವ್ಯವಸ್ಥೆ ದುರಸ್ತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿದೆ.
ಈ)	ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?	ಶಹಾಪೂರ ನಗರಕ್ಕೆ ಒಳಚರಂಡಿ ವ್ಯವಸ್ಥೆ ನಿರ್ಮಾಣ ಮಾಡುವ ಕಾಮಗಾರಿಯ ರೂ.17,260.00 ಲಕ್ಷಗಳ ಅಂದಾಜು ಪಟ್ಟಿಯ ಪ್ರಸ್ತಾವನೆಯು ದಿನಾಂಕ24.07.2019 ರಂದು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಸ್ವೀಕೃತವಾಗಿದ್ದು, ಸದರಿ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ.

ಸಂಖ್ಯೆ 139 ಯುಎಂಬಿಎಸ್ 2020

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1556
ಸದಸ್ಯರ ಹೆಸರು	:	ಶ್ರೀ ಶರಣಬಸಪ್ಪ ಗೌಡ ದರ್ಶನಾಪುರ್ (ಶಹಾಪುರ)
ಉತ್ತರಿಸಬೇಕಾದ ದಿನಾಂಕ	:	25-09-2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	ಶಹಾಪುರ ನಗರಸಭೆ ಮತ್ತು ಕೆಂಭಾವಿ ಪುರಸಭೆಗಳ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಎಸ್.ಎಫ್.ಸಿ ವಿಶೇಷ ಅನುದಾನದಲ್ಲಿ ರೂ.6.00 ಕೋಟಿ ಅನುದಾನ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಯಾದಗಿರಿ ಜಿಲ್ಲೆಯ ಶಹಾಪುರ ನಗರಸಭೆ ಮತ್ತು ಕೆಂಭಾವಿ ಪುರಸಭೆಗಳ ವ್ಯಾಪ್ತಿಯಲ್ಲಿ ವಿವಿಧ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ರೂ.6.00 ಕೋಟಿಗಳು ವಿಶೇಷ ಅನುದಾನವನ್ನು ಸರ್ಕಾರದ ಪತ್ರ ಸಂಖ್ಯೆ: ನಅಇ 03 ಎಸ್ಎಫ್‌ಸಿ 2019 ದಿ: 23-01-2019ರನ್ವಯ ಮಂಜೂರು ಮಾಡಿ ಆದೇಶಿಸಿರುತ್ತದೆ.
ಆ.	ಹಾಗಿದ್ದಲ್ಲಿ, ಈ ಪೈಕಿ ಕೇವಲ ರೂ.2.00 ಕೋಟಿ ಬಿಡುಗಡೆಯಾಗಿದ್ದು, ಉಳಿದ ರೂ.4.00 ಕೋಟಿ ಅನುದಾನ ಬಿಡುಗಡೆಯಾಗದಿರುವುದಕ್ಕೆ ಕಾರಣಗಳೇನು; ಮತ್ತು ಉಳಿದ ಮೊತ್ತವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?	ಶಹಾಪುರ ನಗರಸಭೆಗೆ ಮಂಜೂರು ಮಾಡಲಾಗಿದ್ದ ರೂ.4.00 ಕೋಟಿಗಳ ಅನುದಾನದ ಪೈಕಿ ಮೊದಲ ಹಂತದಲ್ಲಿ ರೂ.1.50 ಕೋಟಿಗಳ ಅನುದಾನವನ್ನು ಸರ್ಕಾರದ ಪತ್ರ ಸಂಖ್ಯೆ: ನಅಇ 83 ಎಸ್ಎಫ್‌ಸಿ 2019 ದಿ:21-06-2019ರನ್ವಯ ಹಾಗೂ ಉಳಿದ ರೂ.2.50 ಕೋಟಿಗಳ ಅನುದಾನವನ್ನು ಸರ್ಕಾರವು ಆದೇಶ ಸಂಖ್ಯೆ: ನಅಇ 9 ಎಸ್ಎಫ್‌ಸಿ 2020 ದಿನಾಂಕ: 22-01-2020 ರನ್ವಯ ಬಿಡುಗಡೆಗೊಳಿಸಿ ಆದೇಶಿಸಿರುತ್ತದೆ. ಸರ್ಕಾರವು ಕೆಂಭಾವಿ ಪುರಸಭೆಗೆ ಮಂಜೂರು ಮಾಡಲಾಗಿದ್ದ ರೂ.2.00 ಕೋಟಿಗಳ ಅನುದಾನದಡಿ ಕೈಗೊಳ್ಳುವ ಕಾಮಗಾರಿಗಳು ಇನ್ನೂ ಪ್ರಾರಂಭವಾಗಬೇಕಾಗಿರುವುದರ ಹಿನ್ನೆಲೆಯಲ್ಲಿ ಸರ್ಕಾರದ ಪತ್ರ ಸಂಖ್ಯೆ:ನಅಇ 222 ಎಸ್.ಎಫ್.ಸಿ 2019, ದಿನಾಂಕ:19-09-2019ರನ್ವಯ ತಡೆಹಿಡಿದು ಆದೇಶಿಸಿರುತ್ತದೆ. ಈಗಾಗಲೇ ತಡೆಹಿಡಿಯಲಾದ ಅನುದಾನದಲ್ಲಿ ಕಾಲಕಾಲಕ್ಕೆ ಹಂತಹಂತವಾಗಿ ಅನುದಾನವನ್ನು ಮುಂದುವರೆಸಲು ಕ್ರಮಕೈಗೊಳ್ಳಲಾಗಿದ್ದು, ಕೆಂಭಾವಿ ಪುರಸಭೆಗೆ ಅನುದಾನ ಲಭ್ಯತೆಯನುಸಾರ ಬಿಡುಗಡೆಗೊಳಿಸಲು ಕ್ರಮವಹಿಸಲಾಗುತ್ತದೆ.

ಕಡತ ಸಂಖ್ಯೆ:ನಅಇ 313 ಎಸ್.ಎಫ್.ಸಿ 2020

(ಡಾ|| ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಮತ್ತು
ರೇಷ್ಮೆ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1591
ಸದಸ್ಯರ ಹೆಸರು	:	ಶ್ರೀ. ಪಾಟೀಲ್ ಎಂ ವೈ (ಅಫ್ಜಲ್‌ಪುರ್)
ಉತ್ತರಿಸುವ ದಿನಾಂಕ	:	25/09/2020
ಉತ್ತರಿಸುವ ಸಚಿವರು	:	ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

	ಪ್ರಶ್ನೆ	ಉತ್ತರ
ಅ	ಅಫಜಲಪುರ ತಾಲೂಕಿನಲ್ಲಿ ಮಣ್ಣೂರ, ಮಾಶಾಳ ಹಾಗೂ ದೇವಲಗಾಣಗಾಪುರ ಸುಮಾರು 15 ರಿಂದ 20,000 ಸಾವಿರ ಜನಸಂಖ್ಯೆಯುಳ್ಳ ದೊಡ್ಡ ಗ್ರಾಮಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿಲ್ಲ. 2011ರ ಜನಗಣತಿಯನುಸಾರ ಅಫ್ಜಲ್‌ಪುರ್ ತಾಲೂಕಿನ ಮಣ್ಣೂರ ಗ್ರಾಮ ಪಂಚಾಯಿತಿಯ ಜನಸಂಖ್ಯೆ 12,866, ಮಾಶಾಳ ಗ್ರಾಮ ಪಂಚಾಯಿತಿಯ ಜನಸಂಖ್ಯೆ 11,015 ಹಾಗೂ ದೇವಲಗಾಣಗಾಪುರ ಗ್ರಾಮ ಪಂಚಾಯಿತಿಯ ಜನಸಂಖ್ಯೆ 12,440 ಇರುತ್ತದೆ.
ಆ	ಈ ಗ್ರಾಮಗಳಲ್ಲಿ ಗ್ರಾಮ ಪಂಚಾಯಿತಿ ಕೇಂದ್ರಗಳಾಗಿದ್ದು, ಪಟ್ಟಣ ಪಂಚಾಯಿತಿಗಳನ್ನಾಗಿ ಮಾಡಲು ಸರ್ಕಾರ ಚಿಂತಿಸಿದೆಯೇ?	ಆದರೆ, ದಿನಾಂಕ 19/03/205ರಂದು ನಡೆದ ಸಚಿವ ಸಂಪುಟ ಸಭೆಯ ತೀರ್ಮಾನದಂತೆ 2011ರ ಜನಗಣತಿಯನ್ವಯ 15,000ಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ಗ್ರಾಮ ಪಂಚಾಯಿತಿಗಳನ್ನು ಮಾತ್ರ ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಕ್ರಮವಹಿಸಲಾಗುತ್ತಿದೆ.
ಇ	ಹಾಗಿದ್ದಲ್ಲಿ, ಈ ಗ್ರಾಮಗಳನ್ನು ಯಾವಾಗ ಪಟ್ಟಣ ಪಂಚಾಯಿತಿಗಳನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರವು ಕ್ರಮ ಕೈಗೊಳ್ಳುವುದು (ವಿವರ ನೀಡುವುದು)?	ಈ ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು ಜಿಲ್ಲಾಧಿಕಾರಿ, ಕಲಬುರ್ಗಿ ಜಿಲ್ಲೆ ಇವರಿಂದ ಪ್ರಸ್ತಾವನೆಯು ಪೌರಾಡಳಿತ ನಿರ್ದೇಶನಾಲಯದ ಮುಖಾಂತರ ಸ್ವೀಕೃತವಾದ ನಂತರ ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸಲಾಗುವುದು.

ಸಂಖ್ಯೆ:ನಅಇ 61 ಎಲ್‌ಎಕ್ಯೂ 2020.

(ಡಾ॥ ನಾರಾಯಣ ಗೌಡ)

ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

<u>ಕರ್ನಾಟಕ ವಿಧಾನಸಭೆ</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1597
ಸದಸ್ಯರ ಹೆಸರು : ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ)
ಉತ್ತರಿಸುವ ದಿನಾಂಕ : 25/09/2020
ಉತ್ತರಿಸುವ ಸಚಿವರು : ಮಾನ್ಯ ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

ಪ್ರಶ್ನೆ		ಉತ್ತರ
ಅ	ನಗರದ ಅಭಿವೃದ್ಧಿ ದೃಷ್ಟಿಯಿಂದ ಕುಂದಾಪುರ ಪುರಸಭೆಗೆ ಸಮೀಪದ ಗ್ರಾಮಗಳನ್ನು ಸೇರಿಸಿಕೊಂಡು ನಗರಸಭೆಯಾಗಿ ಮೇಲ್ದರ್ಜೆಗೆ ಏರಿಸುವ ಪ್ರಸ್ತಾವನೆ ಯಾವ ಹಂತದಲ್ಲಿ ಇದೆ?	ಕುಂದಾಪುರ ಪುರಸಭೆಗೆ ಹಂಗಳೂರು, ಕೋಟೇಶ್ವರ, ಬೀಜಾಡಿ, ಕೋಣಿ ಗ್ರಾಮಗಳನ್ನು ಒಟ್ಟು ಸೇರಿಸಿ ನಗರಸಭೆಯನ್ನಾಗಿ ಮಾಡುವ ಕುರಿತು ಸೂಕ್ತ ಪ್ರಸ್ತಾವನೆ ಸಲ್ಲಿಸುವಂತೆ ಪೌರಾಡಳಿತ ನಿರ್ದೇಶನಾಲಯದಿಂದ ಉಡುಪಿ ಜಿಲ್ಲಾಧಿಕಾರಿಯವರನ್ನು ಕೋರಲಾಗಿರುತ್ತದೆ. ಜಿಲ್ಲಾಧಿಕಾರಿಯವರಿಂದ ಪ್ರಸ್ತಾವನೆಯು ಪೌರಾಡಳಿತ ನಿರ್ದೇಶನಾಲಯದ ಮುಖಾಂತರ ಸರ್ಕಾರದಲ್ಲಿ ಸ್ವೀಕೃತವಾದ ನಂತರ ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಲಾಗುವುದು.

ಸಂಖ್ಯೆ:ನಅಇ 60 ಎಲ್‌ಎಕ್ಯೂ 2020.

(ಡಾ॥ ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **1598**

ವಿಧಾನ ಸಭೆ ಸದಸ್ಯರ ಹೆಸರು : ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ)

ಉತ್ತರಿಸಬೇಕಾದ ದಿನಾಂಕ : 25.09.2020

ಉತ್ತರಿಸುವ ಸಚಿವರು : ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ತಾಲ್ಲೂಕು ಕಛೇರಿಯಲ್ಲಿ ಹೊಸ ಪಡಿತರ ಚೀಟಿ, ತಿದ್ದುಪಡಿ, ಸೇರ್ಪಡೆ, ವರ್ಗಾವಣೆಗೆ ಜನರು ಸರದಿ ಸಾಲಿನಲ್ಲಿ ನಿಂತರೂ ಸಮಸ್ಯೆ ಬಗೆಹರಿಯದಿರುವ ವಿಷಯಕ್ಕೆ ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ	ಬಂದಿದ್ದಲ್ಲಿ, ವರ್ಷಗಳು ಕಳೆದರೂ ಅರ್ಜಿ ಸಲ್ಲಿಸಿದವರಿಗೆ ಪಡಿತರ ಚೀಟಿ ದೊರಕದೇ ಇರಲು ಕಾರಣವೇನು;	ವಿಧಾನ ಸಭಾ ಮತ್ತು ಲೋಕಸಭಾ ಚುನಾವಣೆಯ ಅವಧಿಯಲ್ಲಿ ಪಡಿತರ ಚೀಟಿ ವಿತರಣೆಯನ್ನು ಸ್ಥಗಿತಗೊಳಿಸಲಾಗಿತ್ತು ಹಾಗೂ ಕೋವಿಡ್-19 ಲಾಕ್ ಡೌನ್ ಅವಧಿಯಲ್ಲಿ ಪಡಿತರ ಚೀಟಿ ವಿತರಣೆಯನ್ನು ಸ್ಥಗಿತಗೊಳಿಸಲಾಗಿದೆ.
ಇ	ಒಂದು ನಿರ್ದಿಷ್ಟ ಸಮಯದೊಳಗೆ ಪಡಿತರ ಚೀಟಿ ದೊರಕುವಂತೆ ಮಾಡಲು ಕ್ರಮಕೈಗೊಳ್ಳಲಾಗುವುದೇ?	ಕೋವಿಡ್-19 ಪರಿಣಾಮಗಳನ್ನು ಅವಲೋಕಿಸಿಕೊಂಡು ತುರ್ತು ಕ್ರಮ ಜರುಗಿಸಲಾಗುವುದು.

ಆನಾಸ **261 ಡಿಆರ್ ಎ 2020** (ಇ-ಆಫೀಸ್)

(ಕೆ.ಗೋಪಾಲಯ್ಯ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1603
ಸದಸ್ಯರ ಹೆಸರು : ಶ್ರೀ ನಾಗೇಂದ್ರ ಎಲ್. (ಚಾಮರಾಜ)
ಉತ್ತರಿಸಬೇಕಾದ ದಿನಾಂಕ : 25.09.2020
ಉತ್ತರಿಸಬೇಕಾದ ಸಚಿವರು : ಮಾನ್ಯ ನಗರಾಭಿವೃದ್ಧಿ ಸಚಿವರು

	ಪ್ರಶ್ನೆ	ಉತ್ತರ
ಅ)	ಮೈಸೂರು ನಗರದಲ್ಲಿರುವ ದೇವರಾಜ ಮಾರುಕಟ್ಟೆ ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಕೈಗೊಂಡಿರುವ ಕ್ರಮಗಳೇನು ;	ಬಂದಿದೆ. ದಿನಾಂಕ: 10.12.2019 ರಂದು ನಡೆದ ವಿಶೇಷ ಪಾರಂಪರಿಕ ಸಮಿತಿ ಸಭೆಯ ನಿರ್ಣಯದಂತೆ ದೇವರಾಜ ಮಾರುಕಟ್ಟೆ ಕಟ್ಟಡ ನಿರ್ಮಾಣ ಮಾಡುವ ಬಗ್ಗೆ ನಿರ್ಣಯ ಕೈಗೊಳ್ಳಲು ಅಗತ್ಯವಿರುವ ನಕ್ಷೆ, ಅಂದಾಜು ಪಟ್ಟಿ ಹಾಗೂ ಇನ್ನಿತರೆ ಮಾಹಿತಿಯನ್ನೊಳಗೊಂಡ ಸೂಕ್ತ ಪ್ರಸ್ತಾವನೆಯನ್ನು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಇವರ ಮುಖೇನ ಸಲ್ಲಿಸಲು ಆಯುಕ್ತರು, ಮೈಸೂರು ಮಹಾನಗರಪಾಲಿಕೆ, ಇವರಿಗೆ ಸೂಚಿಸಲಾಗಿದೆ.
ಆ)	ಇಂತಹ ಕಟ್ಟಡವನ್ನು ತೆರವುಗೊಳಿಸಿ, ಹೊಸದಾಗಿ ನಿರ್ಮಿಸುವ ಯೋಜನೆ ಇದೆಯೇ ಅಥವಾ ಇರುವ ಕಟ್ಟಡವನ್ನು ನವೀಕರಿಸಲಾಗುವುದೇ (ವಿವರ ಒದಗಿಸುವುದು) ;	ದಿನಾಂಕ: 03-08-2019 ರಂದು ನಡೆದ ವಿಶೇಷ ಪಾರಂಪರಿಕ ಸಮಿತಿ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ ದೇವರಾಜ ಮಾರುಕಟ್ಟೆ ಕಟ್ಟಡವನ್ನು ನೆಲಸಮಗೊಳಿಸಿ ಹೊಸದಾಗಿ ಪಾರಂಪರಿಕ ಶೈಲಿಯಲ್ಲಿ ಅಭಿವೃದ್ಧಿ ಪಡಿಸಬೇಕೇ ಅಥವಾ ಹಾಲಿ ಇರುವ ಹಳೆಯ ಕಟ್ಟಡವನ್ನು ನವೀಕರಣ ಮಾಡಬೇಕೇ ಎಂಬುದರ ಬಗ್ಗೆ ಪರಿಶೀಲಿಸಲು ವಿವಿಧ ತಜ್ಞರನ್ನು ಒಳಗೊಂಡ ಸಮಿತಿಯನ್ನು ರಚಿಸಲಾಗಿರುತ್ತದೆ.
ಇ)	ಈ ಕಟ್ಟಡದ ಅಭಿವೃದ್ಧಿ ವಿಷಯದಲ್ಲಿ ಈ ತನಕ ಯಾವುದೇ ನಿರ್ಣಯ ಕೈಗೊಳ್ಳದಿರುವುದಕ್ಕೆ ಕಾರಣಗಳೇನು ; ಕಟ್ಟಡದ ಅಭಿವೃದ್ಧಿಗೆ ಸಮಿತಿ ರಚಿಸಲಾಗಿದೆಯೇ;	ಸದರಿ ಸಮಿತಿಯು "ದೇವರಾಜ ಮಾರುಕಟ್ಟೆ ಕಟ್ಟಡವನ್ನು ತೆರವುಗೊಳಿಸಿ ಹಾಲಿ ಇರುವ ಕಟ್ಟಡದ ಎತ್ತರಕ್ಕೆ ಸೀಮಿತವಾಗಿ ಪ್ರಸ್ತುತ ಪಾರಂಪರಿಕ ಶೈಲಿಯ ವಿನ್ಯಾಸದಂತೆ ಹಾಗೂ ಮಾದರಿಯಲ್ಲಿ ಹೊಸದಾಗಿ ಕಟ್ಟಡದ ಪುನರ್ನಿರ್ಮಾಣ ಕೈಗೊಳ್ಳಬಹುದು" ಎಂದು ವರದಿ ನೀಡಿರುವ ಹಿನ್ನೆಲೆಯಲ್ಲಿ ದಿನಾಂಕ: 10.12.2019 ರಂದು ನಡೆದ ವಿಶೇಷ ಪಾರಂಪರಿಕ ಸಮಿತಿ ಸಭೆಯ ನಿರ್ಣಯದಂತೆ ದೇವರಾಜ ಮಾರುಕಟ್ಟೆ ಕಟ್ಟಡವನ್ನು ಪುನರ್ ನಿರ್ಮಾಣ ಮಾಡುವ ಬಗ್ಗೆ ಅಗತ್ಯವಿರುವ ನಕ್ಷೆ, ಅಂದಾಜು ಪಟ್ಟಿ ಹಾಗೂ ಇನ್ನಿತರೆ ಮಾಹಿತಿಯನ್ನೊಳಗೊಂಡ ಸೂಕ್ತ ಪ್ರಸ್ತಾವನೆಯು ಸ್ವೀಕೃತವಾದ ನಂತರ ಪರಿಶೀಲಿಸಲಾಗುವುದು.
ಈ)	ಇಲ್ಲಿನ ಮಳಿಗೆದಾರರಿಗೆ ಪರ್ಯಾಯವಾಗಿ ಯಾವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ (ವಿವರ ಒದಗಿಸುವುದು) ?	ದೇವರಾಜ ಮಾರುಕಟ್ಟೆ ಕಟ್ಟಡವನ್ನು ಪುನರ್ನಿರ್ಮಾಣ ಅಥವಾ ಪುನಶ್ಚೇತನಗೊಳಿಸುವ ಸಮಯದಲ್ಲಿ ಮಳಿಗೆದಾರರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ನಅಇ 89 ಎಸಿಎಂ 2020 (ಇ)

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1610
ಸದಸ್ಯರ ಹೆಸರು	:	ಶ್ರೀ ಶಿವಲಿಂಗೇಗೌಡ ಕೆ.ಎಂ (ಅರಸೀಕೆರೆ)
ಉತ್ತರಿಸುವ ದಿನಾಂಕ	:	25.09.2020
ಉತ್ತರಿಸುವ ಸಚಿವರು	:	ನಗರಾಭಿವೃದ್ಧಿ ಸಚಿವರು

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಹಾಸನ ನಗರಾಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಯ ಹಾಸನ ತಾಲ್ಲೂಕು, ಕಸಬಾ ಹೋಬಳಿ, ಕೆಂಚಟ್ಟಹಳ್ಳಿ ಗ್ರಾಮ, ಗೇಕರವಳ್ಳಿ ಗ್ರಾಮ, ಸಮುದ್ರವಳ್ಳಿ ಗ್ರಾಮ ಹಾಗೂ ಹಾಸನ ತಾಲ್ಲೂಕು, ಕಸಬಾ ಹೋಬಳಿ, ಭೂವನಹಳ್ಳಿ ಗ್ರಾಮಗಳಲ್ಲಿನ ವಿವಿಧ ಸರ್ವೆ ನಂಬರುಗಳು ಸೇರಿ ಒಟ್ಟು 1099 ಎಕರೆ 38 ಗುಂಟೆ ಪ್ರದೇಶದಲ್ಲಿ ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಭೂಮಾಲೀಕರ ಸಹಭಾಗಿತ್ವದಲ್ಲಿ ಶೇ. 50:50 ಅನುಪಾತದಲ್ಲಿ ವಸತಿ ಬಡಾವಣೆ ಯೋಜನೆಯನ್ನು ಅನುಷ್ಠಾನಗೊಳಿಸಲು ಪ್ರಸ್ತಾವನೆಯನ್ನು ಕಳುಹಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಸರ್ಕಾರದ ಗಮನಕ್ಕೆ ಬಂದಿರುತ್ತದೆ.</td></tr>
<tr><td>ಆ)</td><td>ಹಾಸನ ನಗರಾಭಿವೃದ್ಧಿ ಪ್ರಾಧಿಕಾರವು ನಡೆಸಿದ ನಿವೇಶನ ಬೇಡಿಕೆ ಸರ್ವೆಯಲ್ಲಿ ಸುಮಾರು 9500ಕ್ಕೂ ಅಧಿಕ ಅರ್ಜಿದಾರರು ಪ್ರಾಧಿಕಾರದ ವತಿಯಿಂದ ನಿವೇಶನಗಳನ್ನು ಅಭಿವೃದ್ಧಿ ಪಡಿಸಿ ಹಂಚಿಕೆ ಮಾಡಬೇಕೆಂದು ಕೋರಿರುವುದು ಪ್ರಾಧಿಕಾರವು ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಅಡಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಬೇಡಿಕೆ ಸಮೀಕ್ಷೆಯಲ್ಲಿ ವಿವಿಧ ಅಳತೆಯ ನಿವೇಶನಗಳಿಗೆ ಒಟ್ಟು 56889 ಅರ್ಜಿಗಳು ನೋಂದಣಿ/ಠೇವಣಿ ಶುಲ್ಕದೊಂದಿಗೆ ಸ್ವೀಕೃತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.</td></tr>
<tr><td>ಇ)</td><td>ಹಾಗಿದ್ದಲ್ಲಿ, ಹಾಸನ ನಗರಾಭಿವೃದ್ಧಿ ಪ್ರಾಧಿಕಾರವು ಭೂಮಾಲೀಕರ ಸಹಭಾಗಿತ್ವದಲ್ಲಿ ಶೇ. 50:50 ಅನುಪಾತದಲ್ಲಿ ವಸತಿ ಬಡಾವಣೆ ಯೋಜನೆಯನ್ನು ಅಭಿವೃದ್ಧಿಪಡಿಸಲು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಗೆ ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು)</td><td rowspan="3">ಸದರಿ ವಸತಿ ಬಡಾವಣೆ ಯೋಜನೆಯನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಲು ದಿನಾಂಕ:27-05-2020ರಂದು ಹಾಸನ ನಗರಾಭಿವೃದ್ಧಿ ಪ್ರಾಧಿಕಾರದಿಂದ ಸರ್ಕಾರಕ್ಕೆ ಪ್ರಸ್ತಾವನೆ ಸ್ವೀಕೃತವಾಗಿದ್ದು, ಸದರಿ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ ಪರಿಶೀಲಿಸಿ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ರವರು ದಿನಾಂಕ:11-09-2020 ರಂದು ಅಭಿಪ್ರಾಯ ನೀಡಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ.</td></tr>
<tr><td>ಈ)</td><td>ಭೂ ಮಾಲೀಕರ ಸಹಭಾಗಿತ್ವದಲ್ಲಿ ವಸತಿ ಬಡಾವಣೆಯ ಯೋಜನೆಯನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿರುವ ಪ್ರಸ್ತಾವನೆಗೆ ಸರ್ಕಾರ ಅನುಮೋದನೆ ನೀಡುವಲ್ಲಿ ವಿಳಂಬವಾಗಿರಲು ಕಾರಣವೇನು?</td></tr>
<tr><td>ಉ)</td><td>2020-21 ನೇ ಸಾಲಿನಲ್ಲಿ ನಗರಾಭಿವೃದ್ಧಿ ಪ್ರಾಧಿಕಾರವು ಈ ವಸತಿ ಬಡಾವಣೆಯ ಯೋಜನೆಯನ್ನು ಅಭಿವೃದ್ಧಿಪಡಿಸುವ ಪ್ರಸ್ತಾವನೆಗೆ, ಸರ್ಕಾರವು ಯಾವ ಕಾಲಮಿತಿಯಲ್ಲಿ ಅನುಮೋದನೆ ನೀಡುವುದು. (ಸಂಪೂರ್ಣ ಮಾಹಿತಿ ನೀಡುವುದು).</td></tr>
</table>

ಸಂಖ್ಯೆ: 53 ನಅಇ ಎಲ್‌ಎಕ್ಯೂ 2020 (ಇ-ಕಡತ)

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು.

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರು : ಶ್ರೀ ಸುನಿಲ್ ಬಿಳಿಯ ನಾಯಕ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1616

ಉತ್ತರಿಸಬೇಕಾದ ದಿನಾಂಕ : 25.09.2020

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಭಟ್ಕಳ-ಹೊನ್ನಾವರ ವಿಧಾನಸಭಾ ಕ್ಷೇತ್ರದ ಗ್ರಾಮೀಣ ಸೇವಾ ಸಹಕಾರಿ ಸಂಘ, ನಗರ ಬಸ್ತಿಕೇರಿ, ಹೊನ್ನಾವರ ಹಾಗೂ ಗ್ರಾಮೀಣ ಸೇವಾ ಸಹಕಾರಿ ಸಂಘ ಶಿರಾಲಿ, ಭಟ್ಕಳ ಇವುಗಳಿಗೆ ವೃಂದಬಲ ಇಲ್ಲದಿದ್ದರೂ ಸಹ ಸಹಕಾರಿ ಸಂಘಗಳ ಅಧಿನಿಯಮ ಉಲ್ಲಂಘಿಸಿ, ಹೊಸ ಸಿಬ್ಬಂದಿ ನೇಮಕಾತಿಯಲ್ಲಿ ನಡೆಸಿರುವ ಅವ್ಯವಹಾರದ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಆ)	ಬಂದಿದ್ದಲ್ಲಿ, ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)	ಸೇವಾ ಸಹಕಾರಿ ಸಂಘ, ನಗರಬಸ್ತಿಕೇರಿ, ಹೊನ್ನಾವರ ತಾಲ್ಲೂಕು ಈ ಸಂಘದಲ್ಲಿ ವೃಂದಬಲ ಮಂಜೂರಾತಿ ಇಲ್ಲದೇ ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಂಡಿರುವ ಬಗ್ಗೆ ದೂರು ಅರ್ಜಿ ಸ್ವೀಕೃತವಾಗಿದ್ದು, ಸಂಘದವರು ವೃಂದ ಬಲ ಮಂಜೂರಾತಿ ಇಲ್ಲದೇ ಹಾಗೂ ಇಲಾಖೆಯ ಅನುಮತಿ ಪಡೆಯದೇ ದಿ:26.05.2020ರಂದು ನಡೆದ ಆಡಳಿತ ಮಂಡಳಿ ಸಭೆಯಲ್ಲಿ ನಿರ್ಣಯ ಕೈಗೊಂಡು ತಾತ್ಕಾಲಿಕವಾಗಿ ಹೊರಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಿಕೊಂಡ ಸಿಬ್ಬಂದಿಗಳನ್ನು ಕೂಡಲೇ ತೆಗೆದು ಹಾಕಲು ಸಂಘಕ್ಕೆ ಸಹಾಯಕ ನಿಬಂಧಕರು, ಕುಮಟಾ ಉಪವಿಭಾಗ ಇವರು ಸೂಚನೆ ನೀಡಿದ್ದು, ಸಂಘದವರು ದಿನಾಂಕ:18-09-2020ರಿಂದ ಜಾರಿಯಾಗುವಂತೆ ಸದರಿ ಸಿಬ್ಬಂದಿಗಳನ್ನು ವಜಾಗೊಳಿಸಿರುವುದಾಗಿ ತಿಳಿಸಿರುತ್ತಾರೆ. ವ್ಯವಸಾಯ ಸೇವಾ ಸಹಕಾರಿ ಸಂಘ ನಿ., ಶಿರಾಲಿ, ಭಟ್ಕಳ ತಾ, ಈ ಸಂಘದಲ್ಲಿ ಸಿಬ್ಬಂದಿ ನೇಮಕಾತಿಯಲ್ಲಿ ನಡೆದಿರುವ ಅವ್ಯವಹಾರಗಳಿಗೆ ಸಂಬಂಧಿಸಿದಂತೆ ಸಹಾಯಕ ನಿಬಂಧಕರು, ಕುಮಟಾ ಉಪವಿಭಾಗ, ಇವರು ಸಹಕಾರ ಸಂಘಗಳ ಕಾಯ್ದೆ 1959 ಕಲಂ 64 ರ ವಿಚಾರಣೆಗೆ ಆದೇಶಿಸಿರುತ್ತಾರೆ.
ಇ)	ಸರ್ಕಾರದ ಗಮನಕ್ಕೆ ಬಾರದಿದ್ದಲ್ಲಿ, ಈ ಬಗ್ಗೆ ಯಾವಾಗ ಕ್ರಮ ಕೈಗೊಳ್ಳಲಾಗುವುದು?	ಕ್ರಮ ಕೈಗೊಳ್ಳಲಾಗಿದೆ.

ಸಂಖ್ಯೆ: ಸಿಒ 76 ಸಿಸಿಬಿ 2020

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರು : ಶ್ರೀ ಸುನಿಲ್ ಬಿಳಿಯ ನಾಯಕ್
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1618
ಉತ್ತರಿಸಬೇಕಾದ ದಿನಾಂಕ : 25.09.2020

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಭಟ್ಕಳ-ಹೊನ್ನಾವರ ವಿಧಾನ ಸಭಾ ಕ್ಷೇತ್ರದ ಗ್ರಾಮೀಣ ಸೇವಾ ಸಹಕಾರಿ ಸಂಘ, ಕಾಯ್ಕಿಣಿ, ಜಾಲಿ ಮತ್ತು ಬೆಳಕೆ ಇವರು ತಮ್ಮ ಸಂಘದ ಹಣವನ್ನು ಷೆಡ್ಯೂಲ್ ಬ್ಯಾಂಕ್-ಮಾತ್ರ ಬ್ಯಾಂಕ್ ಬಿಟ್ಟು ಇಲಾಖೆಯ ಪೂರ್ವಾನುಮತಿ ಪಡೆಯದೇ ಕೋ-ಆಪರೇಟಿವ್ ಸೊಸೈಟಿಗಳಲ್ಲಿ ನಿಯಮ ಬಾಹಿರವಾಗಿ ಮುದ್ದತ್ತು ಠೇವಣಿ ಇಟ್ಟಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
ಆ)	ಬಂದಿದ್ದಲ್ಲಿ, ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ;	ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 98(ಇ)(ii)ಪ್ರಕಾರ ಕಾರ್ಯ ವ್ಯಾಪ್ತಿಯೊಳಗಿರುವ ಬೇರೆ ಸಹಕಾರ ಸಂಘಗಳಲ್ಲಿ ಠೇವಣಿಯನ್ನು ಇಡಲು ಸ್ವಾತಂತ್ರ್ಯವನ್ನು ಹೊಂದಿದ್ದು, ಒಂದು ಪ್ರಾಥಮಿಕ ಸಹಕಾರ ಸಂಘವು ಇನ್ನೊಂದು ಪ್ರಾಥಮಿಕ ಸಹಕಾರ ಸಂಘದ ಸದಸ್ಯತ್ವ ಹೊಂದಲು ಬರುವುದಿಲ್ಲ, ಸದಸ್ಯರು ಮಾತ್ರ ಠೇವಣಿ ಇಡಬೇಕಾಗುತ್ತದೆ. ಬೇರೆ ಸಹಕಾರ ಸಂಘಗಳಲ್ಲಿ ಇಟ್ಟಿರುವ ಮುದ್ದತ್ತು ಠೇವಣಿಯನ್ನು ಕೂಡಲೇ ಹಿಂಪಡೆದು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಹಾಗೂ ಕೆ.ಡಿ.ಸಿ.ಸಿ. ಬ್ಯಾಂಕುಗಳಲ್ಲಿ ಮಾತ್ರ ಗುಂತಾಯಿಸಲು ಇಲ್ಲವೇ ಸಹಕಾರ ಸಂಘದ ವ್ಯವಹಾರದಲ್ಲಿ ತೊಡಗಿಸಲು ಸಹಾಯಕ ನಿಬಂಧಕರು, ಕುಮಟಾ ಉಪವಿಭಾಗ ಇವರು ದಿನಾಂಕ:18-09-2020ರಂದು ಸದರಿ ಸಂಘಗಳಿಗೆ ನಿರ್ದೇಶನ ನೀಡಿರುತ್ತಾರೆ.
ಇ)	ಸರ್ಕಾರದ ಪೂರ್ವಾನುಮತಿ ಪಡೆಯದೇ ನಿಗಧಿತ ಬ್ಯಾಂಕನ್ನು ಬಿಟ್ಟು ಸ್ಥಳೀಯ ಕೋ-ಆಪರೇಟಿವ್ ಸೊಸೈಟಿಯಲ್ಲಿ ನಿಯಮಬಾಹಿರವಾಗಿ ಮುದ್ದತ್ತು ಠೇವಣಿಯನ್ನು ಇಟ್ಟಿರುವುದಕ್ಕೆ ಕೈಗೊಳ್ಳಲಿರುವ ಕ್ರಮಗಳೇನು;	ಪೂರ್ವಾನುಮತಿ ಪಡೆಯದೇ ನಿಗದಿತ ಬ್ಯಾಂಕನ್ನು ಬಿಟ್ಟು ಸ್ಥಳೀಯ ಕೋ-ಆಪ್‌ರೇಟಿವ್ ಸೊಸೈಟಿಯಲ್ಲಿ ಸಹಕಾರ ಸಂಘಗಳು ಮುದ್ದತ್ತು ಠೇವಣಿಯಾಗಿ ಇಟ್ಟಿರುವ ಮೊತ್ತವನ್ನು ಹಿಂಪಡೆದು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಹಾಗೂ ಕೆ.ಡಿ.ಸಿ.ಸಿ. ಬ್ಯಾಂಕುಗಳಲ್ಲಿ ಮಾತ್ರ ಗುಂತಾಯಿಸಲು ಹಾಗೂ ಸಂಘದ ವ್ಯವಹಾರಗಳಲ್ಲಿ ತೊಡಗಿಸಲು ಸಹಾಯಕ ನಿಬಂಧಕರು, ಕುಮಟಾ ಉಪವಿಭಾಗ ಇವರು ದಿನಾಂಕ:18-09-2020ರಂದು ಸಂಘಕ್ಕೆ ನಿರ್ದೇಶನ ನೀಡಿರುತ್ತಾರೆ.
ಈ)	ಈ ರೀತಿ ಯಾವ ಯಾವ ಗ್ರಾಮೀಣ ಸೇವಾ ಸಹಕಾರಿ ಸಂಘಗಳ ವತಿಯಿಂದ ಸ್ಥಳೀಯ ಕೋ-ಆಪರೇಟಿವ್ ಸೊಸೈಟಿಗಳಲ್ಲಿ ಮುದ್ದತ್ತು ಠೇವಣಿಯನ್ನು ನಿಯಮ ಬಾಹಿರವಾಗಿ ಇಡಲಾಗಿದೆ? (ವಿವರ ನೀಡುವುದು)	ಗ್ರಾಮೀಣ ಸೇವಾ ಸಹಕಾರಿ ಸಂಘಗಳ ವತಿಯಿಂದ ಸ್ಥಳೀಯ ಕೋ-ಆಪ್‌ರೇಟಿವ್ ಸೊಸೈಟಿಗಳಲ್ಲಿ ಮುದ್ದತ್ತುಠೇವಣಿಯನ್ನು ತೊಡಗಿಸಿರುವ ಸಹಕಾರ ಸಂಘಗಳು ಈ ಕೆಳಗಿನಂತಿವೆ. (see table below)

ಕ್ರಸಂ	ಸಂಘದ ಹೆಸರು
1	ವ್ಯವಸಾಯ ಸೇವಾ ಸಹಕಾರಿ ಸಂಘ ನಿ., ಕೆಳಗಿನೂರು, ತಾ:ಹೊನ್ನಾವರ
2	ಗ್ರಾಮೀಣ ಸೇವಾ ಸಹಕಾರಿ ಸಂಘ ನಿ., ಜಾಲಿ, ತಾ:ಭಟ್ಕಳ
3	ಗ್ರಾಮೀಣ ಸೇವಾ ಸಹಕಾರಿ ಸಂಘ ನಿ., ಶಿರಾಲಿ, ತಾ:ಭಟ್ಕಳ
4	ಗ್ರಾಮೀಣ ಸೇವಾ ಸಹಕಾರಿ ಸಂಘ ನಿ., ಕೈಕಿಣಿ, ತಾ:ಭಟ್ಕಳ
5	ಗ್ರಾಮೀಣ ಸೇವಾ ಸಹಕಾರಿ ಸಂಘ ನಿ., ಬೆಳಕೆ, ತಾ:ಭಟ್ಕಳ

ಸಂಖ್ಯೆ: ಸಿಒ 352 ಸಿಎಲ್ಎಸ್ 2020

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರು : ಶ್ರೀ. ಶಿವಶಂಕರ ರೆಡ್ಡಿ ಎನ್. ಹೆಚ್
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1623
ಉತ್ತರಿಸಬೇಕಾದ ದಿನಾಂಕ : 25.09.2020

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಗೌರಿಬಿದನೂರಿನಲ್ಲಿ ಈ ಹಿಂದೆ ಸಹಕಾರ ಕ್ಷೇತ್ರದಲ್ಲಿ ನಡೆಯುತ್ತಿದ್ದ ಸಹಕಾರಿ ಸಕ್ಕರೆ ಕಾರ್ಖಾನೆ ಯಾವಾಗ ನಿರ್ಮಾಣಗೊಂಡಿದೆ;	ಗೌರಿಬಿದನೂರು ಸಹಕಾರ ಸಕ್ಕರೆ ಕಾರ್ಖಾನೆ ಗೌರಿಬಿದನೂರು, ಚಿಕ್ಕಬಳ್ಳಾಪುರ ಜಿಲ್ಲೆ, ಈ ಕಾರ್ಖಾನೆಯು ಸಹಕಾರ ಸಂಘಗಳ ಕಾಯ್ದೆಯಡಿ ದಿನಾಂಕ:13.03.1961 ರಂದು ನೋಂದಣಿಯಾಗಿರುತ್ತದೆ. ಈ ಕಾರ್ಖಾನೆಯು ದಿನಾಂಕ:19.03.1986 ರಲ್ಲಿ ಸಮಾಪನೆಗೊಂಡಿದೆ.
ಆ)	ಇದಕ್ಕೆ ಸಂಬಂಧಿಸಿದಂತೆ ರೈತರ ಷೇರು ಹಣ ಸರ್ಕಾರದಲ್ಲಿರುವುದು ನಿಜವೇ; ಇದ್ದಲ್ಲಿ ಒಟ್ಟು ಎಷ್ಟು ಮೊತ್ತವಿದೆ;	ಕಾರ್ಖಾನೆಯು ಸಮಾಪನೆಗೊಂಡಿರುವ ಕಾರಣ, ಸಮಾಪನಾಧಿಕಾರಿ ನೇಮಿಸಲಾಗಿದ್ದು, ಈ ಮೊತ್ತವನ್ನು ಬ್ಯಾಂಕಿನ ನಿಶ್ಚಿತ ಠೇವಣಿಯಲ್ಲಿ ತೊಡಗಿಸಿರುತ್ತಾರೆ. ರೈತರ ಷೇರು ಹಣದ ವಿವರ ಈ ಕೆಳಕಂಡಂತೆ ಇರುತ್ತದೆ. ಎ) "ಎ" ದರ್ಜೆ ಷೇರು (ಬಿಡಿ ಸದಸ್ಯರು) 25,35,493.56 ಬಿ) "ಬಿ" ದರ್ಜೆ ಷೇರು (ಸಹಕಾರಿ ಸಂಘಗಳ ಷೇರು) 2,25,305.00 ಒಟ್ಟು **27,60,798.56**
ಇ)	ಸದರಿ ಹಣವನ್ನು ಬಳಸಿಕೊಂಡು ಗೌರಿಬಿದನೂರಿನಲ್ಲಿ ರೈತರ ಉಪಯೋಗಕ್ಕಾಗಿ ಒಂದು ಸಹಕಾರ ಭವನ ನಿರ್ಮಿಸಲು ಸಾಧ್ಯವಿಲ್ಲವೇ; ಈ ಬಗ್ಗೆ ಸರ್ಕಾರದ ನಿಲುವೇನು?	ಕಾರ್ಖಾನೆಯು ಸಮಾಪನೆಗೊಂಡಿರುವುದರಿಂದ, ಆದ್ಯತಾ ಪಟ್ಟಿಯಂತೆ ಆಸ್ತಿ-ಜವಾಬ್ದಾರಿಯನ್ನು ಸಹಕಾರಿ ಕಾಯ್ದೆ ರೀತ್ಯಾ ವಿಲೇವಾರಿ ಮಾಡಿದ ನಂತರ ನಿರ್ಣಯಿಸಬೇಕಾಗಿರುತ್ತದೆ.

ಸಂಖ್ಯೆ: ಸಿಒ 76 ಪಿಎಂಸಿ 2020

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು

ಕರ್ನಾಟಕ ವಿಧಾನಸಭೆ

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1640
2)	ಮಾನ್ಯ ಸದಸ್ಯರ ಹೆಸರು	ಶ್ರೀ ಸುರೇಶ.ಬಿ.ಎಸ್. (ಹೆಬ್ಬಾಳ)
3)	ಉತ್ತರಿಸಬೇಕಾದ ದಿನಾಂಕ	25/09/2020
4)	ಉತ್ತರಿಸುವವರು	ಉಪ ಮುಖ್ಯಮಂತ್ರಿಗಳು ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರು

****

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್‌ಗಳಲ್ಲಿ ಕೈಗಾರಿಕಾ ತರಬೇತಿ ಕೆಂದ್ರ ಸ್ಥಾಪಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;	ಇಲ್ಲ.
ಆ)	ಹಾಗಿದ್ದಲ್ಲಿ, ತರಬೇತಿ ಕೇಂದ್ರ ಸ್ಥಾಪಿಸಲು ಸರ್ಕಾರ ಕೈಗೊಂಡ ಕ್ರಮವೇನು?	ಅನ್ವಯಿಸುವುದಿಲ್ಲ.

ಸಂಖ್ಯೆ: ಕೌಉಜೀಇ 54 ಕೈತಪ್ರ 2020

(ಡಾ.ಸಿ.ಎನ್.ಅಶ್ವಥ್ ನಾರಾಯಣ)
ಉಪ ಮುಖ್ಯಮಂತ್ರಿಗಳು ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1643
ಸದಸ್ಯರ ಹೆಸರು : ಶ್ರೀ ಅನಿಲ್ ಚಿಕ್ಕಮಾದು
ಉತ್ತರಿಸುವ ದಿನಾಂಕ : 25-09-2020
ಉತ್ತರಿಸುವವರು : ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

	ಪ್ರಶ್ನೆಗಳು	ಉತ್ತರಗಳು
ಅ	ಕರ್ನಾಟಕ ರಾಜ್ಯ ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೋರೇಷನ್ ಲಿಮಿಟೆಡ್‌ನಲ್ಲಿ ಒಟ್ಟು ಖಾಲಿ ಇರುವ ಹುದ್ದೆಗಳೆಷ್ಟು:	ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತದಲ್ಲಿ ಒಟ್ಟು 139 ಖಾಲಿ ಹುದ್ದೆಗಳಿವೆ.
ಆ	ಇವುಗಳಲ್ಲಿ ಕಳೆದ ಸಾಲಿನಲ್ಲಿ ನೇಮಕಾತಿ ಮಾಡಿಕೊಳ್ಳಲಾಗಿದೆಯೇ; ಹಾಗಿದ್ದಲ್ಲಿ, ನೇಮಕಾತಿ ಮಾಡಿಕೊಳ್ಳಲಾದ ಹುದ್ದೆಗಳೆಷ್ಟು; (ಅಧಿಸೂಚನೆಯೊಂದಿಗೆ ವಿವರ ನೀಡುವುದು)	ಕಳೆದ ಸಾಲಿನಲ್ಲಿ ಯಾವುದೇ ನೇಮಕಾತಿಯನ್ನು ಮಾಡಿಕೊಂಡಿ ರುವುದಿಲ್ಲ. ದಿನಾಂಕ: 05/03/2019 ರಂದು ಖಾಲಿಯಿದ್ದ 87 ಹುದ್ದೆಗಳಿಗೆ ಹಾಗೂ ದಿನಾಂಕ:18/07/2019 ರಂದು ಒಂದು ಹುದ್ದೆಗೆ ನೇಮಕಾತಿ ಅಧಿಸೂಚನೆ ಯನ್ನು ಹೊರಡಿಸಲಾಗಿತ್ತು. ಆದರೆ, ಗ್ರೂಪ್-'ಸಿ' ಹುದ್ದೆಗಳನ್ನು ಸಂದರ್ಶನ ದ ಬದಲು ಲಿಖಿತ ಪರೀಕ್ಷೆ ಮೂಲಕ ಭರ್ತಿ ಮಾಡಬೇಕೆಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಿಂದ ಆದೇಶವಾಗಿರುವುದ ರಿಂದ ಮೇಲ್ಕಂಡ ನೇಮಕಾತಿ ಅಧಿಸೂಚನೆಯನ್ನು ತಡೆ ಹಿಡಿದು ನಿಗಮದ ವೃಂದ ಮತ್ತು ನೇಮಕಾತಿ ಮತ್ತು ಪದೋನ್ನತಿ ನಿಯಮ 2016ನ್ನು ತಿದ್ದುಪಡಿ ಮಾಡುವ ಪ್ರಸ್ತಾವನೆ ಪರಿಶೀಲನೆ ಯಲ್ಲಿದ್ದು, ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ತಿದ್ದುಪಡಿ ಯ ನಂತರ ಖಾಲಿ ಹುದ್ದೆಗಳ ನೇಮಕಾತಿಗೆ ಕ್ರಮವಹಿಸಲಾಗುವುದು.
ಇ	ಯಾವ ಮಾನದಂಡಗಳನ್ನು ಅನುಸರಿಸಿ ಈ ನೇಮಕಾತಿಗಳನ್ನು ಮಾಡಿಕೊಳ್ಳಲಾಗಿದೆ; ಹಾಗೂ ನೇಮಕಾತಿ ಮಾಡಿಕೊಂಡ ಹುದ್ದೆಗಳು ಯಾವುವು; ಸದರಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ್ದ ಅಭ್ಯರ್ಥಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಅಭ್ಯರ್ಥಿಗಳ ಹೆಸರು, ಅರ್ಜಿ ಸಂಖ್ಯೆ ಹಾಗೂ ಸದರಿ ಹುದ್ದೆಗಳಿಗೆ ನೇಮಕಾತಿಗೊಂಡ ಅಭ್ಯರ್ಥಿಗಳ ಪೂರ್ಣ ವಿವರಗಳನ್ನು ನೀಡುವುದು)	
ಈ	ನೇಮಕಾತಿ ಪ್ರಕ್ರಿಯೆಯಲ್ಲಿ ಅರ್ಹ ಅಭ್ಯರ್ಥಿಗಳನ್ನು ಕಡೆಗಣಿಸಿ, ಅರ್ಹತೆ ಇಲ್ಲದಂತಹವರನ್ನು ಆಯ್ಕೆ ಮಾಡಿರುವುದರಿಂದ ಅರ್ಹ ಅಭ್ಯರ್ಥಿಗಳಿಗೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿಯೇ;	
ಉ	ಹಾಗಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು? (ನೇಮಕಾತಿಗೊಂಡವರ ಅರ್ಹತಾ ಪಟ್ಟಿ ಹಾಗೂ ನೇಮಕಾತಿಗೊಳ್ಳದ ಅಭ್ಯರ್ಥಿಗಳ ಅರ್ಹತಾ ಪಟ್ಟಿಯ ವಿವರದೊಂದಿಗೆ ನೇಮಕಾತಿ ಪ್ರಕ್ರಿಯೆ ಸಂಪೂರ್ಣ ವಿವರ ನೀಡುವುದು)	

ಸಂಖ್ಯೆ:ರೇಷ್ಮೆ 50 ರೇಉನಿ 2020

(ನಾರಾಯಣಗೌಡ),
ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1654
ಸದಸ್ಯರ ಹೆಸರು	:	ಶ್ರೀಮತಿ ಕನೀಜ್ ಫಾತೀಮಾ (ಗುಲ್ಬರ್ಗಾ ಉತ್ತರ)
ಉತ್ತರಿಸಬೇಕಾದ ದಿನಾಂಕ	:	25-09-2020
ಉತ್ತರಿಸುವ ಸಚಿವರು	:	ಮಾನ್ಯ ನಗರಾಭಿವೃದ್ಧಿ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	ಕಲಬುರಗಿ ಮಹಾನಗರಪಾಲಿಕೆಗೆ ಮಹಾತ್ಮಗಾಂಧಿ ನಗರ ವಿಕಾಸ ಯೋಜನೆಯಡಿಯಲ್ಲಿ ಮಂಜೂರಾಗಿರುವ 150.00 ಕೋಟಿ ರೂ.ಗಳ ವೆಚ್ಚದ ಕಾಮಗಾರಿಗಳನ್ನು ತಡೆಹಿಡಿಯಲಾಗಿದೆಯೇ;	ಆರ್ಥಿಕ ಇಲಾಖೆಯ ಪತ್ರ ಸಂಖ್ಯೆ: ಆಇ 790 ವೆಚ್ಚ-9/2019 ದಿನಾಂಕ: 30-05-2019ರಲ್ಲಿ ಮಹಾತ್ಮಗಾಂಧಿ ನಗರ ವಿಕಾಸ ಯೋಜನೆಯ ಅನುದಾನದ ಕೊರತೆಯಿರುವುದರಿಂದ ಕೈಬಿಡಲು ತಿಳಿಸಿರುವುದರಿಂದ ಈ ಯೋಜನೆಯನ್ನು ಸ್ಥಗಿತಗೊಳಿಸಲಾಗಿದೆ.
ಆ.	ಹಾಗಿದ್ದಲ್ಲಿ, ಈ ಕಾಮಗಾರಿಗಳನ್ನು ತಡೆಹಿಡಿಯಲು ಕಾರಣಗಳೇನು;	ಮಹಾತ್ಮಗಾಂಧಿ ನಗರ ವಿಕಾಸ ಯೋಜನೆಗೆ 2020-21ನೇ ಸಾಲಿನ ಆಯವ್ಯಯದಲ್ಲಿ ರೂ. 50.00 ಕೋಟಿಗಳನ್ನು ಮೀಸಲಿರಿಸಲಾಗಿತ್ತು. ಕೋವಿಡ್ ಸಮಸ್ಯೆಯಿಂದಾಗಿ ಸರ್ಕಾರವು 2020-21ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಮಹಾತ್ಮಾ ಗಾಂಧಿ ನಗರ ವಿಕಾಸ ಯೋಜನೆಗೆ ಯಾವುದೇ ಹಣವನ್ನು ಮೀಸಲಿರಿಸಿರುವುದಿಲ್ಲ ಮತ್ತು ಆರ್ಥಿಕ ಇಲಾಖೆಯು ಅನುದಾನದ ಕೊರತೆ ಇರುವುದರಿಂದ ಯೋಜನೆಯನ್ನು ಸ್ಥಗಿತಗೊಳಿಸಲಾಗಿರುತ್ತದೆ.
ಇ.	ಸದರಿ ತಡೆಯನ್ನು ಕೂಡಲೇ ತೆರವುಗೊಳಿಸಿ ಕಾಮಗಾರಿಗಳನ್ನು ಪ್ರಾರಂಭಿಸುವ ನಿಟ್ಟಿನಲ್ಲಿ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ?	ಮಹಾತ್ಮಗಾಂಧಿ ನಗರ ವಿಕಾಸ ಯೋಜನೆಯನ್ನು ಮುಂದುವರೆಸಲು ಸರ್ಕಾರದ ಕಡತ ಸಂಖ್ಯೆ: ಯುಡಿಡಿ 205 ಎಸ್.ಎಫ್.ಸಿ 2020ರಲ್ಲಿ ಆರ್ಥಿಕ ಇಲಾಖೆಯನ್ನು ಕೋರಲಾಗಿದೆ. ಕಡತ ಸ್ವೀಕೃತವಾದ ನಂತರ, ಮುಂದಿನ ಕ್ರಮವಹಿಸಲಾಗುವುದು.

ಕಡತ ಸಂಖ್ಯೆ:ನಅಇ 314 ಎಸ್.ಎಫ್.ಸಿ 2020

(ಬಿ.ಎ ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1655
2. ಸದಸ್ಯರ ಹೆಸರು : ಶ್ರೀ ರಘುಪತಿ ಭಟ್ ಕೆ. (ಉಡುಪಿ)
3. ಉತ್ತರಿಸುವ ದಿನಾಂಕ : 25.09.2020
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ.	ಕೆ.ಐ.ಎ.ಡಿ.ಬಿ.ಯಿಂದ ಉಡುಪಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕೈಗಾರಿಕ ವಲಯ ಮಾಡುವ ಬಗ್ಗೆ ಸರ್ಕಾರದ ನಿಲುವೇನು;	ಉಡುಪಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಉಪ್ಪೂರು ಗ್ರಾಮದ ಕೊಳಲಗಿರಿಯಲ್ಲಿ ಸುಮಾರು 100-00 ಎಕರೆ ಪ್ರದೇಶದಲ್ಲಿ ಕೈಗಾರಿಕಾ ಪ್ರದೇಶ ಸ್ಥಾಪನೆಗೆ ಕ್ರಮ ಕೈಗೊಳ್ಳುವಂತೆ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಉಡುಪಿ ಇವರು ದಿನಾಂಕ: 02.07.2019ರ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.
ಆ.	ಉಡುಪಿ ವಿಧಾನಸಭಾ ಕ್ಷೇತ್ರದಲ್ಲಿ ಕೈಗಾರಿಕ ವಲಯ ಮಾಡುವ ಪ್ರಸ್ತಾಪ ಯಾವ ಹಂತದಲ್ಲಿದೆ (ಸಂಪೂರ್ಣ ವಿವರಗಳನ್ನು ನೀಡುವುದು)?	ಉಡುಪಿ ಜಿಲ್ಲೆ, ಬ್ರಹ್ಮಾವರ ತಾಲ್ಲೂಕು, ಉಪ್ಪೂರು ಗ್ರಾಮದ ಸುಮಾರು 100-00 ಎಕರೆ ಜಮೀನನ್ನು ಕೈಗಾರಿಕಾ ಪ್ರದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳುವ ಮತ್ತು ಕೈಗಾರಿಕಾ ನಿವೇಶನಗಳಿಗೆ ಇರುವ ಬೇಡಿಕೆ ಬಗ್ಗೆ ಕಾರ್ಯಪಾಲಕ ಅಭಿಯಂತರ, ಕೆ.ಐ.ಎ.ಡಿ.ಬಿ., ಮಂಗಳೂರು ಮತ್ತು ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಉಡುಪಿ ಇವರುಗಳು ಜಂಟಿ ಸ್ಥಳ ಪರಿಶೀಲನೆ ನಡೆಸಿ, ವರದಿ ನೀಡುವಂತೆ ವಿಶೇಷ ಭೂಸ್ವಾಧೀನಾಧಿಕಾರಿ ರವರಿಗೆ ದಿನಾಂಕ: 14.09.2020ರಂದು ನಿರ್ದೇಶನ ನೀಡಲಾಗಿದೆ. ಈ ಪ್ರದೇಶದಲ್ಲಿ ಜಮೀನು ಹಂಚಿಕೆ ಕೋರಿ ಬೇಡಿಕೆ ಇರುವ ಬಗ್ಗೆ ವರದಿ ಸ್ವೀಕೃತವಾದ ಕೂಡಲೇ ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುತ್ತದೆ.

ಸಂಖ್ಯೆ: ಸಿಐ 174 ಐಎಪಿ (ಇ) 2020

(ಜಗದೀಶ ಶೆಟ್ಟರ)

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1657
2. ಸದಸ್ಯರ ಹೆಸರು : ಶ್ರೀ ರಘುಪತಿ ಭಟ್ ಕೆ. (ಉಡುಪಿ)
3. ಉತ್ತರಿಸಬೇಕಾದ ದಿನಾಂಕ : 25/09/2020
4. ಉತ್ತರಿಸುವ ಸಚಿವರು : ಸಹಕಾರ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ.	2018 ರಿಂದ ಈವರೆಗೆ (ಎಪಿಎಂಸಿ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಉಡುಪಿ ಇಲ್ಲಿಗೆ ಮಂಜೂರಾದ ಅನುದಾನವೆಷ್ಟು (ಯೋಜನೆವಾರು ವಿವರಗಳನ್ನು ನೀಡುವುದು)	ಉಡುಪಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ 2017-18ನೇ ಸಾಲಿನಿಂದ ವಿವಿಧ ಯೋಜನೆಗಳಡಿ ಬಿಡುಗಡೆಯಾದ ಅನುದಾನದ ವಿವರಗಳು ಕೆಳಕಂಡಂತಿವೆ. I. ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಸಿ.ಸಿ.ರಸ್ತೆ ಮತ್ತು ಆರ್.ಸಿ.ಸಿ.ಚರಂಡಿ ನಿರ್ಮಿಸಲು 2017-18 ನೇ ಸಾಲಿನಲ್ಲಿ ಆರ್.ಐ.ಡಿ.ಎಫ್-23ರ ರೂ. 63.27 ಲಕ್ಷಗಳು. II. ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಒಂದು ಮುಚ್ಚು ಹರಾಜು ಕಟ್ಟೆಯನ್ನು ನಿರ್ಮಿಸಲು 2018-19ನೇ ಸಾಲಿನಲ್ಲಿ ಡಬ್ಲ್ಯೂ.ಐ.ಎಫ್ 2014-15ರಲ್ಲಿನ ರೂ. 10.82 ಲಕ್ಷಗಳು. III. ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಮುಚ್ಚು ಹರಾಜುಕಟ್ಟೆಯನ್ನು ನಿರ್ಮಿಸಲು 2017-18ನೇ ಸಾಲಿನಲ್ಲಿ ಆರ್.ಕೆ.ವಿ.ವೈ ಯೋಜನೆಯಡಿ ರೂ. 40.97 ಲಕ್ಷಗಳು. IV. ಸಮಿತಿ ವ್ಯಾಪ್ತಿಯ ಕೋಟಾ ಗ್ರಾಮೀಣ ಸಂತೆಯನ್ನು ಅಭಿವೃದ್ಧಿಪಡಿಸಲು 2019-20ನೇ ಸಾಲಿನಲ್ಲಿ ಆರ್.ಕೆ.ವಿ.ವೈ ಯೋಜನೆಯಡಿ ರೂ. 75.00 ಲಕ್ಷಗಳು.
ಆ.	ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಇರುವ ಮಾನದಂಡಗಳೇನು;	ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಈ ಕೆಳಕಂಡಂತೆ ಮಾನದಂಡಗಳನ್ನು ಪರಿಗಣಿಸಲಾಗುತ್ತದೆ. 1. ಪ್ರಾಂಗಣದಲ್ಲಿ ಸೂಕ್ತ ಸ್ಥಳದ ಲಭ್ಯತೆ 2. ಸ್ಥಳೀಯ ಅವಶ್ಯಕತೆಗಳು 3. ಅನುದಾನದ ಲಭ್ಯತೆ 4. ಮೂಲ ಸೌಕರ್ಯಗಳ ಆದ್ಯತೆ ನಬಾರ್ಡ್ ಅನುದಾನದಲ್ಲಿ ನಬಾರ್ಡ್ ಸಂಸ್ಥೆಯ ಮಾನದಂಡಗಳನ್ವಯ ನಬಾರ್ಡ್ ಸಂಸ್ಥೆಯ ಅನುಮೋದನೆ ಪಡೆದು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಕೇಂದ್ರ ಸರ್ಕಾರದ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (ಆರ್.ಕೆ.ವಿ.ವೈ) ಯಡಿ ಮಾರುಕಟ್ಟೆಗಳನ್ನು ಅಭಿವೃದ್ಧಿಪಡಿಸಲು ನೋಡಲ್ ಏಜೆನ್ಸಿಯಾದ ರಾಜ್ಯ ಕೃಷಿ ಇಲಾಖೆಯಿಂದ ಕೃಷಿ ಮಾರಾಟ ಇಲಾಖೆಗೆ ಒದಗಿಸಲಾಗುವ ಅನುದಾನದಡಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.
ಇ.	ಸದರಿ ಮಾರುಕಟ್ಟೆ ಕಾಮಗಾರಿಗಳ ಕ್ರಿಯಾ ಯೋಜನೆ ತಯಾರಿಸುವಾಗ ಅನುಸರಿಸಬೇಕಾದ ನೀತಿಗಳೇನು (ಸಂಪೂರ್ಣ ವಿವರಗಳನ್ನು ಒದಗಿಸುವುದು)	ಮಾರುಕಟ್ಟೆ ಪ್ರಾಂಗಣಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಮತ್ತು ಹಾಲಿ ಇರುವ ಸೌಲಭ್ಯಗಳನ್ನು ವ್ಯಾಪಾರ ವಹಿವಾಟಿಗೆ ಅನುಗುಣವಾಗಿ ಮೇಲ್ದರ್ಜೆಗೇರಿಸಲು ಸಮಿತಿಗಳ ನಿಧಿಯಿಂದ ಖರ್ಚು ಮಾಡಲಾಗುತ್ತದೆ. ಮಾರುಕಟ್ಟೆ ಸಮಿತಿಗಳಲ್ಲಿನ ವಹಿವಾಟಿಗನುಗುಣವಾಗಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಅತ್ಯವಶ್ಯಕವಾಗಿ ಕೈಗೊಳ್ಳಬೇಕಾದ ಕಾಮಗಾರಿಗಳನ್ನು ಗುರುತಿಸಿ ಲಭ್ಯವಿರುವ ಸಮಿತಿಯ ನಿಧಿ ಮತ್ತು ಲಭ್ಯವಿರುವ ಅನುದಾನದಡಿ ವಾರ್ಷಿಕ ಕ್ರಿಯಾ ಯೋಜನೆ ತಯಾರಿಸಲಾಗುತ್ತದೆ.

ಎಸ್.ಟಿ. ಸೋಮಶೇಖರ್

(ಎಸ್.ಟಿ. ಸೋಮಶೇಖರ್)

ಸಹಕಾರ ಸಚಿವರು.

ಕಡತ ಸಂಖ್ಯೆ: ಸಿಒ 487 ಎಂಆರ್ಇ 2020

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1660
ಸದಸ್ಯರ ಹೆಸರು : ಶ್ರೀ ನಿರಂಜನ್ ಕುಮಾರ್ ಸಿ.ಎಸ್. (ಗುಂಡ್ಲುಪೇಟೆ)
ಉತ್ತರಿಸುವವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು
ಉತ್ತರಿಸುವ ದಿನಾಂಕ : 25.09.2020

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರವು ಕೇರಳ ಹಾಗೂ ತಮಿಳುನಾಡು ರಾಜ್ಯಗಳ ಗಡಿಗೆ ಹೊಂದಿಕೊಂಡಿದ್ದರೂ ಸಹ ಹಿಂದುಳಿದ ತಾಲ್ಲೂಕಿಗೆ ಸೇರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಬಂದಿದೆ.
ಆ)	ಬಂದಿದ್ದಲ್ಲಿ, ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರವು ಕೈಗಾರಿಕೆ ಕ್ಷೇತ್ರಗಳನ್ನು ಹಾಗೂ ಬಂಡವಾಳ ಹೂಡಿಕೆಗಾರರನ್ನು ಆಕರ್ಷಿಸಲು ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಂಡಿದೆ?	2020-25ರ ಕೈಗಾರಿಕಾ ನೀತಿಯಡಿ ಚಾಮರಾಜನಗರ ಜಿಲ್ಲೆಯ ಎಲ್ಲಾ ತಾಲ್ಲೂಕುಗಳನ್ನು ಅತಿ ಹಿಂದುಳಿದ ತಾಲ್ಲೂಕುಗಳೆಂದು ವಲಯ-1ರಲ್ಲಿ ಪರಿಗಣಿಸಲಾಗಿದೆ. ಇದರಿಂದ ಈ ಜಿಲ್ಲೆಯಲ್ಲಿ ಸ್ಥಾಪಿಸುವ ಕೈಗಾರಿಕೆಗಳಿಗೆ ಹೆಚ್ಚಿನ ರಿಯಾಯಿತಿ ಮತ್ತು ಪ್ರೋತ್ಸಾಹಗಳನ್ನು ನೀಡಲಾಗುವುದು.
ಇ)	ಸದರಿ ಕ್ಷೇತ್ರದಲ್ಲಿ ಕೈಗಾರಿಕೆಗಳ ಬೆಳವಣಿಗೆಗಳಿಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? ಸಂಪೂರ್ಣ ವಿವರ ನೀಡುವುದು ಹಾಗೂ ಪ್ರಸ್ತುತ ಈ ಕ್ಷೇತ್ರದಲ್ಲಿ ಎಷ್ಟು ಕೈಗಾರಿಕೆ ಪ್ರದೇಶಗಳು ಕಾರ್ಯನಿರ್ವಹಿಸುತ್ತಿವೆ? (ಸಂಪೂರ್ಣ ವಿವರ ನೀಡುವುದು)	ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಯಾವುದೇ ಕೈಗಾರಿಕಾ ಪ್ರದೇಶಗಳು ಇರುವುದಿಲ್ಲ. ಆದರೆ, ತಾಲ್ಲೂಕಿನ ವೀರನಪುರದಲ್ಲಿ 12 ಎಕರೆ ಪ್ರದೇಶದ ಕೈಗಾರಿಕಾ ವಸಾಹತು ನಿರ್ಮಿಸಲಾಗಿದ್ದು, ಅದರಲ್ಲಿ 50 ಪ್ಲಾಟ್‌ಗಳಿದ್ದು, 45 ಪ್ಲಾಟ್‌ಗಳನ್ನು ಕೈಗಾರಿಕಾ ಉದ್ದಿಮೆದಾರರಿಗೆ ಹಂಚಿಕೆ ಮಾಡಲಾಗಿದ್ದು, 4 ಘಟಕಗಳು ಕಾರ್ಯನಿರ್ವಹಣೆಯಲ್ಲಿವೆ. ಚಾಮರಾಜನಗರ ಬದನಗುಪ್ಪೆ-ಕೆಲ್ಲಂಬಳ್ಳಿಯಲ್ಲಿ 1460 ಎಕರೆ ವಿಸ್ತೀರ್ಣದಲ್ಲಿ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಲಾಗಿದ್ದು, 4 ಕೈಗಾರಿಕಾ ಘಟಕಗಳು ಕಾರ್ಯನಿರ್ವಹಿಸುತ್ತಿವೆ.

ಸಿಐ 249 ಎಸ್‌ಪಿಐ 2020

(ಜಗದೀಶ್ ಶೆಟ್ಟರ್)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಸಾರ್ವಜನಿಕ ಉದ್ದಿಮೆಗಳ ಸಚಿವರು

<u>ಕರ್ನಾಟಕ ವಿಧಾನ ಸಭೆ</u>

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1676
2. ಸದಸ್ಯರ ಹೆಸರು : ಶ್ರೀ ವೆಂಕಟರೆಡ್ಡಿ ಮುದ್ನಾಳ್
3. ಉತ್ತರಿಸಬೇಕಾದ ದಿನಾಂಕ : 25.09.2020
4. ಉತ್ತರಿಸುವ ಸಚಿವರು : ಕಾರ್ಮಿಕ ಮತ್ತು ಸಕ್ಕರೆ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ವಡಗೇರಾ ತಾಲ್ಲೂಕಿನ ತುಮಕೂರು ಗ್ರಾಮದ ಶೂಗರ್ ಕೂರ್ ಗ್ರೀನ್ ಕಾರ್ಖಾನೆಗೆ ರೈತರು ಬೆಳೆದಂತಹ ಕಬ್ಬನ್ನು ನೀಡಿದ್ದು, ರೈತರಿಗೆ ಕಾರ್ಖಾನೆಯ ಮಾಲೀಕರು ವರ್ಷ ಕಳೆದರೂ ರೈತರ ಖಾತೆಗೆ ಹಣ ಜಮಾವಣೆ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಯಾದಗಿರಿ ಜಿಲ್ಲೆಯ ವಡಗೇರಾ ತಾಲ್ಲೂಕಿನ ತುಮಕೂರು ಗ್ರಾಮದ ಕೋರ್ ಗ್ರೀನ್ ಸಕ್ಕರೆ ಕಾರ್ಖಾನೆಯು 2019-20ನೇ ಸಾಲಿನಲ್ಲಿ 2,36,332 ಲಕ್ಷ ಮೆ.ಟನ್ ಕಬ್ಬನ್ನು ನುರಿಸಿದ್ದು, ಕೇಂದ್ರ ಸರ್ಕಾರದ ಎಫ್.ಆರ್.ಪಿ. ದರ ಪ್ರತಿ ಮೆ. ಟನ್‌ಗೆ ರೂ.2745/-ರಂತೆ ರೂ.6487.00 ಲಕ್ಷಗಳನ್ನು ಪಾವತಿಸಬೇಕಾಗಿದ್ದು, ಈ ಮೊತ್ತವನ್ನು ಕಾರ್ಖಾನೆಯು ದಿನಾಂಕ 24.08.2020ರ ಪಾಕ್ಷಿಕ ವರದಿಯಂತೆ ಪೂರ್ತಿಯಾಗಿ ಪಾವತಿಸಿರುತ್ತದೆ. ಈಗಾಗಲೇ ಕಬ್ಬು ಬಿಲ್ಲು ಬಾಕಿ ಪಾವತಿಯಾಗಿರುವುದರಿಂದ ರೈತರ ಖಾತೆಗೆ ಹಣ ಜಮಾವಣೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.
ಆ)	ಬಂದಿದ್ದಲ್ಲಿ, ಕಾರ್ಖಾನೆ ಮಾಲೀಕರಿಂದ ಯಾವಾಗ ರೈತರ ಖಾತೆಗೆ ಹಣ ಜಮಾವಣೆ ಮಾಡಲಾಗುವುದು;	
ಇ)	ಕಾರ್ಖಾನೆ ಮಾಲೀಕರು ರೈತರಿಗೆ ಹಣ ಪಾವತಿಸಿರುವುದರ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?	2019-20ನೇ ಸಾಲಿನಲ್ಲಿ ಕಾರ್ಖಾನೆಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ 14 ದಿನಗಳೊಳಗಾಗಿ ಕಬ್ಬು ಬಿಲ್ಲು ಪಾವತಿ ಮಾಡದೆ ಇದ್ದುದರಿಂದ, ಕಬ್ಬು (ನಿಯಂತ್ರಣ) ಆದೇಶ, 1966ರ ಕಲಂ 3(ಎ) ಹಾಗೂ ಕರ್ನಾಟಕ ರಾಜ್ಯ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) ಅಧಿನಿಯಮ 2013 ಮತ್ತು ತಿದ್ದುಪಡಿ ಅಧಿನಿಯಮ 2014 ರನ್ವಯ ಕಾರ್ಖಾನೆಗೆ ಕಬ್ಬು ಸರಬರಾಜು ಮಾಡಿದ 14 ದಿನಗಳೊಳಗಾಗಿ ಕಬ್ಬು ಬಿಲ್ಲು ಪಾವತಿಸದೇ ಬಾಕಿ ಉಳಿಸಿಕೊಂಡಿರುವ ರೂ.2427.00 ಲಕ್ಷಗಳಿಗೆ ವಾರ್ಷಿಕ ಶೇ.15ರ ಬಡ್ಡಿಯೊಂದಿಗೆ ಕರ್ನಾಟಕ ಭೂಕಂದಾಯ ಕಾಯ್ದೆ1964ರ ಅವಕಾಶಗಳ ರೀತ್ಯಾ ಭೂಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲು ಮಾಡಲು ಏಕೆ ಕ್ರಮ ಕೈಗೊಳ್ಳಬಾರದೆಂಬುದಕ್ಕೆ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಕಛೇರಿಯಿಂದ ದಿನಾಂಕ 01.02.2020 ಮತ್ತು 15.05.2020 ರಂದು ಸದರಿ ಕಾರ್ಖಾನೆಗೆ ನೋಟೀಸುಗಳನ್ನು ನೀಡಲಾಗಿತ್ತು. ಆದಾಗ್ಯೂ ಕಾರ್ಖಾನೆಯು ರೈತರಿಗೆ ಕಬ್ಬು ಬಿಲ್ಲು ಬಾಕಿಯನ್ನು ಪಾವತಿಸದೇ ಇದ್ದುದರಿಂದ ಭೂಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲು ಮಾಡಲು ಜಿಲ್ಲಾಧಿಕಾರಿಗಳು, ಯಾದಗಿರಿ ಜಿಲ್ಲೆ ಇವರಿಗೆ ದಿನಾಂಕ 28.05.2020 ರಂದು ವಸೂಲಾತಿ ಪ್ರಮಾಣ ಪತ್ರವನ್ನು (Recovery Certificate) ಹೊರಡಿಸಲಾಗಿತ್ತು. ವಸೂಲಾತಿ ಪ್ರಮಾಣ ಪತ್ರದ ಮೇರೆಗೆ ಜಿಲ್ಲಾಧಿಕಾರಿಗಳು, ಯಾದಗಿರಿ ಇವರು ಕಾರ್ಖಾನೆಯ ಕಬ್ಬು ಬಿಲ್ಲು ಬಾಕಿಯನ್ನು ಭೂಕಂದಾಯ ಬಾಕಿಯೆಂದು ವಸೂಲು ಮಾಡಲು ತಹಸೀಲ್ದಾರ್, ವಡಗೇರಾ ತಾಲ್ಲೂಕು ಇವರಿಗೆ ದಿನಾಂಕ 15.07.2020 ರಂದು ಆದೇಶಿಸಿರುತ್ತಾರೆ. ಆ ನಂತರ ಕಾರ್ಖಾನೆಯವರು ದಿನಾಂಕ: 24.08.2020ರ ಪತ್ರದಲ್ಲಿ ರೈತರ ಬಾಕಿಯನ್ನು ಪೂರ್ಣವಾಗಿ ಪಾವತಿಸಿರುವುದಾಗಿ ತಿಳಿಸುತ್ತಾ, ಕಾರ್ಖಾನೆಯ ಜಪ್ತಿಯನ್ನು ತೆರವುಗೊಳಿಸುವ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಆದೇಶಿಸಬೇಕೆಂದು ಕೋರಿರುತ್ತಾರೆ. ನಂತರ ಕಾರ್ಖಾನೆಯ ಜಪ್ತಿಯನ್ನು ತೆರವುಗೊಳಿಸಲಾಗಿದೆ.

ಸಂಖ್ಯೆ: ಸಿಐ 208 ಸಿಓಎಫ್ 2020

(ಅರಬೈಲ್ ಶಿವರಾಮ ಹೆಬ್ಬಾರ)
ಕಾರ್ಮಿಕ ಮತ್ತು ಸಕ್ಕರೆ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1677
ಸದಸ್ಯರ ಹೆಸರು	:	ಶ್ರೀ ವೆಂಕಟರೆಡ್ಡಿ ಮುದ್ನಾಳ್ (ಯಾದಗಿರಿ)
ಉತ್ತರಿಸಬೇಕಾದ ದಿನಾಂಕ	:	25-09-2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	ಯಾದಗಿರಿ ನಗರದ ನಗರಸಭೆಯ ಕಟ್ಟಡ ಶೀತಲ ವ್ಯವಸ್ಥೆಯಲ್ಲಿದ್ದು, ಸಾರ್ವಜನಿಕರಿಗೆ ಹಾಗೂ ನೌಕರರಿಗೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿದೆ.
ಆ.	ಬಂದಿದ್ದಲ್ಲಿ ನಗರಸಭೆ ಕಾರ್ಯಾಲಯದ ಕಟ್ಟಡ ನಿರ್ಮಾಣಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;	ಯಾದಗಿರಿಯಲ್ಲಿ ನಗರಸಭೆ ಕಾರ್ಯಾಲಯದ ಕಟ್ಟಡ ನಿರ್ಮಾಣಕ್ಕಾಗಿ ರೂ.300.00ಲಕ್ಷಗಳ ರೇಖಾ ಅಂದಾಜು ಮಾಡಲಾಗಿರುತ್ತದೆ. • ನಗರೋತ್ಥಾನ (ಮುನಿಸಿಪಾಲಿಟಿ)-3ನೇ ಹಂತದ ಯೋಜನೆಯ ಸಾಮಾನ್ಯ ಘಟಕದಡಿಯಲ್ಲಿ ರೂ.30.00 ಲಕ್ಷಗಳನ್ನು ಕಛೇರಿ ಕಟ್ಟಡಕ್ಕೆ ಬಳಸಿಕೊಳ್ಳಲು ಅವಕಾಶವಿದ್ದು, ಪರಿಷ್ಕೃತ ಕ್ರಿಯಾ ಯೋಜನೆಯನ್ನು ತಯಾರಿಸಲಾಗುತ್ತಿದೆ. • ಉಳಿಕೆ ಹೊಂದಾಣಿಕೆ ಮೊತ್ತ ರೂ.270.00 ಲಕ್ಷಗಳ ಅನುದಾನ ಮಂಜೂರು ಮಾಡುವ ಪ್ರಸ್ತಾವನೆಯು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರಿಂದ ಸ್ವೀಕೃತವಾದ ನಂತರ, ಅನುದಾನ ಲಭ್ಯತೆ ಮೇರೆಗೆ ಮುಂದಿನ ಕ್ರಮ ವಹಿಸಲಾಗುವುದು.
ಇ.	ಯಾವಾಗ ಕಟ್ಟಡ ನಿರ್ಮಾಣ ಕಾರ್ಯ ಪ್ರಾರಂಭವಾಗುವುದು?	

ಕಡತ ಸಂಖ್ಯೆ:ನಅಇ 310 ಎಸ್.ಎಫ್.ಸಿ.2020

(ಡಾ|| ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಮತ್ತು
ರೇಷ್ಮೆ ಸಚಿವರು

<u>**ಕರ್ನಾಟಕ ವಿಧಾನ ಸಭೆ**</u>

1) ಚುಕ್ಕೆ ಗುರುತಿಲ್ಲದ ಪ್ರಶ್ನೆ : 1689
2) ಸದಸ್ಯರ ಹೆಸರು : ಶ್ರೀ ಕೃಷ್ಣ ಭೈರೇಗೌಡ (ಬ್ಯಾಟರಾಯನಪುರ)
3) ಉತ್ತರಿಸುವ ದಿನಾಂಕ: : 25/09/2020
4) ಉತ್ತರಿಸುವ ಸಚಿವರ ಹೆಸರು : ಮಾನ್ಯ ಮುಖ್ಯ ಮಂತ್ರಿಗಳು

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಅಕ್ರಮ ಸರಕು ಸಾಗಾಣಿಕೆಯಲ್ಲಿ ಇ-ವೇ ಬಿಲ್ ದುರ್ಬಳಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಗಮನಕ್ಕೆ ಬಂದಿರುತ್ತದೆ.</td></tr>
<tr><td>ಆ)</td><td>ಬಂದಿದ್ದಲ್ಲಿ; ಅಕ್ರಮ ಸರಕು ಸಾಗಾಣಿಕೆ ಸಂಬಂಧ ಈವರೆವಿಗೂ ಎಷ್ಟು ದಂಡ ವಿಧಿಸಲಾಗಿದೆ ಹಾಗೂ ಇಲ್ಲಿಯವರೆವಿಗೂ ಎಷ್ಟು ಮೊಕದ್ದಮೆಯನ್ನು ದಾಖಲಿಸಿಕೊಳ್ಳಲಾಗಿದೆ:</td><td>
<table>
<tr><th rowspan="2">ವಿವರಗಳು</th><th colspan="2">2018-19</th><th colspan="2">2019-20</th><th colspan="2">2020-21 (ಏಪ್ರಿಲ್-ಆಗಸ್ಟ್)</th><th colspan="2">ಒಟ್ಟು</th></tr>
<tr><th>ದಂಡ (ರೂ. ಲಕ್ಷಗಳಲ್ಲಿ)</th><th>ಮೊಕದ್ದಮೆ ಸಂಖ್ಯೆ</th><th>ದಂಡ (ರೂ. ಲಕ್ಷಗಳಲ್ಲಿ)</th><th>ಮೊಕದ್ದಮೆ ಸಂಖ್ಯೆ</th><th>ದಂಡ (ರೂ. ಲಕ್ಷಗಳಲ್ಲಿ)</th><th>ಮೊಕದ್ದಮೆ ಸಂಖ್ಯೆ</th><th>ದಂಡ (ರೂ. ಲಕ್ಷಗಳಲ್ಲಿ)</th><th>ಮೊಕದ್ದಮೆ ಸಂಖ್ಯೆ</th></tr>
<tr><td>ಇ-ವೇ ಬಿಲ್ ದುರ್ಬಳಕೆ ಪ್ರಕರಣಗಳು</td><td>1391.47</td><td>1,677</td><td>1815.11</td><td>1,966</td><td>610.43</td><td>672</td><td>3817.01</td><td>4,315</td></tr>
<tr><td>ಒಟ್ಟು ಪ್ರಕರಣಗಳು</td><td>7001.19</td><td>8,420</td><td>8891.06</td><td>9,907</td><td>3484.11</td><td>4,101</td><td>19376.36</td><td>22,428</td></tr>
</table>
</td></tr>
<tr><td>ಇ)</td><td>ಸರಕು ಸಾಗಾಣಿಕೆ ಅಕ್ರಮ ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು)</td><td>ಅಕ್ರಮ ಸರಕು ಸಾಗಾಣಿಕೆ ತಡೆಗಟ್ಟಲು ರಾಜ್ಯಾದ್ಯಂತ ವಾಣಿಜ್ಯ ತೆರಿಗೆ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಯವರು ದಿನದ 24 ಘಂಟೆ ವಿವಿಧ ಪಾಳಿಗಳಲ್ಲಿ ಒಟ್ಟು 87 ತಂಡಗಳಾಗಿ ಜಾಗೃತಿ ಕಾರ್ಯ ನಿರ್ವಹಿಸುತ್ತಿರುತ್ತಾರೆ.

ಅಕ್ರಮ ಸರಕು ಸಾಗಾಣಿಕೆಯಲ್ಲಿ ತೊಡಗಿರುವ 23 ಸರಕು ವಾಹನಗಳಿಗೆ ಪರವಾನಗಿ ರದ್ದು ಮಾಡಲು ಸಂಬಂಧಿಸಿದ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಪತ್ರ ಬರೆಯಲಾಗಿದ್ದು, ಸಂಬಂಧಿಸಿದಂತೆ ಈ ವಾಹನಗಳಿಗೆ ರಹದಾರಿ ಮತ್ತು ನೋಂದಣಿಯನ್ನು 4 ತಿಂಗಳವರೆಗೆ ಅಮಾನತ್ತಿನಲ್ಲಿರಿಸಲು ಸಾರಿಗೆ ಆಯುಕ್ತರವರು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿರುತ್ತಾರೆ.</td></tr>
</table>

ಸಂಖ್ಯೆ: ಆಇ 61 ಸಿಐಸ್ಎಲ್ 2020

(ಬಿ.ಎಸ್. ಯಡಿಯೂರಪ್ಪ)
ಮುಖ್ಯ ಮಂತ್ರಿ.

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರು : ಡಾ॥ ಅವಿನಾಶ್ ಉಮೇಶ್ ಜಾಧವ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1702

ಉತ್ತರಿಸಬೇಕಾದ ದಿನಾಂಕ : 25.09.2020

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಸಾಲ ಮನ್ನಾ ಯೋಜನೆಯಡಿಯಲ್ಲಿ ಕಲಬುರಗಿ ಜಿಲ್ಲೆ ಚಿಂಚೋಳಿ ವಿಧಾನಸಭಾ ಮತಕ್ಷೇತ್ರ ವ್ಯಾಪ್ತಿಯಲ್ಲಿ ಎಷ್ಟು ಜನ ರೈತರಿಗೆ ಪ್ರಯೋಜನವಾಗಿದೆ;	ಸಾಲ ಮನ್ನಾ ಯೋಜನೆಯಡಿಯಲ್ಲಿ ಕಲಬುರಗಿ ಜಿಲ್ಲೆ ಚಿಂಚೋಳಿ ವಿಧಾನ ಸಭಾ ಮತಕ್ಷೇತ್ರ ವ್ಯಾಪ್ತಿಯಲ್ಲಿ 3,942 ಜನ ರೈತರಿಗೆ ಪ್ರಯೋಜನವಾಗಿದೆ.
ಆ)	ಸಹಕಾರಿ ಸಾಲಮನ್ನಾ ಪ್ರಯೋಜನ ಪಡೆದ ರೈತರು, ರಾಷ್ಟ್ರೀಕೃತ ಬ್ಯಾಂಕಿನ ಸಾಲ ಮನ್ನಾದ ಪ್ರಯೋಜನ ಪಡೆಯಲು ಅರ್ಹರೆ; (ಸಂಪೂರ್ಣ ಮಾಹಿತಿ ಒದಗಿಸುವುದು)	ಸಹಕಾರಿ ಸಾಲಮನ್ನಾ ಪ್ರಯೋಜನ ಪಡೆದ ರೈತರು, ರಾಷ್ಟ್ರೀಕೃತ ಬ್ಯಾಂಕಿನ ಸಾಲ ಮನ್ನಾದ ಪ್ರಯೋಜನ ಪಡೆಯಲು ಅರ್ಹರಿರುವುದಿಲ್ಲ. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 08 ಸಿಎಎಂ 2018 (ಭಾ) ಬೆಂಗಳೂರು, ದಿ:06-09-2018ರ ಕ್ರ.ಸಂ 4ರ ಅಂಶ.7 ರನ್ವಯ ರಾಜ್ಯದ ಸಹಕಾರ ಸಂಸ್ಥೆ/ ಬ್ಯಾಂಕುಗಳಿಗೆ ಘೋಷಿಸಿರುವ ಬೆಳೆ ಸಾಲಮನ್ನಾ ಯೋಜನೆಯ ಫಲಾನುಭವಿಗಳು ಈ ಯೋಜನೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ.

ಸಂಖ್ಯೆ: ಸಿಒ 341 ಸಿಎಲ್‌ಎಸ್ 2020

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ	: 1703
ಸದಸ್ಯರ ಹೆಸರು	: ಶ್ರೀ ರಾಜೀವ್ ಪಿ. (ಕುಡಚಿ)
ಉತ್ತರಿಸಬೇಕಾದ ದಿನಾಂಕ	: 25-09-2020
ಉತ್ತರಿಸುವವರು	: ನಗರಾಭಿವೃದ್ಧಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬೆಳಗಾವಿ ಜಿಲ್ಲೆಯ ಹಾರೂಗೇರಿ ಮತ್ತು ಮುಗಳಖೋಡ ಪಟ್ಟಣಗಳಿಗೆ ಕೃಷ್ಣಾ ನದಿ ಮೂಲದಿಂದ ಸಂಯುಕ್ತ ನೀರು ಸರಬರಾಜು ವ್ಯವಸ್ಥೆ ಕಲ್ಪಿಸುವ ಯೋಜನೆಗೆ ಪ್ರಸ್ತಾವನೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿದೆ.
ಆ)	ಬದಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಯೋಜನೆಗೆ ಮಂಜೂರಾತಿ ನೀಡಲಾಗುವುದು;	ಬೆಳಗಾವಿ ಜಿಲ್ಲೆಯ ಹಾರೂಗೇರಿ ಮತ್ತು ಮುಗಳಖೋಡ ಪಟ್ಟಣಗಳಿಗೆ ಕೃಷ್ಣಾ ನದಿಯಿಂದ ಸಂಯುಕ್ತ ನೀರು ಸರಬರಾಜು ವ್ಯವಸ್ಥೆ ಕಲ್ಪಿಸಲು ರೂ.16850.00 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಪ್ರಸ್ತಾವನೆಯು ದಿನಾಂಕ 18.05.2020 ರಂದು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಸ್ವೀಕೃತವಾಗಿದ್ದು, ಸದರಿ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.
ಇ)	ಇದುವರೆಗೂ ಈ ಯೋಜನೆ ಪ್ರಾರಂಭಿಸದೇ ಇರಲು ಕಾರಣವೇನು; (ವಿವರ ಒದಗಿಸುವುದು)	

ಸಂಖ್ಯೆ ನಅಇ 126 ಯುಎಂಎಸ್ 2020

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1704
ಸದಸ್ಯರ ಹೆಸರು	:	ಶ್ರೀ ರಾಜೀವ್ ಪಿ. (ಕುಡಚಿ)
ಉತ್ತರಿಸಬೇಕಾದ ದಿನಾಂಕ	:	25-09-2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	ಕುಡಚಿ ಮತಕ್ಷೇತ್ರದಲ್ಲಿರುವ ಹಾರೋಗೇರಿ ಮತ್ತು ಮುಗಳಖೋಡ ಪುರಸಭೆಗಳು ಸ್ವಂತ ಕಟ್ಟಡಗಳಿಲ್ಲದೇ ಚಿಕ್ಕ ಕೊಠಡಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
ಆ.	ಸದರಿ ಪುರಸಭೆಗಳ ಕಟ್ಟಡ ನಿರ್ಮಾಣಕ್ಕಾಗಿ ಅನುದಾನ ಬಿಡುಗಡೆ ಮಾಡದಿರಲು ಕಾರಣಗಳೇನು;	**ಹಾರೋಗೇರಿ ಪುರಸಭೆ:-** ಹಾರೋಗೇರಿ ಪುರಸಭೆಯ ಹೊಸಕಛೇರಿ ಕಟ್ಟಡ ನಿರ್ಮಾಣಕ್ಕೆ ಅನುದಾನ ಲಭ್ಯತೆಯನ್ನಾಧರಿಸಿ, ಮುಂದಿನ ಕ್ರಮವಹಿಸಲಾಗುವುದು.
ಇ.	ಕಟ್ಟಡ ನಿರ್ಮಾಣಕ್ಕಾಗಿ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು? (ವಿವರ ನೀಡುವುದು)	**ಮುಗಳಖೋಡ ಪುರಸಭೆ:-** ಮುಗಳಖೊಡ ಪುರಸಭೆಯು ಗ್ರಾಮಪಂಚಾಯ್ತಿಯ ಕಟ್ಟಡದಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿದ್ದು, ಕಛೇರಿ ಕಟ್ಟಡ ನಿರ್ಮಾಣ ಕಾಮಗಾರಿಗಾಗಿ ಯಾವುದೇ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ.

ಕಡತ ಸಂಖ್ಯೆ:ನಅಇ 300 ಎಸ್.ಎಫ್.ಸಿ 2020

(ಡಾ|| ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಹಾಗೂ
ರೇಷ್ಮೆ ಸಚಿವರು

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು	: ಶ್ರೀ ಮಹದೇವ ಕೆ. (ಪಿರಿಯಾಪಟ್ಟಣ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 1710
ಉತ್ತರಿಸಬೇಕಾದ ದಿನಾಂಕ	: 25-09-2020
ಉತ್ತರಿಸಬೇಕಾದವರು	: ನಗರಾಭಿವೃದ್ಧಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಪಿರಿಯಾಪಟ್ಟಣ ಪುರಸಭೆ ಸುಮಾರು 25000 ಜನಸಂಖ್ಯೆ ಹೊಂದಿರುವ ಪಟ್ಟಣವಾಗಿದ್ದು, ಹಾಲಿ ನೀರು ಸರಬರಾಜು ಯೋಜನೆಯಿಂದ ಸಮರ್ಪಕವಾಗಿ ನೀರು ಪೂರೈಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿದೆ.
ಆ)	ಹಾಗಿದ್ದಲ್ಲಿ, ಈ ಯೋಜನೆಗೆ ಕಾವೇರಿ ನದಿಯಿಂದ 2ನೇ ಹಂತದ ನೀರು ಸರಬರಾಜು ಯೋಜನೆಯ ರೂ.67.30 ಕೋಟಿ ಅಂದಾಜು ಪಟ್ಟಿಗೆ ಯಾವಾಗ ಅನುಮೋದನೆ ಪಡೆದು ಅನುಷ್ಠಾನಗೊಳಿಸಲಾಗುವುದು?	ಪಿರಿಯಾಪಟ್ಟಣಕ್ಕೆ ಕಾವೇರಿ ನದಿ ಮೂಲದಿಂದ 2ನೇ ಹಂತದ ನೀರು ಸರಬರಾಜು ಮಾಡಲು ರೂ.67.30 ಕೋಟಿಗಳಿಗೆ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ದಿ:13-02-2015 ರಂದು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತದೆ. ಆದರೆ, ಅನುದಾನದ ಕೊರತೆಯಿಂದ ಸದರಿ ಪ್ರಸ್ತಾವನೆಯನ್ನು ದಿನಾಂಕ 03.11.2015 ರಂದು ತಿರಸ್ಕರಿಸಲಾಗಿದೆ. ಪುರಸಭೆಯ ಕೋರಿಕೆಯಂತೆ, ಕಾವೇರಿ ನದಿಯ ಮುತ್ತಿನ ಮುಳಸೋಗೆ ಹತ್ತಿರದಿಂದ ನೀರು ಸರಬರಾಜು ಮಾಡಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಯೋಜನೆಯನ್ನು ರೂಪಿಸುತ್ತಿದ್ದು, ಪ್ರಸ್ತಾವನೆಯು ಸ್ವೀಕೃತವಾದ ನಂತರ ಆಡಳಿತಾತ್ಮಕ ಅನುಮೋದನೆ ನೀಡಲು ಕ್ರಮವಹಿಸಲಾಗುವುದು.

ಸಂಖ್ಯೆ ನಅಇ 127 ಯುಎಂಎಸ್ 2020

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1717
ಸದಸ್ಯರ ಹೆಸರು	:	ಶ್ರೀ ನರೇಂದ್ರ ಆರ್. (ಹನೂರು)
ಉತ್ತರಿಸಬೇಕಾದ ದಿನಾಂಕ	:	25-09-2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	ಚಾಮರಾಜನಗರ ಜಿಲ್ಲೆಯ ಹನೂರು ಪಟ್ಟಣ ಪಂಚಾಯ್ತಿಯಾಗಿ ಹಲವು ವರ್ಷಗಳಾದರೂ ಇದುವರೆಗೂ ಈ ಪಟ್ಟಣ ಪಂಚಾಯ್ತಿ ಆಡಳಿತ ನಡೆಸಲು ಸ್ವಂತ ಕಟ್ಟಡ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
ಆ.	ಬಂದಿದ್ದಲ್ಲಿ, ಸ್ವಂತ ಕಟ್ಟಡ ನಿರ್ಮಿಸಲು ಸರ್ಕಾರ ಅನುದಾನ ಮಂಜೂರು ಮಾಡಲು ತೆಗೆದುಕೊಂಡ ಕ್ರಮಗಳೇನು? (ವಿವರ ನೀಡುವುದು)	ಸರ್ಕಾರದ ಆದೇಶ ಸಂಖ್ಯೆ: ನಅಇ 160 ಎಸ್.ಎಫ್.ಸಿ 2016, ದಿನಾಂಕ: 15.06.2016ರಲ್ಲಿ ಹನೂರು ಪಟ್ಟಣ ಪಂಚಾಯಿತಿ ಕಛೇರಿ ಕಟ್ಟಡ ನಿರ್ಮಾಣ ಮಾಡಲು ರನ್ವಯ ರೂ.100.00 ಲಕ್ಷಗಳ ಅನುದಾನವನ್ನು ಬಿಡುಗಡೆಗೊಳಿಸಿ ಆದೇಶಿಸಲಾಗಿರುತ್ತದೆ. ಮುಂದುವರೆದು, ಹನೂರು ಪಟ್ಟಣ ಪಂಚಾಯಿತಿ ಕಟ್ಟಡ ನಿರ್ಮಾಣಕ್ಕೆ ಬಿಡುಗಡೆಯಾಗಿರುವ ರೂ.100.00 ಲಕ್ಷಗಳ ಅನುದಾನವನ್ನು ಹೊರತುಪಡಿಸಿ, ಹೆಚ್ಚುವರಿಯಾಗಿ ರೂ.250.00 ಲಕ್ಷಗಳನ್ನು ಮಂಜೂರು ಮಾಡಲು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಈ ಬಗ್ಗೆ ಪರಿಶೀಲಿಸಿ, ಆರ್ಥಿಕ ಇಲಾಖೆಯ ನಿರ್ದೇಶದನುಸಾರ ಎಸ್.ಎಫ್.ಸಿ ವಿಶೇಷ ಅನುದಾನವು ತೀವ್ರ ಕೊರತೆಯಲ್ಲಿರುವುದರಿಂದ ಈ ಪ್ರಸ್ತಾವನೆಯನ್ನು ಕೈಬಿಡಲಾಗಿರುತ್ತದೆ.

ಕಡತ ಸಂಖ್ಯೆ:ನಅಇ 302 ಎಸ್.ಎಫ್.ಸಿ 2020

(ಡಾ|| ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಮತ್ತು
ರೇಷ್ಮೆ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1721
ಸದಸ್ಯರ ಹೆಸರು	:	ಶ್ರೀ ಪಾಟೀಲ್ ಎಂ.ಬಿ. (ಬಬಲೇಶ್ವರ)
ಉತ್ತರಿಸಬೇಕಾದ ದಿನಾಂಕ	:	25.09.2020
ಉತ್ತರಿಸುವವರು	:	ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	2018-19ನೇ ಸಾಲಿನ ಆಯವ್ಯಯದಲ್ಲಿ ಘೋಷಣೆ ಮಾಡಿದಂತೆ, ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ತೆಂಗಿನ ನಾರಿನ ವಲಯಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕುಶಲಕರ್ಮಿಗಳು ಅಲ್ಪ ಪ್ರಮಾಣದ ವೇತನವನ್ನು ಪಡೆಯುತ್ತಿದ್ದು, ಇವರುಗಳನ್ನು ಉತ್ತೇಜಿಸುವ ಸಲುವಾಗಿ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಪ್ರತಿ ಕುಶಲಕರ್ಮಿಗೆ ವಾರ್ಷಿಕ ರೂ.10,000ಗಳಂತೆ ಪ್ರೋತ್ಸಾಹ ವೇತನ ನೀಡಲು ಸರ್ಕಾರ ಉದ್ದೇಶಿಸಿದೆಯೇ;	2018-19ನೇ ಸಾಲಿನ ಆಯವ್ಯಯದಲ್ಲಿ ಘೋಷಣೆ ಮಾಡಿದಂತೆ, ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ತೆಂಗಿನ ನಾರಿನ ವಲಯಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕುಶಲಕರ್ಮಿಗಳು ಅಲ್ಪ ಪ್ರಮಾಣದ ವೇತನವನ್ನು ಪಡೆಯುತ್ತಿದ್ದು, ಇವರುಗಳನ್ನು ಉತ್ತೇಜಿಸುವ ಸಲುವಾಗಿ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಪ್ರತಿ ಕುಶಲಕರ್ಮಿಗೆ ವಾರ್ಷಿಕ ರೂ.10,000/-ಗಳಂತೆ ಪ್ರೋತ್ಸಾಹ ವೇತನ ನೀಡಲಾಗುತ್ತಿದೆ.
ಆ)	ಹಾಗಿದ್ದಲ್ಲಿ, ಇದು ಅನುಷ್ಠಾನಗೊಂಡಿದೆಯೇ; ಅನುಷ್ಠಾನಗೊಂಡಿದ್ದಲ್ಲಿ ಎಷ್ಟು ಜನ ಫಲಾನುಭವಿಗಳು ಇದರ ಪ್ರಯೋಜನ ಪಡೆದುಕೊಂಡಿರುತ್ತಾರೆ;	ಸದರಿ ಯೋಜನೆಯು ಅನುಷ್ಠಾನವಾಗುತ್ತಿದ್ದು, 2019-20ನೇ ಸಾಲಿನ ಅಂತ್ಯದವರೆಗೆ 53 ಫಲಾನುಭವಿಗಳು ಇದರ ಪ್ರಯೋಜನ ಪಡೆದುಕೊಂಡಿರುತ್ತಾರೆ.
ಇ)	ಅನುಷ್ಠಾನಗೊಳಿಸದೇ ಇದ್ದಲ್ಲಿ ಕಾರಣಗಳೇನು? (ಸಂಪೂರ್ಣ ವಿವರ ನೀಡುವುದು)	ಅನ್ವಯಿಸುವುದಿಲ್ಲ.

ಸಿಐ 120 ಸಿಎಸ್‌ಸಿ 2020

(ಜಗದೀಶ ಶೆಟ್ಟರ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 216
2. ಸದಸ್ಯರ ಹೆಸರು : ಶ್ರೀ ರಾಜಕುಮಾರ್ ಪಾಟೀಲ್ (ಸೇಡಂ)
3. ಉತ್ತರಿಸಬೇಕಾದ ದಿನಾಂಕ : 25.09.2020
4. ಉತ್ತರಿಸುವ ಸಚಿವರು : ಸಹಕಾರ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಕಲಬುರಗಿ ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ರೈತರು ಬೆಳೆದಿದ್ದ ಹೆಸರು ಮತ್ತು ಉದ್ದು ಬೆಳೆಯು ಹಾನಿಗೊಳಗಾಗಿದ್ದು, ಸದರಿ ಬೆಳೆಗಳಿಗೆ ಬೆಂಬಲ ಬೆಲೆ ಸಿಗದಿರುವುದರಿಂದ ರೈತರು ಸಂಕಷ್ಟ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿದೆ
ಆ	ಬಂದಿದ್ದಲ್ಲಿ, ರೈತರು ಬೆಳೆದ ಬೆಳೆಗಳ ಖರೀದಿಗಾಗಿ ಸರ್ಕಾರದ ವತಿಯಿಂದ ಖರೀದಿ ಕೇಂದ್ರ ತೆರೆಯಲು ಉದ್ದೇಶಿಸಿದೆಯೇ;	ಹೌದು
ಇ	ಉದ್ದೇಶಿಸಿದ್ದಲ್ಲಿ, ಖರೀದಿ ಕೇಂದ್ರವನ್ನು ಯಾವಾಗ ಪ್ರಾರಂಭ ಮಾಡಲಾಗುವುದು?	**ಹೆಸರುಕಾಳು:** ➢ ಕೇಂದ್ರ ಸರ್ಕಾರವು ನಿಗದಿಪಡಿಸಿರುವ ಬೆಂಬಲ ಬೆಲೆ ಪ್ರತಿ ಕ್ವಿಂಟಾಲ್‌ಗೆ ರೂ.7196/- ರಂತೆ ಎಫ್.ಎ.ಕ್ಯೂ ಗುಣಮಟ್ಟದ ಹೆಸರುಕಾಳು ಖರೀದಿಸಲು ರಾಜ್ಯ ಸರ್ಕಾರವು ದಿನಾಂಕ:15.09.2020ರಂದು ಅನುಮತಿ ನೀಡಿ ಆದೇಶ ಹೊರಡಿಸಿ, ರೈತ ನೊಂದಣಿ ಕಾಲಾವಧಿಯನ್ನು 30 ದಿನಗಳವರೆಗೆ ಹಾಗೂ ನೊಂದಣಿ ಕಾರ್ಯದ ಜೊತೆಯಲ್ಲಿಯೇ ಖರೀದಿ ಕಾಲಾವಧಿಯನ್ನು 60 ದಿನಗಳವರೆಗೆ ನಿಗದಿಪಡಿಸಿ ಹೆಸರುಕಾಳು ಬೆಳೆಯುವ ಪ್ರಮುಖ ಜಿಲ್ಲೆಗಳಾದ ಗದಗ, ಧಾರವಾಡ, ಹಾವೇರಿ, ಬೆಳಗಾವಿ, ವಿಜಯಪುರ, ಬಾಗಲಕೋಟೆ, ಕೊಪ್ಪಳ ಕಲಬುರಗಿ, ಯಾದಗಿರಿ ಹಾಗೂ ಬೀದರ್ ಜಿಲ್ಲೆಗಳಲ್ಲಿ ಖರೀದಿಸಲು ಕ್ರಮ ವಹಿಸಲಾಗಿದೆ. ➢ ಹೆಸರುಕಾಳನ್ನು ಸಧೃಡ PACS, FPO ಹಾಗೂ TAPCMS ಮೂಲಕ ಖರೀದಿಸಲು ಜಿಲ್ಲಾವಾರು ಉತ್ಪಾದನಾ ಆಧಾರದ ಮೇಲೆ ಮತ್ತು ರೈತರ ನೋಂದಣಿ ಆಧಾರದ ಮೇರೆಗೆ ಖರೀದಿ ಕೇಂದ್ರಗಳನ್ನು ತೆರೆಯಲು ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿಗೆ ಸೂಚಿಸಲಾಗಿರುತ್ತದೆ.

		ಉದ್ದಿನಕಾಳು ➢ ಕೇಂದ್ರ ಸರ್ಕಾರವು ನಿಗಧಿಪಡಿಸಿರುವ ಬೆಂಬಲ ಬೆಲೆ ಪ್ರತಿ ಕ್ವಿಂಟಾಲ್‌ಗೆ ರೂ.6000/- ರಂತೆ ಎಫ್.ಎ.ಕ್ಯೂ ಗುಣಮಟ್ಟದ ಉದ್ದಿನಕಾಳನ್ನು ಖರೀದಿಸಲು ರಾಜ್ಯ ಸರ್ಕಾರವು ದಿನಾಂಕ:15.09.2020ರಂದು ಅನುಮತಿ ನೀಡಿ ಆದೇಶ ಹೊರಡಿಸಿ, ರೈತ ನೊಂದಣಿ ಕಾಲಾವಧಿಯನ್ನು 30 ದಿನಗಳವರೆಗೆ ಹಾಗೂ ನೊಂದಣಿ ಕಾರ್ಯದ ಜೊತೆಯಲ್ಲಿಯೇ ಖರೀದಿ ಕಾಲಾವಧಿಯನ್ನು 60 ದಿನಗಳವರೆಗೆ ನಿಗದಿಪಡಿಸಿ ಉದ್ದಿನಕಾಳು ಬೆಳೆಯುವ ಪ್ರಮುಖ ಜಿಲ್ಲೆಗಳಾದ ಧಾರವಾಡ, ಕಲಬುರಗಿ, ಬೆಳಗಾವಿ, ಬೀದರ್ ಮತ್ತು ಮೈಸೂರು ಜಿಲ್ಲೆಗಳಲ್ಲಿ ಖರೀದಿಸಲು ಕ್ರಮ ವಹಿಸಲಾಗಿದೆ. ➢ ಉದ್ದಿನಕಾಳನ್ನು ಸಧೃಡ PACS, FPO ಹಾಗೂ TAPCMS ಮೂಲಕ ಉದ್ದಿನಕಾಳು ಖರೀದಿಸಲು ಜಿಲ್ಲಾವಾರು ಉತ್ಪಾದನಾ ಆಧಾರದ ಮೇಲೆ ಮತ್ತು ರೈತರ ನೋಂದಣಿ ಆಧಾರದ ಮೇರೆಗೆ ಖರೀದಿ ಕೇಂದ್ರಗಳನ್ನು ತೆರೆಯಲು ಜಿಲ್ಲಾ ಟಾಸ್ಕ್ ಪೋರ್ಸ್ ಸಮಿತಿಗೆ ಸೂಚಿಸಲಾಗಿರುತ್ತದೆ.

ಸಇ 483 ಎಂಆರ್‌ಇ 2020

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 493
2. ಸದಸ್ಯರ ಹೆಸರು : ಶ್ರೀ ನಿಸರ್ಗ ನಾರಾಯಣ ಸ್ವಾಮಿ ಎಲ್.ಎನ್. (ದೇವನಹಳ್ಳಿ)
3. ಉತ್ತರಿಸುವ ದಿನಾಂಕ : 25.09.2020
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ.	ದೇವನಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಚನ್ನರಾಯಪಟ್ಟಣ ಹೋಬಳಿಯಲ್ಲಿ ಕೈಗಾರಿಕೆಗಳ ಸ್ಥಾಪನೆಗಾಗಿ ಕೆ.ಐ.ಎ.ಡಿ.ಬಿ.ಯಿಂದ ಜಮೀನು ಭೂಸ್ವಾಧೀನ ಪಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಬಂದಿದ್ದಲ್ಲಿ ಪೂರ್ಣ ಮಾಹಿತಿ ನೀಡುವುದು)	ದೇವನಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಚನ್ನರಾಯಪಟ್ಟಣ ಹೋಬಳಿಯಲ್ಲಿ ಕೈಗಾರಿಕಾ ಪ್ರದೇಶ ಸ್ಥಾಪನೆಗಾಗಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಸ್ವಾಧೀನಪಡಿಸಿಕೊಂಡಿರುವ ಜಮೀನುಗಳ ವಿವರ ಕೆಳಗಿನಂತಿವೆ

ಕ್ರ. ಸಂ	ಗ್ರಾಮ	ಸ್ವಾಧೀನಪಡಿಸಿರುವ ಒಟ್ಟು ವಿಸ್ತೀರ್ಣ (ಎ-ಗು)
1	ಜೊನ್ನಹಳ್ಳಿ	116-21
	ಬಾಲದಿಮ್ಮನಹಳ್ಳಿ	162-28
	ಕವಡದಾಸನಹಳ್ಳಿ	173-27
	ಛತ್ರಮಾರನಹಳ್ಳಿ	103-36
2	ಪಾಳ್ಯ	197-23
	ನಾಗನಾಯಕನಹಳ್ಳಿ	169-17
	ಮುದ್ದೇನಹಳ್ಳಿ	195-01
	ಹರಳೂರು	316-05
	ಪೋಲನಹಳ್ಳಿ	323-39
	ಒಟ್ಟು	1758-37

ಕ್ರ.ಸಂ.	ಪ್ರಶ್ನೆ	ಉತ್ತರ
ಆ.	ಹಾಗಾದರೆ, ಈಗಾಗಲೇ ಸ್ವಾಧೀನಪಡಿಸಿಕೊಂಡಿರುವ ಜಮೀನು ಎಷ್ಟು; ಯಾವ್ಯಾವ ಗ್ರಾಮಗಳಲ್ಲಿ ಎಷ್ಟೆಷ್ಟು ಎಕರೆ ಜಮೀನು ಸ್ವಾಧೀನ	ಮೇಲಿನಂತೆ ಸ್ವಾಧೀನಪಡಿಸಿಕೊಂಡಿರುವ ಜಮೀನುಗಳಿಗೆ ಎಕರೆ ಒಂದಕ್ಕೆ ನಿಗದಿಪಡಿಸಲಾಗಿರುವ ಪರಿಹಾರ ದರದ ವಿವರ ಮತ್ತು ಪರಿಹಾರ ಪಾವತಿ ವಿವರಗಳು ಕೆಳಗಿನಂತಿದೆ :-

<table>
<tr>
<td></td>
<td>ಪಡಿಸಿಕೊಳ್ಳಲಾಗಿದೆ, ನಿಗಧಿ ಮಾಡಿರುವ (1 ಎಕರೆಗೆ) ಪರಿಹಾರ ಎಷ್ಟು ಸದರಿ ರೈತರಿಗೆ ಹಣ ಸಂದಾಯ ಮಾಡಲಾಗಿದೆಯೇ; (ಗ್ರಾಮವಾರು ಮಾಹಿತಿ ನೀಡುವುದು)</td>
<td>
<table>
<tr><th>ಗ್ರಾಮ</th><th>ಸ್ವಾಧೀನಪಡಿಸಿರುವ ಒಟ್ಟು ವಿಸ್ತೀರ್ಣ</th><th>ಎಕರೆ ಒಂದಕ್ಕೆ ನಿಗದಿಪಡಿಸಿರುವ ಪರಿಹಾರ ದರ (ರೂ. ಲಕ್ಷಗಳಲ್ಲಿ)</th><th>ಪರಿಹಾರ ಪಾವತಿಸಿರುವ ಒಟ್ಟು ವಿಸ್ತೀರ್ಣ (ಎ-ಗು)</th></tr>
<tr><td>ಚೊನ್ನಹಳ್ಳಿ</td><td>116-21</td><td>55.00</td><td>116-21</td></tr>
<tr><td>ಬಾಲದಿಮ್ಮನಹಳ್ಳಿ</td><td>162-28</td><td>55.00</td><td>162-28</td></tr>
<tr><td>ಕವಡದಾಸನಹಳ್ಳಿ</td><td>173-27</td><td>55.00</td><td>173-27</td></tr>
<tr><td>ಭಟ್ರಮಾರನಹಳ್ಳಿ</td><td>103-36</td><td>55.00</td><td>103-36</td></tr>
<tr><td>ಪಾಳ್ಯ</td><td>197-23</td><td>110.00</td><td>49-03</td></tr>
<tr><td>ನಾಗನಾಯಕನಹಳ್ಳಿ</td><td>169-17</td><td>110.00</td><td>85-33</td></tr>
<tr><td>ಮುದ್ದೇನಹಳ್ಳಿ</td><td>195-01</td><td>110.00</td><td>67-03</td></tr>
<tr><td>ಪೋಲನಹಳ್ಳಿ</td><td>323-39</td><td>110.00</td><td>74-21</td></tr>
<tr><td>ಹರಳೂರು</td><td>316-05</td><td>150.00</td><td>97-30</td></tr>
<tr><td>ಒಟ್ಟು</td><td>1758-37</td><td>----</td><td>928-02</td></tr>
</table>
</td>
</tr>
<tr>
<td>ಇ.</td>
<td>ಸ್ವಾಧೀನ ಪಡಿಸಿಕೊಂಡ ಜಮೀನುಗಳಲ್ಲಿ ಸರ್ಕಾರಿ ಜಮೀನು ಎಷ್ಟು; ಹೆಚ್ಚುವರಿ ಜಮೀನು ಸ್ವಾಧೀನಪಡಿಸಿಕೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ; ಇದ್ದಲ್ಲಿ, ಯಾವ ಯಾವ ಗ್ರಾಮದಲ್ಲಿ ಸ್ವಾಧೀನಪಡಿಸಿಕೊಳ್ಳಲಾಗುವುದು? (ಗ್ರಾಮವಾರು ಪೂರ್ಣ ಮಾಹಿತಿ ನೀಡುವುದು)</td>
<td>ಒಟ್ಟು 1758-37 ಎಕರೆ ವಿಸ್ತೀರ್ಣದಲ್ಲಿ 891-04 ಎಕರೆ ಸರ್ಕಾರಿ ಜಮೀನಾಗಿರುತ್ತದೆ.

ದೇವನಹಳ್ಳಿ ತಾಲ್ಲೂಕಿನ ಮಲ್ಲೇಪುರ, ಚನ್ನರಾಯಪಟ್ಟಣ, ಪಾಳ್ಯ, ಮುದ್ದೇನಹಳ್ಳಿ, ನಲ್ಲಪ್ಪನಹಳ್ಳಿ, ನಲ್ಲೂರು, ಹರಳೂರು, ಪೋಲನಹಳ್ಳಿ, ಚೀಮಾಚನಹಳ್ಳಿ, ಮುಟಬಾರ್ಲು, ಗೋಕರಿಬಚೇನಹಳ್ಳಿ ಮತ್ತು ಶೋತ್ರತೆಲ್ಲೂಹಳ್ಳಿ ಗ್ರಾಮಗಳಲ್ಲಿನ ಸುಮಾರು 1500-00 ಎಕರೆ ಜಮೀನನ್ನು ಕೈಗಾರಿಕಾ ಪ್ರದೇಶಕ್ಕಾಗಿ ಹೆಚ್ಚುವರಿಯಾಗಿ ಭೂಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಲಾಗಿದೆ.</td>
</tr>
</table>

(ಜಗದೀಶ ಶೆಟ್ಟರ)

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಸಂಖ್ಯೆ: ಸಿಐ 165 ಐಎಪಿ (ಇ) 2020

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 497
ಸದಸ್ಯರ ಹೆಸರು : ಶ್ರೀ ಅಪ್ಪಚ್ಚು (ರಂಜನ್) ಎಂ.ಪಿ. (ಮಡಿಕೇರಿ)
ಉತ್ತರಿಸುವ ದಿನಾಂಕ : 25/09/2020
ಉತ್ತರಿಸುವ ಸಚಿವರು : ಮಾನ್ಯ ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

	ಪ್ರಶ್ನೆ	ಉತ್ತರ
ಅ	ಕೊಡಗು ಜಿಲ್ಲೆ ಕುಶಾಲನಗರ ಮತ್ತು ಸೋಮವಾರಪೇಟೆ ಪಟ್ಟಣ ಪಂಚಾಯಿತಿಯನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಈ ಬಗ್ಗೆ ಸರ್ಕಾರದ ನಿಲುವೇನು; (ವಿವರ ನೀಡುವುದು)	ಇರುವುದಿಲ್ಲ. ಈ ಪಟ್ಟಣ ಪಂಚಾಯಿತಿಗಳನ್ನು ಪುರಸಭೆಗಳನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು ಸೂಕ್ತ ಪ್ರಸ್ತಾವನೆ ಕಳುಹಿಸಿ ಕೊಡುವಂತೆ ಪೌರಾಡಳಿತ ನಿರ್ದೇಶನಾಲಯದಿಂದ ಜಿಲ್ಲಾಧಿಕಾರಿ, ಕೊಡಗು ಜಿಲ್ಲೆ ರವರನ್ನು ಕೋರಲಾಗಿದ್ದು, ಪೌರಾಡಳಿತ ನಿರ್ದೇಶನಾಲಯದಿಂದ ಪ್ರಸ್ತಾವನೆಯು ಸ್ವೀಕೃತವಾದಲ್ಲಿ, ನಿಯಮಾನುಸಾರ ಪರಿಶೀಲಿಸಿ ಕ್ರಮ ವಹಿಸಲಾಗುವುದು.
ಆ	ಕಳೆದ ಮೂರು ವರ್ಷಗಳಲ್ಲಿ ಜಿಲ್ಲೆಯಲ್ಲಿ ನಗರೋತ್ಥಾನ ಯೋಜನೆಯಡಿಯಲ್ಲಿ ಯಾವ ಪಟ್ಟಣ ಪಂಚಾಯಿತಿಗೆ ಎಷ್ಟೆಷ್ಟು ಅನುದಾನ ಬಿಡುಗಡೆಗೊಳಿಸಲಾಗಿದೆ? (ಕ್ಷೇತ್ರವಾರು ವಿವರ ನೀಡುವುದು)	ಕಳೆದ ಮೂರು ವರ್ಷಗಳಲ್ಲಿ ನಗರೋತ್ಥಾನ (ಮುನಿಸಿಪಾಲಿಟಿ)–3ನೇ ಹಂತದ ಯೋಜನೆಯಡಿ ಕೊಡಗು ಜಿಲ್ಲೆಯ ಕುಶಾಲನಗರ, ಸೋಮವಾರಪೇಟೆ ಮತ್ತು ವಿರಾಜಪೇಟೆ ಪಟ್ಟಣ ಪಂಚಾಯಿತಿಗಳಿಗೆ ಬಿಡುಗಡೆಯಾಗಿರುವ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಸಂಖ್ಯೆ:ನಅಇ 54 ಎಲ್ಎಕ್ಯೂ 2020.

(ಡಾ॥ ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

ಅನುಬಂಧ

ನಗರೋತ್ಥಾನ (ಮುನಿಸಿಪಾಲಿಟಿ)–3ನೇ ಹಂತದ ಯೋಜನೆ ಮತ್ತು ಕುಶಾಲನಗರ ಮತ್ತು ವಿರಾಜಪೇಟೆಗೆ ಶೇಕಡ 4 ರಷ್ಟು ಪ್ರೋತ್ಸಾಹಧನದ ಅನುದಾನ

(ರೂ. ಲಕ್ಷಗಳಲ್ಲಿ)

ಕ್ರಸಂ	ವಿಧಾನ ಸಭಾ ಕ್ಷೇತ್ರ	ನಗರ ಸ್ಥಳೀಯ ಸಂಸ್ಥೆಯ ಹೆಸರು	ಹಂಚಿಕೆಯಾದ ಅನುದಾನ	ಬಿಡುಗಡೆಗೊಳಿಸಿದ ಅನುದಾನ		
				2017–18	2018-19	2019-20
1	208– ಮಡಿಕೇರಿ ವಿಧಾನ ಸಭಾ ಕ್ಷೇತ್ರ	ಕುಶಾಲನಗರ ಪಟ್ಟಣ ಪಂಚಾಯಿತಿ	300.00	0.00	20.66	89.15
2		ಸೋಮವಾರಪೇಟೆ ಪಟ್ಟಣ ಪಂಚಾಯಿತಿ	200.00	0.00	0.00	52.61
3	209– ವಿರಾಜಪೇಟೆ ವಿಧಾನ ಸಭಾ ಕ್ಷೇತ್ರ	ವಿರಾಜಪೇಟೆ ಪಟ್ಟಣ ಪಂಚಾಯಿತಿ	300.00	0.00	75.72	52.14
ಒಟ್ಟು			**800.00**	**0.00**	**96.38**	**193.90**

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	510
ಸದಸ್ಯರ ಹೆಸರು	:	ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ)
ಉತ್ತರಿಸಬೇಕಾದ ದಿನಾಂಕ	:	25-09-2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	ಇಂಡಿ ಪಟ್ಟಣದ ಬೀದಿ ಬದಿಯ ವ್ಯಾಪಾರಿಗಳಿಗೆ ಅನುಕೂಲವಾಗುವಂತೆ ಹಾಗೂ ಪುರಸಭೆಗೂ ಆದಾಯ ಬರುವಂತೆ ಪುರಸಭೆಯ ಜಮೀನಿನಲ್ಲಿ ಮೆಘಾ ಮಾರುಕಟ್ಟೆ ನಿರ್ಮಾಣ ಮಾಡಲು ನೀಲಿ ನಕಾಶೆ ಹಾಗೂ ಅಂದಾಜು ಪತ್ರಿಕೆಯನ್ನು ತಯಾರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ.	ಹಾಗಿದ್ದಲ್ಲಿ, ಸದರಿಯೋಜನೆಗೆ ಪುರಸಭೆಯ ನಿವೇಶನದಲ್ಲಿಒಂದು ಮೆಘಾ ಮಾರ್ಕೆಟ್ ನಿರ್ಮಾಣ ಮಾಡಲು 2019-20ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನದಲ್ಲಿರೂ 8.00 ಕೋಟಿಗಳ ಅನುದಾನವನ್ನು ಮಂಜೂರು ಮಾಡಿರುವುದು ನಿಜವೇ;	ಇಂಡಿ ಪುರಸಭೆ ವ್ಯಾಪ್ತಿಯಲ್ಲಿ ಮೆಘಾ ಮಾರುಕಟ್ಟೆ ನಿರ್ಮಿಸಲು ಸರ್ಕಾರದ ಆದೇಶ ಸಂಖ್ಯೆ: ನಅಇ 03 ಎಸ್‌ಎಫ್‌ಸಿ 2019 ದಿ: 09-01-2019ರನ್ವಯ ರೂ.8.00 ಕೋಟಿ ವಿಶೇಷ ಅನುದಾನವನ್ನು ಮಂಜೂರು ಮಾಡಿ ಆದೇಶಿಸಿರುತ್ತದೆ
ಇ.	ಹಾಗಿದ್ದಲ್ಲಿ, ಸದರಿ ಮಂಜೂರಾಗಿದ್ದ ಅನುದಾನವನ್ನು ತಡೆಹಿಡಿಯಲು / ಹಿಂಪಡೆಯಲು / ರದ್ದುಪಡಿಸಲು ಕಾರಣಗಳೇನು; (ವಿವರ ನೀಡುವುದು)	ಎಸ್.ಎಫ್.ಸಿ ವಿಶೇಷ ಅನುದಾನದಡಿ ಕೈಗೊಳ್ಳುವ ಕಾಮಗಾರಿಗಳು ಇನ್ನೂ ಪ್ರಾರಂಭವಾಗಬೇಕಾಗಿರುವುದರ ಹಿನ್ನೆಲೆಯಲ್ಲಿ ಇಂಡಿ ಪುರಸಭೆಗೆ ಮಂಜೂರು ಮಾಡಲಾಗಿದ್ದ ರೂ.8.00 ಕೋಟಿ ವಿಶೇಷ ಅನುದಾನವನ್ನು ಆರ್ಥಿಕ ಇಲಾಖೆಯ ನಿರ್ದೇಶನದನ್ವಯ ಸರ್ಕಾರದ ಪತ್ರ ಸಂಖ್ಯೆ: ನಅಇ 222 ಎಸ್‌ಎಫ್‌ಸಿ 2019 ದಿ: 13-09-19ರನ್ವಯ ತಡೆಹಿಡಿಯಲಾಗಿರುತ್ತದೆ.
ಈ.	ಸದರಿ ಪುರಸಭೆಯ ಜಮೀನು/ ನಿವೇಶನದಲ್ಲಿ ಮೆಘಾ ಮಾರುಕಟ್ಟೆ ನಿರ್ಮಾಣ ಮಾಡಲು ಮಂಜೂರು ಮಾಡಲಾಗಿದ್ದ/ ತಡೆಹಿಡಿಯಲಾದ ರೂ.8.00 ಕೋಟಿ ವಿಶೇಷ ಅನುದಾನವನ್ನು ಪುನ: ಮಂಜೂರಾತಿ ನೀಡಿ, ಬೀದಿ ವ್ಯಾಪಾರಿಗಳಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಆಡಳಿತಾತ್ಮಕ ಅನುಮೋದನೆ ನೀಡಲು ಸರ್ಕಾರ ಆಸಕ್ತಿ ವಹಿಸಿದೆಯೇ;	ಈ ಬಗ್ಗೆ ಆರ್ಥಿಕ ಇಲಾಖೆಯು ಅನುದಾನವನ್ನು ಮರು ಮಂಜೂರು ಮಾಡಿದಲ್ಲಿ ಈ ಕುರಿತು, ಕ್ರಮವಹಿಸಲಾಗುವುದು.

ಉ.	ಈ ಮೆಘಾ ಮಾರುಕಟ್ಟೆ ನಿರ್ಮಾಣ ಮಾಡಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು; ಯಾವ ನಿಗಧಿತ ಕಾಲಾವಧಿಯೊಳಗೆ ಕಾಮಗಾರಿಯನ್ನು ಕೈಗೊಳ್ಳಲಾಗುವುದು; (ವಿವರ ನೀಡುವುದು)	
ಊ	ಸದರಿ ಮಾರ್ಕೆಟ್ ನಿರ್ಮಾಣಕ್ಕೆ ಎಸ್.ಎಫ್.ಸಿ ಅನುದಾನವಾಗಿ ರೂ.8.00 ಕೋಟಿಗಳನ್ನು ಮಂಜೂರು ಮಾಡಿದ್ದು ಪ್ರಯುಕ್ತವಾಗಿ ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ನಿಗಮ (ಕೆಯುಐಡಿಎಫ್‌ಸಿ) ವತಿಯಿಂದರೂ 21.00 ಕೋಟಿಗಳ ಮುಂಗಡ ಹಣ (ಲೋನ್ 70:30 ಹೊಂದಾಣಿಕೆ ಅನುದಾನ) ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಅಧ್ಯಕ್ಷರು, ಕರ್ನಾಟಕ ವಾಟರ್‌ಅಂಡ್ ಸ್ಯಾನಿಟೇಷನ್ ಪೂಲ್ಡ್ ಫಂಡ್‌ರವರು ಪತ್ರ ಸಂಖ್ಯೆ: ಕೆಡಬ್ಲ್ಯೂಎಸ್‌ಪಿಎಫ್‌ಟಿ/ಇಂಡಿ-ಟಿಎಂಸಿ/2018-19/ಕಾಮ್.ನಂ.3842/449/ 4734 ದಿ: 18-05-2020 ರನ್ವಯ ಇಂಡಿ ಪುರಸಭೆ ವ್ಯಾಪ್ತಿಯಲ್ಲಿ ಮೆಘಾ ಮಾರುಕಟ್ಟೆ ನಿರ್ಮಿಸಲು ರೂ.21.00 ಕೋಟಿಗಳ ಸಾಲವನ್ನು ಯು.ಐ.ಡಿ.ಎಫ್ ಯೋಜನೆಯಿಂದ ಮಂಜೂರು ಮಾಡಲಾಗಿರುತ್ತದೆ.
ಋ)	ಬಂದಿದ್ದಲ್ಲಿ, ಈಗಾಗಲೇ ಮಂಜೂರಾತಿ ನೀಡಿ ಹಿಂಪಡೆದಿರುವ / ರದ್ದುಪಡಿಸಿರುವ ರೂ 8.00 ಕೋಟಿಗಳ ವಿಶೇಷ ಎಸ್.ಎಫ್.ಸಿ ಅನುದಾನವನ್ನು ಮರು ಮಂಜೂರು ಮಾಡಲು ಸರ್ಕಾರ ಆಸಕ್ತಿ ವಹಿಸಿದೆಯೇ; ಈ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು?	ಈ ಬಗ್ಗೆ ಆರ್ಥಿಕ ಇಲಾಖೆಯು ಅನುದಾನವನ್ನು ಮರು ಮಂಜೂರು ಮಾಡಿದಲ್ಲಿ ಈ ಕುರಿತು, ಕ್ರಮವಹಿಸಲಾಗುವುದು.

ಕಡತ ಸಂಖ್ಯೆ:ನಅಇ 305 ಎಸ್.ಎಫ್.ಸಿ 2020

(ಡಾ|| ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಹಾಗೂ
ರೇಷ್ಮೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 515

ವಿಧಾನ ಸಭೆ ಸದಸ್ಯರ ಹೆಸರು : ಶ್ರೀ ಕುಮಾರಸ್ವಾಮಿ ಎಂ.ಪಿ (ಮೂಡಿಗೆರೆ)

ಉತ್ತರಿಸಬೇಕಾದ ದಿನಾಂಕ : 25.09.2020

ಉತ್ತರಿಸುವ ಸಚಿವರು : ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ಬಿ.ಪಿ.ಎಲ್ ಕಾರ್ಡ್ ಪಡೆಯಲು ಆದಾಯ ಮಿತಿಯನ್ನು ರೂ. 1,15,000 ವರೆಗೂ ಸೀಮಿತಗೊಳಿಸಿದ್ದು ಒಬ್ಬ ಬಡವ ಸೆಕೆಂಡ್ ಹ್ಯಾಂಡ್ ಕಾರ್‌ನ್ನು ರೂ. 50,000ಗೆ ಖರೀದಿಸಿದಲ್ಲಿ ಅವರ ಬಿ.ಪಿ.ಎಲ್ ಕಾರ್ಡ್‌ನ್ನು ರದ್ದುಪಡಿಸುವುದರಿಂದ ಬಡವನಿಗಾಗುತ್ತಿರುವ ಸಮಸ್ಯೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;	ಇಲ್ಲ ಬಿಪಿಎಲ್ (ಆದ್ಯತಾ) ಕುಟುಂಬಗಳನ್ನು ಗುರುತಿಸುವ ಸಲುವಾಗಿ ರಾಜ್ಯ ಸರ್ಕಾರವು 16-08-2016, 25-03-2017 ಹಾಗೂ 20-5-2017ಗಳಂದು ಹೊರಡಿಸಿರುವ ಆದೇಶದಲ್ಲಿ ಬಿಪಿಎಲ್ ವರ್ಗಕ್ಕೆ ಒಳಪಡದ (Exclusion Criteria) 04 ಮಾನದಂಡಗಳನ್ನು ಗುರುತಿಸಿ ಆದೇಶಿಸಿರುತ್ತದೆ. ಕೆಳಗಿನ ಈ 04 ಮಾನದಂಡಗಳಿಗೆ ಒಳಪಡದವರು ಬಿಪಿಎಲ್ ಪಡಿತರ ಚೀಟಿ ಪಡೆಯಲು ಅರ್ಹರಿರುತ್ತಾರೆ. 1. ಎಲ್ಲಾ ಖಾಯಂ ನೌಕರರು ಅಂದರೆ ಸರ್ಕಾರದ ಅಥವಾ ಸರ್ಕಾರದಿಂದ ಅನುದಾನವನ್ನು ಪಡೆಯುತ್ತಿರುವ ಸಂಸ್ಥೆಗಳು ಅಥವಾ ಸರ್ಕಾರಿ ಪ್ರಾಯೋಜಿತ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು/ ಮಂಡಳಿಗಳು/ನಿಗಮಗಳು/ಸ್ವಾಯತ್ತ ಸಂಸ್ಥೆಗಳು ಇತ್ಯಾದಿ ಒಳಗೊಂಡಂತೆ ಆದಾಯ ತೆರಿಗೆ/ಸೇವಾ ತೆರಿಗೆ/ವ್ಯಾಟ್/ವೃತ್ತಿ ತೆರಿಗೆ ಪಾವತಿಸುವ ಎಲ್ಲಾ ಕುಟುಂಬಗಳು. 2. ಗ್ರಾಮೀಣ ಪ್ರದೇಶದಲ್ಲಿ 3 ಹೆಕ್ಟೇರ್ ಒಣಭೂಮಿ ಅಥವಾ ತತ್ಸಮಾನ ನೀರಾವರಿ ಭೂಮಿ ಹೊಂದಿರುವ ಕುಟುಂಬಗಳು ಅಥವಾ ಗ್ರಾಮೀಣ ಪ್ರದೇಶದಲ್ಲಿ ಹೊರತುಪಡಿಸಿ ನಗರ ಪ್ರದೇಶಗಳಲ್ಲಿ 1000 ಚದರ ಅಡಿಗಿಂತಲೂ ಹೆಚ್ಚಿನ ವಿಸ್ತೀರ್ಣದ ಪಕ್ಕಾ ಮನೆಯನ್ನು ಸ್ವಂತವಾಗಿ ಹೊಂದಿರುವ ಕುಟುಂಬಗಳು. 3. ಜೀವನೋಪಾಯಕ್ಕಾಗಿ ಸ್ವತಃ ಓಡಿಸುವ ಒಂದು ವಾಣಿಜ್ಯ

		ವಾಹನವನ್ನು ಅಂದರೆ ಟ್ರ್ಯಾಕ್ಟರ್, ಮಾಕ್ಸಿಕ್ಯಾಬ್, ಟ್ಯಾಕ್ಸಿ ಇತ್ಯಾದಿಗಳನ್ನು ಹೊಂದಿದ ಕುಟುಂಬಗಳನ್ನು ಹೊರತುಪಡಿಸಿ ನಾಲ್ಕು ಚಕ್ರದ ವಾಹನವನ್ನು ಹೊಂದಿರುವ ಎಲ್ಲಾ ಕುಟುಂಬಗಳು. 4. ಕುಟುಂಬದ ವಾರ್ಷಿಕ ಆದಾಯವು ರೂ.1.20 ಲಕ್ಷಗಿಂತ ಹೆಚ್ಚಿಗೆ ಇರುವ ಕುಟುಂಬಗಳು. ಈ ರೀತಿ ಸರ್ಕಾರದಿಂದ ನಿಗಧಿಪಡಿಸಲಾಗಿರುವ ಮಾನದಂಡಗಳನ್ವಯ ಆದ್ಯತಾ (ಬಿಪಿಎಲ್) ಪಡಿತರ ಚೀಟಿಗಳನ್ನು ನೀಡಲಾಗುತ್ತಿದೆ.
ಆ	ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮದ ಬಗ್ಗೆ ಮಾಹಿತಿ ನೀಡುವುದು?	ಪ್ರಸ್ತುತ ಜಾರಿಯಲ್ಲಿರುವ ನಿಯಮಗಳನುಸಾರ ಬಿಪಿಎಲ್ ಪಡಿತರ ಚೀಟಿಗಳನ್ನು ವಿತರಿಸಲಾಗುತ್ತಿದೆ.

ಆನಾಸ 254 ಡಿಆರ್ಎ 2020 (ಇ-ಆಫೀಸ್)

(ಕೆ.ಗೋಪಾಲಯ್ಯ)

ಆಹಾರ, ನಾಗರಿಕ ಸರಬರಾಜು ಮತ್ತು

ಗ್ರಾಹಕರ ವ್ಯವಹಾರಗಳ ಹಾಗೂ

ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	616
ಸದಸ್ಯರ ಹೆಸರು	ಡಾ: ಅಂಜಲಿ ಹೇಮಂತ್ ನಿಂಬಾಳ್ಕರ್ (ಖಾನಾಪುರ)
ಉತ್ತರಿಸಬೇಕಾದ ದಿನಾಂಕ	25.09.2020.
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯಾದ್ಯಾಂತ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅನುಮತಿ ಇಲ್ಲದೆ ವಿವಿಧ ಗಣಿಗಾರಿಕೆಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿರುತ್ತದೆ.
ಆ)	ಹಾಗಿದ್ದಲ್ಲಿ, ಬೆಳಗಾವಿ ಜಿಲ್ಲೆಯಲ್ಲಿ ಇಲಾಖೆವತಿಯಿಂದ ಅನುಮತಿ ಪಡೆದು ನಡೆಸಲಾಗುತ್ತಿರುವ ವಿವಿಧ ಗಣಿಗಾರಿಕೆಗಳು ಯಾವುವು;	ಬೆಳಗಾವಿ ಜಿಲ್ಲಾ ವ್ಯಾಪ್ತಿಯಲ್ಲಿ ಪ್ರಧಾನ ಖನಿಜಗಳಾದ ಬಾಕ್ಸೈಟ್, ಸುಣ್ಣದ ಕಲ್ಲು ಮತ್ತು ಅಲ್ಯೂಮಿನಸ್, ಲ್ಯಾಟರೈಟ್ ಹಾಗೂ ಉಪಖನಿಜಗಳಾದ ಡೋಲೋಮೈಟ್, ಗ್ರೇ ಗ್ರಾನೈಟ್, ಸ್ಯಾಂಡ್ ಸ್ಟೋನ್, ಚೈನಾ ಕ್ಲೇ ನದಿಮರಳು ಮತ್ತು ಕಟ್ಟಡ ಕಲ್ಲುಗಣಿಗಾರಿಕೆಗಾಗಿ ಇಲಾಖೆಯಿಂದ ಗುತ್ತಿಗೆಗಳನ್ನು ಮಂಜೂರು ಮಾಡಲಾಗಿರುತ್ತದೆ.
ಇ)	ಕಳೆದ ಮೂರು ವರ್ಷಗಳಲ್ಲಿ ಅಕ್ರಮ ಗಣಿಗಾರಿಕೆಗಳ ಮೇಲೆ ಕ್ರಮ ಜರುಗಿಸಿರುವ ಪ್ರಕರಣಗಳೆಷ್ಟು; ಮತ್ತು ಅವು ಯಾವುವು?	ರಾಜ್ಯದಲ್ಲಿ ಅಕ್ರಮವಾಗಿ ಗಣಿಗಾರಿಕೆ ನಡೆಸುತ್ತಿರುವವರ ವಿರುದ್ಧ ಎಂ.ಎಂ. (ಡಿ&ಆರ್) 1957ರ ಕಾಯ್ದೆ ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರಂತೆ ಮೊಕದ್ದಮೆಗಳನ್ನು ದಾಖಲಿಸಿ, ದಂಡ ಸಂಗ್ರಹಿಸಲು ಕಟ್ಟುನಿಟ್ಟಿನ ಕ್ರಮಜರುಗಿಸಲಾಗುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ಅನಧಿಕೃತ ಕಲ್ಲು ಮತ್ತು ಮರಳು ಗಣಿಗಾರಿಕೆ ಸಂಬಂಧ ಕೈಗೊಂಡ ಕ್ರಮದ ವಿವರ ಕೆಳಕಂಡಂತಿದೆ: **ಮುಖ್ಯ ಖನಿಜ ಗಣಿಗಾರಿಕೆ :-**

ಕ್ರ ಸಂ.	ವರ್ಷ	ಪತ್ತೆ ಹಚ್ಚಿದ ಪ್ರಕರಣಗಳು	ದಾಖಲಿಸಿರುವ ಮೊಕದ್ದಮೆಗಳ ಸಂಖ್ಯೆ	ವಸೂಲಾದ ದಂಡ (ರೂ.ಲಕ್ಷಗಳಲ್ಲಿ)
1.	2017-18	01	–	0.5
2.	2018-19	05	01	2.0
3.	2019-20	03	03	–

--2

ಕಲ್ಲುಗಣಿಗಾರಿಕೆ :–

ಕ್ರ ಸಂ.	ವರ್ಷ	ಪತ್ತೆ ಹಚ್ಚಿದ ಪ್ರಕರಣಗಳು	ದಾಖಲಿಸಿರುವ ಮೊಕದ್ದಮೆಗಳ ಸಂಖ್ಯೆ	ವಸೂಲಾದ ದಂಡ (ರೂ.ಲಕ್ಷಗಳಲ್ಲಿ)
1.	2017–18	404	114	613.25
2.	2018–19	343	75	957.72
3.	2019–20	266	117	908.70
ಒಟ್ಟು		1013	306	2479.67

ಮರಳು ಗಣಿಗಾರಿಕೆ:–

ಕ್ರ ಸಂ.	ವರ್ಷ	ಪತ್ತೆ ಹಚ್ಚಿದ ಪ್ರಕರಣಗಳು	ದಾಖಲಿಸಿರುವ ಮೊಕದ್ದಮೆಗಳ ಸಂಖ್ಯೆ	ವಸೂಲಾದ ದಂಡ (ರೂ.ಲಕ್ಷಗಳಲ್ಲಿ)
1.	2017–18	286	159	191.43
2.	2018–19	191	106	54.62
3.	2019–20	240	106	128.81
ಒಟ್ಟು		717	371	374.86

ಸಂಖ್ಯೆ: ಸಿಐ 464 ಎಂಎಂಎನ್ 2020

(ಸಿ.ಸಿ. ಪಾಟೀಲ)
ಗಣಿ ಮತ್ತು ಭೂವಿಜ್ಞಾನ ಸಚಿವರು
ಸಿ.ಸಿ. ಪಾಟೀಲ
ಗಣಿ ಮತ್ತು ಭೂವಿಜ್ಞಾನ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 891
ವಿಧಾನ ಸಭೆ ಸದಸ್ಯರ ಹೆಸರು : ಶ್ರೀ ಹಾಲಪ್ಪ ಹರತಾಳ್ ಹೆಚ್ (ಸಾಗರ)
ಉತ್ತರಿಸಬೇಕಾದ ದಿನಾಂಕ : 25.09.2020
ಉತ್ತರಿಸುವ ಸಚಿವರು : ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ರೈತರು ಬೆಳೆದಿರುವ ಭತ್ತ ಮತ್ತು ಮೆಕ್ಕೆಜೋಳಕ್ಕೆ ಮಾರುಕಟ್ಟೆಯಲ್ಲಿ ಸೂಕ್ತ ಬೆಲೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ರಾಜ್ಯದಲ್ಲಿ ಮುಕ್ತ ಮಾರುಕಟ್ಟೆಯಲ್ಲಿ ಸೂಕ್ತ ಬೆಲೆ ಇಲ್ಲದಿರುವ ಸಂಧರ್ಭದಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಭತ್ತವನ್ನು ಖರೀದಿಸಲಾಗುತ್ತದೆ. ಅದರಂತೆ 2019-20ನೇ ಸಾಲಿನಲ್ಲಿ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ಭತ್ತವನ್ನು ಖರೀದಿಸಲಾಗಿದೆ. ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಮೆಕ್ಕೆಜೋಳವನ್ನು ಪಡಿತರ ಫಲಾನುಭವಿಗಳಿಗೆ ವಿತರಣೆ ಮಾಡುತ್ತಿಲ್ಲವಾದ್ದರಿಂದ ಮೆಕ್ಕೆ ಜೋಳವನ್ನು ಖರೀದಿಸಲಾಗುತ್ತಿಲ್ಲ.
ಆ	ಹಾಗಿದ್ದಲ್ಲಿ, ಬೆಳೆಗಳಿಗೆ ಸೂಕ್ತ ಬೆಂಬಲ ಬೆಲೆ ನೀಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು;	ರಾಜ್ಯದಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆ ಜಾರಿಗೊಳಿಸಲು ಕೇಂದ್ರ ಸರ್ಕಾರವು ರಾಜ್ಯವನ್ನು ಡಿ.ಸಿ.ಪಿ. (Decentralised Procurement) ರಾಜ್ಯವನ್ನಾಗಿ ಗುರುತಿಸಿದೆ. ಕೇಂದ್ರ ಸರ್ಕಾರವೇ ಕನಿಷ್ಠ ಬೆಂಬಲ ಬೆಲೆಯನ್ನು ನಿಗಧಿಪಡಿಸುತ್ತದೆ. ಅದರಂತೆಯೇ ಭತ್ತವನ್ನು ಖರೀದಿಸಲಾಗುತ್ತದೆ.
ಇ	ಬೆಂಬಲ ಬೆಲೆ ನಿಗಧಿಪಡಿಸಿ ಎ.ಪಿ.ಎಂ.ಸಿ ಮೂಲಕ ಖರೀದಿ ಕೇಂದ್ರಗಳನ್ನು ತೆರೆಯಲಾಗುವುದೆ; (ಇಲ್ಲದಿದ್ದಲ್ಲಿ ಕಾರಣಗಳೇನು)	ಸರ್ಕಾರದ ಮುಂದೆ ಪ್ರಸ್ತಾವನೆ ಇರುವುದಿಲ್ಲ. ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಭತ್ತ, ರಾಗಿ, ಮತ್ತು ಬಿಳಿ ಜೋಳವನ್ನು ಸರ್ಕಾರದ ಸಂಗ್ರಹಣಾ ಏಜೆನ್ಸಿಗಳಾದ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತ, ಕರ್ನಾಟಕ ಸಹಕಾರ ಮಾರಾಟ ಮಹಾಮಂಡಳ ಮತ್ತು ಕರ್ನಾಟಕ ರಾಜ್ಯ ಉಗ್ರಾಣ ನಿಗಮದ ಮೂಲಕ ಖರೀದಿಸಲಾಗುತ್ತಿದೆ.

ಈ.	ಹಾಗಿದ್ದಲ್ಲಿ, ಖರೀದಿ ಕೇಂದ್ರಗಳನ್ನು ತೆರೆದು ಎ.ಪಿ.ಎಂ.ಸಿ ಮೂಲಕ ಖರೀದಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)	ಉದ್ಭವಿಸುವುದಿಲ್ಲ.

ಆನಾಸ 116 ಆರ್ ಪಿ ಆರ್ 2020 (ಇ-ಆಫೀಸ್)

(ಕೆ.ಗೋಪಾಲಯ್ಯ)

ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	892
ಮಾನ್ಯ ಸದಸ್ಯರ ಹೆಸರು	:	ಶ್ರೀ ಪಾಟೀಲ್ ಎಚ್.ಕೆ. (ಗದಗ)
ಉತ್ತರಿಸಬೇಕಾದ ದಿನಾಂಕ	:	25-09-2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ಗದಗ-ಬೇಟಗೇರಿ ನಗರಸಭೆ ವ್ಯಾಪ್ತಿಯಲ್ಲಿನ ಘನತ್ಯಾಜ್ಯ ವಸ್ತುಗಳಿಂದ ವಿದ್ಯುತ್ ಉತ್ಪಾದಿಸುವ (Waste to Energy) ಯೋಜನೆಯ ಕುರಿತು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
ಆ	ಬಂದಿದ್ದಲ್ಲಿ ಯೋಜನೆ ಅನುಷ್ಠಾನಗೊಳ್ಳುವಲ್ಲಿ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು;	ಘನತ್ಯಾಜ್ಯ ವಸ್ತು ನಿರ್ವಹಣೆ ನಿಯಮಗಳು, 2016ರ ಉಪಬಂಧಗಳಂತೆ ನಗರ ಸ್ಥಳೀಯ ಸಂಸ್ಥೆಗಳು ವೈಜ್ಞಾನಿಕವಾಗಿ ತ್ಯಾಜ್ಯ ವಿಲೇವಾರಿ ಮಾಡುವುದು ಕಡ್ಡಾಯವಾಗಿರುತ್ತದೆ. ಈ ಸಂಬಂಧ ಗದಗ-ಬೆಟಗೇರಿ ನಗರಸಭೆ ವ್ಯಾಪ್ತಿಯಲ್ಲಿ ಉತ್ಪಾದನೆಯಾಗುವ ಘನತ್ಯಾಜ್ಯವನ್ನು ಮತ್ತು ತ್ಯಾಜ್ಯ ವಿಲೇವಾರಿ ಘಟಕದಲ್ಲಿ ಲಭ್ಯವಿರುವ ಘನತ್ಯಾಜ್ಯದ ಮೂಲಕ ವಿದ್ಯುತ್ ಉತ್ಪಾದಿಸುವ ಘಟಕ ಸ್ಥಾಪಿಸಲು ಅನುಮೋದನೆ ನೀಡುವ ಕುರಿತು ದಿನಾಂಕ:-11-12-2019 ರಂದು ನಗರಸಭೆಯವರು ಪೌರಾಡಳಿತ ನಿರ್ದೇಶನಾಲಯಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಈ ಕುರಿತಾಗಿ ನಿರ್ದೇಶನಾಲಯದಿಂದ ಪತ್ರ ಸಂಖ್ಯೆ: 24679/ಡಿಎಂಎ/09/ಎಸ್‌ಡಬ್ಲ್ಯೂಎಂ/2018-19. ದಿನಾಂಕ: 15-05-2020ರ ರೀತ್ಯಾ, ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪರಿಸರ ಭವನ, ಬೆಂಗಳೂರು ರವರಿಗೆ ಸದರಿ ಯೋಜನೆಯ ತಂತ್ರಜ್ಞಾನದ ವಿವರಗಳನ್ನು ತಾಂತ್ರಿಕವಾಗಿ ಪರಿಶೀಲಿಸಿ, ವರದಿ ನೀಡಲು ಕೋರಿ ಪತ್ರವನ್ನು ಬರೆಯಲಾಗಿರುತ್ತದೆ. ಈ ಸಂಬಂಧ ಪ್ರಸ್ತಾಪಿತ ಯೋಜನೆಯ ಕಂಪನಿಯವರಾದ M/s Bioleap Green Energy Private Limited, Bangalore ರವರು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ರವರಿಗೆ ದಿನಾಂಕ: 26-05-2020 ರಂದು Video Conference ಮೂಲಕ Technical Presentation (ತಾಂತ್ರಿಕ ಪ್ರಸ್ತುತಿ) ಅನ್ನು ನೀಡಿರುತ್ತಾರೆ. ಸದರಿ ತಾಂತ್ರಿಕ ಸಭೆಯಲ್ಲಿ ಚರ್ಚಿಸಿದಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿರವರು, M/s Bioleap Green Energy Private Limited ರವರಿಗೆ ಕೆಲವು ಅಂಶಗಳ ಕುರಿತಾಗಿ ವಿವರಣೆಯನ್ನು ಸಲ್ಲಿಸುವಂತೆ ತಿಳಿಸಿದ್ದು, ಈ ಕುರಿತಾಗಿ ಸದರಿ ಕಂಪನಿಯವರು ಈವರೆಗೂ ಯಾವುದೇ ವಿವರಣೆಗಳನ್ನು ಸಲ್ಲಿಸಿರುವುದಿಲ್ಲ. ಸದರಿ

		ಕಂಪನಿಯವರು ವಿವರಣೆಗಳನ್ನು ಸಲ್ಲಿಸಿದ ನಂತರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿರವರಿಗೆ ಸಲ್ಲಿಸಿ ಅವರ ಅಭಿಪ್ರಾಯದಂತೆ ಮುಂದಿನ ಅಗತ್ಯ ಕ್ರಮ ಜರುಗಿಸಲಾಗುವುದು.
ಇ	ಯಾವ ಕಾಲಮಿತಿಯೊಳಗೆ ಸರ್ಕಾರ ಈ ಯೋಜನೆಯ ಅನುಷ್ಠಾನಕ್ಕೆ ಪರವಾನಗಿ ನೀಡಲಿದೆ.	M/s Bioleap Green Energy Private Limited, Bangalore ರವರು, ಮಾಹಿತಿಯನ್ನು ಸಲ್ಲಿಸಿದ ನಂತರ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ನಅಇ 269 ಸಿಎಸ್ಎಸ್ 2020

(ಡಾ|| ನಾರಾಯಣ ಗೌಡ)
ಪೌರಾಡಳಿತ ಹಾಗೂ
ತೋಟಗಾರಿಕೆ ಮತ್ತು ರೇಷ್ಮೆ ಸಚಿವರು.

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು : ಶ್ರೀ ಅಮರೇಗೌಡ ಲಿಂಗನಗೌಡ ಪಾಟೀಲ್ ಬಯ್ಯಾಪುರ್
(ಕುಷ್ಟಗಿ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 899
ಉತ್ತರಿಸಬೇಕಾದ ದಿನಾಂಕ : 25-09-2020
ಉತ್ತರಿಸಬೇಕಾದವರು : ನಗರಾಭಿವೃದ್ಧಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕುಷ್ಟಗಿ ಪಟ್ಟಣದ ಕುಡಿಯುವ ನೀರು ಸರಬರಾಜು ಯೋಜನೆಯು ಸಮರ್ಪಕವಾಗಿ ಕಾರ್ಯನಿರ್ವಹಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಹಾಗಿದ್ದಲ್ಲಿ, ಸಮರ್ಪಕವಾದ ರೀತಿಯಲ್ಲಿ ಕಾರ್ಯಗತಗೊಳಿಸಲು ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ;	ಕುಡಿಯುವ ನೀರು ಸರಬರಾಜು ಯೋಜನೆಯು ಸಮರ್ಪಕವಾಗಿ ಕಾರ್ಯನಿರ್ವಹಿಸಲು ನಗರೋತ್ಥಾನ -3ನೇ ಹಂತದ ರೂ.514.03 ಲಕ್ಷಗಳ ಅನುದಾನದಲ್ಲಿ ನಿರ್ಮಿಸಿರುವ ಜಲಶುದ್ಧೀಕರಣ ಘಟಕದಲ್ಲಿ 260 ಅಶ್ವಶಕ್ತಿಯ ಪಂಪುಗಳು (ಶೇ 100 ರಷ್ಟು ಸ್ಟ್ಯಾಂಡಬಾಯ್), ಇಳಕಲ್ಲ ಬಳಿಯ ದರ್ಗಾ ಪಂಪಹೌಸನಲ್ಲಿ 240 ಅಶ್ವಶಕ್ತಿಯ ಪಂಪುಗಳು (ಶೇ 100 ರಷ್ಟು ಸ್ಟ್ಯಾಂಡಬಾಯ್) ಹಾಗೂ ಕುಷ್ಟಗಿ ಬಳಿ ಇರುವ ಯಂತ್ರಾಗಾರದಲ್ಲಿ 150 ಅಶ್ವಶಕ್ತಿಯ ಯಂತ್ರಗಳನ್ನು (ಶೇ 100 ರಷ್ಟು ಸ್ಟ್ಯಾಂಡಬಾಯ್) ಅಳವಡಿಸಿ, ದಿನಂಪ್ರತಿ ತಲಾ 135 ಲೀಟರ್ ಸರಬರಾಜು ಮಾಡುವ ಕಾಮಗಾರಿಯನ್ನು ಪೂರ್ಣಗೊಳಿಸಿ ದಿನಾಂಕ 01-07-2019 ರಿಂದ ಚಾಲನೆಗೊಳಿಸಲಾಗಿದೆ. ಮುಂದುವರೆದು, ಯು.ಐ.ಡಿ.ಎಸ್.ಎಸ್.ಎಂ.ಟಿಯ ಹುನಗುಂದ, ಇಳಕಲ್ಲ ಮತ್ತು ಕುಷ್ಟಗಿ ಪಟ್ಟಣಗಳ ಸಮಗ್ರ ಕುಡಿಯುವ ನೀರು ಸರಬರಾಜು ಯೋಜನೆಯಲ್ಲಿ ಪಟ್ಟಣಗಳ 3 ವಲಯಗಳಲ್ಲಿ, ವಲಯ-2ರಲ್ಲಿ 24x7

		ಮಾದರಿಯ ನೀರು ಸರಬರಾಜು ಯೋಜನೆಯನ್ನು ರೂ.420.13 ಲಕ್ಷಗಳಲ್ಲಿ ಕೈಗೊಂಡು, 23.22 ಕಿ.ಮೀ ವಿತರಣಾ ಕೊಳವೆ ಮಾರ್ಗ ಮತ್ತು 2266 ಪ್ರತ್ಯೇಕ ಮನೆಗಳಿಗೆ ನೀರಿನ ಸಂಪರ್ಕ ಕಲ್ಪಿಸಿ ದಿನಾಂಕ: 30-03-2018 ರಿಂದ ಚಾಲನೆಗೊಳಿಸಲಾಗಿದೆ. ಪಟ್ಟಣಗಳ ಬಾಕಿ ಪ್ರದೇಶಗಳಲ್ಲಿ 24X7 ಮಾದರಿಯ ನೀರು ಸರಬರಾಜು ವ್ಯವಸ್ಥೆಯನ್ನು ಇನ್ನಿತರ ಅಗತ್ಯ ಕಾಮಗಾರಿಗಳೊಂದಿಗೆ ಕೈಗೊಳ್ಳಲು ರೂ.4380.00 ಲಕ್ಷಗಳಿಗೆ ವಿವರವಾದ ಅಂದಾಜು ಪಟ್ಟಿಯನ್ನು ತಯಾರಿಸಿ ಆಡಳಿತಾತ್ಮಕ ಅನುಮೋದನೆಗಾಗಿ ದಿನಾಂಕ: 13.06.2019 ರಂದು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲು ಮಂಡಳಿಯಿಂದ ಹೆಚ್ಚುವರಿ ಮಾಹಿತಿಯನ್ನು ಕೋರಲಾಗಿದ್ದು, ದಿನಾಂಕ: 08.11.2019 ರಂದು ಮಂಡಳಿಯಿಂದ ಹೆಚ್ಚುವರಿ ಮಾಹಿತಿಯನ್ನು ಒದಗಿಸಲಾಗಿದ್ದು, ಸದರಿ ಪ್ರಸ್ತಾವನೆಗೆ ಅನುಮೋದನೆ ನೀಡಲು ಪರಿಶೀಲಿಸಿ ಕ್ರಮವಹಿಸಲಾಗುವುದು.
ಇ)	ಸದರಿ ಯೋಜನೆಗೆ ವಿಶೇಷ ಅನುದಾನವನ್ನು ಮಂಜೂರು ಮಾಡಲಾಗಿದೆಯೇ; ಇಲ್ಲದಿದ್ದಲ್ಲಿ ಕಾರಣಗಳೇನು; ಭವಿಷ್ಯದಲ್ಲಿ ವಿಶೇಷ ಅನುದಾನವನ್ನು ಮಂಜೂರು ಮಾಡಲು ಸರ್ಕಾರವು ಕ್ರಮಕೈಗೊಳ್ಳುವುದೇ? (ವಿವರ ನೀಡುವುದು)	ಸದರಿ ಯೋಜನೆಗೆ ಇದುವರೆವಿಗೂ ಯಾವುದೇ ವಿಶೇಷ ಅನುದಾನವನ್ನು ಮಂಜೂರು ಮಾಡಿರುವುದಿಲ್ಲ. ಅನುದಾನದ ಲಭ್ಯತೆಯನ್ನು ಆದರಿಸಿ, ವಿಶೇಷ ಅನುದಾನ ಒದಗಿಸಲು ಕ್ರಮಕೈಗೊಳ್ಳಲಾಗುವುದು.

ಸಂಖ್ಯೆ ನಅಇ 135 ಯುಎಂಎಸ್ 2020

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1481
2. ಸದಸ್ಯರ ಹೆಸರು : ಶ್ರೀ ಸುಬ್ಬಾರೆಡ್ಡಿ ಎಸ್.ಎನ್. (ಬಾಗೇಪಲ್ಲಿ)
3. ಉತ್ತರಿಸುವ ದಿನಾಂಕ : 25.09.2020
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಬಾಗೇಪಲ್ಲಿ ಕ್ಷೇತ್ರದಲ್ಲಿ ಕೈಗಾರಿಕಾ ವಲಯ ಸ್ಥಾಪನೆ ಮಾಡಲು ಎರಡು ಬಾರಿ ಅಧಿಸೂಚನೆ ಹೊರಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಬಂದಿದೆ. ಬಾಗೇಪಲ್ಲಿ ಮತ್ತು ಕೊಂಡರೆಡ್ಡಿಪಲ್ಲಿ ಗ್ರಾಮಗಳ 192-00 ಎಕರೆ ಜಮೀನನ್ನು ಸ್ವಾಧೀನಪಡಿಸಲು ಕೆ.ಐ.ಎ.ಡಿ. ಕಾಯ್ದೆ ಕಲಂ 28(4)ರ ಅಂತಿಮ ಅಧಿಸೂಚನೆಯನ್ನು ದಿನಾಂಕ: 08.03.2007ರ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ.
ಆ)	ಈ ಅಧಿಸೂಚನೆ ಹೊರಡಿಸಿ 10 ವರ್ಷಗಳಾದರೂ ಸಹ ಇದುವರೆವಿಗೂ ಜಮೀನು ಭೂಸ್ವಾಧೀನಪಡಿಸಿಕೊಳ್ಳಲು ವಿಳಂಬ ಮಾಡುತ್ತಿರಲು ಕಾರಣವೇನು?	ಈ ಜಮೀನಿಗೆ ಪ್ರತಿ ಎಕರೆ ರೂ.15.00 ಲಕ್ಷದಂತೆ ಭೂಪರಿಹಾರ ಧನ ನಿಗದಿಪಡಿಸಲಾಗಿತ್ತು. ಸದರಿ ಭೂಸ್ವಾಧೀನಕ್ಕೆ ಹಾಗೂ ಜಂಟಿ ಅಳತೆ ಕಾರ್ಯ ನಿರ್ವಹಣೆಗೆ ಭೂಮಾಲೀಕರಿಂದ ಪ್ರತಿರೋಧ ವ್ಯಕ್ತವಾಗಿದ್ದು, ಈ ಜಮೀನುಗಳಿಗೆ ಪರಿಹಾರವನ್ನು ಭೂಮಾಲೀಕರು ಪಡೆದುಕೊಂಡಿರುವುದಿಲ್ಲ. ದಿನಾಂಕ: 19.10.2019ರಂದು ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ಭೂಮಾಲೀಕರ ಸಭೆಯನ್ನು ಕರೆಯಲಾಗಿದ್ದು, ಸದರಿ ಸಭೆಯಲ್ಲಿ ರೈತರು ಮತ್ತು ರೈತ ಸಂಘದವರು ಭೂಸ್ವಾಧೀನಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿ, ಭೂಸ್ವಾಧೀನಪಡಿಸಿಕೊಂಡ ಜಮೀನುಗಳನ್ನು ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡುವಂತೆ

		ಒತ್ತಾಯಿಸಿರುತ್ತಾರೆ. ಆದಕಾರಣ ಈ ಜಮೀನುಗಳನ್ನು ಸರ್ಕಾರದ ವಶಕ್ಕೆ ಪಡೆದಿರುವುದಿಲ್ಲ. ಕೊಂಡರೆಡ್ಡಿಪಲ್ಲಿ ಮತ್ತು ಹೊಸಹುಡ್ಯ ಗ್ರಾಮಗಳ 809-31 ಎಕರೆ ಜಮೀನನ್ನು ಸ್ವಾಧೀನಪಡಿಸಲು ದಿನಾಂಕ: 11.12.2009ರಂದು ಕೆ.ಐ.ಎ.ಡಿ. ಕಾಯ್ದೆ ಕಲಂ 3(1), 1(3) & 28(1)ರಡಿ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ. ಭೂಸ್ವಾಧೀನಕ್ಕೆ ಭೂಮಾಲೀಕರಿಂದ ತೀವ್ರ ಪ್ರತಿರೋಧ ವ್ಯಕ್ತವಾದ ಕಾರಣ, ಈವರೆವಿಗೂ ಅಂತಿಮ ಅಧಿಸೂಚನೆ ಹೊರಡಿಸಿರುವುದಿಲ್ಲ.
ಇ.	ಈ ಅಧಿಸೂಚನೆ ಮಾಡಿರುವ ಜಮೀನಿನ ಪೈಕಿ ಸುಮಾರು ಐದು ನೂರು ಎಕರೆ ಸರ್ಕಾರಿ ಜಮೀನು ಇದ್ದರೂ ಸಹ ಉಳಕೆ ಪ್ರದೇಶದ ಜಮೀನನ್ನು ಹೊರತುಪಡಿಸಿ, ಸರ್ಕಾರಿ ಜಮೀನಿನಲ್ಲಿ ಕೈಗಾರಿಕಾ ವಲಯ ಪ್ರಾರಂಭಿಸಲು ವಿಳಂಬವಾಗುತ್ತಿರಲು ಕಾರಣವೇನು;	ಮೇಲ್ಕಂಡ ಎರಡು ಭೂಸ್ವಾಧೀನ ಪ್ರಸ್ತಾವನೆಗಳಲ್ಲಿ ಒಟ್ಟು 425-31 ಎಕರೆ ಸರ್ಕಾರಿ ಜಮೀನು ಭೂಸ್ವಾಧೀನಕ್ಕೆ ಒಳಪಟ್ಟಿದ್ದು, ಸದರಿ ಸರ್ಕಾರಿ ಜಮೀನುಗಳು ಒಟ್ಟಾರೆ ವಿಸ್ತೀರ್ಣದಲ್ಲಿ ಅಲ್ಲಲ್ಲಿ ಚದುರಿದಂತೆ ಇರುತ್ತದೆ. ಈ ಜಮೀನುಗಳು ಒಂದೇ ಆಯಕಟ್ಟಿಗೆ ಬಾರದಿರುವ ಕಾರಣ, ಸದರಿ ಸರ್ಕಾರಿ ಜಮೀನನ್ನು ಹೊರತುಪಡಿಸಿ, ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗುವುದಿಲ್ಲ.
ಈ.	ಈ ಕೈಗಾರಿಕಾ ವಲಯವನ್ನು ಯಾವಾಗ ಪ್ರಾರಂಭ ಮಾಡಲಾಗುವುದು?	ಅಂತಿಮ ಅಧಿಸೂಚನೆ ಹೊರಡಿಸಿ, ಭೂಪರಿಹಾರ ಪಾವತಿಸಿ, ಜಮೀನುಗಳನ್ನು ವಶಕ್ಕೆ ಪಡೆದ ನಂತರ ಬೇಡಿಕೆಗನುಸಾರವಾಗಿ ಕೈಗಾರಿಕಾ ಪ್ರದೇಶ ನಿರ್ಮಾಣ ಮಾಡಲಾಗುವುದು.

ಸಂಖ್ಯೆ: ಸಿಐ 167 ಐಎಪಿ (ಇ) 2020

(ಜಗದೀಶ ಶೆಟ್ಟರ)

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1482
ಸದಸ್ಯರ ಹೆಸರು	ಶ್ರೀ ಸುಬ್ಬಾರೆಡ್ಡಿ ಎಸ್.ಎನ್ (ಬಾಗೇಪಲ್ಲಿ)
ಉತ್ತರಿಸಬೇಕಾದ ದಿನಾಂಕ	25.09.2020.
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಕಲ್ಲುಗಣಿಗಾರಿಕೆ ನಡೆಸುವ ಗಣಿ ಮಾಲೀಕರಿಗೆ ಕಲ್ಲು ಸಾಗಾಣಿಕೆಗೆ ಅವಕಾಶ ನೀಡುವಾಗ ಕ್ಯೂಬಿಕ್ ಮೀಟರ್ ಲೆಕ್ಕದಲ್ಲಿ ಅನುಮತಿ ನೀಡಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರಂತೆ ಕಲ್ಲುಗಣಿ ಗಾರಿಕೆಗೆ ಗುತ್ತಿಗೆ ಮಂಜೂರಾತಿ ನೀಡಿರುವ ಗುತ್ತಿಗೆದಾರರುಗಳು ಗುತ್ತಿಗೆ ಪ್ರದೇಶದಲ್ಲಿ ಉತ್ಪಾದಿಸುವ ಉಪಖನಿಜವನ್ನು ಸಾಗಾಣಿಕೆ ಮಾಡಲು ಮೆಟ್ರಿಕ್ ಟನ್ ಆಧಾರದ ಮೇಲೆ ರಾಜಧನ ಪಾವತಿಸಿಕೊಂಡು ಖನಿಜ ರವಾನೆ ಪರವಾನಿಗೆ ವಿತರಿಸಲಾಗುತ್ತಿದೆ.
ಆ)	ಕ್ಯೂಬಿಕ್ ಮೀಟರ್ ಲೆಕ್ಕದ ದಿಮ್ಮಿಗಳಿಗೆ ಅನುಮತಿ ನೀಡಿರುವುದರಿಂದ ರಸ್ತೆಯ ಮತ್ತು ಲಾರಿಯ ಭಾರಮಿತಿಗಿಂತ ಹೆಚ್ಚಿನ ಭಾರದ ದಿಮ್ಮಿಗಳಿಗೆ ಅನುಮತಿ ನೀಡಿದಂತಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕಲ್ಲುಗಣಿ ಗುತ್ತಿಗೆದಾರರುಗಳು ಗುತ್ತಿಗೆ ಪ್ರದೇಶದಲ್ಲಿ ಉತ್ಪಾದಿಸುವ ಗ್ರಾನೈಟ್ ಉಪಖನಿಜವನ್ನು ಸಾಗಾಣಿಕೆ ಮಾಡಲು ಮೆಟ್ರಿಕ್ ಟನ್ ಆಧಾರದ ಮೇಲೆ ರಾಜಧನ ಪಾವತಿಸಿಕೊಂಡು ಖನಿಜ ರವಾನೆ ಪರವಾನಿಗೆ ವಿತರಿಸಲಾಗುತ್ತಿದೆ.
ಇ)	ಕಲ್ಲು ದಿಮ್ಮಿಗಳನ್ನು ಸಾಗಿಸುವಾಗ ಅನುಮತಿ ನೀಡುವ ಸಂದರ್ಭದಲ್ಲಿ ರಸ್ತೆಯ ಭಾರಮಿತಿಯ ಒಳಗೆ ಮಾತ್ರ ಅನುಮತಿ ನೀಡುವಂತೆ ನಿಯಮ ರೂಪಿಸಲು ಸಾಧ್ಯವಿಲ್ಲವೇ;	ಖನಿಜ ಸಾಗಾಣಿಕೆ ವಾಹನದ ಹೇರುಭಾರ ಸಾಮರ್ಥ್ಯಕ್ಕನುಗುಣವಾಗಿ ಖನಿಜ ಸಾಗಾಣಿಕೆ ಮಾಡಲು ಖನಿಜ ರವಾನೆ ಪರವಾನಿಗೆ ವಿತರಿಸಲಾಗುತ್ತಿದೆ.
ಈ)	ಅಧಿಕ ಭಾರಮಿತಿಯ ವಾಹನಗಳು ಸಂಚರಿಸುವ ಕಾರಣ ರಸ್ತೆಗಳು ಸಂಪೂರ್ಣ ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು? (ವಿವರ ನೀಡುವುದು)	ಬಂದಿರುತ್ತದೆ. ಭಾರತ ಸರ್ಕಾರವು MM(D&R) Act 2015ರ ತಿದ್ದುಪಡಿ ಸೆಕ್ಷನ್ 9(ಬಿ) ರಂತೆ ಹಾಗೂ 15(4)ಗಳಡಿ ಪ್ರದತ್ತವಾದ ಅಧಿಕಾರದನ್ವಯ ರಾಜ್ಯ ಸರ್ಕಾರವು ಪ್ರಧಾನ ಮಂತ್ರಿ ಖನಿಜ ಕ್ಷೇತ್ರ ಕಲ್ಯಾಣ ಯೋಜನಾ (PMKKKY) ಅಂಶಗಳನ್ನು ಅಳವಡಿಸಿ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ತಿದ್ದುಪಡಿ ನಿಯಮಗಳು, (DMFT) ದಿನಾಂಕ 11.01.2016 ರಂದು ಹಾಗೂ ತಿದ್ದುಪಡಿ ನಿಯಮಗಳನ್ನು ದಿನಾಂಕ 25-07-2016, 08.03.2018 ಹಾಗೂ ದಿನಾಂಕ 06.05.2020 ರಂದು ಜಾರಿಗೆ ತಂದಿರುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 36-A ರಂತೆ ಉಪಖನಿಜ ಗಣಿ ಗುತ್ತಿಗೆದಾರರಿಂದ DMF ನಿಧಿಯನ್ನು ಸಂಗ್ರಹಿಸಲಾಗುತ್ತಿದೆ.

---2

		ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನಕ್ಕೆ ರೂ. 2938.46 ಲಕ್ಷ ವಂತಿಕೆ ಸಂಗ್ರಹವಾಗಿದ್ದು, ಗಣಿ ಭಾಧಿತ ಪ್ರದೇಶದಲ್ಲಿ ಕಾಮಗಾರಿ ನಿರ್ವಹಿಸಲು ರೂ.2156.46 ಲಕ್ಷಗಳ ಕ್ರಿಯಾ ಯೋಜನೆ ಅನುಮೋದನೆಗೊಂಡಿದೆ. ರಸ್ತೆ ಅಭಿವೃದ್ಧಿ ಹಾಗೂ ಮೂಲ ಸೌಕರ್ಯ ಕಾಮಗಾರಿ ಸಂಬಂಧಿಸಿದಂತೆ ರೂ. 301.00 ಲಕ್ಷಗಳ ವೆಚ್ಚದಲ್ಲಿ ಕ್ರಿಯಾಯೋಜನೆ ತಯಾರಿಸಿದ್ದು, 119.04 ಲಕ್ಷಗಳನ್ನು ವಿನಿಯೋಗಿಸಲಾಗಿದೆ.

ಸಂಖ್ಯೆ: ಸಿಐ 469 ಎಂಎಂಎನ್ 2020

(ಸಿ.ಸಿ. ಪಾಟೀಲ)
ಗಣಿ ಮತ್ತು ಭೂವಿಜ್ಞಾನ ಸಚಿವರು

ಸಿ.ಸಿ. ಪಾಟೀಲ
ಗಣಿ ಮತ್ತು ಭೂವಿಜ್ಞಾನ ಸಚಿವರು

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರು : ಶ್ರೀ ಖಾದರ್ ಯು.ಟಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1489

ಉತ್ತರಿಸಬೇಕಾದ ದಿನಾಂಕ : 25.09.2020

<table>
<tr><th>ಕ್ರಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ ಮೂರು ವರ್ಷಗಳಲ್ಲಿ ಸರ್ಕಾರವು ರೈತರ ಸಾಲ/ಬಡ್ಡಿ ಮನ್ನಾಕ್ಕಾಗಿ ಬಿಡುಗಡೆ ಮಾಡಿದ ಅನುದಾನವೆಷ್ಟು; (ವಿವರಗಳನ್ನು ಒದಗಿಸುವುದು)</td><td>ಸಹಕಾರ ಸಂಘಗಳಲ್ಲಿನ ರೂ.1.00 ಲಕ್ಷಗಳ ಸಾಲ ಮನ್ನಾ ಯೋಜನೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ರೂ.7637.32 ಕೋಟಿ ಮೊತ್ತದ ಸಾಲಮನ್ನಾ ಬಿಡುಗಡೆ ಮಾಡಿದ್ದು, ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.</td></tr>
<tr><td>ಆ)</td><td>ಇಲ್ಲಿಯವರೆಗೂ ಎಷ್ಟು ರೈತರಿಗೆ ಇದರ ಪ್ರಯೋಜನ ಲಭಿಸಿದೆ: ಇನ್ನೂ ಎಷ್ಟು ರೈತರು ಈ ಯೋಜನೆಯ ಲಾಭವನ್ನು ಪಡೆಯಬೇಕಾಗಿದೆ? (ವಿವರಗಳನ್ನು ಒದಗಿಸುವುದು)</td><td>ಇಲ್ಲಿಯವರೆಗೂ 16.41 ಲಕ್ಷ ರೈತರಿಗೆ ಸಾಲ ಮನ್ನಾ ಆಗಿದ್ದು, ಇನ್ನೂ 1.70 ಲಕ್ಷ ರೈತರ ಸಾಲ ಮನ್ನಾ ಗುರುತಿಸಲು ಬಾಕಿ ಇದ್ದು, ವಿವರ ಈ ಕೆಳಗಿನಂತಿರುತ್ತದೆ.
<table>
<tr><th>ಕ್ರಸಂ</th><th>ಅರ್ಹತೆ ಗುರುತಿಸುವುದಕ್ಕೆ ಬಾಕಿ ಇರಲು ಕಾರಣಗಳು</th><th>ರೈತರ ಸಂಖ್ಯೆ</th></tr>
<tr><td>1</td><td>ರೈತರ ದಾಖಲೆಗಳು ಸರಿ ಇದ್ದು, ಕುಟುಂಬಕ್ಕೆ ರೂ.1 ಲಕ್ಷಗಳು ಮೀರಿರುವ ಮತ್ತು ಎರಡು ಸಹಕಾರ ಸಂಘಗಳಲ್ಲಿ ಸಾಲ ಪಡೆದಿರುವ ರೈತರ ವಿವರ</td><td>45137</td></tr>
<tr><td>2</td><td>ಆಧಾರ್, ಆರ್‌ಟಿಸಿ ಮತ್ತು ರೇಷನ್ ಕಾರ್ಡ್ ತಪ್ಪಾಗಿ ನೀಡಿರುವುದರಿಂದ ಅರ್ಹತೆ ಗುರುತಿಸಲು ಬಾಕಿ ಇರುವ ರೈತರ ಸಂಖ್ಯೆ</td><td>23361</td></tr>
<tr><td>3</td><td>ತಾಲ್ಲೂಕು ಮಟ್ಟದ ಸಮಿತಿಯಲ್ಲಿ ತಿರಸ್ಕರಿಸಿದ ರೈತರ ಸಂಖ್ಯೆ</td><td>6893</td></tr>
<tr><td>4</td><td>ರೂ.1.00 ಲಕ್ಷಕ್ಕಿಂತ ಹೆಚ್ಚಿನ ಅಸಲು ಮತ್ತು ಸುಸ್ತಿ ಬಡ್ಡಿ ಪಾವತಿಸಲು ವಿಫಲವಾಗಿರುವುದರಿಂದ ಅರ್ಹತೆ ಹೊಂದದೆ ಇರುವ ರೈತರ ಸಂಖ್ಯೆ</td><td>7311</td></tr>
<tr><td>5</td><td>ಬ್ಯಾಂಕಿನ ಮತ್ತು ಇಲಾಖಾ ಅಧಿಕಾರಿಗಳು ಪರಿಶೀಲಿಸಲು ಬಾಕಿ ಇರುವ ಮತ್ತು ರೈತರು ನೀಡಿರುವ ದಾಖಲೆಗಳನ್ನು ತಂತ್ರಾಂಶದಲ್ಲಿ ಅಳವಡಿಸದೇ ಇರುವ ರೈತರ ಸಂಖ್ಯೆ</td><td>9835</td></tr>
<tr><td>6</td><td>ಆದಾಯ ತೆರಿಗೆ ಪಾವತಿದಾರರು, ವೇತನದಾರರು ಮತ್ತು ಪಿಂಚಣಿದಾರರಾಗಿರುವುದರಿಂದ ಮತ್ತು ಇತರೆ ಕಾರಣಗಳಿಗೆ ಅರ್ಹತೆ ಹೊಂದದೆ ಇರುವ ರೈತರ ಸಂಖ್ಯೆ</td><td>9920</td></tr>
<tr><td>7</td><td>ರೈತರು ಪಡಿತರ ಚೀಟಿಯನ್ನು ಹೊಸದಾಗಿ ಪಡೆದಿದ್ದು, ಕುಟುಂಬದಲ್ಲಿ ಒಬ್ಬನೇ ಸದಸ್ಯನಿರುವ ರೈತರ ವಿವರ</td><td>68032</td></tr>
<tr><td></td><td>ಬಾಕಿ ಉಳಿದ ಒಟ್ಟು ಅರ್ಜಿಗಳು</td><td>170489</td></tr>
</table>
ಈ ಬಗ್ಗೆ ದಿನಾಂಕ: 18-09-2020 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ ರವರು ಕಾರ್ಯದರ್ಶಿ, ಡಿ.ಪಿ.ಎ.ಆರ್ ಹಾಗೂ ಬೆಳೆ ಸಾಲಮನ್ನಾ ವಿಶೇಷ ಕೋಶ ಮತ್ತು ಇಲಾಖಾ ಅಧಿಕಾರಿಗಳೊಂದಿಗೆ ಸಭೆ ಜರುಗಿಸಿದ್ದು, ಇನ್ನೂ ಅರ್ಹತೆ ಬರದೇ ಇರುವ ರೈತರ ಧಾಖಲಾತಿಗಳನ್ನು ತಾಲ್ಲೂಕು ಮಟ್ಟದ ಸಮಿತಿಯಲ್ಲಿ ಗುರುತಿಸಲು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲು ತೀರ್ಮಾನಿಸಲಾಗಿದ್ದು, ಈ ಬಗ್ಗೆ ಶೀಘ್ರದಲ್ಲೇ ಸಾಲ ಮನ್ನಾ ಪೂರ್ಣಗೊಳಿಸಲು ಕ್ರಮಜರುಗಿಸಲಾಗುತ್ತಿದೆ.</td></tr>
</table>

ಸಂಖ್ಯೆ: ಸಿಒ 344 ಸಿಎಲ್‌ಎಸ್ 2020

(ಎಸ್.ಟಿ. ಸೋಮಶೇಖರ್)

ಸಹಕಾರ ಸಚಿವರು

ವಿಧಾನ ಸಭೆಯ ಸದಸ್ಯರಾದ ಮಾನ್ಯ ಶ್ರೀ ಖಾದರ್ ಯು.ಟಿ (ಮಂಗಳೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1489 ಕ್ಕೆ ಅನುಬಂಧ

ಸಹಕಾರ ಸಂಘಗಳ ರೂ.1 ಲಕ್ಷ ಗಳ ಸಾಲ ಮನ್ನಾ ಯೋಜನೆಯಲ್ಲಿ ಈವರೆಗೆ ಬಿಡುಗಡೆ ಮಾಡಿದ ಅನುದಾನ (ರೂ.ಲಕ್ಷಗಳಲ್ಲಿ)

	Name of the district	No of farmers	loan waiver amount released
1	Bagalkot	120085	63741.66
2	Bangalore Rural	16311	7638.76
3	Bangalore Urban	7238	3677.90
4	Belgaum	260252	102161.51
5	Bellary	60290	34746.10
6	Bidar	97659	40103.95
7	Bijapur	138512	56493.49
8	Chamarajanagar	15971	9738.24
9	Chikkaballapur	11027	8595.26
10	Chikkamagalur	25482	16629.80
11	Chitradurga	33648	15177.70
12	Dakshina Kannada	57945	42917.07
13	Davanagere	57038	19125.60
14	Dharwad	13053	5343.57
15	Gadag	15610	6024.54
16	Gulbarga	38553	10420.49
17	Hassan	111310	45556.61
18	Haveri	20485	6590.16
19	Kodagu	26342	20428.89
20	Kolar	9636	8611.11
21	Koppal	21791	9022.62
22	Mandya	102820	47627.91
23	Mysore	47815	31344.53
24	Raichur	45333	20939.88
25	Ramanagara	35266	16167.43
26	Shimoga	30634	12339.22
27	Tumkur	110491	38729.04
28	Udupi	20998	14423.76
29	Uttara Kannada	78053	47003.62
30	YADGIR	10858	2410.72
	Grand Total	**1640506**	**763731.16**

ಸಹಕಾರ ಸಂಘಗಳ ಅಪರ ನಿಬಂಧಕರು
(ಸಾಲ)
ನಂ.1, ಅಲಿ ಅಸ್ಕರ್ ರಸ್ತೆ, ಬೆಂಗಳೂರು-52

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1491
ಸದಸ್ಯರ ಹೆಸರು	:	ಶ್ರೀ. ದೊಡ್ಡನಗೌಡ.ಜಿ.ಪಾಟೀಲ್ (ಹುನಗುಂದ)
ಉತ್ತರಿಸುವ ದಿನಾಂಕ	:	25/09/2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

	ಪ್ರಶ್ನೆ	ಉತ್ತರ
ಅ	ಇಳಕಲ್ ತಾಲೂಕಿನ ಗುಡೂರ ಗ್ರಾಮ ಪಂಚಾಯಿತಿಯನ್ನು ಹಾಗೂ ಹುನಗುಂದ ತಾಲೂಕಿನ ಸೂಳಿಭಾವಿ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಪ್ರಸ್ತಾವನೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿರುವುದಿಲ್ಲ.
ಆ	ಬಂದಿದ್ದಲ್ಲಿ, ಯಾವಾಗ ಸದರಿ ಪಂಚಾಯಿತಿಗಳನ್ನು ಮೇಲ್ದರ್ಜೆಗೇರಿಸಲಾಗುವುದು? (ಸಂಪೂರ್ಣ ವಿವರ ನೀಡುವುದು)	ಬಾಗಲಕೋಟೆ ಜಿಲ್ಲೆಯ ಇಳಕಲ್ ತಾಲ್ಲೂಕಿನ ಗುಡೂರ ಗ್ರಾಮ ಪಂಚಾಯಿತಿ ಜನಸಂಖ್ಯೆಯು 2011 ರ ಜನಗಣತಿಯನ್ವಯ 13,676 ಇರುತ್ತದೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯ ಒಟ್ಟು ವಿಸ್ತೀರ್ಣ 54.11 ಚ.ಕಿ.ಮೀ ಇರುತ್ತದೆ. ಅದರನ್ವಯ ಜನಸಾಂದ್ರತೆಯು ಪ್ರತಿ ಚ.ಕಿ.ಮೀ ಗೆ 252 ಆಗುತ್ತದೆ. ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಸೂಳಿಬಾವಿ ಗ್ರಾಮ ಪಂಚಾಯಿತಿ ಜನಸಂಖ್ಯೆಯು 2011 ರ ಜನಗಣತಿಯನ್ವಯ 10,176 ಇರುತ್ತದೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯ ಒಟ್ಟು ವಿಸ್ತೀರ್ಣ 38.63 ಚ.ಕಿ.ಮೀ ಇರುತ್ತದೆ. ಅದರನ್ವಯ ಜನಸಾಂದ್ರತೆಯು ಪ್ರತಿ ಚ.ಕಿ.ಮೀ ಗೆ 263 ಆಗುತ್ತದೆ. ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಕರ್ನಾಟಕ ಪುರಸಭೆ ಅಧಿನಿಯಮ 1964 ಕಲಂ 349 ರನ್ವಯ ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುತ್ತದೆ: 1. ಆ ಗ್ರಾಮ ಪಂಚಾಯಿತಿಯ ಪ್ರದೇಶದ ಜನಸಂಖ್ಯೆ 10,000ಕ್ಕೆ ಕಡಿಮೆ ಇಲ್ಲದಂತೆ ಹಾಗೂ 20,000ಕ್ಕೆ ಹೆಚ್ಚಿಲ್ಲದಂತಿರಬೇಕು. 2. ಅಂತಹ ಪ್ರದೇಶದ ಜನಸಂಖ್ಯೆಯ ಜನಸಾಂದ್ರತೆಯು ಆ ಪ್ರದೇಶದ ಒಂದು ಚದರ ಕಿ.ಮೀ. ವಿಸ್ತೀರ್ಣಕ್ಕೆ 400ಕ್ಕಿಂತ ಕಡಿಮೆ ಇಲ್ಲದಿರುವುದು. 3. ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗಾವಕಾಶಗಳ ಶೇಕಡಾವಾರು ಪ್ರಮಾಣವು ಒಟ್ಟು ಉದ್ಯೋಗದ ಪ್ರಮಾಣಕ್ಕಿಂತ ಶೇ.50 ಕ್ಕಿಂತ ಕಡಿಮೆ ಇಲ್ಲದಿರುವುದು.

		ಆದರೆ, ದಿನಾಂಕ 19.03.2015 ರಂದು ನಡೆದ ಸಚಿವ ಸಂಪುಟ ಸಭೆಯ ತೀರ್ಮಾನದಂತೆ 2011ರ ಜನಗಣತಿಯನ್ವಯ 15,000ಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ಗ್ರಾಮ ಪಂಚಾಯಿತಿಗಳನ್ನು ಮಾತ್ರ ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಕ್ರಮವಹಿಸಲಾಗುತ್ತಿದೆ. ಗೂಡೂರ ಗ್ರಾಮ ಪಂಚಾಯಿತಿ ಮತ್ತು ಸೂಳಿಬಾವಿ ಗ್ರಾಮ ಪಂಚಾಯಿತಿ ಪ್ರಕರಣಗಳಲ್ಲಿ ಜನಸಾಂದ್ರತೆಯು ಪ್ರತಿ ಚ.ಕಿ.ಮೀ.ಗೆ 400ಕ್ಕಿಂತ ಕಡಿಮೆ ಇರುವುದರಿಂದ ಪಟ್ಟಣ ಪಂಚಾಯಿತಿಯನ್ನಾಗಿ ಪರಿವರ್ತಿಸಲು ಅರ್ಹತೆ ಹೊಂದಿರುವುದಿಲ್ಲ. ಆದ್ದರಿಂದ ಈ ಬಗ್ಗೆ ನಿಯಮಾನುಸಾರ ಪುನರ್ ಪರಿಶೀಲಿಸಿ ಅರ್ಹತೆ ಪೂರೈಸಿದ್ದಲ್ಲಿ ಸೂಕ್ತ ಪ್ರಸ್ತಾವನೆಯನ್ನು ಕಳುಹಿಸುವಂತೆ ಜಿಲ್ಲಾಧಿಕಾರಿ, ಬಾಗಲಕೋಟೆ ಜಿಲ್ಲೆ ರವರಿಗೆ ಪೌರಾಡಳಿತ ನಿರ್ದೇಶನಾಲಯದಿಂದ ಆಗಸ್ಟ್ 2020ರಲ್ಲಿ ತಿಳಿಸಲಾಗಿತ್ತು. ಪ್ರಸ್ತುತ, ಜಿಲ್ಲಾಧಿಕಾರಿ, ಬಾಗಲಕೋಟೆ ರವರಿಂದ ಇಳಕಲ್ ತಾಲ್ಲೂಕಿನ ಗುಡೂರ ಎಸ್.ಸಿ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು ಮರು ಪ್ರಸ್ತಾವನೆ ಸ್ವೀಕೃತವಾಗಿದ್ದು, ಪ್ರಸ್ತಾವನೆಯನ್ನು ನಿಯಮಾನುಸಾರ ಪೌರಾಡಳಿತ ನಿರ್ದೇಶನಾಲಯದ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ.

ಸಂಖ್ಯೆ:ನಅಇ 55 ಎಲ್‌ಎಕ್ಯೂ 2020.

(ಡಾ॥ ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **1507**

ಸದಸ್ಯರ ಹೆಸರು : **ಶ್ರೀ ಗಣೇಶ್ ಜೆ.ಎನ್.**

ಉತ್ತರಿಸುವ ದಿನಾಂಕ : **25/09/2020**

ಉತ್ತರಿಸುವ ಸಚಿವರು : **ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು**

	ಪ್ರಶ್ನೆ	ಉತ್ತರ
ಅ	ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಗೆ ಮೇಲ್ದರ್ಜೆಗೇರಿಸಲು ಇರುವ ಮಾನದಂಡಗಳೇನು; ಯಾವುದಾದರೂ ಅನಿವಾರ್ಯತೆ ಅಥವಾ ಕಾಯ್ದೆಯ ಅವಕಾಶಗಳು ಇದ್ದಲ್ಲಿ, ಮಾನದಂಡಗಳಿಗೆ ವಿನಾಯಿತಿ ಇದೆಯೇ; ಇದ್ದಲ್ಲಿ, ಅಂತಹ ಸಂದರ್ಭಗಳಲ್ಲಿ ಮೇಲ್ದರ್ಜೆಗೇರಿಸುವ ನಗರ ಪ್ರದೇಶಗಳಾವುವು; (ವಿವರ ನೀಡುವುದು)	ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಕರ್ನಾಟಕ ಪುರಸಭೆ ಅಧಿನಿಯಮ 1964 ಕಲಂ 349 ರನ್ವಯ ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುತ್ತದೆ: 1. ಆ ಗ್ರಾಮ ಪಂಚಾಯಿತಿಯ ಪ್ರದೇಶದ ಜನಸಂಖ್ಯೆ 10,000ಕ್ಕೆ ಕಡಿಮೆ ಇಲ್ಲದಂತೆ ಹಾಗೂ 20,000ಕ್ಕೆ ಹೆಚ್ಚಿಲ್ಲದಂತಿರಬೇಕು. 2. ಅಂತಹ ಪ್ರದೇಶದ ಜನಸಂಖ್ಯೆಯ ಜನಸಾಂದ್ರತೆಯು ಆ ಪ್ರದೇಶದ ಒಂದು ಚದರ ಕಿ.ಮೀ. ವಿಸ್ತೀರ್ಣಕ್ಕೆ 400 ಕ್ಕಿಂತ ಕಡಿಮೆ ಇಲ್ಲದಿರುವುದು. 3. ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗಾವಕಾಶಗಳ ಶೇಕಡಾವಾರು ಪ್ರಮಾಣವು ಒಟ್ಟು ಉದ್ಯೋಗದ ಪ್ರಮಾಣಕ್ಕಿಂತ ಶೇ.50ಕ್ಕಿಂತ ಕಡಿಮೆ ಇಲ್ಲದಿರುವುದು. ಆದರೆ, ದಿನಾಂಕ 19/03/2015ರಂದು ನಡೆದ ಸಚಿವ ಸಂಪುಟ ಸಭೆಯ ತೀರ್ಮಾನದನ್ವಯ 2011ರ ಜನಗಣತಿಯನ್ವಯ 15,000 ಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ಗ್ರಾಮ ಪಂಚಾಯಿತಿಗಳನ್ನು ಮಾತ್ರ ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಕ್ರಮವಹಿಸಲಾಗುತ್ತಿದೆ.

		ತಾಲೂಕು ಕೇಂದ್ರ ಕಾರ್ಯಸ್ಥಾನವು ಇದ್ದಂತಹ ಸಂದರ್ಭದಲ್ಲಿ ಕರ್ನಾಟಕ ಪುರಸಭೆಗಳ ಅಧಿನಿಯಮ 1964ರ ಕಲಂ 349ರನ್ವಯ ಪಟ್ಟಣ ಪಂಚಾಯಿತಿಯನ್ನಾಗಿ ಪರಿವರ್ತಿಸಲು ನಿಗದಿಪಡಿಸಿದ 10,000ಕ್ಕಿಂತ ಕಡಿಮೆ ಜನಸಂಖ್ಯೆಯನ್ನು ಹೊಂದಿದ್ದರೂ ಸಹ ಅಂಥ ಪ್ರದೇಶವನ್ನು ಪಟ್ಟಣ ಪಂಚಾಯತಿನ್ನಾಗಿ ಪರಿವರ್ತಿಸಲು ಕಾಯ್ದೆಯಲ್ಲಿ ಅವಕಾಶವಿರುತ್ತದೆ.
ಆ	ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆ ಮುಕ್ತಾಯವಾಗಿ 2 ವರ್ಷ ಕಳೆದರೂ ಈವರೆಗೆ ಅಧ್ಯಕ್ಷ, ಉಪಾಧ್ಯಕ್ಷ ಆಯ್ಕೆಯಾಗದೇ ಪ್ರಜಾತಂತ್ರ ವ್ಯವಸ್ಥೆ ಇಲ್ಲದೆ, ಆಡಳಿತ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಸಮಸ್ಯೆಗೆ ಸರ್ಕಾರದ ಕ್ರಮವೇನು?	ಬಂದಿದೆ. ಮಾನ್ಯ ಉಚ್ಚ ನ್ಯಾಯಾಲಯದ ಆದೇಶದನ್ವಯ ಹಾಗೂ ಸಚಿವ ಸಂಪುಟದ ಅನುಮೋದನೆಯನ್ವಯ ರಾಜ್ಯದ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳ 9ನೇ ಅವಧಿಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಸ್ಥಾನಗಳಿಗೆ ಮೀಸಲಾತಿ ನಿಗದಿಪಡಿಸಲು ಮಾರ್ಗಸೂಚಿಗಳನ್ನು ಪರಿಷ್ಕರಿಸಿ ದಿನಾಂಕ 11/09/2020ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ. ಸದರಿ ಮಾರ್ಗಸೂಚಿಗಳನ್ನು ಆಧರಿಸಿ, ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳ 9ನೇ ಅವಧಿಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಸ್ಥಾನಗಳಿಗೆ ಚುನಾವಣೆ ನಡೆಸಲು ಮೀಸಲಾತಿ ಅಧಿಸೂಚನೆಗಳನ್ನು ಪ್ರಕಟಿಸಲು ಶೀಘ್ರದಲ್ಲಿಯೇ ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ:ನಅಇ 57 ಎಲ್‌ಎಕ್ಯೂ 2020.

(ಡಾ॥ ನಾರಾಯಣ ಗೌಡ)

ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1511
ಸದಸ್ಯರ ಹೆಸರು	ಶ್ರೀ ತುಕಾರಾಮ್ ಈ. (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	25.09.2020.
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಸಚಿವರು

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ 3 ವರ್ಷಗಳಲ್ಲಿ ಬಳ್ಳಾರಿ ಜಿಲ್ಲಾ ಗಣಿಗಾರಿಕೆಯಿಂದ, ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ ಸಂಗ್ರಹಣೆಯಲ್ಲಿ ಸಂಗ್ರಹ ಮಾಡಿರುವ ಮೊತ್ತವೆಷ್ಟು. ಇದರಲ್ಲಿ ಸಂಡೂರು ತಾಲ್ಲೂಕಿನ ನಿಧಿಗೆ ಸಂಗ್ರಹಣೆಯಾದ ಮೊತ್ತವೆಷ್ಟು;</td><td>ಕಳೆದ 3 ವರ್ಷಗಳಲ್ಲಿ ಬಳ್ಳಾರಿ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ನಿಧಿಗೆ ಸಂಗ್ರಹಿಸಲಾಗಿರುವ ಡಿಎಂಎಫ್ ಮೊತ್ತದ ವರ್ಷವಾರು ವಿವರ ಈ ಕೆಳಗಿನಂತಿರುತ್ತದೆ.
<table>
<tr><th>ಕ್ರ.ಸಂ.</th><th>ವರ್ಷ</th><th>ಸಂಗ್ರಹಣೆಯಾದ ಮೊತ್ತ (ರೂ. ಲಕ್ಷಗಳಲ್ಲಿ)</th></tr>
<tr><td>1</td><td>2017-18</td><td>40860.68</td></tr>
<tr><td>2</td><td>2018-19</td><td>30319.33</td></tr>
<tr><td>3</td><td>2019-20</td><td>26417.60</td></tr>
<tr><td>4</td><td>2020-21 (ಆಗಸ್ಟ್ 2020 ರವರೆಗೆ)</td><td>8128.21</td></tr>
<tr><td colspan="2">ಒಟ್ಟು</td><td>105725.82</td></tr>
</table>
ಮೇಲ್ಕಾಣಿಸಲಾದ ಮೊತ್ತದಲ್ಲಿ ಸಂಡೂರು ತಾಲ್ಲೂಕಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮುಖ್ಯ / ಉಪಖನಿಜ ಗುತ್ತಿಗೆಗಳಿಂದ ಸಂಗ್ರಹಿಸಲಾಗಿರುವ ಡಿಎಂಎಫ್ ಮೊತ್ತದ ವರ್ಷವಾರು ವಿವರ ಈ ಕೆಳಗಿನಂತಿರುತ್ತದೆ.
<table>
<tr><th>ಕ್ರ.ಸಂ.</th><th>ವರ್ಷ</th><th>ಸಂಗ್ರಹಣೆಯಾದ ಮೊತ್ತ (ರೂ .ಲಕ್ಷಗಳಲ್ಲಿ)</th></tr>
<tr><td>1</td><td>2017-18</td><td>38990.06</td></tr>
<tr><td>2</td><td>2018-19</td><td>24500.16</td></tr>
<tr><td>3</td><td>2019-20</td><td>22986.64</td></tr>
<tr><td>4</td><td>2020-21 (ಆಗಸ್ಟ್ 2020 ರವರೆಗೆ)</td><td>7447.67</td></tr>
<tr><td colspan="2">ಒಟ್ಟು</td><td>93924.55</td></tr>
</table></td></tr>
<tr><td>ಆ)</td><td>ಸದರಿ ತಾಲ್ಲೂಕಿನ ಸಾಲಿನ ಮೊತ್ತದಲ್ಲಿ ಸರ್ವತೋಮುಖ ಅಭಿವೃದ್ಧಿಗೆ ಸರ್ಕಾರವು ಒದಗಿಸಿರುವ ಮೊತ್ತವೆಷ್ಟು?</td><td>ಬಳ್ಳಾರಿ ಜಿಲ್ಲೆಯಲ್ಲಿ ಕ್ರಿಯಾ ಯೋಜನೆಗಳಿಗೆ ಹಂಚಿಕೆ ಮಾಡಲಾಗಿರುವ ಒಟ್ಟು ರೂ. 150674.87 ಗಳ ಪೈಕಿ ಒಟ್ಟು ರೂ. 77743.93 ಗಳನ್ನು ಸಂಡೂರು ತಾಲ್ಲೂಕು ವ್ಯಾಪ್ತಿಯ ಯೋಜನೆ / ಕಾಮಗಾರಿಗಳಿಗೆ ಹಂಚಿಕೆ ಮಾಡಲಾಗಿರುತ್ತದೆ.</td></tr>
</table>

--2

ಇ)	ಡಿ.ಎಂ.ಎಫ್ ನಿಯಾಮವಳಿಗಳ ಪ್ರಕಾರ (ಗೈಡ್ ಲೈನ್ಸ್) ಹಣ ಒದಗಿಸಿರುವುದರಲ್ಲಿ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳಾವುವು?	ಬಳ್ಳಾರಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮುಖ್ಯ / ಉಪಖನಿಜ ಗುತ್ತಿಗೆಗಳಿಂದ ಸಂಗ್ರಹವಾಗುವ ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿಯ ನಿಯಮಾನುಸಾರ ವಿನಿಯೋಗಕ್ಕಾಗಿ ಪ್ರಧಾನ ಮಂತ್ರಿ ಖನಿಜ ಕ್ಷೇತ್ರ ಕಲ್ಯಾಣ ಯೋಜನೆಯ ಮಾರ್ಗಸೂಚಿಗಳು ಮತ್ತು ಜಿಲ್ಲಾ ಖನಿಜ ಪ್ರತಿಷ್ಠಾನ ನಿಯಮಗಳು, 2016ರ ನಿಯಮ 12(1 ರಿಂದ 9) ಮತ್ತು 18 (1 ರಿಂದ 3) ರನ್ವಯ ನಿಧಿಯ ಬಳಕೆಗಾಗಿ ಸಂಬಂಧಿತ ಇಲಾಖೆ (ಲೈನ್ ಡಿಪಾರ್ಟ್ ಮೆಂಟ್ಸ್) ಗಳಿಂದ ಕ್ರಿಯಾ ಯೋಜನಾ ಪ್ರಸ್ತಾವನೆಗಳನ್ನು ಪಡೆದು, ವ್ಯವಸ್ಥಾಪಕ ಸಮಿತಿಯಲ್ಲಿ ಪರಿಶೀಲಿಸಿ ಕ್ರೂಢೀಕರಿಸಿ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಗೌರ್ನಿಂಗ್ ಕೌನ್ಸಿಲ್ ಸಭೆಗಳಲ್ಲಿ ಮಂಡಿಸಿ / ಚರ್ಚಿಸಿ ನಿಯಮಾನುಸಾರ ಅನುಮೋದನೆ ಪಡೆದು ಡಿಎಂಎಫ್ ನಿಯಮಗಳು, 2016ರ ನಿಯಮ 12(9) ರನ್ವಯ ಕೆ.ಎಂ.ಇ.ಆರ್.ಸಿ ರವರ ಸಹಮತಿಯೊಂದಿಗೆ ನಿಯಮಾನುಸಾರ ಆಡಳಿತಾತ್ಮಕ ಮತ್ತು ಆರ್ಥಿಕ ಅನುಮೋದನೆಗಳನ್ನು ಪಡೆಯಲಾಗಿರುತ್ತದೆ. ಮುಂದುವರೆದು, ಬಳ್ಳಾರಿ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ನ ನಿಧಿಗೆ ಸಂಗ್ರಹವಾಗುವ ನಿಧಿಯ ಪೈಕಿ ಸಂಡೂರು ತಾಲ್ಲೂಕಿನ ಕೊಡುಗೆಯು ಸರಿ ಸುಮಾರು ಶೇಕಡಾ 82% ಇರುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿನ ಖನಿಜ ಗಣಿಗಾರಿಕೆಯಲ್ಲಿ ಸಂಡೂರು ತಾಲ್ಲೂಕಿನಲ್ಲಿ ಹೆಚ್ಚಿನ ಪಾತ್ರವಿದ್ದು ಇತರೆ ತಾಲ್ಲೂಕುಗಳಲ್ಲಿಯೂ ಮುಖ್ಯ / ಉಪಖನಿಜ ಗಣಿಗಾರಿಕೆ, ಸಾಗಾಣಿಕೆ, ಸಂಸ್ಕರಣೆ, ಕ್ರಷರ್ಸ್ ಘಟಕಗಳು, ಖನಿಜಾಧಾರಿತ ಮುಖ್ಯ / ಮಧ್ಯಮ/ ಸಣ್ಣ ಕೈಗಾರಿಕೆ, ಪ್ರತ್ಯಕ್ಷ –ಪರೋಕ್ಷ ಗಣಿಗಾರಿಕೆ ಆಧಾರಿತ ವ್ಯಕ್ತಿಗಳು / ಕುಟುಂಬಗಳು ವಿಸ್ತರಿಸಿರುತ್ತದೆ. ಮುಂದುವರೆದು ಬಳ್ಳಾರಿ ಜಿಲ್ಲೆಯು ಶಿಕ್ಷಣ, ಆರೋಗ್ಯ, ಕುಡಿಯುವ ನೀರು ವಿಷಯಗಳಲ್ಲಿ ಹಿಂದುಳಿದ ಜಿಲ್ಲೆಯಾಗಿರುವುದರಿಂದ ಈ ವಿಷಯವನ್ನು ಗಮನದಲ್ಲಿರಿಸಿ, ಹಾಗೂ ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಯನ್ನು ಪರಿಗಣಿಸಿ ಶಿಕ್ಷಣ, ಆರೋಗ್ಯ, ಕುಡಿಯುವ ನೀರಿನ ಯೋಜನೆಗಳಿಗೆ ಆದ್ಯತೆಯನ್ನು ನೀಡಿ, ಎಲ್ಲಾ ತಾಲ್ಲೂಕುಗಳಿಗೂ ವಿಸ್ತರಿಸುವಂತೆ ಕ್ರಿಯಾ ಯೋಜನೆಗಳನ್ನು ಅನುಮೋದಿಸಲಾಗಿರುತ್ತದೆ.

ಸಿಐ 471 ಎಂಎಂಎನ್ 2020

(ಸಿ.ಸಿ. ಪಾಟೀಲ)
ಗಣಿ ಮತ್ತು ಭೂವಿಜ್ಞಾನ ಸಚಿವರು

ಸಿ.ಸಿ. ಪಾಟೀಲ
ಗಣಿ ಮತ್ತು ಭೂವಿಜ್ಞಾನ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1517
ಸದಸ್ಯರ ಹೆಸರು	:	ಡಾ: ಅಜಯ್ ಧರ್ಮ ಸಿಂಗ್
ಉತ್ತರಿಸುವ ಸಚಿವರು	:	ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು
ಉತ್ತರಿಸಬೇಕಾದ ದಿನಾಂಕ	:	25-09-2020

ಪ್ರಶ್ನೆ	ಉತ್ತರ
ಅ) ತೋಟಗಾರಿಕೆ ಇಲಾಖೆಯಲ್ಲಿ ಆಧುನಿಕ ತಂತ್ರಜ್ಞಾನ ಬೆಳೆ ವಿಧಾನದ ಬೆಳೆಗಳು ಯಾವುವು;	ತೋಟಗಾರಿಕೆ ಇಲಾಖೆಯಲ್ಲಿ ಆಧುನಿಕ ತಂತ್ರಜ್ಞಾನ ಬೆಳೆ ವಿಧಾನಗಳಾದ ಸಂರಕ್ಷಿತ ಬೇಸಾಯ ಪದ್ಧತಿಯಲ್ಲಿ ಪಾಲಿಮನೆ, ನೆರಳು ಪರದೆ ಮನೆ ಹಾಗೂ ಪ್ಲಾಸ್ಟಿಕ್ ಮಲ್ಚಿಂಗ್ ಕೀಟ ಮತ್ತು ರೋಗ ನಿಯಂತ್ರಣಕ್ಕೆ ಜೈವಿಕ ನಿಯಂತ್ರಕಗಳನ್ನು ಬಳಸಿಕೊಂಡು ತರಕಾರಿ ಬೆಳೆಗಳು, ಹಣ್ಣಿನ ಬೆಳೆಗಳನ್ನು ಹಾಗೂ ಹೂವಿನ ಬೆಳೆಗಳನ್ನು ಬೆಳೆಸಲಾಗುತ್ತಿದೆ., ಬಾಳೆಯಲ್ಲಿ ಅಂಗಾಂಶ ಕೃಷಿ ಮತ್ತು ತೆರೆದ ಪ್ರದೇಶದಲ್ಲಿ ಹೈಬ್ರೀಡ್ ತರಕಾರಿಗಳನ್ನು ಬೆಳೆಸಲು ಪ್ರೋತ್ಸಾಹಿಸಲಾಗುತ್ತಿದೆ.
ಆ) ಯಾವ ಬೆಳೆಗಳಲ್ಲಿ ಯಾಂತ್ರಿಕ ಕಟಾವು ಯಂತ್ರೋಪಕರಣಗಳನ್ನು ಬಳಸಲಾಗುತ್ತಿದೆ; (ಬೆಳೆಗಳ ವಿವರ ನೀಡುವುದು)	ರಾಷ್ಟ್ರೀಯ ಕೃಷಿ ವಿಸ್ತರಣೆ ಮತ್ತು ತಂತ್ರಜ್ಞಾನ ಅಭಿಯಾನ ಯೋಜನೆಯಡಿ ಕೃಷಿ ಯಾಂತ್ರೀಕರಣ ಉಪ ಅಭಿಯಾನ (SMAM) ಹಾಗೂ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಗಳಡಿಯಲ್ಲಿ ಮಾವು, ಆಲೂಗಡ್ಡೆ, ತೆಂಗು ಅಡಿಕೆ, ನಿಂಬೆ, ಕ್ಯಾರೆಟ್, ಸಪೋಟ ಹಾಗೂ ಈರುಳ್ಳಿ ಬೆಳೆಯಲ್ಲಿ ಯಾಂತ್ರಿಕ ಕಟಾವು ಮಾಡಲು ಯಂತ್ರೋಪಕರಣಗಳನ್ನು ಬಳಸಲಾಗುತ್ತಿದೆ.
ಇ) ಆಲೂಗಡ್ಡೆ ಹಾಗೂ ಶೇಂಗಾ ಬೆಳೆಗಳನ್ನು ಯಂತ್ರೋಪಕರಣಗಳಿಂದ ಕಟಾವು ಮಾಡಲು ತಂತ್ರಜ್ಞಾನ ಬಳಸಲಾಗಿದೆಯೇ; ಹಾಗಿದ್ದಲ್ಲಿ ಯಾವ ಜಿಲ್ಲೆಗಳಲ್ಲಿ ಕ್ರಮಕೈಗೊಳ್ಳಲಾಗಿದೆ; (ವಿವರವಾದ ವರದಿ ನೀಡುವುದು)	ಹೌದು, ಹಾಸನ ಮತ್ತು ಕೋಲಾರ ಜಿಲ್ಲೆಯಲ್ಲಿ ಆಲೂಗಡ್ಡೆ ಕಟಾವು ಮಾಡಲು ಯಂತ್ರೋಪಕರಣಗಳ ತಂತ್ರಜ್ಞಾನ ಬಳಸಲಾಗಿದೆ. ಹಾಸನ ಜಿಲ್ಲೆಯ ದುದ್ದ, ಕಸಬಾ, ಶಾಂತಿ ಗ್ರಾಮ, ಸಾಲಗಾಮೆ, ಗಂಡಸಿ ದೊಡ್ಡಮಗ್ಗೆ, ಬೈಚನಹಳ್ಳಿ, ಹಳ್ಳಿ ಮೈಸೂರು ಹೋಬಳಿಗಳಲ್ಲಿ ಹೊಯ್ಸಳ ರೈತ ಉತ್ಪಾದಕ ಸಂಸ್ಥೆ ಮತ್ತು ಪ್ರಕೃತಿ ರೈತ ಉತ್ಪಾದಕ ಸಂಸ್ಥೆಗಳು 2018 ರಿಂದ 2020 ರವರೆಗೆ ಸುಮಾರು 230 ರೈತರ 400 ಎಕರೆ ಪ್ರದೇಶದಲ್ಲಿ ಆಲೂಗಡ್ಡೆ ಬಿತ್ತನೆ ಮಾಡುವ, ಸಸ್ಯ ಸಂರಕ್ಷಣೆ ಔಷಧಿಗಳನ್ನು ಸಿಂಪರಣೆ ಮಾಡುವ ಹಾಗೂ ಕಟಾವು ಮಾಡುವ ನೂತನ ತಂತ್ರಜ್ಞಾನದ ಯಂತ್ರೋಪಕರಣಗಳನ್ನು ಉಪಯೋಗಿಸುತ್ತಿದ್ದು, ಪ್ರಾತ್ಯಕ್ಷತೆ ಮೂಲಕ ಜಿಲ್ಲೆಯ ಇತರೆ ಆಲೂಗಡ್ಡೆ ಬೆಳೆಗಾರರಿಗೂ ಈ ಯಾಂತ್ರೀಕರಣದ ಬಗ್ಗೆ ಪರಿಚಯಿಸಲಾಗಿರುತ್ತದೆ.

	ರಾಜ್ಯದಲ್ಲಿ ಶೇಂಗಾ ಬೆಳೆ ಬೆಳೆಯುವ ಜಿಲ್ಲೆಗಳಾದ ತುಮಕೂರು, ಬಳ್ಳಾರಿ, ಚಿತ್ರದುರ್ಗ, ಗದಗ, ದಾರವಾಡ, ದಾವಣಗೆರೆ, ಕೋಲಾರ, ರಾಯಚೂರುಗಳಲ್ಲಿ ಯಂತ್ರೋಪಕರಣಗಳ ಬಳಕೆಯಿಂದ ಬಾಗಶ: ಪ್ರದೇಶದಲ್ಲಿ ಕಟಾವು ಮಾಡಲಾಗುತ್ತಿದೆ. ಇದರಲ್ಲಿ ಶೇ.10 ಪ್ರದೇಶದಲ್ಲಿ ಕಟಾವುಮಾಡಲು (ನೆಲದಿಂದ ಗಿಡಕೀಳಲು) ಹಾಗೂ ಗಿಡದಿಂದ ಕಾಯಿಗಳನ್ನು ಬೇರ್ಪಡಿಸಲು ಶೇ.20-30 ರಷ್ಟು ಯಂತ್ರೋಪಕರಣಗಳ ಬಳಕೆ ಮಾಡಲಾಗುತ್ತದೆ. ಶೇಂಗಾದಲ್ಲಿ ಕಟಾವು ಹಾಗೂ ಗಿಡದಿಂದ ಕಾಯಿಗಳನ್ನು ಬೇರ್ಪಡಿಸುವ ಯಂತ್ರೋಪಕರಣಗಳ ಕುರಿತು ರೈತರಿಗೆ ವಿವಿಧ ತರಬೇತಿಗಳಲ್ಲಿ ಪ್ರಚಾರ, ಪ್ರಾತ್ಯಕ್ಷಿಕೆಗಳು ಹಾಗೂ ರೈತ ಸಂಪರ್ಕ ಕೇಂದ್ರಗಳ ಮೂಲಕ ರೈತರಿಗೆ ಮಾಹಿತಿ ನೀಡಲಾಗಿದೆ.ಅಲ್ಲದೆ,ಕೃಷಿ ಯಂತ್ರಧಾರೆ ಮೂಲಕ ಶೇಂಗಾ ಬೆಳೆ ಕಟಾವು ಯಂತ್ರಗಳನ್ನು ರೈತರಿಗೆ ಬಾಡಿಗೆ ದರದಲ್ಲಿ ನೀಡಲಾಗುತ್ತಿದೆ.

ಸಂಖ್ಯೆ: HORTI 372 HGM 2020

(ನಾರಾಯಣಗೌಡ)

ಪೌರಾಡಳಿತ,

ತೋಟಗಾರಿಕೆ ಮತ್ತು

ರೇಷ್ಮೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1518

ಸದಸ್ಯರ ಹೆಸರು : ಡಾ|| ಅಜಯ್ ಧರ್ಮ ಸಿಂಗ್

ಉತ್ತರಿಸಬೇಕಾದ ಸಚಿವರು : ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಉತ್ತರಿಸಬೇಕಾದ ದಿನಾಂಕ : 25-09-2020

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿನ ತೋಟಗಾರಿಕೆಯ ಸಾವಯವ ಬೆಳೆಗಳು ಯಾವುವು; ಈ ಬೆಳೆಗಳನ್ನು ಬೆಳೆದಿರುವ ಭೂ ವಿಸ್ತೀರ್ಣ ಎಷ್ಟು;	ರಾಜ್ಯದಲ್ಲಿ ಸಾವಯವ ಕೃಷಿಗೆ ಪೂರಕವಾದ ಸಮಗ್ರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೃಷಿ ಇಲಾಖೆ ವತಿಯಿಂದ ಕಳೆದ 15 ವರ್ಷಗಳಿಂದ ಅನುಷ್ಠಾನಿಸಲಾಗುತ್ತಿದ್ದು, 2020-21 ನೇ ಸಾಲಿನಿಂದ ತೋಟಗಾರಿಕೆ ಇಲಾಖೆ ವತಿಯಿಂದ ಪರಂಪರಾಗತ ಕೃಷಿ ವಿಕಾಸ ಯೋಜನೆ ಎಂಬ ಕೇಂದ್ರ ಪುರಸ್ಕೃತ ಯೋಜನೆಯಡಿ ಸಾವಯವ ಕೃಷಿಗೆ ಉತ್ತೇಜನ ನೀಡಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸಾವಯವ ಬೇಸಾಯವು ಸಮಗ್ರ ಕೃಷಿ ಪದ್ಧತಿಯಾಗಿದ್ದು, ಇದರಡಿ ವೈವಿಧ್ಯಮಯ ಬಗೆಯ ಬೆಳೆಗಳು ಅಂದರೆ ಕೃಷಿ, ತೋಟಗಾರಿಕೆ ಬೆಳೆಗಳ ಸಮಗ್ರ ಸಾಗುವಳಿಗೆ ಒತ್ತು ನೀಡಲಾಗುತ್ತದೆ. ಕೃಷಿ ಇಲಾಖೆ ವತಿಯಿಂದ ರಾಜ್ಯದಲ್ಲಿ ಇದುವರೆಗೆ ಒಟ್ಟು ಅಂದಾಜು 1,05,000 ಹೆಕ್ಟೇರ್ ಪ್ರದೇಶದಲ್ಲಿ ಸಾವಯವ ಕೃಷಿ ಅಭಿವೃದ್ಧಿಗೆ ಉತ್ತೇಜನ ನೀಡಲಾಗಿರುತ್ತದೆ. ಪ್ರಸ್ತುತ ರಾಜ್ಯದಲ್ಲಿ ಪ್ರಮುಖವಾಗಿ ಹಣ್ಣಿನ ಬೆಳೆಗಳಾದ ಮಾವು, ಕಿತ್ತಳೆ, ಸೀಬೆ, ಪಪ್ಪಾಯ, ನಿಂಬೆ, ಹಲಸು, ಬಾಳೆ, ಸಪೋಟ, ತರಕಾರಿ ಬೆಳೆಗಳಾದಂತಹ ಮೆಣಸಿನಕಾಯಿ, ಕುಂಬಳ, ಈರುಳ್ಳಿ, ಬಹುವಾರ್ಷಿಕ ತೋಟದ ಬೆಳೆಗಳಾದಂತಹ ತೆಂಗು, ಗೋಡಂಬಿ, ಕಾಫಿ ಅಡಿಕೆ ಹಾಗೂ ಸಾಂಬಾರು/ಮಸಾಲೆ ಬೆಳೆಗಳಾದಂತಹ ಅರಿಶಿಣ, ಕಾಳುಮೆಣಸು, ಜಾಯಿಕಾಯಿ, ಏಲಕ್ಕಿ, ಶುಂಠಿ ಬೆಳೆಗಳನ್ನು ಪ್ರೋತ್ಸಾಹಿಸಲಾಗುತ್ತಿದೆ.

ಆ)	ಸಾವಯವ ಬೆಳೆಗಳನ್ನು ಬೆಳೆಸಲು ಪ್ರೋತ್ಸಾಹಧನ ನೀಡಲಾಗುತ್ತಿದೆಯೇ, ಹಾಗಿದ್ದಲ್ಲಿ 2020-21 ನೇ ಸಾಲಿನಲ್ಲಿ ನಿಗಧಿಪಡಿಸಿರುವ ಮೊತ್ತವೆಷ್ಟು.	ಸಾವಯವ ಬೆಳೆಗಳನ್ನು ಬೆಳೆಸಲು ಪ್ರೋತ್ಸಾಹಧನ ನೀಡಲಾಗುತ್ತಿದೆ. 2020-21 ನೇ ಸಾಲಿನಲ್ಲಿ ಈ ಉದ್ದೇಶಕ್ಕಾಗಿ ತೋಟಗಾರಿಕೆ ಇಲಾಖೆ ವತಿಯಿಂದ ರೂ.1650.00 ಲಕ್ಷ ನಿಗಧಿಪಡಿಸಲಾಗಿದೆ. ಕೃಷಿ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ಸಾವಯವ ಕೃಷಿ ಅಳವಡಿಕೆ ಮತ್ತು ಪ್ರಡೀಕರಣ ಕಾರ್ಯಕ್ರಮದಡಿ ಸಾವಯವ ಪ್ರಮಾಣೀಕರಣಕ್ಕೆ ಪ್ರೋತ್ಸಾಹಧನ ನೀಡಲಾಗುತ್ತಿದ್ದು, 2020-21 ನೇ ಸಾಲಿಗೆ ರೂ. 100.00 ಲಕ್ಷಗಳನ್ನು ಒದಗಿಸಲಾಗಿದೆ.
ಇ)	ಸಾವಯವ ಬೆಳೆಗಳ ಮಾರಾಟಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)	ಕೃಷಿ ಇಲಾಖೆಯಿಂದ ಪಡೆದಿರುವ ಮಾಹಿತಿಯಂತೆ, ಸಾವಯವ ಉತ್ಪನ್ನಗಳ ಗುಣಮಟ್ಟ ಮತ್ತು ಮಾರುಕಟ್ಟೆ ಸಂಬಂಧಿತ ಚಟುವಟಿಕೆಗಳನ್ನು ಕೈಗೊಳ್ಳಲು ರಾಜ್ಯಾದ್ಯಂತ 15 ಪ್ರಾಂತೀಯ ಸಹಕಾರ ಸಾವಯವ ಕೃಷಿಕರ ಸಂಘಗಳ ಒಕ್ಕೂಟಗಳನ್ನು ರಚಿಸಲಾಗಿದ್ದು, ಈ ಒಕ್ಕೂಟಗಳ ಮೂಲಕ ಸಾವಯವ ಉತ್ಪನ್ನಗಳ ಸಂಸ್ಕರಣೆ, ಮೌಲ್ಯವರ್ಧನೆ ಮತ್ತು ಮಾರಾಟ ಚಟುವಟಿಕಗಳನ್ನು ಕೈಗೊಳ್ಳಲಾಗುತ್ತಿದೆ. ಈ ಎಲ್ಲಾ ಒಕ್ಕೂಟಗಳನ್ನು ಒಗ್ಗೂಡಿಸಿ ರಾಜ್ಯದಲ್ಲಿ ಕರ್ನಾಟಕ ರಾಜ್ಯ ಸಹಕಾರ ಸಾವಯವ ಉತ್ಪನ್ನಗಳ ಮಾರಾಟ ಮಹಾಮಂಡಳಿಯನ್ನು ರಚಿಸಲಾಗಿದೆ. 2020-21 ನೇ ಸಾಲಿನಿಂದ ತೋಟಗಾರಿಕೆ ಇಲಾಖೆ ವತಿಯಿಂದ ಅನುಷ್ಠಾನಿಸಲಾಗುತ್ತಿರುವ ಪರಂಪರಾಗತ ಕೃಷಿ ವಿಕಾಸ ಯೋಜನೆಯಡಿ ಗುಚ್ಛ ಮಾದರಿಯಲ್ಲಿ ಸಾವಯವ ತೋಟಗಳನ್ನು ಅಭಿವೃದ್ಧಿಪಡಿಸಿ, ಕೃಷಿ ಇಲಾಖೆ ವತಿಯಿಂದ ರೂಪಿಸಲಾಗಿರುವ ಒಕ್ಕೂಟಗಳೊಂದಿಗೆ ಸಮ್ಮಿಲನಗೊಳಿಸಿ ಕ್ರಮವಹಿಸಲು ಯೋಜಿಸಲಾಗಿದೆ.

ಸಂಖ್ಯೆ: HORTI 373 HGM 2020

(ನಾರಾಯಣಗೌಡ)

ಪೌರಾಡಳಿತ, ತೋಟಗಾರಿಕೆ ಮತ್ತು

ರೇಷ್ಮೇ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1519
ಸದಸ್ಯರ ಹೆಸರು	:	ಶ್ರೀ ರಿಜ್ವಾನ್ ಅರ್ಷದ್ (ಶಿವಾಜಿನಗರ)
ಉತ್ತರಿಸಬೇಕಾದ ದಿನಾಂಕ	:	25-09-2020
ಉತ್ತರಿಸುವ ಸಚಿವರು	:	ಮಾನ್ಯ ನಗರಾಭಿವೃದ್ಧಿ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಗುರುತಿಸಲಾದ ಸ್ಮಾರ್ಟ್ ಸಿಟಿಗಳ ಸಂಖ್ಯೆ ಎಷ್ಟು ಹಾಗೂ ಯಾವ ಜಿಲ್ಲೆಗಳಲ್ಲಿ ಈ ಯೋಜನೆ ಪ್ರಾರಂಭಿಸಲಾಗಿದೆ.	ಸ್ಮಾರ್ಟ್ ಸಿಟಿ ಅಭಿಯಾನದಡಿ ರಾಜ್ಯದ ಈ ಕೆಳಕಂಡ 7 ನಗರಗಳು ಆಯ್ಕೆಯಾಗಿದ್ದು ಯೋಜನೆಯನ್ನು ಅನುಷ್ಠಾನ- ಗೊಳಿಸಲಾಗುತ್ತಿದೆ. 1) ಬೆಳಗಾವಿ 2) ದಾವಣಗೆರೆ 3) ಹುಬ್ಬಳ್ಳಿ-ಧಾರವಾಡ 4) ಮಂಗಳೂರು 5) ಶಿವಮೊಗ್ಗ 6) ತುಮಕೂರು ಮತ್ತು 7) ಬೆಂಗಳೂರು.
ಆ	ಈ ಯೋಜನೆ ಪ್ರಾರಂಭವಾಗಿದ್ದು ಯಾವಾಗ; ಯಾವ ಅವಧಿಯಲ್ಲಿ ಮುಕ್ತಾಯ ಮಾಡಬೇಕಿತ್ತು; ಮುಕ್ತಾಯವಾಗದಿರಲು ಕಾರಣವೇನು; (ವಿವರ ನೀಡುವುದು)	ಸ್ಮಾರ್ಟ್ ಸಿಟಿ ಅಭಿಯಾನವು 2015-16ರಲ್ಲಿ ಪ್ರಾರಂಭವಾಗಿದ್ದು, ಮಿಷನ್ ಸೂಚಿಯನುಸಾರ ಯೋಜನಾ ಅವಧಿಯು 5 ವರ್ಷಗಳಾಗಿರುತ್ತದೆ. ಮುಂದುವರೆದು, ರಾಜ್ಯದ 7 ನಗರಗಳು ಈ ಕೆಳಗಿನಂತೆ 3 ಹಂತಗಳಲ್ಲಿ ಹಾಗೂ ವಿವಿಧ ಕಾಲಘಟ್ಟದಲ್ಲಿ ಆಯ್ಕೆಯಾಗಿರುತ್ತವೆ.

ಕ್ರ. ಸಂ	ನಗರಗಳು	ಸ್ಪರ್ಧೆ ಸುತ್ತು	ಆಯ್ಕೆಯಾದ ದಿನಾಂಕ	ಯೋಜನೆ ಪೂರ್ಣಗೊಳಿಸಬೇಕಾದ ದಿನಾಂಕ
1	ಬೆಳಗಾವಿ	1	28.01.2016	ಜನವರಿ-2021
2	ದಾವಣಗೆರೆ	1	28.01.2016	ಜನವರಿ-2021
3	ಹುಬ್ಬಳ್ಳಿ-ಧಾರವಾಡ	2	03.10.2016	ಅಕ್ಟೋಬರ್-2021
4	ಮಂಗಳೂರು	2	03.10.2016	ಅಕ್ಟೋಬರ್-2021
5	ಶಿವಮೊಗ್ಗ	2	03.10.2016	ಅಕ್ಟೋಬರ್-2021
6	ತುಮಕೂರು	2	03.10.2016	ಅಕ್ಟೋಬರ್-2021
7	ಬೆಂಗಳೂರು	3	23.06.2017	ಜೂನ್-2022

ಇದರ ಅನುಸಾರವಾಗಿ ಸ್ಮಾರ್ಟ್ ಸಿಟಿ ಕಾಮಗಾರಿಗಳನ್ನು 5 ವರ್ಷಗಳ ಯೋಜನಾ ಅವಧಿಯಲ್ಲಿ ಪೂರ್ಣಗೊಳಿಸಲು ಎಲ್ಲಾ 7 ಸ್ಮಾರ್ಟ್ ಸಿಟಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

ಎಲ್ಲಾ 7 ನಗರಗಳಲ್ಲಿ ಕಾಮಗಾರಿಗಳ ಅನುಷ್ಠಾನ ಪ್ರಗತಿಯಲ್ಲಿರುತ್ತದೆ. ಯೋಜನೆಯಡಿ ಪ್ರಮುಖವಾಗಿ ಸ್ಮಾರ್ಟ್ ರಸ್ತೆಗಳ ಅಭಿವೃದ್ಧಿ, ಒಳಚರಂಡಿ ಹಾಗೂ ಇನ್ನಿತರೆ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದ್ದು, ಸದರಿ ಯೋಜನೆಗಳನ್ನು ನಗರದ ಜನನಿಬಿಡ ಪ್ರದೇಶಗಳಲ್ಲಿ ಅನುಷ್ಠಾನ-ಗೊಳಿಸಬೇಕಾಗಿರುತ್ತದೆ. ಅಲ್ಲದೇ ಈ ಯೋಜನೆಗಳಲ್ಲಿ ಬೆಸ್ಕಾಂ, ಬಿಎಸ್ಎನ್ಎಲ್, ನೀರು ಸರಬರಾಜು ಮಂಡಳಿ ಹಾಗೂ ಇತರೆ ಇಲಾಖೆಗಳ ಯುಟಿಲಿಟಿ ಶಿಫ್ಟಿಂಗ್ ಅವಶ್ಯಕತೆಯಿದ್ದು, ಇದರಿಂದ ಕಾಮಗಾರಿಗಳ ಅನುಷ್ಠಾನದಲ್ಲಿ ಹೆಚ್ಚಿನ ಸಮನ್ವಯದ ಅವಶ್ಯಕತೆ ಇರುತ್ತದೆ. ಈ ಕಾರಣಗಳಿಂದಾಗಿ ಯೋಜನಾ ಅನುಷ್ಠಾನದಲ್ಲಿ ಸ್ವಲ್ಪ ವಿಳಂಬವಾಗಿದ್ದು, ನಿಗದಿತ ಅವಧಿಯಲ್ಲಿಯೇ ಮುಕ್ತಾಯಗೊಳಿಸಲು ಅವಶ್ಯ ಕ್ರಮಗಳನ್ನು ಕೈಗೊಳ್ಳಲು ವ್ಯವಸ್ಥಾಪಕ ನಿರ್ದೇಶಕರು, ಸ್ಮಾರ್ಟ್ ಸಿಟಿ ಇವರಿಗೆ ಕಾಲಕಾಲಕ್ಕೆ ಸಲಹೆ-ಸೂಚನೆ ನೀಡಲಾಗುತ್ತಿದೆ.

<table>
<tr>
<td>ಇ</td>
<td>ಸದರಿ ಯೋಜನೆ ವಿಳಂಬವಾಗುತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td>
<td>ಯೋಜನೆಯಡಿ ಪ್ರಮುಖವಾಗಿ ಸ್ಮಾರ್ಟ್ ರಸ್ತೆಗಳ ಅಭಿವೃದ್ಧಿ, ಒಳಚರಂಡಿ ಹಾಗೂ ಇನ್ನಿತರೆ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದ್ದು, ಸದರಿ ಯೋಜನೆಗಳನ್ನು ನಗರದ ಜನನಿಬಿಡ ಪ್ರದೇಶಗಳಲ್ಲಿ ಅನುಷ್ಠಾನ- ಗೊಳಿಸಬೇಕಾಗಿರುತ್ತದೆ.

ಅಲ್ಲದೇ ಈ ಯೋಜನೆಗಳಲ್ಲಿ ಬೆಸ್ಕಾಂ, ಬಿಎಸ್‌ಎನ್‌ಎಲ್, ನೀರು ಸರಬರಾಜು ಮಂಡಳಿ ಹಾಗೂ ಇತರೆ ಇಲಾಖೆಗಳ ಯುಟಿಲಿಟಿ ಶಿಫ್ಟಿಂಗ್ ಅವಶ್ಯಕತೆಯಿದ್ದು, ಇದರಿಂದ ಕಾಮಗಾರಿಗಳ ಅನುಷ್ಠಾನದಲ್ಲಿ ಹೆಚ್ಚಿನ ಸಮಯದ ಅವಶ್ಯಕತೆ ಇರುತ್ತದೆ.

ಯೋಜನೆಯ ಅನುಷ್ಠಾನಕ್ಕೆ ಎದುರಾಗಿರುವ ಮೇಲಿನ ಹಲವು ಸವಾಲುಗಳಿಗೆ ಸೂಕ್ತ ಪರಿಹಾರಗಳನ್ನು ಕಂಡುಕೊಂಡು ಸಾರ್ವಜನಿಕರಿಗೆ ತೊಂದರೆಯಾಗದಂತೆ ಕಾಮಗಾರಿಗಳನ್ನು ತ್ವರಿತವಾಗಿ ಅನುಷ್ಠಾನಗೊಳಿಸಲಾಗುತ್ತಿದೆ.</td>
</tr>
<tr>
<td>ಈ</td>
<td>ಸದರಿ ಯೋಜನೆಗೆ ಕೇಂದ್ರ ಸರ್ಕಾರದಿಂದ ಬರಬೇಕಾದ ಅನುದಾನ ಬಂದಿದೆಯೇ; ಬಂದಿದ್ದಲ್ಲಿ ಎಷ್ಟು ಅನುದಾನ ಬಂದಿದೆ ಹಾಗೂ ಎಷ್ಟು ಬಾಕಿಯಿದೆ;</td>
<td>ಮಾರ್ಗಸೂಚಿಯನುಸಾರ ಸ್ಮಾರ್ಟ್ ಸಿಟಿ ಯೋಜನೆಯಡಿ ಆಯ್ಕೆಗೊಂಡ ಪ್ರತಿ ನಗರಗಳಿಗೆ ಕೇಂದ್ರ ಸರ್ಕಾರವು ಪ್ರತಿ ವರ್ಷ ರೂ. 100 ಕೋಟಿಯಂತೆ ಯೋಜನಾ ಅವಧಿಯ 5 ವರ್ಷಗಳಲ್ಲಿ ರೂ. 500 ಕೋಟಿಗಳಷ್ಟು ಅನುದಾನ ನೀಡಲಿದೆ.

ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಹಾಗೂ ಬಾಕಿ ಇರುವ ಅನುದಾನಗಳ ವಿವರಗಳು ಈ ಕೆಳಗಿನಂತಿವೆ;

(ರೂ. ಕೋಟಿಗಳಲ್ಲಿ)
<table>
<tr><th>ಕ್ರ.ಸ.</th><th>ನಗರಗಳು</th><th>ಮೀಸಲಿಟ್ಟ ಮೊತ್ತ</th><th>ಬಿಡುಗಡೆಯಾದ ಮೊತ್ತ</th><th>ಬಾಕಿ</th></tr>
<tr><td>1</td><td>ಬೆಳಗಾವಿ</td><td>500</td><td>196</td><td>304</td></tr>
<tr><td>2</td><td>ದಾವಣಗೆರೆ</td><td>500</td><td>196</td><td>304</td></tr>
<tr><td>3</td><td>ಹುಬ್ಬಳ್ಳಿ-ಧಾರವಾಡ</td><td>500</td><td>196</td><td>304</td></tr>
<tr><td>4</td><td>ಮಂಗಳೂರು</td><td>500</td><td>190</td><td>310</td></tr>
<tr><td>5</td><td>ಶಿವಮೊಗ್ಗ</td><td>500</td><td>196</td><td>304</td></tr>
<tr><td>6</td><td>ತುಮಕೂರು</td><td>500</td><td>245</td><td>255</td></tr>
<tr><td>7</td><td>ಬೆಂಗಳೂರು</td><td>500</td><td>155</td><td>345</td></tr>
<tr><td></td><td>ಒಟ್ಟು</td><td>3500</td><td>1374</td><td>2126</td></tr>
</table>
</td>
</tr>
<tr>
<td>ಉ</td>
<td>ಸದರಿ ಯೋಜನೆಯಡಿ ಸ್ವಚ್ಛ ಭಾರತದ ಕಸ ನಿರ್ವಹಣೆಗೆ ನಿಗದಿಪಡಿಸಿದ ಅನುದಾನವೆಷ್ಟು; ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಅನುದಾನ ಖರ್ಚು ಮಾಡಲಾಗಿದೆ; (ಪೂರ್ಣ ವಿವರ ನೀಡುವುದು)</td>
<td>7 ಸ್ಮಾರ್ಟ್ ಸಿಟಿಗಳ ಪೈಕಿ, ದಾವಣಗೆರೆ ಸ್ಮಾರ್ಟ್ ಸಿಟಿಯಲ್ಲಿ ಮಾತ್ರ ಸ್ವಚ್ಛ ಭಾರತ ಅಭಿಯಾನದ ಸಮನ್ವಯದಡಿ "ಜಿಪಿಎಸ್ ಮತ್ತು ಆರ್‌ಎಫ್‌ಐಡಿ ಆಧಾರಿತ ಸಮಗ್ರ ಘನತ್ಯಾಜ್ಯ ನಿರ್ವಹಣಾ ಯೋಜನೆ" ಕಾಮಗಾರಿಯನ್ನು ರೂ.22.00 ಕೋಟಿ ಮೊತ್ತದಲ್ಲಿ ಕೈಗೊಳ್ಳಲಾಗಿದೆ. ಇದರಲ್ಲಿ ರೂ.12.83 ಕೋಟಿ ಮೊತ್ತವನ್ನು ಸ್ವಚ್ಛ ಭಾರತ ಅಭಿಯಾನದಡಿ ಹಾಗೂ ರೂ.9.17 ಕೋಟಿ ಮೊತ್ತವನ್ನು ಸ್ಮಾರ್ಟ್ ಸಿಟಿ ಅಭಿಯಾನದಡಿ ಭರಿಸಲಾಗುತ್ತಿದೆ. ಪ್ರಸ್ತುತ ಕಾಮಗಾರಿಯು ಟೆಂಡರ್ ಹಂತದಲ್ಲಿರುತ್ತದೆ.</td>
</tr>
</table>

ಸಂಖ್ಯೆ:ನಅಇ 274 ಸಿಎಸ್‌ಎಸ್ 2020

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1520
ಸದಸ್ಯರ ಹೆಸರು	:	ಶ್ರೀ ರಿಜ್ವಾನ್ ಅರ್ಷದ್ (ಶಿವಾಜಿನಗರ)
ಉತ್ತರಿಸಬೇಕಾದ ದಿನಾಂಕ	:	25-09-2020
ಉತ್ತರಿಸುವ ಸಚಿವರು	:	ಮಾನ್ಯ ನಗರಾಭಿವೃದ್ಧಿ ಸಚಿವರು

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಸ್ಮಾರ್ಟ್ ಸಿಟಿ ಯೋಜನೆ ಪ್ರಾರಂಭವಾದಾಗಿನಿಂದ ನಗರಾಭಿವೃದ್ಧಿ ಸಚಿವರ ಹಂತದಲ್ಲಿ ಎಷ್ಟು ಅಡ್ವೈಸರಿ ಕಮಿಟಿ ಸಭೆಗಳು ನಡೆದಿವೆ; ಮಾರ್ಗಸೂಚಿಗಳನ್ವಯ ಎಷ್ಟು ಸಭೆಗಳನ್ನು ನಡೆಸಬೇಕಿರುತ್ತದೆ; (ವಿವರ ನೀಡುವುದು)</td><td>ಸ್ಮಾರ್ಟ್ ಸಿಟಿ ಮಾರ್ಗಸೂಚಿಯನುಸಾರ ಈ ಕೆಳಕಂಡ ಸಮಿತಿಗಳನ್ನು ರಚಿಸಲಾಗಿದೆ;

ಅ) ನಗರ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ, ಸಂಸತ್ ಸದಸ್ಯರು, ವಿಧಾನ ಸಭಾ ಸದಸ್ಯರು, ಪೂಜ್ಯ ಮಹಾಪೌರರು, ಜಿಲ್ಲಾಧಿಕಾರಿಗಳು, ವ್ಯವಸ್ಥಾಪಕ ನಿರ್ದೇಶಕರು ಸ್ಮಾರ್ಟ್ ಸಿಟಿ ಲಿಮಿಟೆಡ್, ತಾಂತ್ರಿಕ ತಜ್ಞರು, ವಾಣಿಜ್ಯ ಮಂಡಳಿಯ ಸದಸ್ಯರು, ಸ್ವಯಂ ಸೇವಾ ಸಂಸ್ಥೆ ಸದಸ್ಯರು ಹಾಗೂ ಇತರೆ ಸಮುದಾಯ ಆಧಾರಿತ ಸಂಸ್ಥೆಗಳ ಪ್ರತಿನಿಧಿಗಳು ಒಳಗೊಂಡಿರುವ "ಸ್ಮಾರ್ಟ್ ಸಿಟಿ ಅಡ್ವೈಸರಿ ಫೋರಂ" (CLAF) ನ್ನು ರಚಿಸಲಾಗಿದೆ.</td></tr>
<tr><td>ಆ</td><td>ಯಾವ ನಗರಗಳಲ್ಲಿ ಸದರಿ ಸಭೆಗಳನ್ನು ನಡೆಸಲಾಗಿದೆ; ಈ ಸಭೆಗಳಿಗೆ ಚುನಾಯಿತ ಪ್ರತಿನಿಧಿಗಳನ್ನು ಆಹ್ವಾನಿಸಲಾಗಿದೆಯೇ;</td><td>ಆ) ಸ್ಮಾರ್ಟ್ ಸಿಟಿ ಯೋಜನೆಯ ಅನುಷ್ಠಾನಕ್ಕೆ ಸ್ಥಾಪಿಸಲಾಗಿರುವ ಸ್ಮಾರ್ಟ್ ಸಿಟಿ ಕಂಪನಿಗಳ ಮಾರ್ಗದರ್ಶನ ಮತ್ತು ಕಾರ್ಯಚಟುವಟಿಕೆಗಳ ಮೇಲುಸ್ತುವಾರಿಗೆ ಮಾನ್ಯ ನಗರಾಭಿವೃದ್ಧಿ ಸಚಿವರ ಅಧ್ಯಕ್ಷತೆಯಲ್ಲಿ "ಸ್ಮಾರ್ಟ್ ಸಿಟಿ ಅನುಷ್ಠಾನ ಮತ್ತು ಪರಿಶೀಲನಾ ಸಮಿತಿ" ಯನ್ನು ರಚಿಸಲಾಗಿದೆ. ಈ ಸಮಿತಿಗೆ ಜಿಲ್ಲಾ ಉಸ್ತುವಾರಿ ಸಚಿವರು ಸಹ-ಅಧ್ಯಕ್ಷರಾಗಿದ್ದು, ಲೋಕಸಭಾ ಸದಸ್ಯರುಗಳು, ವಿಧಾನಸಭಾ ಸದಸ್ಯರುಗಳು ಸಮಿತಿಯ ಸದಸ್ಯರಾಗಿದ್ದು, ಕಾಲಕಾಲಕ್ಕೆ ಸಭೆಗಳನ್ನು ನಡೆಸಲಾಗುತ್ತಿದೆ.

ಅದರಂತೆ ರಾಜ್ಯದ 7 ಸ್ಮಾರ್ಟ್ ಸಿಟಿ ನಗರಗಳಲ್ಲಿ ನಡೆಸಲಾದ ಮೇಲಿನ ಎರಡು ಸಮಿತಿಯ ಸಭೆಗಳ ವಿವರ ಈ ಕೆಳಗಿನಂತಿವೆ;

<table>
<tr><th>ನಗರ</th><th>ಸಿಟಿ ಲೆವಲ್ ಅಡವೈಸರಿ ಫೋರಂ ಸಭೆಗಳ ಸಂಖ್ಯೆ</th><th>ಸ್ಮಾರ್ಟ್ ಸಿಟಿ ಪ್ರಗತಿ ಮತ್ತು ಅನುಷ್ಠಾನ ಸಮಿತಿ ಸಭೆಗಳ ಸಂಖ್ಯೆ</th></tr>
<tr><td>ಬೆಳಗಾವಿ</td><td>6</td><td>2</td></tr>
<tr><td>ದಾವಣಗೆರೆ</td><td>5</td><td>2</td></tr>
<tr><td>ಹುಬ್ಬಳ್ಳಿ-ಧಾರವಾಡ</td><td>21</td><td>5</td></tr>
<tr><td>ಮಂಗಳೂರು</td><td>11</td><td>2</td></tr>
<tr><td>ಶಿವಮೊಗ್ಗ</td><td>5</td><td>8</td></tr>
<tr><td>ತುಮಕೂರು</td><td>6</td><td>2</td></tr>
<tr><td>ಬೆಂಗಳೂರು</td><td>1</td><td>0</td></tr>
<tr><td>ಒಟ್ಟು</td><td>55</td><td>21</td></tr>
</table>
</td></tr>
</table>

		ಸ್ಮಾರ್ಟ್ ಸಿಟಿ ಮಾರ್ಗಸೂಚಿಯಲ್ಲಿ ಸಭೆಗಳ ಸಂಖ್ಯೆ ಕುರಿತು ಯಾವುದೇ ಸೂಕ್ತ ನಿರ್ದೇಶನವಿರುವುದಿಲ್ಲ. ಮುಂದುವರೆದು, ಮಾನ್ಯ ನಗರಾಭಿವೃದ್ಧಿ ಸಚಿವರ ಅಧ್ಯಕ್ಷತೆಯಲ್ಲಿ ಸ್ಮಾರ್ಟ್ ಸಿಟಿ ಯೋಜನಾ ಪ್ರಗತಿ ಕುರಿತು ಇಲ್ಲಿಯವರೆಗೆ 6 ಸಭೆಗಳನ್ನು ನಡೆಸಿದಲ್ಲಿ ಸೂಕ್ತ ಮಾರ್ಗದರ್ಶನ ನೀಡಿರುತ್ತಾರೆ. ಆಯಾ ನಗರಗಳಲ್ಲಿ ನಡೆಯುತ್ತಿರುವ ಸಮಿತಿ ಸಭೆಗಳಿಗೆ ಮೇಲೆ ವಿವರಿಸಿರುವಂತೆ ಚುನಾಯಿತ ಪ್ರತಿನಿಧಿಗಳನ್ನು ಆಹ್ವಾನಿಸಲಾಗಿರುತ್ತದೆ.
ಇ	ಪ್ರಸಕ್ತ ಆಯ್ಕೆಯಾಗಿರುವ ನಗರಗಳ ಪ್ರಗತಿಯೇನು; (ವಿವರ ನೀಡುವುದು)	ಇಲ್ಲಿಯವರೆಗೆ ಎಲ್ಲಾ 7 ನಗರಗಳಲ್ಲಿ ಸ್ಮಾರ್ಟ್ ಸಿಟಿ ಅನುದಾನ ಮತ್ತು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ(PPP) ಕೈಗೊಂಡ ಕಾಮಗಾರಿಗಳ ಪ್ರಗತಿ ಈ ಕೆಳಗಿನಂತಿವೆ;

ಕಾಮಗಾರಿಗಳ ವಿವರ	ವಿವರ	ಮೊತ್ತ (ರೂ.ಕೋಟಿಗಳಲ್ಲಿ)
ಪೂರ್ಣಗೊಂಡ ಕಾಮಗಾರಿಗಳು	124	310.97
ಪ್ರಗತಿಯಲ್ಲಿರುವ ಕಾಮಗಾರಿಗಳು	334	5703.32
ಟೆಂಡರ್ ಹಂತದಲ್ಲಿರುವ ಕಾಮಗಾರಿಗಳು	51	1653.25
ವಿಸ್ತೃತಾ ಯೋಜನಾ ವರದಿ ಹಂತದಲ್ಲಿರುವ ಕಾಮಗಾರಿಗಳು	28	974.69

ಈ	ಮುಂದಿನ ವರ್ಷದಲ್ಲಿ ಯಾವುದಾದರೂ ನಗರಗಳನ್ನು ಸ್ಮಾರ್ಟ್ ಸಿಟಿಯಾಗಿ ಆಯ್ಕೆ ಮಾಡಲು ಯೋಜನೆ ರೂಪಿಸಿ ಹಾಗೂ ಸಿದ್ಧತೆ ಮಾಡಿಕೊಳ್ಳಲಾಗಿದೆಯೇ? (ಪೂರ್ಣ ವಿವರ ನೀಡುವುದು)	ರಾಜ್ಯದ ಮೈಸೂರು, ವಿಜಯಪುರ, ಬಳ್ಳಾರಿ ಮತ್ತು ಕಲಬುರಗಿ ನಗರಗಳನ್ನು ಸ್ಮಾರ್ಟ್ ಸಿಟಿ ಯೋಜನೆಯಡಿ ಪರಿಗಣಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಅನುಮೋದನೆ ನಿರೀಕ್ಷಿಸಲಾಗಿದೆ.

ಸಂಖ್ಯೆ:ನಅಇ 272 ಸಿಎಸ್ಎಸ್ 2020

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1524
2. ಸದಸ್ಯರ ಹೆಸರು	:	ಶ್ರೀ ಲಿಂಗೇಶ ಕೆ.ಎಸ್. (ಬೇಲೂರು)
3. ಉತ್ತರಿಸಬೇಕಾದ ದಿನಾಂಕ	:	25-09-2020
4. ಉತ್ತರಿಸುವ ಸಚಿವರು	:	ಸಹಕಾರ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಹಾಸನ ಜಿಲ್ಲೆಯ ಬೇಲೂರು ಪಟ್ಟಣದಿಂದ ಜಾವಗಲ್ 30 ಕಿ.ಮೀ. ಚಿಕ್ಕಮಗಳೂರು 30 ಕಿ.ಮೀ. ಹಾಸನ 40 ಕಿ.ಮೀ ದೂರವಿದ್ದರೂ ಬೇಲೂರು ತಾಲ್ಲೂಕು ಕೇಂದ್ರದಲ್ಲಿ ಕರ್ನಾಟಕ ರಾಜ್ಯ ಉಗ್ರಾಣ ನಿಗಮದ ಶಾಖೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	ಹೌದು.
ಆ)	ಬಯಲು ಸೀಮೆ ಮತ್ತು ಮಲೆನಾಡು ಪ್ರದೇಶವನ್ನು ಹೊಂದಿರುವ ಬೇಲೂರಿನ ರೈತರು ಬೆಳೆದ ಬೆಳೆಗಳನ್ನು ಸಂಗ್ರಹಣೆ/ದಾಸ್ತಾನು ಮಾಡಲು ಸರ್ಕಾರಿ ಗೋದಾಮುಗಳಿಲ್ಲದೇ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	ಬಯಲು ಸೀಮೆ ಮತ್ತು ಮಲೆನಾಡು ಪ್ರದೇಶವನ್ನು ಹೊಂದಿರುವ ಬೇಲೂರಿನ ರೈತರ, ವ್ಯಾಪಾರಿಗಳ ಮತ್ತು ಸರ್ಕಾರದ ಸಂಘ ಸಂಸ್ಥೆಗಳ ಉಪಯೋಗಕ್ಕಾಗಿ ಈಗಾಗಲೇ ನಿಗಮವು ಹಾಸನ ಜಿಲ್ಲೆಯ ಕೇಂದ್ರಸ್ಥಾನದಲ್ಲಿ 51,734 ಮೆ.ಟನ್, ಜಾವಗಲ್‌ನಲ್ಲಿ 9,591 ಮೆ.ಟನ್, ಗಂಡಸಿಯಲ್ಲಿ 7,228 ಮೆ.ಟನ್, ಹೊಳೆನರಸೀಪುರದಲ್ಲಿ 7,836 ಮೆ.ಟನ್ ಮತ್ತು ಅರಕಲಗೂಡಿನಲ್ಲಿ 9,770 ಮೆ.ಟನ್ ಸಾಮರ್ಥ್ಯದ ಉಗ್ರಾಣಗಳೊಂದಿಗೆ ಕಾರ್ಯನಿರ್ವಹಿಸುತ್ತಿದೆ. ಇದಲ್ಲದೆ ಬೇಲೂರಿಗೆ ಹತ್ತಿರವಿರುವ ಚಿಕ್ಕಮಗಳೂರು ಕೇಂದ್ರಸ್ಥಾನದಲ್ಲೂ ಸಹ ನಿಗಮವು 18,500 ಮೆ.ಟನ್ ಸಾಮರ್ಥ್ಯದ ಉಗ್ರಾಣಗಳನ್ನು ಹೊಂದಿದ್ದು ಇದರ ಸದುಪಯೋಗವನ್ನು ರೈತರು ಮತ್ತು ವ್ಯಾಪಾರಿಗಳು ಪಡೆಯಬಹುದಾಗಿದೆ.

ಇ)	ಬಂದಿದ್ದಲ್ಲಿ, ರೈತರ ಹಿತ ದೃಷ್ಟಿಯಿಂದ 2020-21ನೇ ಸಾಲಿನಲ್ಲಿ ಬೇಲೂರು ತಾಲ್ಲೂಕು ಕೇಂದ್ರದಲ್ಲಿ ಕರ್ನಾಟಕ ರಾಜ್ಯ ಉಗ್ರಾಣ ನಿಗಮದ ಶಾಖೆಯನ್ನು ತೆರೆಯಲಾಗುವುದೇ ; ಹಾಗಿದ್ದಲ್ಲಿ ಯಾವ ಕಾಲಮಿತಿಯೊಳಗೆ ತೆರೆಯಲಾಗುವುದು ?	ಇಲ್ಲ. ಉದ್ಭವಿಸುವುದಿಲ್ಲ.

No. CO 70 WHC 2020

(ಎಸ್. ಟಿ. ಸೋಮಶೇಖರ್)
ಸಹಕಾರ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1534
ಸದಸ್ಯರ ಹೆಸರು	:	ಶ್ರೀ ಮುರುಗೇಶ್ ರುದ್ರಪ್ಪ ನಿರಾಣಿ (ಬೀಳಗಿ)
ಉತ್ತರಿಸುವ ದಿನಾಂಕ	:	25/09/2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

	ಪ್ರಶ್ನೆ	ಉತ್ತರ
ಅ	ಪಟ್ಟಣ ಪಂಚಾಯಿತಿಗಳನ್ನು "ಪುರಸಭೆ" ಗಳನ್ನಾಗಿ ಮೇಲ್ದರ್ಜೆಗೇರಿಸುವಾಗ ಅನುಸರಿಸುವ ನಿಯಮಗಳೇನು;	ಪಟ್ಟಣ ಪಂಚಾಯಿತಿಯಿಂದ ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಕರ್ನಾಟಕ ಪುರಸಭೆಗಳ ಅಧಿನಿಯಮ 1964ರ ಕಲಂ ನಿಯಮ 3(1), 3(2) ಮತ್ತು 9 ಗಳನ್ವಯ ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುತ್ತದೆ: 1. ಆ ಪ್ರದೇಶದ ಜನಸಂಖ್ಯೆ 20,000ಕ್ಕೆ ಕಡಿಮೆ ಇಲ್ಲದಂತೆ ಹಾಗೂ 50,000 ಕ್ಕೆ ಹೆಚ್ಚಿಲ್ಲದಂತಿರಬೇಕು; 2. ಅಂತಹ ಪ್ರದೇಶದ ಜನಸಂಖ್ಯೆಯ ಜನಸಾಂದ್ರತೆಯು ಆ ಪ್ರದೇಶದ ಒಂದು ಚದರ ಕಿ.ಮೀ. ವಿಸ್ತೀರ್ಣಕ್ಕೆ 1,500ಕ್ಕಿಂತ ಕಡಿಮೆ ಇಲ್ಲದಿರುವುದು; 3. ಹಿಂದಿನ ನಿಕಟಪೂರ್ವ ಜನಗಣತಿಯಲ್ಲಿ ಅಂತಹ ಪ್ರದೇಶದಿಂದ ಸ್ಥಳೀಯ ಆಡಳಿತಕ್ಕಾಗಿ ತೆರಿಗೆ ಮತ್ತು ತೆರಿಗೆಯಲ್ಲದ ಇತರ ಸಂಪನ್ಮೂಲಗಳಿಂದ ಉತ್ಪಾದಿತವಾದ ರಾಜಸ್ವ ವಾರ್ಷಿಕ ಒಂಬತ್ತು ಲಕ್ಷ ಅಥವಾ ವಾರ್ಷಿಕ ತಲಾ ಒಬ್ಬರಿಗೆ 45 ರೂಪಾಯಿಗಳ ದರದಂತೆ ಲೆಕ್ಕಹಾಕಲಾದ ಮೊತ್ತ ಇವೆರಡರಲ್ಲಿ ಯಾವುದು ಹೆಚ್ಚೋ ಆ ಮೊತ್ತಕ್ಕಿಂತ ಕಡಿಮೆ ಇರದ ಹೊರತು; 4. ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗಾವಕಾಶಗಳ ಶೇಕಡಾವಾರು ಪ್ರಮಾಣವು ಒಟ್ಟು ಉದ್ಯೋಗದ ಪ್ರಮಾಣಕ್ಕಿಂತ ಶೇ.50ಕ್ಕಿಂತ ಕಡಿಮೆ ಇಲ್ಲದಿರುವುದು.
ಆ	ಕಳೆದ ಎರಡು ವರ್ಷಗಳಲ್ಲಿ ರಾಜ್ಯಾದ್ಯಂತ ಎಷ್ಟು ಪಟ್ಟಣ ಪಂಚಾಯಿತಿಗಳನ್ನು 'ಪುರಸಭೆ" ಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ (ವಿವರ ನೀಡುವುದು);	ಕಳೆದ ಎರಡು ವರ್ಷಗಳಲ್ಲಿ ಯಾವುದೇ ಪಟ್ಟಣ ಪಂಚಾಯಿತಿಗಳನ್ನು ಪುರಸಭೆಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿರುವುದಿಲ್ಲ.
ಇ	ಬಾಗಲಕೋಟ ಜಿಲ್ಲೆಯ ಬೀಳಗಿ ಪಟ್ಟಣ ಪಂಚಾಯಿತಿಯನ್ನು "ಪುರಸಭೆ" ಯನ್ನಾಗಿ ಮೇಲ್ದರ್ಜೆಗೇರಿಸಬೇಕೆನ್ನುವ ಬೇಡಿಕೆಯು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬೀಳಗಿ ಪಟ್ಟಣ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು ಸೂಕ್ತ ಪ್ರಸ್ತಾವನೆ ಕಳುಹಿಸುವಂತೆ ದಿನಾಂಕ:22/06/2020ರಂದು ಜಿಲ್ಲಾಧಿಕಾರಿ, ಬಾಗಲಕೋಟೆ ಜಿಲ್ಲೆ ರವರನ್ನು ಪೌರಾಡಳಿತ ನಿರ್ದೇಶನಾಲಯದಿಂದ ಕೋರಲಾಗಿದೆ.

ಈ	ಹಾಗಿದ್ದಲ್ಲಿ, ಬೀಳಗಿ ಪಟ್ಟಣ ಪಂಚಾಯಿತಿಯನ್ನು "ಪುರಸಭೆ" ಯನ್ನಾಗಿ ಮೇಲ್ದರ್ಜೆಗೇರಿಸುವಲ್ಲಿ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು;	ಬೀಳಗಿ ಪಟ್ಟಣ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು ಜಿಲ್ಲಾಧಿಕಾರಿ, ಬಾಗಲಕೋಟೆ ಜಿಲ್ಲೆಯವರಿಂದ ಪ್ರಸ್ತಾವನೆ ನಿರ್ದೇಶನಾಲಯದ ಮೂಲಕ ಸ್ವೀಕೃತವಾಗಿರುವುದಿಲ್ಲ.
ಉ	ಯಾವ ಕಾಲಮಿತಿಯಲ್ಲಿ ಬೀಳಗಿ ಪಟ್ಟಣ ಪಂಚಾಯಿತಿಯನ್ನು "ಪುರಸಭೆ" ಯನ್ನಾಗಿ ಮೇಲ್ದರ್ಜೆಗೇರಿಸಲಾಗುವುದು (ಸಂಪೂರ್ಣ ವಿವರ ನೀಡುವುದು)?	ಜಿಲ್ಲಾಧಿಕಾರಿ, ಬಾಗಲಕೋಟೆ ಜಿಲ್ಲೆ ಹಾಗೂ ಪೌರಾಡಳಿತ ನಿರ್ದೇಶನಾಲಯದಿಂದ ಸೂಕ್ತ ಪ್ರಸ್ತಾವನೆ ಸ್ವೀಕೃತವಾದಲ್ಲಿ ನಿಯಮಾನುಸಾರ ಕ್ರಮವಹಿಸಲಾಗುವುದು.

ಸಂಖ್ಯೆ:ನಅಇ 62 ಎಲ್ಎಕ್ಯೂ 2020.

(ಡಾ॥ ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1538
ಸದಸ್ಯರ ಹೆಸರು : ಶ್ರೀ ತಮ್ಮಣ್ಣ ಡಿ.ಸಿ
ಉತ್ತರಿಸುವ ದಿನಾಂಕ : 25-09-2020
ಉತ್ತರಿಸುವ ಸಚಿವರು : ಸಹಕಾರ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಸಹಕಾರ ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು 1989 ರಲ್ಲಿ ರಚಿಸಿಕೊಂಡು 39 ವರ್ಷ ಕಳೆದರೂ ಸಹ ತಿದ್ದುಪಡಿ ಮಾಡದೆ ಡಿ.ಪಿ.ಎ.ಆರ್. ನ ಸೂತ್ತೋಲೆ ಉಲ್ಲಂಘನೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ತಿದ್ದುಪಡಿ ಮಾಡಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ;	ಬಂದಿದೆ ಸಹಕಾರ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ತಿದ್ದುಪಡಿ ಮಾಡಲು ಸಹಕಾರ ಸಂಘಗಳ ನಿಬಂಧಕರಿಂದ ಸ್ವೀಕೃತವಾಗಿರುವ ಪ್ರಸ್ತಾವನೆಗೆ ವಿವಿಧ ಇಲಾಖೆಗಳೊಂದಿಗೆ ಸಮಾಲೋಚಿಸಲಾಗುತ್ತಿದೆ.
ಆ)	ಕೆ.ಎ.ಟಿ ದಾವಾ ಅರ್ಜಿ ನಂ.9573 ರಿಂದ 9538/2015 ದಿನಾಂಕ: 17-08-2017 ರ ಆದೇಶವನ್ನು ಮೂರು ವರ್ಷಗಳು ಕಳೆದರೂ ಅನುಷ್ಠಾನಗೊಳಿಸಲು ವಿಫಲರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸದರಿ ಆದೇಶವನ್ನು ಅನುಷ್ಠಾನಗೊಳಿಸಲು ಯಾವ ಕ್ರಮ ವಹಿಸಲಾಗಿದೆ;	ಮಾನ್ಯ ಕೆ.ಎ.ಟಿ. ದಾವಾ ಅರ್ಜಿ ನಂ.9573-9538/2016 ದಿನಾಂಕ: 17-08-2017 ರ ಆದೇಶದಲ್ಲಿ ಅರ್ಜಿದಾರರ ಮನವಿಯ ಮೇಲೆ ಸೂಕ್ತ ನಿರ್ಣಯ ತೆಗೆದುಕೊಳ್ಳಲು ಆದೇಶಿಸಲಾಗಿತ್ತು. ಇದಕ್ಕೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ತಿದ್ದುಪಡಿ ಮಾಡುವ ಅವಶ್ಯಕತೆಯಿದ್ದು, ಅದರಂತೆ ಸಹಕಾರ ಸಂಘಗಳ ನಿಬಂಧಕರಿಂದ ಸ್ವೀಕೃತವಾಗಿರುವ ಪ್ರಸ್ತಾವನೆಗೆ ವಿವಿಧ ಇಲಾಖೆಗಳೊಂದಿಗೆ ಸಮಾಲೋಚಿಸಲಾಗುತ್ತಿದೆ.
ಇ)	ಜೇಷ್ಠತೆಯಲ್ಲಿ 07 ವರ್ಷಗಳು ಪೂರ್ಣಗೊಳಿಸಿ, ಹಿರಿಯರಾಗಿರುವ ಸಿ.ಡಿ.ಓ. ಗಳನ್ನು ಕೈಬಿಟ್ಟು ಕಿರಿಯರಾಗಿರುವವರಿಗೆ ಮುಂಬಡ್ತಿ ನೀಡಿದ್ದರಿಂದ ಹಿರಿಯ ಅಧಿಕಾರಿಗಳು ಮುಂಬಡ್ತಿ ಸೇವಾ ಸೌಲಭ್ಯಗಳಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಇಲ್ಲ
ಈ)	ಪರಿಶಿಷ್ಟ ಜಾತಿಯವರು ಬ್ಯಾಕ್ ಲಾಗ್ ಮೂಲಕ ಇಲಾಖೆಗೆ ಆಯ್ಕೆ ಯಾಗಿದ್ದು, ಸಿ.ಡಿ.ಓ. ಯಿಂದ ಎ.ಆರ್.ಸಿ.ಎಸ್. ಹುದ್ದೆಗೆ ಪದೋನ್ನತಿ ನೀಡುವಲ್ಲಿ, ಸದರಿ ವರ್ಗಕ್ಕೆ ಆಗಿರುವ ಅನ್ಯಾಯವನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;	ಪ್ರಸ್ತುತ ಚಾಲ್ತಿಯಲ್ಲಿರುವ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಹಾಗೂ ಮೀಸಲಾತಿ ನಿಯಮಗಳನ್ವಯ ಸಹಾಕರ ಅಭಿವೃದ್ಧಿ ಅಧಿಕಾರಿ ವೃಂದದ ಜೇಷ್ಠತೆಯನ್ನು ಆಧರಿಸಿ ಸಹಕಾರ ಸಂಘಗಳ ಸಹಾಯಕ ನಿಬಂಧಕರ ವೃಂದಕ್ಕೆ ಸ್ಥಾನಪನ್ನ ಪದೋನ್ನತಿಯನ್ನು ಕಾಲಕಾಲಕ್ಕೆ ನೀಡಲಾಗುತ್ತಿದೆ.

ಉ)	ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿಗೆ ನಿಬಂಧಕರ ಕಛೇರಿಯಿಂದ ಪ್ರಸ್ತಾವನೆ ಸಲ್ಲಿಸಿ ಮೂರು ವರ್ಷ ಕಳೆದರೂ ಇಲ್ಲಿಯವರೆವಿಗೆ ತಿದ್ದುಪಡಿ ಮಾಡದೇ ಸರ್ಕಾರದಲ್ಲಿ ಕಡತ ಬಾಕಿ ಉಳಿಸಿಕೊಂಡಿರಲು ಕಾರಣಗಳೇನು? (ವಿವರ ನೀಡುವುದು)	ಸಹಕಾರ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ತಿದ್ದುಪಡಿ ಮಾಡಲು ಮೂರು ವರ್ಷಗಳ ಹಿಂದೆ ಸರ್ಕಾರಕ್ಕೆ ಪ್ರಸ್ತಾವನೆಯು ಸ್ವೀಕೃತವಾಗಿರುತ್ತದೆ. ಆದರೆ, ಈ ಪ್ರಸ್ತಾವನೆಯಲ್ಲಿ ಹಲವಾರು ನ್ಯೂನತೆಗಳು ಕಂಡು ಬಂದ ಹಿನ್ನೆಲೆಯಲ್ಲಿ, ದಿನಾಂಕ:18-05-2020 ರಂದು ಸಹಕಾರ ಸಂಘಗಳ ನಿಬಂಧಕರು ಪರಿಷ್ಕೃತ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯ ಕುರಿತು ವಿವಿಧ ಇಲಾಖೆಗಳೊಂದಿಗೆ ಸಮಾಲೋಚಿಸಲಾಗುತ್ತಿದೆ.

ಸಂಖ್ಯೆ:ಸಿಒ 229 ಇಸಿಎ 2020

(ಎಸ್.ಟಿ.ಸೋಮಶೇಖರ್)
ಸಹಕಾರ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1539
ಸದಸ್ಯರ ಹೆಸರು	:	ಶ್ರೀ ರಾಮದಾಸ್ ಎಸ್.ಎ. (ಕೃಷ್ಣರಾಜ)
ಉತ್ತರಿಸಬೇಕಾದ ದಿನಾಂಕ	:	25.09.2020
ಉತ್ತರಿಸಬೇಕಾದ ಸಚಿವರು	:	ನಗರಾಭಿವೃದ್ಧಿ ಸಚಿವರು

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಮೈಸೂರು ಮಹಾನಗರ ಪಾಲಿಕೆಗುಳ್ಳಿಗುವ ಕುಡಿಯುವ ನೀರಿನ ಯೋಜನೆಗಳು ಯಾವುವು ; ಅವುಗಳಿಗೆ ಪ್ರತಿ ದಿನ ಎಷ್ಟು ನೀರು ಸರಬರಾಜು ಆಗುತ್ತಿದೆ</td><td>
<table>
<tr><th>ಕ್ರ. ಸಂ.</th><th>ಯೋಜನೆ</th><th>ಮೂಲಸ್ಥಾವರದಿಂದ ಸರಬರಾಜು ಆಗುತ್ತಿರುವ ನೀರಿನ ಪ್ರಮಾಣ (ಎಂ.ಎಲ್.ಡಿ)</th><th>ನಗರದ ಜಲಸಂಗ್ರಹಾಗಾರಕ್ಕೆ ಲಭ್ಯವಾಗುತ್ತಿರುವ ನೀರಿನ ಪ್ರಮಾಣ (ಎಂ.ಎಲ್.ಡಿ)</th></tr>
<tr><td>1</td><td>ಬೆಳಗೊಳ</td><td>46</td><td>18</td></tr>
<tr><td>2</td><td>ಹೊಂಗಳ್ಳಿ 2ನೇ ಹಂತ</td><td>35</td><td>10</td></tr>
<tr><td>3</td><td>ಹೊಂಗಳ್ಳಿ 3ನೇ ಹಂತ</td><td>52</td><td>48</td></tr>
<tr><td>4</td><td>ಮೇಳಾಪುರ</td><td>74</td><td>64</td></tr>
<tr><td>5</td><td>ಕಬಿನಿ</td><td>60</td><td>56</td></tr>
<tr><td></td><td>ಒಟ್ಟು</td><td>267</td><td>196</td></tr>
</table>
</td></tr>
<tr><td>ಆ)</td><td>ಮೈಸೂರು ಮಹಾನಗರದಲ್ಲಿ ಪ್ರತಿದಿನ ಕುಡಿಯುವ ನೀರಿನ ಬೇಡಿಕೆ ಪ್ರಮಾಣವೆಷ್ಟು ; ನೀರಿನ ಸಂಪರ್ಕ ಪಡೆದಿರುವ ಮನೆಗಳ ಸಂಖ್ಯೆ ಎಷ್ಟು ; ಹಾಗೂ ಎಷ್ಟು ಪ್ರಮಾಣದ ನೀರಿಗೆ ಹಣ ವಸೂಲಿ ಮಾಡಲಾಗುತ್ತಿದೆ.</td><td>• ಮೈಸೂರು ಮಹಾನಗರದಲ್ಲಿ ಪ್ರತಿ ದಿನದ ಕುಡಿಯುವ ನೀರಿನ ಬೇಡಿಕೆ : 230 ಎಂ.ಎಲ್.ಡಿ
• ಆಗಸ್ಟ್ ಅಂತ್ಯಕ್ಕೆ ಮೈಸೂರು ನಗರದ ನೀರಿನ ಸಂಪರ್ಕಗಳ ಸಂಖ್ಯೆ : 177840
• ಪ್ರಸ್ತುತ ಸುಮಾರು 153 ಎಂ.ಎಲ್.ಡಿ ಪ್ರಮಾಣದ ನೀರಿಗೆ ಹಣ ವಸೂಲಿ ಮಾಡಲಾಗುತ್ತಿದೆ.</td></tr>
<tr><td>ಇ)</td><td>ಅಕ್ರಮ ಸಂಪರ್ಕಗಳ ಮೂಲಕವಾಗಿ ವ್ಯರ್ಥವಾಗುತ್ತಿರುವ ನೀರಿನ ಪ್ರಮಾಣವೆಷ್ಟು ; ನಗರ ಪಾಲಿಕೆಗೆ ಬಾಕಿ ಬರಬೇಕಾಗಿರುವ ಮೊತ್ತವೆಷ್ಟು ; ಹಾಗೂ ಬಾಕಿ ವಸೂಲಾತಿಗೆ ಕೈಗೊಂಡ</td><td>1. ಕೊಳವೆ ಮಾರ್ಗದ ಸೋರುವಿಕೆ, ಅಕ್ರಮ ಸಕ್ರಮಗಳ ಮೂಲಕವಾಗಿ ಪ್ರತಿದಿನ 43 ಎಂ.ಎಲ್.ಡಿ ರಷ್ಟು ಕಂದಾಯ ರಹಿತ ನೀರಿನ ಪ್ರಮಾಣವಾಗಿದೆ.
2. ಆಗಸ್ಟ್ ಅಂತ್ಯಕ್ಕೆ ನೀರಿನ ಬಾಕಿ ಶುಲ್ಕ ರೂ. 201.30 ಕೋಟಿಗಳಾಗಿದೆ.
3. ಬಾಕಿ ವಸೂಲಾತಿಗೆ ಪ್ರತಿದಿನ ಪಾಲಿಕೆಯ ಸಿಬ್ಬಂದಿಗಳ ಮೂಲಕ ಮನೆ ಮನೆಗೆ ತೆರಳಿ ನೀರಿನ ಬಾಕಿ ವಸೂಲಾತಿಗೆ ಮತ್ತು ಹೆಚ್ಚಿನ ಬಾಕಿ ಮೊತ್ತವನ್ನು ಉಳಿಸಿಕೊಂಡಿರುವ ಸಂಪರ್ಕಗಳನ್ನು</td></tr>
</table>

	ಕ್ರಮಗಳೇನು ;	ಕಡಿತಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಹಾಗೂ ನೀರಿನ ಬಾಕಿ ಮೊತ್ತವನ್ನು ಪಾವತಿಸುವ ಬಗ್ಗೆ ಪ್ರಚಾರ ಮಾಡಲು ಮತ್ತು ಸಂಪರ್ಕ ಕಡಿತಗೊಳಿಸಲು ಪ್ರತ್ಯೇಕವಾಗಿ ಕಾವೇರಿ ಮತ್ತು ಕಬಿನಿ ಎಂಬ ತಂಡವನ್ನು ರಚಿಸಿ, ಬಾಕಿ ಪಾವತಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ.
ಈ)	One Time Measure ಅಡಿಯಲ್ಲಿ ಗ್ರಾಹಕರಿಗೆ ಬಡ್ಡಿಯನ್ನು ಮನ್ನಾ ಮಾಡಿ ಅಸಲು ಪಡೆಯುವ ಯೋಜನೆಗೆ ಸರ್ಕಾರ ಒಪ್ಪಿಗೆ ನೀಡಿದೆಯೇ ; ಇಲ್ಲದಿದ್ದಲ್ಲಿ ಈ ಸಮಾಧಾನಕರ ಯೋಜನೆಗೆ ಸರ್ಕಾರವು ಯಾವಾಗ ಒಪ್ಪಿಗೆ ನೀಡುತ್ತದೆ ;	ಗ್ರಾಹಕರಿಗೆ ಬಡ್ಡಿಯನ್ನು ಮನ್ನಾ ಮಾಡಿ ಅಸಲು ಪಡೆಯುವ ಯೋಜನೆಯ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.
ಉ)	ಬೆಂಗಳೂರು ನಗರದ ಮಾದರಿಯಲ್ಲಿ ಮೈಸೂರು ನಗರಕ್ಕೂ ಕುಡಿಯುವ ನೀರು ಮತ್ತು ಒಳಚರಂಡಿಗಾಗಿ ಪ್ರತ್ಯೇಕ ಬೋರ್ಡ್ ಸ್ಥಾಪಿಸಬೇಕೆಂಬ ಒತ್ತಾಯಕ್ಕೆ ಸರ್ಕಾರವು ಒಪ್ಪಿಗೆ ನೀಡುವುದೇ ? (ವಿವರ ನೀಡುವುದು)	ಬೆಂಗಳೂರು ನಗರದ ಮಾದರಿಯಲ್ಲಿ ಮೈಸೂರು ನಗರಕ್ಕೂ ಕುಡಿಯುವ ನೀರು ಮತ್ತು ಒಳಚರಂಡಿಗಾಗಿ ಪ್ರತ್ಯೇಕ ಬೋರ್ಡ್ ಸ್ಥಾಪಿಸಬೇಕೆಂಬ ಯಾವುದೇ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.

ನಅಇ 90 ಎಸಿಎಂ 2020 (ಇ)

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರು : ಶ್ರೀ ಹಾಲಪ್ಪ ಹರತಾಳ್ ಹೆಚ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1548

ಉತ್ತರಿಸಬೇಕಾದ ದಿನಾಂಕ : 25.09.2020

ಕ್ರಸಂ	ಪ್ರಶ್ನೆ	ಉತ್ತರ
ಅ)	ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕು ಭೀಮನಕೋಣೆ ಚರಕ ಮಹಿಳಾ ವಿವಿಧೋದ್ದೇಶ ಕೈಗಾರಿಕಾ ಸಹಕಾರ ಸಂಘದಲ್ಲಿ ಟೈಲರಿಂಗ್ ಹೊರತುಪಡಿಸಿ, ಉಳಿದ ಎಲ್ಲಾ ಕಾರ್ಯಗಳನ್ನು ಸ್ಥಗಿತಗೊಳಿಸಿರುವುದು ಸರ್ಕಾರಕ್ಕೆ ಗಮನಕ್ಕೆ ಬಂದಿದೆಯೇ?	ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕು ಭೀಮನ ಕೋಣೆ ಚರಕ ಮಹಿಳಾ ವಿವಿಧೋದ್ದೇಶ ಕೈಗಾರಿಕಾ ಸಹಕಾರ ಸಂಘದಲ್ಲಿ ಟೈಲರಿಂಗ್ ಹೊರತುಪಡಿಸಿ ಕೈಮಗ್ಗ ನೇಯ್ಗೆ, ಬಣ್ಣಗಾರಿಕೆ, ಹೊರ ಊರು ನೇಯ್ಗೆ, ಹೊರ ಊರು ಹೊಲಿಗೆ ಮುಂತಾದ ಎಲ್ಲಾ ಚಟುವಟಿಕೆಗಳನ್ನು ಸ್ಥಗಿತಗೊಳಿಸಲಾಗಿದೆ. ಕಾರಣ ಕೋವಿಡ್ ಹಿನ್ನಲೆಯಿಂದಾಗಿ ಸುಮಾರು ರೂ.1.44 ಕೋಟಿಗಳಷ್ಟು ಕೈಮಗ್ಗದ ಬಟ್ಟೆ ಹಾಗೂ ಸಿದ್ಧವಸ್ತುಗಳು ಮಾರಾಟವಾಗದೇ ಉಳಿದಿರುವುದರಿಂದ ಸದ್ಯಕ್ಕೆ ಸ್ಥಗಿತಗೊಳಿಸಲಾಗಿರುತ್ತದೆ.
ಆ)	ಇದರಿಂದಾಗಿ ಸುಮಾರು ಎಂಟು ನೂರು ಜನ ನೌಕರರು ಕೆಲಸವಿಲ್ಲದೆ ಬೀದಿಗೆ ಬಂದಿದ್ದು, ನೌಕರರ ಕುಟುಂಬ ನಿರ್ವಹಣೆ ತುಂಬಾ ಕಷ್ಟವಾಗಿರುವುದು, ಸರ್ಕಾರದ ಗಮನಕ್ಕೆ ಬಂದಿದೆಯೇ:?	ಸಂಘದ ಕಾರ್ಯವ್ಯಾಪ್ತಿಯಲ್ಲಿ ಸ್ಥಳೀಯವಾಗಿ ಸುಮಾರು 350 ಜನ ಕೆಲಸಗಾರರು, ಉತ್ತರ ಕರ್ನಾಟಕದಲ್ಲಿ ಸುಮಾರು 450 ಜನ ಕೆಲಸಗಾರರು ವರ್ಷ ಪೂರ್ತಿ ಸಂಘದ ವತಿಯಿಂದ ಹೊಲಿಗೆ ನೇಯ್ಗೆ, ಕಸೂತಿ, ಬಣ್ಣಗಾರಿಕೆ ಕೆಲಸಗಳನ್ನು ಪೀಸ್ ಬೇಸಿಸ್ ಆಧಾರದಲ್ಲಿ ನೀಡುತ್ತಿದ್ದು, ಇವರ್ಯಾರು ಸಂಘದ ನೌಕರರಾಗಿರುವುದಿಲ್ಲ. ಕೋರೋನಾ ಹಿನ್ನಲೆಯಲ್ಲಿ 144.00 ಲಕ್ಷ ಮಾಲು ದಾಸ್ತಾನು ಮಾರಾಟವಾಗದೇ ಇರುವುದರಿಂದ ಸದ್ಯದ ಅನಿವಾರ್ಯ ಪರಿಸ್ಥಿತಿಯಲ್ಲಿ ಟೈಲರಿಂಗ್ ಹೊರತುಪಡಿಸಿ ಉಳಿದ ಎಲ್ಲಾ ಕೆಲಸಗಳನ್ನು ಸ್ಥಗಿತಗೊಳಿಸಲಾಗಿದ್ದು, ಇದರಿಂದಾಗಿ ಸುಮಾರು 700 ಜನ ಕೆಲಸಗಾರರಿಗೆ ಕೆಲಸವಿಲ್ಲದಂತಾಗಿದೆ.
ಇ)	ಸದರಿ ಕೈಗಾರಿಕಾ ಸಹಕಾರ ಸಂಘವನ್ನು ತೆರೆಯಲು ಇರುವ ತೊಂದರೆಗಳೇನು;?	ಸಂಘವು ಹಣಕಾಸು ಸಂಸ್ಥೆಗಳಿಂದ ಒಟ್ಟು ರೂ.96.80 ಲಕ್ಷಗಳ ಸಾಲವನ್ನು ಪಡೆದಿರುತ್ತದೆ. ಸದರಿ ಸಾಲಕ್ಕೆ ವಾರ್ಷಿಕಒಟ್ಟು 4.80 ಲಕ್ಷಗಳ ಬಡ್ಡಿಯನ್ನು ಪಾವತಿಸಬೇಕಾಗಿರುತ್ತದೆ. ಕೋರೋನಾ ಹಿನ್ನಲೆಯಲ್ಲಿ ದಾಸ್ತಾನಲ್ಲಿ ಸಂಗ್ರಹವಾಗಿರುವ ಬಟ್ಟೆ ಹಾಗೂ ಸಿದ್ಧವಸ್ತುಗಳು ನಿಗದಿತ ಅವಧಿಯಲ್ಲಿ ವಿಲೇಯಾಗದೆ ಸಂಘಕ್ಕೆ ಸಾಲದ ಹೊರೆ ಜಾಸ್ತಿಯಾಗಿರುವುದರಿಂದ ಟೈಲರಿಂಗ್ ವಿಭಾಗ ಮಾತ್ರ ಕಾರ್ಯ ನಿರ್ವಹಿಸುತ್ತಿದ್ದು, ಇನ್ನುಳಿದ ಚಟುವಟಿಕೆಗಳಾದ ಕೈಮಗ್ಗದ ನೇಯ್ಗೆ, ಬಣ್ಣಗಾರಿಕೆ, ಹೊರ ಊರು ಹೊಲಿಗೆ ಮುಂತಾದ ವಿಭಾಗಗಳು ಪ್ರಾರಂಭಿಸಲು ತೊಂದರೆಯಾಗುವುದರ ಜೊತೆಗೆ ಮುಂದಿನ ದಿನಗಳಲ್ಲಿ ಸಂಘವನ್ನು ಮುಚ್ಚುವ ಪರಿಸ್ಥಿತಿ ಉಂಟಾಗಬಹುದು. ಆದ್ದರಿಂದ ತಾತ್ಕಾಲಿಕವಾಗಿ ಕೋರೋನಾ ಹಿನ್ನಲೆಯಲ್ಲಿ ದಾಸ್ತಾನು ಸಂಗ್ರಹವಾಗಿರುವ ಬಟ್ಟೆ ಸಿದ್ಧ ವಸ್ತುಗಳು ಮಾರಾಟವಾದ ನಂತರ ಹಂತ ಹಂತವಾಗಿ ಉಳಿದಂತೆ ಕೈಮಗ್ಗದ ನೇಯ್ಗೆ, ಬಣ್ಣಗಾರಿಕೆ, ಹೊರ ಊರು ಹೊಲಿಗೆ ಮುಂತಾದ ವಿಭಾಗಗಳನ್ನು ಮಾಲು ದಾಸ್ತಾನು ವಿಲೇವಾರಿಯಾದ ನಂತರ ಪ್ರಾರಂಭಿಸಲು ಕ್ರಮವಿಡಲಾಗುವುದು.

ಈ)	ಕೈಗಾರಿಕಾ ಸಹಕಾರ ಸಂಘವನ್ನು ಪೂರ್ಣ ಪ್ರಮಾಣದಲ್ಲಿ ತೆರೆದು ಎಲ್ಲಾ ನೌಕರರಿಗೆ ಕೆಲಸ ನೀಡುವುದರೊಂದಿಗೆ ವೇತನ ಪಾವತಿಸಲು ಕೈಗೊಂಡ ಕ್ರಮಗಳೇನು? (ವಿವರ ಒದಗಿಸುವುದು)	ಚರಕ ಸಹಕಾರ ಸಂಘದಲ್ಲಿ ಸುಮಾರು 800 ಜನ ಕೆಲಸಗಾರರು ಸಂಘದ ಕಾಯಂ ನೌಕರರಲ್ಲ, ಆದ್ದರಿಂದ ಪ್ರತಿ ಮಾಹೆ ವೇತನ ಪಾವತಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಸದರಿ ಕೆಲಸಗಾರರಿಗೆ ಪೀಸ್‌ವರ್ಕ್ ಆಧಾರದ ಮೇಲೆ ವರ್ಷ ಪೂರ್ತಿ ಕೆಲಸ ನೀಡುತ್ತಿದ್ದು, ಮುಂದೆ ದಾಸ್ತಾನು ಮಾಲು ತೀರುವಳಿಯಾದ ನಂತರ ಪುನ: ಪ್ರತಿ ವಿಭಾಗವನ್ನುತೆರೆದು ಕೆಲಸಗಾರರಿಗೆ ಪೀಸ್‌ವರ್ಕರ್ ಕೆಲಸ ನೀಡಲಾಗುವುದು. ಚರಕ ಮಹಿಳಾ ವಿವಿಧೋದ್ದೇಶ ಕೈಗಾರಿಕಾ ಸಹಕಾರ ಸಂಘದಲ್ಲಿ ಉಳಿದಿರುವ ಬಟ್ಟೆಯನ್ನು ಹಾಗೂ ಸಿದ್ಧವಸ್ತುಗಳನ್ನು ರಿಯಾಯಿತಿ ದರದಲ್ಲಿ ಮಾರಾಟ ಮಾಡುವುದು. ಚರಕದ ಮಾರಾಟದ ಜವಾಬ್ದಾರಿ ನಿರ್ವಹಿಸುತ್ತಿರುವ ದೇಸಿ ಸಂಸ್ಥೆ ಇವರು ಈಗಾಗಲೇ ಒಂದು ಮಾರಾಟ ಮಳಿಗೆಯನ್ನು ತೆರೆದಿದ್ದು, ಮುಂದಿನ ದಿನಗಳಲ್ಲಿ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಮಾರಾಟ ಮಳಿಗೆಗಳನ್ನು ತೆರೆಯುವುದು. ಹಾಗೂ ನಾಡಿನ ಪ್ರತಿಷ್ಠಿತ ವಸ್ತು ಪ್ರದರ್ಶನಗಳಲ್ಲಿ ಮಾರಾಟ ಹಾಗೂ ಸ್ವತಃಚರಕ ಮತ್ತು ದೇಸಿ ಸಂಸ್ಥೆಗಳೇ ವಸ್ತು ಪ್ರದರ್ಶನಗಳನ್ನು ಏರ್ಪಡಿಸುವ ಯೋಜನೆ ಹೊಂದಿದೆ. ಆನ್‌ಲೈನ್‌ನಲ್ಲಿ ಮಾರುಕಟ್ಟೆಯ ಮೂಲಕ ಗ್ರಾಹಕರಿಗೆ ಖರೀದಿಸುವ ಅವಕಾಶ ನೀಡಲಾಗಿದೆ.

ಸಂಖ್ಯೆ: ಸಿಒ 75 ಪಿಎಂಸಿ 2020

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1550

ವಿಧಾನ ಸಭೆ ಸದಸ್ಯರ ಹೆಸರು : ಶ್ರೀ ಮುನಿಯಪ್ಪ ವಿ. (ಶಿಡ್ಲಘಟ್ಟ)

ಉತ್ತರಿಸಬೇಕಾದ ದಿನಾಂಕ : 25.09.2020

ಉತ್ತರಿಸುವ ಸಚಿವರು : ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ಶಿಡ್ಲಘಟ್ಟ ತಾಲ್ಲೂಕಿನಲ್ಲಿ ಬಿ.ಪಿ.ಎಲ್, ಎ.ಪಿ.ಎಲ್ ಅಂತ್ಯೋದಯ ಮತ್ತು ಇತರೆ ಒಟ್ಟು ಪಡಿತರ ಚೀಟಿದಾರರ ಸಂಖ್ಯೆ ಎಷ್ಟು;	ಶಿಡ್ಲಘಟ್ಟ ತಾಲ್ಲೂಕಿನಲ್ಲಿ ಬಿ.ಪಿ.ಎಲ್, ಎ.ಪಿ.ಎಲ್ ಅಂತ್ಯೋದಯ ಪಡಿತರ ಚೀಟಿದಾರರ ವಿವರ ಈ ಕೆಳಕಂಡಂತಿದೆ. ಪಿಹೆಚ್‌ಹೆಚ್ (ಬಿಪಿಎಲ್): 47,382 ಅಂತ್ಯೋದಯ ಪಡಿತರ ಚೀಟಿ (ಎಎವೈ): 5,207 ಎನ್‌ಪಿಹೆಚ್‌ಹೆಚ್ (ಎಪಿಎಲ್): 934 ಒಟ್ಟು: 53,523
ಆ	ಬಿ.ಪಿ.ಎಲ್, ಎ.ಪಿ.ಎಲ್ ಪಡಿತರ ಚೀಟಿಗೆ ಅರ್ಜಿಹಾಕಿರುವವರ ಸಂಖ್ಯೆ ಎಷ್ಟು; ಈ ಪೈಕಿ ಇನ್ನೂ ಎಷ್ಟು ಅರ್ಜಿದಾರರಿಗೆ ಬಿ.ಪಿ.ಎಲ್ ಕಾರ್ಡ್ ಗಳನ್ನು ವಿತರಣೆ ಮಾಡಬೇಕಿದೆ;	ರಾಜ್ಯದಲ್ಲಿ ಬಿಪಿಎಲ್, ಎಪಿಎಲ್ ಪಡಿತರ ಚೀಟಿಗಳಿಗೆ ಹಾಕಿರುವ ಅರ್ಜಿಗಳ ವಿವರ ಕೆಳಕಂಡಂತಿದೆ: ಬಿಪಿಎಲ್: 11,21,111 ಎಪಿಎಲ್: 4,11,245 ಒಟ್ಟು: 15,32,356 1,31,829 ಅರ್ಜಿದಾರರಿಗೆ ಬಿ.ಪಿ.ಎಲ್ ಕಾರ್ಡ್ ಗಳನ್ನು ವಿತರಣೆ ಮಾಡಬೇಕಿದೆ.
ಇ	ಉಳಿದ ಅರ್ಜಿದಾರರಿಗೆ ಪಡಿತರ ಚೀಟಿ ವಿತರಿಸದಿರಲು ಕಾರಣವೇನು?	ಪಡಿತರ ಚೀಟಿಯನ್ನು ಫಲಾನುಭವಿಗಳಿಗೆ ನೀಡುವ ಮುನ್ನ ಕುಟುಂಬದ ಎಲ್ಲಾ ಸದಸ್ಯರ ಬಯೋಮೆಟ್ರಿಕ್ ಪಡೆಯುವುದು ಕಡ್ಡಾಯವಾಗಿರುತ್ತದೆ. ಆದರೇ, Covid - 19ರ ಹಿನ್ನೆಲೆಯಲ್ಲಿ ಬಯೋಮೆಟ್ರಿಕ್ ವ್ಯವಸ್ಥೆಯನ್ನು

		ಬಳಸುವುದಕ್ಕೆ ಅಡಚಣೆ ಯಾದ ಕಾರಣದಿಂದ ಹಾಗೂ ಆದ್ಯತಾ (ಪಿ.ಹೆಚ್.ಹೆಚ್) ಪಡಿತರ ಚೀಟಿಯನ್ನು ವಿತರಿಸುವ ಮುನ್ನ ಅರ್ಜಿದಾರರ ಅರ್ಹತೆಯ ಬಗ್ಗೆ ಸ್ಥಳ ತನಿಖೆಯನ್ನು ಸಹ ಇಲಾಖೆಯ ಕಾರ್ಯ ನಿರ್ವಾಹಕರ ಸಿಬ್ಬಂದಿ ಮುಖಾಂತರ ನಡೆಸುವುದು ಕಡ್ಡಾಯವಾಗಿರುತ್ತದೆ. ಕೋವಿಡ್ -19 ಸಾಂಕ್ರಾಮಿಕ ರೋಗವು ತೀವ್ರವಾಗಿ ಪಸರಿಸುತ್ತಿರುವುದರಿಂದ ಸುಗಮ ಚಲನವಲನಗಳಿಗೆ ಅಡಚಣೆ ಉಂಟಾಗಿರುತ್ತದೆ ಆದುದರಿಂದ ಆದ್ಯತಾ (ಪಿ.ಹೆಚ್.ಹೆಚ್) ಪಡಿತರ ಚೀಟಿ ವಿತರಣೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿರುತ್ತದೆ.

ಆನಾಸ 260 ಡಿಆರ್ ಎ 2020 (ಇ-ಆಫೀಸ್)

(ಕೆ.ಗೋಪಾಲಯ್ಯ)

ಆಹಾರ, ನಾಗರಿಕ ಸರಬರಾಜು ಮತ್ತು

ಗ್ರಾಹಕರ ವ್ಯವಹಾರಗಳ ಹಾಗೂ

ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

/

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರು : ಶ್ರೀ ರವಿ ಸುಬ್ರಮಣ್ಯ ಎಲ್.ಎ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1595

ಉತ್ತರಿಸಬೇಕಾದ ದಿನಾಂಕ : 25.09.2020

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಶ್ರೀ ಗುರು ರಾಘವೇಂದ್ರ ಸಹಕಾರಿ ಬ್ಯಾಂಕ್, ಬಸವನಗುಡಿ, ಬೆಂಗಳೂರು ಇಲ್ಲಿ ಎಷ್ಟು ಕೋಟಿ ಮೊತ್ತದ ಅವ್ಯವಹಾರ ನಡೆದಿದೆ;	ಭಾರತೀಯ ರಿಸರ್ವ್ ಬ್ಯಾಂಕ್ ಪರಿವೀಕ್ಷಣೆ ಕೈಗೊಂಡ ಸಂಧರ್ಭದಲ್ಲಿ ಬ್ಯಾಂಕ್‌ನಲ್ಲಿ ದಾಖಲೆ ಇಲ್ಲದೆ ರೂ. 1544.43 ಕೋಟಿ ಸಾಲ ನೀಡಿರುವುದು ಹಾಗೂ 27 ಮಂದಿ ಸಾಲಗಾರರಿಗೆ ಮತ್ತು ಅವರ ಸಂಬಂಧಿತ ವ್ಯಕ್ತಿಗಳಿಗೆ ರೂ.921.44 ಕೋಟಿ ಸಾಲ ನೀಡಿದ್ದು, ಇದರಲ್ಲಿ ಶೇಕಡಾ 95% ರಷ್ಟು ಅನುತ್ಪಾದಕ ಆಸ್ತಿಗಳಾಗಿದ್ದು, ರೂ.1594.74 ಕೋಟಿಗಳಷ್ಟು ವಂಚನೆ ಮಾಡಿರುವುದು ಕಂಡು ಬಂದಿರುತ್ತದೆ.
ಆ)	ಸದರಿ ಬ್ಯಾಂಕಿನಲ್ಲಿ ಎಷ್ಟು ವರ್ಷಗಳಿಂದ ಹಣದ ಅವ್ಯವಹಾರ ನಡೆದಿದೆ:	ಭಾರತೀಯ ರಿಸರ್ವ್ ಬ್ಯಾಂಕ್‌ನ ಪರಿವೀಕ್ಷಣಾ ವರದಿಯಲ್ಲಿ 10 ವರ್ಷಗಳಿಂದ ಗುರುತರವಾದ ಅವ್ಯವಹಾರ ನಡೆದಿರುವುದು ವರದಿಯಾಗಿರುತ್ತದೆ.
ಇ)	ಸದರಿ ಬ್ಯಾಂಕಿನ ಹಣದ ಅವ್ಯಹಾರಕ್ಕೆ ಕಾರಣೀಭೂತರಾದ ಬ್ಯಾಂಕಿನ ಅಧ್ಯಕ್ಷ ಹಾಗೂ ಸಿ.ಇ.ಓ. ರವರ ಬಂಧನ ಮಾಡಲಾಗಿದೆಯೇ; ಬಂಧನವಾಗದಿದ್ದಲ್ಲಿ ಸ್ಪಷ್ಟ ಕಾರಣ ತಿಳಿಸುವುದು.	ಬ್ಯಾಂಕಿನ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಕೆ. ರಾಮಕೃಷ್ಣ ಇವರ ವಿರುದ್ಧ ಬಸವನಗುಡಿ ಪೋಲೀಸ್ ಠಾಣೆ ಮೊಕದ್ದಮೆ ಸಂಖ್ಯೆ: 37/2020 ಪ್ರಕರಣ ದಾಖಲಾಗಿದ್ದು, ಇವರನ್ನು ಬಂಧಿಸುವ ಪ್ರಯತ್ನ ನಡೆದಿದ್ದು, ಇವರ ಪತ್ತೆಗಾಗಿ ಸದರಿ ವ್ಯಕ್ತಿಯ ಮತ್ತು ಅವರ ಪತ್ನಿಯ ಸ್ವಂತ ಸ್ಥಳದ ಪರಿಶೀಲನೆ ಮಾಡಲಾಗಿರುತ್ತದೆ. ಸದರಿಯವರ ಪತ್ತೆಗಾಗಿ ವಿಶೇಷ ತಂಡವನ್ನು ನಿಯೋಜಿದ್ದು, ಸದರಿ ತಂಡದಲ್ಲಿ ಡಿ.ವೈ.ಎಸ್.ಪಿ, ಪಿ.ಐ, ಪಿ.ಎಸ್.ಐ ದರ್ಜೆಯ 10 ಅಧಿಕಾರಿಗಳಿದ್ದು, ಸದರಿಯವರ ಬಂಧನಕ್ಕೆ ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡಲಾಗುತ್ತಿದ್ದು, ಶೀಘ್ರದಲ್ಲಿಯೇ ಬಂಧಿಸಲಾಗುವುದೆಂದು ಹಾಗೂ ಪ್ರಕರಣದ ಅವ್ಯವಹಾರದಲ್ಲಿ ಭಾಗಿಯಾದ ಗುರುಸಾರ್ವಭೌಮ ಕೋ-ಆಪರೇಟಿವ್ ಬ್ಯಾಂಕಿನ ಹಿಂದಿನ ಸಿ.ಇ.ಓ. ರವರಾದ ವಾಸುದೇವ ಮಯ್ಯ ರವರು ದಿನಾಂಕ : 06.07.2020 ರಂದು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಸಂಬಂಧ, ಸುಬ್ರಮಣ್ಯ ಪೋಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ:104/2020 ರಲ್ಲಿ ಪ್ರಕರಣ ದಾಖಲಾಗಿದ್ದು, ಈ ಕುರಿತು ಸಹಾ ಸಿ.ಐ.ಡಿ.ಯಲ್ಲಿ ತನಿಖೆ ನಡೆಸಲಾಗುತ್ತಿದೆ ಎಂದು ಒಳಾಡಳಿತ ಇಲಾಖೆ (ಅಪರಾಧ) ಇಲಾಖೆ ಇವರು ತಿಳಿಸಿರುತ್ತಾರೆ.
ಈ)	ಸದರಿ ಬ್ಯಾಂಕಿನಲ್ಲಿ ಎಷ್ಟು ಮೊತ್ತದ ಠೇವಣಿ ಸಂಗ್ರಹವಾಗಿದೆ: ಠೇವಣಿದಾರರ ಹಿತ ಕಾಪಾಡಲು ಸರ್ಕಾರ ಯಾವ ಅಗತ್ಯ ಕ್ರಮಗಳನ್ನು ಕೈಗೊಂಡಿದೆ;	ಬ್ಯಾಂಕಿನಲ್ಲಿ ಒಟ್ಟು ರೂ.2600.20 ಕೋಟಿ ಠೇವಣಿ ಸಂಗ್ರಹವಾಗಿದೆ. ಭಾರತೀಯ ರಿಸರ್ವ್ ಬ್ಯಾಂಕ್‌ನ ನಿರ್ದೇಶನದಂತೆ ಇದುವರೆವಿಗೂ ರೂ.189.23 ಕೋಟಿ ಹಣವನ್ನು ಠೇವಣಿದಾರರಿಗೆ ಮರು ಪಾವತಿಸಲಾಗಿದೆ. ಸಾಲಗಾರರಿಂದ ಸಾಲ ವಸೂಲಿ ಮಾಡಿ, ಠೇವಣಿದಾರರಿಗೆ ಪಾವತಿಸಬೇಕಾಗಿದ್ದು, ಬ್ಯಾಂಕಿನ ಆಡಳಿತ ಮಂಡಳಿ ರದ್ದುಪಡಿಸಿ ಆಡಳಿತಾಧಿಕಾರಿಯವರನ್ನು ನೇಮಿಸಲಾಗಿದೆ.-

ಉ)	ಸದರಿ ಬ್ಯಾಂಕನ್ನು ಪುನಃಶ್ಚೇತನಗೊಳಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ. (ಸಂಪೂರ್ಣ ವಿವರ ನೀಡುವದು)	ಬ್ಯಾಂಕಿನ ಅವ್ಯವಹಾರಗಳ ಬಗ್ಗೆ ಕೆಳಕಂಡ ಕ್ರಮ ಕೈಗೊಳ್ಳಲಾಗಿದೆ. ಎ) ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 64 ರ ಶಾಸನಬದ್ಧ ವಿಚಾರಣೆಗೆ ಆದೇಶಿಸಲಾಗಿದೆ. ಬಿ) 2014 ರಿಂದ 2019ರವರೆಗಿನ ಸಾಲುಗಳ ಮರುಲೆಕ್ಕಪರಿಶೋಧನೆಗೆ ಆದೇಶಿಸಲಾಗಿದೆ. ಸಿ) ಜಾರಿ ನಿರ್ದೇಶನಾಲಯದಿಂದ ತನಿಖೆ ನಡೆಯುತ್ತಿದೆ ಡಿ) ಸಿಐಡಿ ತನಿಖೆ ನಡೆಯುತ್ತಿದೆ. ಇ) ಸಂಬಂಧಿಸಿದವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ. ಮರು ಲೆಕ್ಕಪರಿಶೋಧನೆ, 64ರಡಿ ವಿಚಾರಣೆ, ಸಿ. ಐ. ಡಿ ತನಿಖೆ ಪೂರ್ಣಗೊಂಡ ನಂತರ ವಾಸ್ತವಿಕ ಚಿತ್ರಣ ದೊರೆಯಲಿದೆ. ನಂತರ ಪುನಃಶ್ಚೇತನಕ್ಕೆ ಯಾವ ಕ್ರಮ ಕೈಗೊಳ್ಳಬೇಕೆಂಬುದನ್ನು ಪರಿಶೀಲಿಸಲಾಗುವುದು.

ಸಂಖ್ಯೆ: ಸಿಒ 346 ಸಿಎಲ್‌ಎಸ್ 2020

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1596
ಸದಸ್ಯರ ಹೆಸರು	ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ)
ಉತ್ತರಿಸಬೇಕಾದ ದಿನಾಂಕ	25.09.2020.
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ಕರಾವಳಿ ಪ್ರದೇಶದಲ್ಲಿ ಮರಳುಗಾರಿಕೆ ಸಮಸ್ಯೆಯಿಂದ ಮನೆ ನಿರ್ಮಿಸುವವರು ಮರಳು ಇಲ್ಲದೆ ಮನೆ ಪೂರ್ಣಗೊಳಿಸಲು ಸಾಧ್ಯವಾಗದಿರುವುದು ಹಾಗೂ ಕಾರ್ಮಿಕರು ಕೆಲಸವಿಲ್ಲದೆ ಪರದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :	ಬಂದಿರುತ್ತದೆ.
(ಆ)	ಹಾಗಾದಲ್ಲಿ ಸಮಸ್ಯೆ ಪರಿಹರಿಸಲು ಸರ್ಕಾರದ ಸ್ಪಷ್ಟವಾದ ನಿಲುವೇನು?	ಕರಾವಳಿ ಜಿಲ್ಲೆಗಳ, ದಕ್ಷಿಣ ಕನ್ನಡ ಜಿಲ್ಲೆಗೆ 9 ಲಕ್ಷ, ಉಡುಪಿ ಜಿಲ್ಲೆಗೆ 8.5 ಲಕ್ಷ ಹಾಗೂ ಉತ್ತರ ಕನ್ನಡ ಜಿಲ್ಲೆಗೆ 6.5 ಲಕ್ಷ ಮೆ.ಟನ್ ವಾರ್ಷಿಕ ಅಂದಾಜು ಮರಳಿನ ಬೇಡಿಕೆ ಇರುತ್ತದೆ. ಕರಾವಳಿ ಜಿಲ್ಲೆಗಳ CRZ ನದಿ ಪಾತ್ರಗಳ ವ್ಯಾಪ್ತಿಗಳಲ್ಲಿ ಗುರುತಿಸಿ, ಕರಾವಳಿ ನಿಯಂತ್ರಣ ವಲಯ ಪ್ರಾಧಿಕಾರದಿಂದ ಅನುಮತಿ ಪಡೆದಿರುವ ಮರಳು ದಿಬ್ಬಗಳು ಹಾಗೂ ಕರಾವಳಿ ಜಿಲ್ಲೆಗಳ ಕರಾವಳಿ ನಿಯಂತ್ರಣ ವಲಯವಲ್ಲದ ಪ್ರದೇಶಗಳಲ್ಲಿ ಟೆಂಡರ್–ಕಂ–ಹರಾಜು ಮೂಲಕ ಗುತ್ತಿಗೆ ಮಂಜೂರು ಮಾಡಲಾದ ಮರಳು ಗುತ್ತಿಗೆ ಪ್ರದೇಶಗಳಲ್ಲಿನ ಮರಳಿನ ಪ್ರಮಾಣದ ವಿವರಗಳು ಈ ಕೆಳಕಂಡಂತಿರುತ್ತವೆ.

ಕ್ರ ಸಂ.	ಜಿಲ್ಲೆ	CRZ		Non CRZ	
		ಕರಾವಳಿ ನಿಯಂತ್ರಣ ವಲಯ ಪ್ರಾಧಿಕಾರದಿಂದ ಮರಳು ದಿಬ್ಬಗಳಲ್ಲಿ ಮರಳನ್ನು ತೆರವುಗೊಳಿಸಲು ಅನುಮತಿ ಪಡೆದಿರುವ ಮರಳು ದಿಬ್ಬಗಳ ಸಂಖ್ಯೆ	ಮರಳು ದಿಬ್ಬಗಳಲ್ಲಿ ದೊರೆಯಬಹುದಾದ ಮರಳಿನ ಪ್ರಮಾಣ (ಮೆ.ಟನ್ ಗಳಲ್ಲಿ)	ಟೆಂಡರ್-ಕಂ-ಹರಾಜು ಮೂಲಕ ಗುತ್ತಿಗೆ ಮಂಜೂರು ಮಾಡಲಾದ ಗುತ್ತಿಗೆಗಳ ಸಂಖ್ಯೆ	ಸದರಿ ಗುತ್ತಿಗೆ ಪ್ರದೇಶಗಳಲ್ಲಿ ದೊರೆಯಬಹುದಾದ ಮರಳಿನ ಪ್ರಮಾಣ (ಮೆ.ಟನ್ ಗಳಲ್ಲಿ)
1.	ಉಡುಪಿ	10	7,13,090	02	84,039
2.	ದಕ್ಷಿಣ ಕನ್ನಡ	13	10,58,598	15	3,81,534
3.	ಉತ್ತರ ಕನ್ನಡ	11	8,53,141	-	-

ಮೇಲ್ಕಂಡಂತೆ, ಪ್ರಸ್ತುತ ಸಾಲಿನಲ್ಲಿ ಮರಳಿನ ಬೇಡಿಕೆಗಿಂತ ಸದರಿ ನಿಕ್ಷೇಪಗಳಲ್ಲಿ ಮರಳು ದೊರೆಯುವ ಪ್ರಮಾಣವು ಅಧಿಕವಾಗಿದ್ದು, ಸದರಿ ಮರಳನ್ನು ಕರಾವಳಿ ಜಿಲ್ಲೆಗಳ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಪೂರೈಸಿ, ಮರಳಿನ ಸಮಸ್ಯೆಯನ್ನು ಬಗೆಹರಿಸಲು ಕ್ರಮ ವಹಿಸಲಾಗಿರುತ್ತದೆ.

ಸಂಖ್ಯೆ: ಸಿಐ 472 ಎಂಎಂಎನ್ 2020

(ಸಿ.ಸಿ. ಪಾಟೀಲ)
ಗಣಿ ಮತ್ತು ಭೂವಿಜ್ಞಾನ ಸಚಿವರು
ಸಿ.ಸಿ. ಪಾಟೀಲ
ಗಣಿ ಮತ್ತು ಭೂವಿಜ್ಞಾನ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1600
ಸದಸ್ಯರ ಹೆಸರು	:	ಶ್ರೀ ಶ್ರೀನಿವಾಸ್. ಎಂ
ಉತ್ತರಿಸಬೇಕಾದ ದಿನಾಂಕ	:	25-09-2020
ಉತ್ತರಿಸುವವರು	:	ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕ್ರ ಸಂ	ಪ್ರಶ್ನೆಗಳು	ಉತ್ತರ
ಅ	ರಾಜ್ಯದಲ್ಲಿ ರೇಷ್ಮೆ ಖರೀದಿಗೆ ಸರ್ಕಾರ ನಿಗದಿಪಡಿಸಿರುವ ಬೆಂಬಲ ಬೆಲೆ ಎಷ್ಟು ;	ರೇಷ್ಮೆ ಖರೀದಿಗೆ ಬೆಂಬಲ ಬೆಲೆ ನಿಗದಿಪಡಿಸಿರುವುದಿಲ್ಲ.
ಆ	ರಾಜ್ಯದಲ್ಲಿರುವ ರೇಷ್ಮೆ ಬೆಳೆಗಾರರಿಗೆ ಸರ್ಕಾರದಿಂದ ನೀಡುತ್ತಿರುವ ಸವಲತ್ತುಗಳೇನು? (ಸಂಪೂರ್ಣ ಮಾಹಿತಿ ನೀಡುವುದು)	ರಾಜ್ಯದಲ್ಲಿರುವ ರೇಷ್ಮೆ ಬೆಳೆಗಾರರಿಗೆ ರೇಷ್ಮೆ ಕೃಷಿ ಮತ್ತು ರೇಷ್ಮೆ ಉದ್ಯಮವನ್ನು ಪ್ರೋತ್ಸಾಹಿಸುವ ಸಲುವಾಗಿ ಈ ಕೆಳಕಂಡ ಕಾರ್ಯಕ್ರಮಗಳನ್ನು ರೂಪಿಸಿ, ಸವಲತ್ತುಗಳನ್ನು ನೀಡಲಾಗುತ್ತಿದೆ. 1. ಸುಧಾರಿತ ಹಿಪ್ಪುನೇರಳೆ ತೋಟ ಬೆಳೆಯಲು, ನರ್ಸರಿ ಬೆಳೆಸಲು ಸಹಾಯಧನ ಹಾಗೂ ತಾಂತ್ರಿಕ ಮಾಹಿತಿ ಒದಗಿಸಲಾಗುತ್ತಿದೆ. 2. ಹಿಪ್ಪುನೇರಳೆ ತೋಟಕ್ಕೆ ಟ್ರಂಚಿಂಗ್ - ಮಲ್ಚಿಂಗ್ ಮಾಡಲು ಸಹಾಯಧನ ಹಾಗೂ ತಾಂತ್ರಿಕ ಮಾಹಿತಿ ಒದಗಿಸಲಾಗುತ್ತಿದೆ. 3. ಹಿಪ್ಪುನೇರಳೆ ತೋಟಕ್ಕೆ ಹನಿ, ನೀರಾವರಿ ಅಳವಡಿಕೆಗೆ ಶೇ.90 ರಷ್ಟು ಸಹಾಯಧನ ನೀಡಲಾಗುತ್ತಿದೆ. 4. ಹಿಪ್ಪುನೇರಳೆ ತೋಟದ ಮಣ್ಣಿನ ಫಲವತ್ತತೆಗಾಗಿ ಜೈವಿಕಗೊಬ್ಬರ ಬಳಕೆ, ಹಿಪ್ಪುನೇರಳೆ ಸೊಪ್ಪಿನ ಇಳುವರಿ ಹಾಗೂ ಗುಣಮಟ್ಟ ಹೆಚ್ಚಿಸುವ ಸಲುವಾಗಿ ಸಸ್ಯ ಸಂವರ್ಧಕ ಹಾಗೂ ಬೇರು ಕೊಳೆ ನಿಯಂತ್ರಣಕ್ಕಾಗಿ ಸಹಾಯಧನ ಒದಗಿಸಲಾಗುತ್ತಿದೆ. 5. ಹಿಪ್ಪುನೇರಳೆ ಮರ ಕೃಷಿ ಪದ್ಧತಿ ಉತ್ತೇಜನಕ್ಕಾಗಿ ಸಹಾಯಧನ ಒದಗಿಸಲಾಗುತ್ತಿದೆ. 6. ರೇಷ್ಮೆ ಹುಳು ಸಾಕಾಣಿಕೆ ಮನೆ / ಮೌಂಟಿಂಗ್ ಹಾಲ್ ನಿರ್ಮಾಣಕ್ಕೆ ಸಹಾಯಧನ ನೀಡಲಾಗುತ್ತಿದೆ. 7. ಸೋಂಕು ನಿವಾರಕಗಳು ಪೂರೈಕೆ ಮತ್ತು ಸಲಕರಣೆಗಳಿಗೆ ಸಹಾಯಧನ ಹಾಗೂ ತಾಂತ್ರಿಕ ಮಾಹಿತಿ ಒದಗಿಸಲಾಗುತ್ತಿದೆ. 8. ರೋಟರಿ ಚಂದ್ರಿಕೆಗಳ ಖರೀದಿಗೆ ಸಹಾಯಧನ. 9. ದ್ವಿತಳಿ ಚಾಕಿ ವೆಚ್ಚಕ್ಕೆ ಸಹಾಯಧನ. 10. ಚಾಕಿ ಸಾಕಾಣಿಕಾ ಕೇಂದ್ರದ ಸ್ಥಾಪನೆಗೆ / ಸಲಕರಣೆಗಳ ಖರೀದಿಗೆ ಸಹಾಯಧನ ಒದಗಿಸಲಾಗುತ್ತಿದೆ.

		11. ನೂತನ ತಾಂತ್ರಿಕತೆಗಳ ಅಳವಡಿಕೆಗೆ ರೈತರಿಗೆ ತರಬೇತಿ ಮತ್ತು ಕಾರ್ಯಾಗಾರ ಹಮ್ಮಿಕೊಳ್ಳಲಾಗುತ್ತಿದೆ. 12. ದ್ವಿತಳಿ ಬಿತ್ತನೆ ಬೆಳಗಾರರು ಹಾಗೂ ಮೈಸೂರು ಬಿತ್ತನೆ ಬೆಳಗಾರರು ಬೆಳೆಯುವ ಬಿತ್ತನೆ ಗೂಡಿಗೆ ಪ್ರೋತ್ಸಾಹಧನ / ಬೋನಸ್ ನೀಡಲಾಗುತ್ತಿದೆ. 13. ರೇಷ್ಮೆ ಬಿತ್ತನೆ ಬೆಳೆಗಾರರಿಗೆ ಉತ್ಪಾದಕತೆ ಮತ್ತು ಗುಣಮಟ್ಟ ಆಧರಿಸಿ ಬಿತ್ತನೆ ಗೂಡಿಗೆ ಪ್ರೋತ್ಸಾಹಧನ ನೀಡಲಾಗುತ್ತಿದೆ. 14. ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಉತ್ಪಾದಿಸುವ ದ್ವಿತಳಿ ರೇಷ್ಮೆ ಗೂಡಿಗೆ, ಕೆ.ಜಿಗೆ ರೂ.10/- ರಂತೆ ಸಾಗಾಣಿಕೆ ವೆಚ್ಚ ನೀಡಲಾಗುತ್ತಿದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಹಿಪ್ಪುನೇರಳೆ ನರ್ಸರಿ / ತೋಟ ಸ್ಥಾಪನೆ, ತೋಟ ನಿರ್ವಹಣೆ ಮತ್ತು ಹಿಪ್ಪುನೇರಳೆ ಮರ ಕೃಷಿ ಪದ್ಧತಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದ್ದು, ರೈತರಿಗೆ ಕೂಲಿ / ಸಾಮಗ್ರಿ ವೆಚ್ಚವನ್ನು ಭರಿಸುವ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗಾವಕಾಶವನ್ನು ಕಲ್ಪಿಸಿ ಆರ್ಥಿಕ ಸದೃಡತೆಯನ್ನು ಒದಗಿಸಲಾಗುತ್ತಿದೆ.

ರೇಷ್ಮೆ 126 ರೇಕೃವಿ 2020

(ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಮತ್ತು
ರೇಷ್ಮೆ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ :1604
2. ಸದಸ್ಯರ ಹೆಸರು :ಶ್ರೀ.ಬಸವರಾಜ ಬಿ.ಮತ್ತಿಮುಡ
3. ಉತ್ತರಿಸಬೇಕಾದ ಸಚಿವರು : ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು
4. ಉತ್ತರಿಸಬೇಕಾದ ದಿನಾಂಕ :25.09.2020

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕಲಬುರಗಿ ಗ್ರಾಮೀಣ ಮತ ಕ್ಷೇತ್ರದ ವ್ಯಾಪ್ತಿಯ ಕಮಲಾಪುರ ತಾಲ್ಲೂಕಿನಲ್ಲಿ ಬೆಳೆಯಲಾಗುವ ಬಾಳೆ ಹಣ್ಣಿನ ವಿಶೇಷತೆ ಏನು; (ವಿವರ ನೀಡುವುದು)	ಕಮಲಾಪುರ ಕೆಂಪು ಬಾಳೆ ಬೆಳೆಗೆ 2009 ರಲ್ಲಿ ಭೌಗೋಳಿಕ ವಿಶೇಷತೆಯ ಮಾನ್ಯತೆ ಪಡೆಯಲಾಗಿರುತ್ತದೆ. ಬೇರೆ ಬಾಳೆ ತಳಿಗಳಿಗೆ ಹೋಲಿಸಿದರೆ ಈ ತಳಿಯು ಅತ್ಯಂತ ಧೃಢವಾದ ದೊಡ್ಡ ಗಾತ್ರದ ಗಿಡ. ಈ ತಳಿಯ ಗಿಡಗಳು ಸಾಮಾನ್ಯವಾಗಿ 15 ರಿಂದ 18 ಅಡಿ ಎತ್ತರಕ್ಕೆ ಬೆಳೆಯುತ್ತದೆ, ಗೊನೆಗಳ ತೂಕ 15 ರಿಂದ 25 ಕಿ.ಗ್ರಾಂ ಇರುತ್ತದೆ. ಹಣ್ಣು ಕೆಂಪು ಬಣ್ಣ ವಿದ್ದು, ಸಿಪ್ಪೆ ದಪ್ಪವಾಗಿರುತ್ತದೆ. ತಿರುಳು ಮೃದುವಾಗಿದ್ದು ಹಳದಿ ಅಥವಾ ಕೇಸರಿ ಬಣ್ಣದಿರುತ್ತದೆ. ಹಣ್ಣುಗಳು ಬಹಳ ದಪ್ಪವಿದ್ದು ತಿನ್ನಲು ರುಚಿಯಾಗಿರುವುದಲ್ಲದೇ ಉತ್ತಮ ಪೋಷಕಾಂಶಗಳನ್ನು ಹೊಂದಿರುತ್ತದೆ.

ಕೆಂಪು ಬಾಳೆಯಲ್ಲಿರುವ ಸಂಯೋಜಿತ ಸತ್ವಾಂಶಗಳ ವಿವರ

ಶೇ.%(ತಾಜಾ ತಿರುಳಿನ ತೂಕ)			
ಕ್ರ.ಸಂ	ಸಂಯೋಜಿತ ಸತ್ವಾಂಶಗಳು	ಪಚ್ಚಬಿತ್ತಿ	ಕಮಲಾಪೂರ ಕೆಂಪು ಬಾಳೆ
1	ನೀರಿನ ಅಂಶ	75.7	73.5
2	ಶರ್ಕರ	22.2	21.5
3	ಸಸಾರ ಜನಕ	1.1	-
4	ಕೊಬ್ಬು	0.2	-
(ಮಿ.ಗ್ರಾ/100 ಗ್ರಾಂ (ತಾಜಾ ತಿರುಳಿನ ತೂಕ)			
1	ಪೊಟ್ಯಾಷಿಯಂ	460	525
2	ಕ್ಯಾಲ್ಸಿಯಂ	7	59.6
3	ಕಬ್ಬಿಣ	-	0.35
4	ಸೋಡಿಯಂ	117	117
5	ವಿಟಮಿನ್ 'ಸಿ'	10	2.23
6	ನಾರಿನ ಅಂಶ	-	4.12

ಕ್ರ.ಸಂ	ಪ್ರಶ್ನೆ	ಉತ್ತರ
ಆ)	ಪ್ರಸ್ತುತ ಎಷ್ಟು ಹೆಕ್ಟೇರ್ ನಲ್ಲಿ ಈ ಬಾಳೆಯನ್ನು ಬೆಳೆಯಲಾಗುತ್ತಿದೆ; ಈ ಬಾಳೆಯು ಬೆಳೆಯುವ ಕ್ಷೇತ್ರವು ಕಡಿಮೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಪ್ರಸ್ತುತ ಕಲಬುರ್ಗಿ ಜಿಲ್ಲೆಯಲ್ಲಿ ಸುಮಾರು 26 ಹೆಕ್ಟೇರ್ ಪ್ರದೇಶದಲ್ಲಿ ಕೆಂಪು ಬಾಳೆ ಬೆಳೆಯನ್ನು ಬೆಳೆಯಲಾಗುತ್ತಿದೆ. ವರ್ಷವಾರು ಬೆಳೆ ವಿಸ್ತೀರ್ಣ ಈ ಕೆಳಗಿನಂತಿದೆ.

ವರ್ಷ	ವಿಸ್ತೀರ್ಣ (ಹೆ.)
2017-18	8
2018-19	16
2019-20	25

ಕಳೆದ ಮೂರು ವರ್ಷಗಳಲ್ಲಿ ಕೆಂಪು ಬಾಳೆಯ ವಿಸ್ತೀರ್ಣ ಹೆಚ್ಚಾಗಿರುವುದು ಕಂಡು ಬಂದಿರುತ್ತದೆ.

೫)	ಕೆಂಪು ಬಾಳೆ ಬೆಳೆಯುವ ಕ್ಷೇತ್ರವನ್ನು ಹೆಚ್ಚಿಸಲು ಸರ್ಕಾರ ರೈತರಿಗೆ ಯಾವುದಾದರೂ ವಿಶೇಷ ಯೋಜನೆ ರೂಪಿಸಲು ಸರ್ಕಾರ ಯೋಜಿಸಿದೆಯೇ?	**ಕಮಲಾಪುರ ಕೆಂಪು ಬಾಳೆ ಉತ್ತೇಜನಕ್ಕೆ ಇಲಾಖೆಯಿಂದ ಕೈಗೊಂಡಿರುವ ಕ್ರಮಗಳು** 1. ಕಮಲಾಪುರ ಕೆಂಪು ಬಾಳೆ ಬೆಳೆ ಮತ್ತು ಬೆಳೆಗಾರರ ಉತ್ತೇಜನಕ್ಕಾಗಿ ಇಲಾಖೆಯು ಸದರಿ ಬೆಳೆಗೆ **"Geographical Indications Registry"** ರವರಿಂದ GI registration ಮಾಡಿಸಲಾಗಿರುತ್ತದೆ. 2. ಸದರಿ ಬೆಳೆ ಮತ್ತು ಇತರೆ ಪ್ರಮುಖ ಬೆಳೆಗಳ ಉತ್ತೇಜನಕ್ಕಾಗಿ 2016-17 ರಲ್ಲಿ ಹೊಸದಾಗಿ ಕಮಲಾಪೂರ ಹೋಬಳಿಯಲ್ಲಿ ರೈತ ಉತ್ಪಾದಕರ ಸಂಸ್ಥೆ ಪ್ರಾರಂಭಿಸಲಾಗಿದೆ. ಕೆಂಪು ಬಾಳೆ ಬೆಳೆಗಾರರ ಸಂಘಗಳನ್ನು ರಚಿಸಿ, ನೊಂದಾವಣಿಯಾದ ಬೆಳೆಗಳ ಮಾಲೀಕತ್ವವನ್ನು ಸಂಬಂಧಪಟ್ಟ ಬೆಳೆಗಾರರ ಸಮೂಹಕ್ಕೆ ವರ್ಗಾಯಿಸಿ ಸದರಿ ಗುಂಪುಗಳಿಗೆ ತರಬೇತಿ ನೀಡಿ ಅದರ ಲಾಭವನ್ನು ಪಡೆಯಲು ಸಜ್ಜುಗೊಳಿಸಲಾಗಿದೆ. 3. ಸಮಗ್ರ ತೋಟಗಾರಿಕೆ ಅಭಿವೃದ್ಧಿ ಎಂಬ ಹೆಸರಿನ ಯೋಜನೆಯಡಿ 2017-18 ನೇ ಸಾಲಿನಲ್ಲಿ 8.00 ಹೆಕ್ಟೇರ್ ಪ್ರದೇಶದಲ್ಲಿ ಬಾಳೆ ತೋಟ ಅಭಿವೃದ್ಧಿ ಪಡಿಸಿದ ಒಟ್ಟು 21 ಜನ ರೈತರಿಗೆ ರೂ.6.09 ಲಕ್ಷಗಳು ಹಾಗೂ 2019-20 ನೇ ಸಾಲಿನಲ್ಲಿ 10.00 ಹೆಕ್ಟೇರ್ ಪ್ರದೇಶದಲ್ಲಿ ಬಾಳೆ ತೋಟ ಅಭಿವೃದ್ಧಿ ಪಡಿಸಿದ ಒಟ್ಟು 19 ಜನ ರೈತರಿಗೆ ರೂ.7.39 ಲಕ್ಷಗಳು ಸಹಾಯಧನ ನೀಡಲಾಗಿರುತ್ತದೆ. ಕೆಂಪು ಬಾಳೆ ಬೆಳೆಗಾರರಿಗೆ ಹನಿ ನೀರಾವರಿ ಅಳವಡಿಕೆಗೆ ಹಾಗೂ ಸಮಗ್ರ ಕೀಟ ಮತ್ತು ರೋಗ ನಿರ್ವಹಣೆಗೆ ಸಹಾಯಧನವನ್ನು ನೀಡಲಾಗಿದೆ. 4. 2010-11 ನೇ ಸಾಲಿನಲ್ಲಿ ರೂ.7.00 ಲಕ್ಷ ಅನುದಾನ ನೀಡಿ, ಬೆಳೆಗಾರರ ಸಮೂಹ ನೊಂದಣಿ, ವಿಚಾರ ಸಂಕೀರ್ಣ/ಮಾಹಿತಿ ಶಿಬಿರ ಆಯೋಜನೆ, GI ಬೆಳೆಯ ಸಂರಕ್ಷಣೆಗಾಗಿ ಬೆಳೆ ಸಂಗ್ರಹಾಲಯ ಅಭಿವೃದ್ಧಿ, ತರಬೇತಿಗಾಗಿ ಹಾಲಿ ಲಭ್ಯವಿರುವ ಮೂಲ ಭೂತ ಸೌಕರ್ಯ ಅಭಿವೃದ್ಧಿ, ಈ ಪ್ರಚಾರ ಸಂಬಂಧಿತ ಭಿತ್ತಿ ಪತ್ರಗಳು, ಕೈಪಿಡಿಗಳು, ಲೇಖನಿ ಇತ್ಯಾದಿ ಚಟುಪಟಿಕೆಗಳನ್ನು ಅನುಷ್ಠಾನಿಸಲಾಗಿರುತ್ತದೆ.

ಸಂಖ್ಯೆ: HORTI 378 HGM 2020

(ನಾರಾಯಣಗೌಡ)

ಪೌರಾಡಳಿತ, ತೋಟಗಾರಿಕೆ

ಮತ್ತು

ರೇಷ್ಮೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1606
ಸದಸ್ಯರ ಹೆಸರು	ಶ್ರೀ ರಾಮಸ್ವಾಮಿ ಎ.ಟಿ. (ಅರಕಲಗೂಡು)
ಉತ್ತರಿಸಬೇಕಾದ ದಿನಾಂಕ	25.09.2020.
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಅರಕಲಗೂಡು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಹೊಳೆನರಸೀಪುರ ತಾಲ್ಲೂಕು ಹಳ್ಳಿಮೈಸೂರು ಹೋಬಳಿ ಕಲ್ಲೋಡೆಬೊರೆ ಕಾವಲ್ ಗ್ರಾಮದ ಸರ್ಕಾರಿ ಗೋಮಾಳ ಜಮೀನಿನ ಸರ್ವೆ ನಂ.1ರಲ್ಲಿ ಒಟ್ಟು 3.15ಎಕರೆ ವಿಸ್ತೀರ್ಣದಲ್ಲಿ ಶ್ರೀ.ಪುಷ್ಪಗಿರಿ ಎಂ-ಸ್ಯಾಂಡ್ ಅಂಡ್ ಕ್ರಷರ್ ಅನುಮತಿ ಪಡೆದಿರುವ ಜಮೀನನ್ನು ಹೊರತುಪಡಿಸಿ ಸರ್ಕಾರಿ ಜಮೀನಿನಲ್ಲಿ ಅಕ್ರಮವಾಗಿ ಗಣಿಗಾರಿಕೆ ನಡೆಸುತ್ತಿದ್ದು, ಪ್ರತಿ ನಿತ್ಯ ಕೋಟ್ಯಂತರ ರೂ.ಗಳ ಮೊತ್ತದ ಎಂ-ಸ್ಯಾಂಡನ್ನು ಗಣಿ ನಿಯಮಗಳನ್ನು ಪಾಲಿಸದೇ, ಜಿ.ಎಸ್.ಟಿ. ಹಾಗೂ ಇತರೆ ತೆರಿಗೆ ಪಾವತಿಸದೇ ಸಾಗಿಸುತ್ತಿರುವುದರಿಂದ ಸರ್ಕಾರಕ್ಕೆ ಕೋಟ್ಯಂತರ ರೂಪಾಯಿಗಳ ನಷ್ಟವುಂಟಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;	ಹಾಸನ ಜಿಲ್ಲೆ ಹೊಳೆನರಸೀಪುರ ತಾಲ್ಲೂಕು ಹಳ್ಳಿಮೈಸೂರು ಹೋಬಳಿ ಕಲ್ಲೋಡೆಬೋರೆಕಾವಲ್ ಗ್ರಾಮದ ಸರ್ವೆ ನಂ. 1/ಪಿ1ರ 3-15 ಎಕರೆ ಸರ್ಕಾರಿ ಗೋಮಾಳ ಪ್ರದೇಶದಲ್ಲಿ ಶ್ರೀ ಎಂ.ಎ. ರವಿಕುಮಾರ್ ಮೆ॥ ಪುಷ್ಪಗಿರಿ ಸ್ಯಾಂಡ್ ಅಂಡ್ ಕ್ರಷರ್ ರವರಿಗೆ ದಿನಾಂಕ 07.06.2017 ರಿಂದ 20 ವರ್ಷಗಳ ಅವಧಿಗೆ ಕಲ್ಲುಗಣಿ ಗುತ್ತಿಗೆ ಸಂಖ್ಯೆ 538ನ್ನು ಮಂಜೂರು ಮಾಡಲಾಗಿರುತ್ತದೆ. ಶ್ರೀ ಎಂ.ಎ.ರವಿಕುಮಾರ್, ಮೆ॥ ಪುಷ್ಪಗಿರಿ ಸ್ಯಾಂಡ್ ಅಂಡ್ ಕ್ರಷರ್ ರವರಿಗೆ ಹಾಸನ ಜಿಲ್ಲೆ ಹೊಳೆನರಸೀಪುರ ತಾಲ್ಲೂಕು, ಕಲ್ಲೋಡೆ ಬೋರೆ ಕಾವಲು ಗ್ರಾಮದ ಸ.ನಂ. 1/ಪಿ1ರಲ್ಲಿ 2-20ಎಕರೆ ಪ್ರದೇಶದಲ್ಲಿ ಸ್ಟೋನ್ ಕ್ರಷರ್ ಕಾರ್ಯಾಚರಣೆಗೆ ದಿನಾಂಕ: 28.03.2017 ರಿಂದ ಜಾರಿಗೆ ಬರುವಂತೆ 05 ವರ್ಷಗಳ ಅವಧಿಗೆ ಕ್ರಷರ್ ಲೈಸೆನ್ಸ್ ಮಂಜೂರು ಮಾಡಲಾಗಿರುತ್ತದೆ. ಕಲ್ಲುಗಣಿ ಗುತ್ತಿಗೆದಾರರು ವಾಣಿಜ್ಯ ತೆರಿಗೆ ಇಲಾಖೆಯಿಂದ ಜಿ.ಎಸ್.ಟಿ. ನಂಬರ್ 29ALPPR4191K2Z6 ನ್ನು ಪಡೆದಿದ್ದು, ಕ್ರಷರ್ ಘಟಕವನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆಯ Integrated Lease Management System ತಂತ್ರಾಂಶದಲ್ಲಿ ನೋಂದಾಯಿಸಲಾಗುತ್ತದೆ. ಸದರಿಯವರು ಹೊಂದಿರುವ ಕಲ್ಲುಗಣಿ ಗುತ್ತಿಗೆ ಸಂಖ್ಯೆ 538 ರ ಪ್ರದೇಶವನ್ನು ಕಂದಾಯ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಹಾಗೂ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳು ದಿನಾಂಕ 20.02.2020 ಹಾಗೂ 23.06.2020 ರಂದು ಜಂಟಿ ಸ್ಥಳ ತನಿಖೆ ನಡೆಸಲಾಗಿದ್ದು, ಕಲ್ಲುಗಣಿ ಗುತ್ತಿಗೆದಾರರು ಗುತ್ತಿಗೆ ಪ್ರದೇಶ ಹೊರತುಪಡಿಸಿ, ಒತ್ತುವರಿ ಮಾಡಿ ಗಣಿಗಾರಿಕೆ ನಡೆಸಿರುವುದು ಕಂಡುಬಂದಿರುವುದಿಲ್ಲ. ಸದರಿ ಕಲ್ಲುಗಣಿ ಗುತ್ತಿಗೆ ಪ್ರದೇಶವನ್ನು ಡ್ರೋಣ್ ಉಪಕರಣದಿಂದ ಸರ್ವೆ ಕಾರ್ಯ ನಡೆಸಲಾಗಿದ್ದು, ಗುತ್ತಿಗೆದಾರರು ಸಂಚಿತ ಆಡಿಟ್ ಪ್ರಮಾಣಕ್ಕಿಂತ ಅಧಿಕವಾಗಿ 7377 ಮೆಟ್ರಿಕ್ ಟನ್ ಕಟ್ಟಡ ಕಲ್ಲನ್ನು ಖನಿಜ ರವಾನೆ ಪರವಾನಿಗೆ ಇಲ್ಲದೆ ನಿಯಮ ಉಲ್ಲಂಘಿಸಿ ಸಾಗಾಣಿಕೆ ಮಾಡಿರುವುದು ಕಂಡುಬಂದಿದ್ದು,

--2

		ಸದರಿ ಪ್ರಮಾಣಕ್ಕೆ ರಾಜಧನದ 05 ಪಟ್ಟು ದಂಡ ರೂ.22,13,100/–ಗಳನ್ನು ವಿಧಿಸಿ ಪಾವತಿಸುವಂತೆ ದಿನಾಂಕ 25.10.2019, 15.02.2020 ಹಾಗೂ 09.09.2020 ರಂದು ನೋಟೀಸ್ ಜಾರಿ ಮಾಡಿದ್ದು, ದಂಡ ವಸೂಲಾತಿಗೆ ಕ್ರಮವಹಿಸಲಾಗುತ್ತಿದೆ.
ಆ)	ಗಣಿಗಾರಿಕೆಯಲ್ಲಿ ರಿಗ್ ಬ್ಲಾಸ್ಟಿಂಗ್ ಮಾಡಿ ಅಕ್ಕ–ಪಕ್ಕದ ಗ್ರಾಮಗಳಲ್ಲಿನ ಮನೆಗಳು ಬಿರುಕುಬಿಟ್ಟಿರುವುದರಿಂದ, ಸದರಿ ಕ್ರಷರ್ ಗೆ ನೀಡಿರುವ ಎನ್.ಓ.ಸಿ. ಯನ್ನು ಕೂಡಲೇ ರದ್ದುಪಡಿಸುವ ಕುರಿತಾಗಿ ಬಂದ ದೂರಿನ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಜಂಟಿಯಾಗಿ ಸ್ಥಳ ಪರಿವೀಕ್ಷಣೆ ನಡೆಸಿ, ಸದರಿ ಕ್ರಷರ್ ಗೆ ನೀಡಿರುವ ಎನ್.ಓ.ಸಿಯನ್ನು ವಜಾಗೊಳಿಸುವಂತೆ ವರದಿಯನ್ನು ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕಲ್ಲು ಗಣಿಗಾರಿಕೆಯಲ್ಲಿ ಸ್ಫೋಟಕ ಬಳಸಿ ಗಣಿಗಾರಿಕೆ ನಿರ್ವಹಿಸುತ್ತಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಸ್ವೀಕೃತವಾದ ಹಿನ್ನೆಲೆಯಲ್ಲಿ ದಿನಾಂಕ 27.12.2019 ರಂದು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ರವರೊಂದಿಗೆ ಜಂಟಿ ಸ್ಥಳ ಪರಿಶೀಲನೆ ನಡೆಸಿದ್ದು, ಕಲ್ಲುಗಣಿಗಾರಿಕೆ ನಡೆಸದ ಸಂದರ್ಭದಲ್ಲಿ ಹಾಗೂ ನಡೆಸುತ್ತಿದ್ದ ಸಂದರ್ಭದಲ್ಲಿ ದಾಳಗೊಂಡನಹಳ್ಳಿ ಮತ್ತು ತಾತನಹಳ್ಳಿ ಗ್ರಾಮದ ಗ್ರಾಮಸ್ಥರ ಸಮ್ಮುಖದಲ್ಲಿ ಶಬ್ದ ಮಾಪನವನ್ನು ಮಾಡಲಾಗಿರುತ್ತದೆ. ಶಬ್ದ ಮಾಪನದ ವರದಿಯನುಸಾರ ಶಬ್ದವು ವಸತಿ ಪ್ರದೇಶಕ್ಕೆ ನಿಗಧಿಪಡಿಸಿರುವ ಗುಣಮಾನಕಗಳಿಗಿಂತ ಕಡಿಮೆಯಿರುತ್ತದೆ ಎಂದು ವರದಿಸಿರುತ್ತಾರೆ. ಆದರೆ ಮಹಜರ್ ಸಮಯದಲ್ಲಿ ದಾಳಗೊಂಡನಹಳ್ಳಿ ಗ್ರಾಮಸ್ಥರು ಶಬ್ದಮಾಪನ ವೇಳೆಯಲ್ಲಿ ಕಲ್ಲುಗಣಿಗಾರಿಕೆಯವರು ಪ್ರತಿ ದಿನ ಬಳಸುವ ಸ್ಫೋಟಕಗಳನ್ನು ಬಳಸಿಲ್ಲವೆಂದು ತಿಳಿಸಿರುತ್ತಾರೆ. ಶಬ್ದಮಾಪನದ ವೇಳೆ ಕಲ್ಲುಗಣಿಗಾರಿಕೆಗಳ ಚಾಲನೆಯಿಂದ ಉಂಟಾದ ಶಬ್ದದಿಂದ ಯಾವುದೇ ತೊಂದರೆಯಿಲ್ಲವೆಂದು ಹಾಗೂ ಬಾಕಿ ದಿನಗಳಲ್ಲಿ ಕಲ್ಲುಗಣಿಗಾರಿಕೆಯ ಗುತ್ತಿಗೆದಾರರು ಭಾರಿ ಪ್ರಮಾಣದ ಶಬ್ದವನ್ನು ಉಂಟುಮಾಡುವುದಾಗಿ ತಿಳಿಸಿರುತ್ತಾರೆ.
ಇ)	ಸದರಿ ವರದಿ ಮೇರೆಗೆ ಕ್ರಷರ್ ನೀಡಿರುವ ಎನ್.ಓ.ಸಿಯನ್ನು ವಜಾಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು)	ಉಪ ವಿಭಾಗಾಧಿಕಾರಿ, ಹಾಸನ ಉಪ ವಿಭಾಗ ರವರು ಜಿಲ್ಲಾಧಿಕಾರಿಗಳಿಗೆ ದಿನಾಂಕ 16.01.2020 ರಂದು ಸಲ್ಲಿಸಿರುವ ವರದಿಯಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಕಲ್ಲುಗಣಿ ಗುತ್ತಿಗೆ ಪ್ರದೇಶಕ್ಕೆ ಅನಿರೀಕ್ಷಿತ ಭೇಟಿ ನೀಡಿ ಶಬ್ದಮಾಲಿನ್ಯದ ಬಗ್ಗೆ ವರದಿ ಮಾಡಲು ಸೂಚಿಸಬಹುದೆಂದು ತಿಳಿಸಿರುತ್ತಾರೆ. ಸದರಿ ವರದಿಯಲ್ಲಿ ಕಲ್ಲು/ಕ್ರಷರ್ ಲೈಸೆನ್ಸ್ ನೀಡಿರುವ ನಿರಾಕ್ಷೇಪಣಾ ಪತ್ರವನ್ನು ಹಿಂಪಡೆಯುವ ಬಗ್ಗೆ ಶಿಫಾರಸ್ಸು ಇರುವುದಿಲ್ಲ.

ಸಂಖ್ಯೆ: ಸಿಐ 473 ಎಂಎಂಎನ್ 2020

(ಸಿ.ಸಿ. ಪಾಟೀಲ)
ಗಣಿ ಮತ್ತು ಭೂವಿಜ್ಞಾನ ಸಚಿವರು
ಸಿ.ಸಿ. ಪಾಟೀಲ
ಗಣಿ ಮತ್ತು ಭೂವಿಜ್ಞಾನ ಸಚಿವರು

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರು : ಶ್ರೀ ಕೆ.ಎಂ.ಶಿವಲಿಂಗೇಗೌಡ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1609
ಉತ್ತರಿಸಬೇಕಾದ ದಿನಾಂಕ : 25.09.2020
ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಪೋಲೀಸ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ವತಿಯಿಂದ ಪೋಲೀಸ್ ಸಿಬ್ಬಂದಿಗಳಿಗೆ ನಿವೇಶನಗಳನ್ನು ನೀಡುವ ಉದ್ದೇಶದಿಂದ ಹಾಸನ ನಗರದ ಸುತ್ತಮುತ್ತಲಿನ ಜಮೀನುಗಳನ್ನು ರೈತರಿಂದ ಅತೀ ಕಡಿಮೆ ಬೆಲೆಗೆ ಜಮೀನುಗಳನ್ನು ಖರೀದಿಸಿ ಬಡಾವಣೆಗಳನ್ನು ನಿರ್ಮಾಣ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?	ಇಲ್ಲ
ಆ)	ಪೋಲೀಸ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘವು ಅಧಿಕೃತವಾಗಿ ನೋಂದಾಯಿತ ಸಂಘವೇ, ಸದರಿ ಸಂಘವು ಖಾಸಗಿಯವರೊಂದಿಗೆ ಸೇರಿ ಭೂ ಮಾಫಿಯಾ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ಸಂಪೂರ್ಣ ಮಾಹಿತಿ ನೀಡುವುದು).	ಪೋಲೀಸ್ ಅಧಿಕಾರಿಗಳ ಮತ್ತು ಸಿಬ್ಬಂದಿಯವರ ಗೃಹ ನಿರ್ಮಾಣ ಸಹಕಾರ ಸಂಘವನ್ನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮದ 1959ರ ಹಾಗೂ ನಿಯಮಗಳು 1960ರ ಅವಕಾಶಗಳಡಿ ನೋಂದಣಿ ಸಂಖ್ಯೆ: ಹೆಚ್.ಎಸ್.ಜಿ-2/79/ಹೆಚ್.ಹೆಚ್.ಎಸ್/46479/2014-15 ನೋಂದಾಯಿಸಲಾಗಿರುತ್ತದೆ. ಸಂಘವು ಪೋಲೀಸ್ ನೌಕರರಲ್ಲದೆ ಖಾಸಗಿಯವರೊಂದಿಗೆ ಸೇರಿ ಭೂ ಮಾಫಿಯಾ ನಡೆಸುತ್ತಿರುವುದಿಲ್ಲ.
ಇ)	ಸದರಿ ಸಂಘವು ಇದುವರೆಗೆ ಹಾಸನ ನಗರದ ಸುತ್ತಮುತ್ತ ಎಷ್ಟು ಎಕರೆ ಜಮೀನುಗಳನ್ನು ಖರೀದಿಸಿದೆ, ಎಷ್ಟು ಎಕರೆ ಜಮೀನಿನಲ್ಲಿ ಈಗಾಗಲೇ ಅನ್ಯ ಸಂಕ್ರಮಣ ಮಾಡಿ ಸರ್ಕಾರದ ನಿಯಾಮಾನುಸಾರ ಉದ್ಯಾನವನ, ಶಾಲೆ, ರಸ್ತೆ ಮತ್ತು ಒಳಚರಂಡಿ ಇನ್ನಿತರ ಮೂಲ ಸೌಕರ್ಯಗಳನ್ನು ಕಲ್ಪಿಸಿ, ನಿವೇಶನಗಳನ್ನು ನಿರ್ಮಿಸಿ ಎಷ್ಟು ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ ಹಾಗೂ ನಿಯಮಾನುಸಾರ ಸರ್ಕಾರದ ಅನುಮತಿ ಹಾಗೂ ನಿಯಮಗಳನ್ನು ಪಾಲಿಸಲಾಗಿದೆಯೇ?	ಸಂಘವು ಇದುವರೆಗೆ ಹಾಸನ ತಾಲ್ಲೂಕು ಕಸಬಾ ಹೋಬಳಿ ದೊಡ್ಡಪುರ, ಚಿಟ್ಟನಹಳ್ಳಿ ಗ್ರಾಮಗಳಲ್ಲಿ ಬರುವ ವಿವಿಧ ಸರ್ವೆ ನಂಬರ್‌ಗಳಲ್ಲಿ 21 ಎಕರೆ ಜಮೀನನ್ನು ಭೂ ಅಭಿವೃದ್ಧಿದಾರರ ಮೂಲಕ ಖರೀದಿಸಿರುತ್ತದೆ. ಯಾವುದೇ ಜಮೀನಿನಲ್ಲಿ ಅತಿಕ್ರಮಣ ಮಾಡಿ ಉದ್ಯಾನವನ, ಶಾಲೆ, ರಸ್ತೆ ಮತ್ತು ಒಳಚರಂಡಿ ಇನ್ನಿತರ ಮೂಲ ಸೌಕರ್ಯಗಳನ್ನು ರಚಿಸಿರುವುದಿಲ್ಲ, ಸಂಘವು ಈ ವರೆವಿಗೆ ಬಡಾವಣೆ ನಕ್ಷೆ ಅನುಮೋದನೆಗಾಗಿ ಕೋರಿ ಸಕ್ಷಮ ಪ್ರಾಧಿಕಾರಕ್ಕೆ ಪ್ರಸ್ತಾವ ಸಲ್ಲಿಸಿರುವುದಿಲ್ಲ. ಈ ಕಾರಣಕ್ಕೆ ಯಾವುದೇ ನಿವೇಶನಗಳನ್ನು ಹಂಚಿಕೆ ಮಾಡಿರುವುದಿಲ್ಲ.
ಈ)	ನಿಯಮಗಳನ್ನು ಪಾಲಿಸದಿದ್ದಲ್ಲಿ ಸದರಿ ಪೋಲೀಸ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು).	ಪೋಲೀಸ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘವು ನಿಯಮಗಳನ್ನು ಉಲ್ಲಂಘಿಸಿರುವ ಬಗ್ಗೆ ಈವರೆವಿಗೆ ವರದಿಯಾಗಿರುವುದಿಲ್ಲ.

ಊ)	ಸದರಿ ಸಂಘದ ವತಿಯಿಂದ ಖಾಸಗಿಯವರಿಗೆ ನಿವೇಶನ ಹಂಚಿಕೆ ಮಾಡುತ್ತಿದ್ದು, ಖಾಸಗಿಯವರಿಗೆ ನಿವೇಶನ ಕೊಂಡುಕೊಳ್ಳಲು ಕೋರಿಕೆ ಪತ್ರ ಕಳುಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಪೊಲೀಸ್ ಇಲಾಖೆಯ ನೌಕರರಲ್ಲದ ಖಾಸಗಿಯವರಿಗೆ ನಿವೇಶನ ನೀಡಲು ಸರ್ಕಾರ ಅವಕಾಶ ನೀಡಿದೆಯೇ ಹಾಗೂ ನಿವೇಶನ ಹಂಚಿಕೆ ವಿಷಯವಾಗಿ ಸಹಕಾರಿ ನಿಯಮಾವಳಿಗಳೇನು? (ಸಂಪೂರ್ಣ ಮಾಹಿತಿ ನೀಡುವುದು).	ಸಂಘದ ವತಿಯಿಂದ ಈವರೆಗೆ ಯಾವುದೇ ಸದಸ್ಯರಿಗೆ ನಿವೇಶನ ಹಂಚಿಕೆ ಮಾಡಿರುವುದಿಲ್ಲ. ಖಾಸಗಿಯವರಿಗೆ ನಿವೇಶನ ಕೊಂಡುಕೊಳ್ಳಲು ಕೋರಿಕೆ ಪತ್ರವನ್ನು ಸಂಘದವರು ಕಳುಹಿಸಿರುವುದಿಲ್ಲ. ಸಂಘದ ನೋಂದಾಯಿತ ಬೈಲಾ ಸಂಖ್ಯೆ: 6ರಂತೆ ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ/ನಿವೃತ್ತರಾಗಿರುವ ಯಾವುದೇ ಅಧಿಕಾರಿ ಮತ್ತು ಸಿಬ್ಬಂದಿಯವರು ಅಥವಾ ಸಂಘದ ಧ್ಯೇಯೋದ್ದೇಶಗಳನ್ನು ಒಪ್ಪಿ ಸದಸ್ಯತ್ವ ಬಯಸುವ ಯಾವುದೇ ವ್ಯಕ್ತಿ ಸಂಘದ ಸದಸ್ಯತ್ವ ಪಡೆಯಲು ಅವಕಾಶವಿರುತ್ತದೆ. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 30-ಬಿ ರನ್ವಯ ಸರ್ಕಾರ ಹಾಗೂ ಸಹಕಾರ ಸಂಘಗಳ ನಿಬಂಧಕರು ಹೊರಡಿಸಿರುವ ನಿರ್ದೇಶನಗಳಂತೆ ಸಂಘವು ನೈಜ ಸದಸ್ಯರ ಹಾಗೂ ಠೇವಣಿದಾರರ ಜೇಷ್ಠತಾ ಪಟ್ಟಿಗಳನ್ನು ಸಿದ್ಧಪಡಿಸಿ ಸಹಕಾರ ಸಂಘಗಳ ನಿಬಂಧಕರಿಂದ ಅನುಮೋದನೆ ಪಡೆದುಕೊಂಡು ನಿವೇಶನಗಳನ್ನು ಸದಸ್ಯರಿಗೆ ಹಂಚಿಕೆ ಮಾಡಬೇಕಾಗಿರುತ್ತದೆ.

ಕಡತ ಸಂಖ್ಯೆ: ಸಿಒ 43 ಸಿಹೆಚ್ಎಸ್ 2020 (ಇ)

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1624
ಸದಸ್ಯರ ಹೆಸರು	:	ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್ (ಗೌರಿಬಿದನೂರು)
ಉತ್ತರಿಸುವ ದಿನಾಂಕ	:	25-09-2020
ಉತ್ತರಿಸಬೇಕಾದವರು	:	ನಗರಾಭಿವೃದ್ಧಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಅನೇಕ ನಗರಸಭೆ-ಪುರಸಭೆಗಳಲ್ಲಿ ಯೋಜನಾ ಅಭಿವೃದ್ಧಿ ಪ್ರಾಧಿಕಾರಗಳನ್ನು ರಚಿಸಿರುವುದು ನಿಜವಲ್ಲವೇ;	ರಾಜ್ಯದಲ್ಲಿ 31 ನಗರಾಭಿವೃದ್ಧಿ ಪ್ರಾಧಿಕಾರಗಳು, 52 ಯೋಜನಾ ಪ್ರಾಧಿಕಾರಗಳು ಮತ್ತು 74 ಪುರಸಭೆ ಯೋಜನಾ ಪ್ರಾಧಿಕಾರಗಳನ್ನು ರಚಿಸಲಾಗಿರುತ್ತದೆ.
ಆ)	ಈ ಯೋಜನಾ ಪ್ರಾಧಿಕಾರಗಳು ಅಸ್ತಿತ್ವಕ್ಕೆ ಬರುವ ಮೊದಲು ಅನುಮೋದನೆಗೊಂಡಿರುವ ಹಳೇ ಬಡಾವಣೆಗಳಲ್ಲಿ ತಾಂತ್ರಿಕ ತೊಂದರೆಗಳಿಂದ ಯೋಜನಾ ಪ್ರಾಧಿಕಾರಗಳು ಪರವಾನಗಿ ಪಡೆಯಲು ಅನುಮತಿ ನೀಡದೇ ಇರುವುದರಿಂದ ಸಾರ್ವಜನಿಕರು ತೊಂದರೆಗೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿದೆ ಸ್ಥಳೀಯ ಯೋಜನಾ ಪ್ರದೇಶದ ಘೋಷಣೆಯ ಪೂರ್ವದಲ್ಲಿ ಭೂ ಪರಿವರ್ತನೆಗೊಂಡ ಜಮೀನುಗಳಿಗೆ ಸಕ್ಷಮ ಪ್ರಾಧಿಕಾರದಿಂದ ನಿಯಮಾನುಸಾರ ಅನುಮೋದನೆ ಪಡೆದಿರುವ ವಿನ್ಯಾಸಗಳಲ್ಲಿನ ನಿವೇಶನಗಳಿಗೆ ಕಟ್ಟಡ ಪರವಾನಿಗೆ ಸಂಬಂಧ ತಾಂತ್ರಿಕ ಅಭಿಪ್ರಾಯ ನೀಡಲು ಯಾವುದೇ ನಿರ್ಬಂಧವಿರುವುದಿಲ್ಲ. ಆದರೆ, ದಿನಾಂಕ 08.12.1976ರಲ್ಲಿ ಕರ್ನಾಟಕ ಪುರ ಸಭೆಗಳ ಕಾಯ್ದೆ 1964ರಲ್ಲಿ ಕಲಂ 387ನ್ನು ಸೇರ್ಪಡೆಗೊಳಿಸಲಾಗಿದ್ದು, ಅದರಂತೆ ನಗರ ಸ್ಥಳೀಯ ಸಂಸ್ಥೆಗಳು ಯೋಜನಾ ಪ್ರಾಧಿಕಾರಗಳನ್ನು ರಚಿಸದೇ ಇರುವ ಪ್ರದೇಶಗಳಲ್ಲಿ ನಗರ ಯೋಜನಾ ವಿಷಯಗಳಿಗೆ ಸಂಬಂಧಿಸಿದಂತೆ ಸಮೀಪದ ಯೋಜನಾ ಪ್ರಾಧಿಕಾರದೊಂದಿಗೆ ಸಮಾಲೋಚಿಸಬೇಕಿರುತ್ತದೆ. ದಿನಾಂಕ: 8.12.1976ರ ನಂತರ ವಿನ್ಯಾಸ ನಕ್ಷೆ ಅನುಮೋದನೆ ಪಡೆಯದೇ ಅನಧಿಕೃತವಾಗಿ

		ವಿಭಜಿಸಿ ಸ್ಥಳೀಯ ಸಂಸ್ಥೆಯಲ್ಲಿ ಖಾತೆ ತೆರೆದಿರುವ ನಿವೇಶನಗಳಿಗೆ ಕಟ್ಟಡ ಪರವಾನಗಿ ಸಂಬಂಧ ತಾಂತ್ರಿಕ ಅಭಿಪ್ರಾಯ ನೀಡಲು ಅವಕಾಶವಿರುವುದಿಲ್ಲ. ಅದರಂತೆ, ದಿನಾಂಕ: 04.05.2017ರ ಸುತ್ತೋಲೆಯಲ್ಲಿ ತಾಂತ್ರಿಕ ಅಭಿಪ್ರಾಯ ನೀಡುವ ಕುರಿತು ಅಗತ್ಯ ನಿರ್ದೇಶನ ನೀಡಲಾಗಿರುತ್ತದೆ.
ಇ)	ಬಂದಿದ್ದಲ್ಲಿ, ಈ ಸಮಸ್ಯೆ ಬಗೆಹರಿಸಲು ವಿಶೇಷ ಕಾನೂನು ತರಲಾಗುವುದೇ; ಹಾಗಿದ್ದಲ್ಲಿ, ಯಾವಾಗ ತರಲಾಗುವುದು (ವಿವರ ನೀಡುವುದು)?	ಯೋಜನಾ ಪ್ರಾಧಿಕಾರಗಳು ಅಸ್ತಿತ್ವಕ್ಕೆ ಬರುವ ಪೂರ್ವದಲ್ಲಿ ಸ್ಥಳೀಯ ಸಂಸ್ಥೆಯು ಯೋಜನಾ ಪ್ರಾಧಿಕಾರ/ ನಗರ ಯೋಜನಾ ಇಲಾಖೆಯಿಂದ ತಾಂತ್ರಿಕ ಅನುಮೋದನೆ/ ಅಭಿಪ್ರಾಯ ಪಡೆಯದೇ ರಚಿಸಿರುವ ವಿನ್ಯಾಸಗಳಲ್ಲಿನ ನಿವೇಶನಗಳಿಗೆ ತೆರೆದಿರುವ ಖಾತೆಗಳನ್ನು ಅನಧಿಕೃತ ಅಭಿವೃದ್ಧಿಗಳೆಂದು ಪರಿಗಣಿಸಬೇಕಿರುತ್ತದೆ. ಇಂತಹ ನಿವೇಶನಗಳಿಗೆ ಕಟ್ಟಡ ನಕ್ಷೆ ಅನುಮೋದನೆಗೆ ತಾಂತ್ರಿಕ ಅಭಿಪ್ರಾಯ ನೀಡಲು ಬರುವುದಿಲ್ಲ. ಇಂತಹ ಸ್ವತ್ತುಗಳಿಗೆ ಸ್ಥಳೀಯ ಸಂಸ್ಥೆಗಳಿಂದ ನೀಡಿರುವ ಖಾತಾ/ ಇ-ಖಾತಾ ಕುರಿತಂತೆ ಪರ್ಯಾಯೋಚಿಸಲು ಸಚಿವ ಸಂಪುಟದ ಉಪಸಮಿತಿ ರಚಿಸಲಾಗಿರುತ್ತದೆ.

ಸಂಖ್ಯೆ: ನಅಇ 64 ಎಲ್‌ಎಕ್ಯೂ 2020(ಇ-ಆಫೀಸ್)

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು.

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1639
2. ಸದಸ್ಯರ ಹೆಸರು : ಶ್ರೀ ಸಂಜೀವ ಮಠಂದೂರ್ (ಪುತ್ತೂರು)
3. ಉತ್ತರಿಸುವ ದಿನಾಂಕ : 25.09.2020
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ.	ಪುತ್ತೂರು ತಾಲ್ಲೂಕಿನಲ್ಲಿ ಕೈಗಾರಿಕೆ ವಲಯ ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಹೌದು. ದಿನಾಂಕ: 06.01.2020ರಂದು ನಡೆದ ಕೆ.ಐ.ಎ.ಡಿ. ಮಂಡಳಿ ಸಭೆಯಲ್ಲಿ ಪುತ್ತೂರು ತಾಲ್ಲೂಕು, ಅರಿಯಡ್ಕ ಗ್ರಾಮದ ಒಟ್ಟು 7-94 ಎಕರೆ ಸರ್ಕಾರಿ ಜಮೀನನ್ನು ಕೆ.ಎಸ್.ಎಸ್.ಐ.ಡಿ.ಸಿ. ಪರವಾಗಿ ಕೆ.ಐ.ಎ.ಡಿ.ಬಿ. ವತಿಯಿಂದ ಭೂಸ್ವಾಧೀನಪಡಿಸಲು ನಿರ್ಣಯಿಸಲಾಗಿದೆ. ಪ್ರಾಥಮಿಕ ಅಧಿಸೂಚನೆ ಪ್ರಸ್ತಾವನೆಯನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸುವ ಮುನ್ನ ತಾತ್ಕಾಲಿಕ ಭೂಸ್ವಾಧೀನ ವೆಚ್ಚದ ಶೇಕಡಾ 40ರಷ್ಟು ಮೊತ್ತ ರೂ.84.91 ಲಕ್ಷಗಳನ್ನು ಕೆ.ಐ.ಎ.ಡಿ.ಬಿ.ಗೆ ಠೇವಣಿ ಮಾಡುವಂತೆ ಕೆ.ಎಸ್.ಎಸ್.ಐ.ಡಿ.ಸಿ. ಸಂಸ್ಥೆಗೆ ದಿನಾಂಕ: 13.02.2019ರಂದು ಬೇಡಿಕೆ ಪತ್ರ ನೀಡಲಾಗಿದೆ. ಸದರಿ ಸಂಸ್ಥೆಯು ಕೆ.ಐ.ಎ.ಡಿ.ಬಿ.ಗೆ ಠೇವಣಿ ಮಾಡಿದ ಕೂಡಲೇ ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುತ್ತದೆ.
ಆ.	ಕೈಗಾರಿಕೆ ವಲಯ ಸ್ಥಾಪಿಸುವುದಾದಲ್ಲಿ ಸರ್ಕಾರಿ ಜಮೀನು ಲಭ್ಯವಿದೆಯೇ ಅಥವಾ ಕೈಗಾರಿಕೆಗಳಿಗೆ ಪುತ್ತೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪ್ರತ್ಯೇಕ ಜಾಗ ಮೀಸಲಿರಿಸಲಾಗಿದೆಯೇ;	

ಇ.	ಸರ್ಕಾರಿ ಜಮೀನು ಲಭ್ಯವಿಲ್ಲದಿದ್ದಲ್ಲಿ, ಖಾಸಗಿ ಜಮೀನು ಖರೀದಿಗೆ ನಿಯಮಾವಳಿಯಲ್ಲಿ ಅವಕಾಶ ಇದೆಯೇ? (ವಿವರ ನೀಡುವುದು)	ಉದ್ಭವಿಸುವುದಿಲ್ಲ

ಸಂಖ್ಯೆ: ಸಿಐ 172 ಐಎಪಿ (ಇ) 2020

(ಜಗದೀಶ ಶೆಟ್ಟರ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1649

ಸದಸ್ಯರ ಹೆಸರು : ಶ್ರೀ. ಬಂಡೆಪ್ಪ ಖಾಶೆಂಪೂರ್

ಉತ್ತರಿಸಬೇಕಾದ ಸಚಿವರು : ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಉತ್ತರಿಸಬೇಕಾದ ದಿನಾಂಕ : 25-09-2020

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಬೀದರ್ ದಕ್ಷಿಣ ಕ್ಷೇತ್ರದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನಿಗದಿಗೊಳಿಸಲಾದ ಕಾರ್ಯಕ್ರಮಗಳು ಯಾವುವು;	2020-21 ನೇ ಆರ್ಥಿಕ ವರ್ಷದಲ್ಲಿ ಬೀದರ್ ಜಿಲ್ಲೆಯಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 469 ಎಕರೆ ಹೊಸ ತೋಟಗಳ ಅಭಿವೃದ್ಧಿ, 50 ಎಕರೆ ಹಳೆ ಮಾವಿನ ತೋಟಗಳ ಪುನಃಶ್ಚೇತನ, 6 ಈರುಳ್ಳಿ ಶೇಖರಣಾ ಘಟಕಗಳ ಸ್ಥಾಪನೆ, 57 ಕೊಳವೆ ಬಾವಿಗಳ ಮರುಪೂರಣ ಘಟಕಗಳ ಸ್ಥಾಪನೆ, 26 ಪೋಷಕಾಂಶ ತೋಟಗಳ ಸ್ಥಾಪನೆ ಮತ್ತು ತೋಟಗಾರಿಕೆ ಇಲಾಖೆ ಅಧೀನದ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಿಸಲು ಯೋಜಿಸಲಾಗಿದೆ. ಜಿಲ್ಲೆಯಲ್ಲಿ ಈ ವರ್ಷ ರೂ.263.83 ಲಕ್ಷ ವೆಚ್ಚದಲ್ಲಿ ರೂ.1.41 ಲಕ್ಷ ಮಾನವ ದಿನಗಳನ್ನು ಸೃಜಿಸಲು ಗುರಿ ಹಮ್ಮಿಕೊಳ್ಳಲಾಗಿದೆ. ಪ್ರಮುಖವಾಗಿ ಮಾವು, ಚಿಕ್ಕು, ನಿಂಬೆ, ನುಗ್ಗೆ, ಪಪ್ಪಾಯ, ಬಾಳೆ, ಕರಿಬೇವು, ಸೀಬೆ, ಸೀತಾಫಲ ಮತ್ತು ಗುಲಾಬಿ ಹೂ ತೋಟ ನಿರ್ಮಾಣ ಕಾಮಗಾರಿಗಳಿಗೆ ಬೇಡಿಕೆ ಇರುತ್ತದೆ. ಜಿಲ್ಲೆಯಲ್ಲಿ ದಿನಾಂಕ:22.09.2020 ರವರೆಗೆ ಒಟ್ಟು ರೂ.247.66 ಲಕ್ಷದಷ್ಟು ಮೊತ್ತವನ್ನು ಕೆಲಸಗಾರರು ಮತ್ತು ರೈತ ಫಲಾನುಭವಿಗಳಿಗೆ ಪಾವತಿಸಲಾಗಿರುತ್ತದೆ ಹಾಗೂ 89902 ಸಂಖ್ಯೆಯಷ್ಟು ಮಾನವ ದಿನಗಳು ಇಲ್ಲಿಯವರೆಗೆ ಸೃಜನೆಯಾಗಿರುತ್ತದೆ. 2020-21 ನೇ ಆರ್ಥಿಕ ವರ್ಷದಲ್ಲಿ ಬೀದರ್ ತಾಲ್ಲೂಕಿನಲ್ಲಿ ರೂ.51.138 ಲಕ್ಷ ವೆಚ್ಚದಲ್ಲಿ 18596 ಸಂಖ್ಯೆ ಮಾನವ ದಿನಗಳನ್ನು ಸೃಜಿಸಲು ಗುರಿ ಹಮ್ಮಿಕೊಳ್ಳಲಾಗಿದ್ದು, ಬೀದರ್ ತಾಲ್ಲೂಕಿನಲ್ಲಿ ಇಲ್ಲಿಯವರೆಗೆ ಒಟ್ಟು ರೂ.48.72 ಲಕ್ಷದಷ್ಟು ಮೊತ್ತ ಕೆಲಸಗಾರರು ಮತ್ತು ರೈತ ಫಲಾನುಭವಿಗಳಿಗೆ ಪಾವತಿಯಾಗಿರುತ್ತದೆ ಹಾಗೂ 18,105 ಸಂಖ್ಯೆ ಮಾನವ ದಿನಗಳು ಸೃಜನೆಯಾಗಿರುತ್ತದೆ.
ಆ)	ನರೇಗಾ ಯೋಜನೆಯಡಿ ತೋಟಗಾರಿಕೆ ಬೆಳೆಗಳಿಗೆ ಸಂಬಂಧಿಸಿದಂತೆ ರೂಪಿಸಲಾಗಿರುವ ಕಾರ್ಯಕ್ರಮಗಳೇನು;	2020-21 ನೇ ಆರ್ಥಿಕ ವರ್ಷದಲ್ಲಿ ರಾಜ್ಯದಲ್ಲಿ ತೋಟಗಾರಿಕೆ ಇಲಾಖೆಗೆ ಸಂಬಂಧಪಟ್ಟಂತೆ ತೋಟಗಾರಿಕೆ ಕ್ಷೇತ್ರದಲ್ಲಿ ಉದ್ಯೋಗಾವಕಾಶಗಳ ಸೃಜನೆಯ ಮೂಲಕ ರೈತರು ಸುಸ್ಥಿರವಾಗಿ ಆದಾಯ ಗಳಿಸಲು ಅನುವಾಗುವಂತೆ ದೀರ್ಘಕಾಲ ಬಾಳಿಕೆ ಬರುವ ತೋಟಗಾರಿಕೆ ಆಸ್ತಿಗಳನ್ನು ಸೃಜಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಇವುಗಳೆಂದರೆ ಹೊಸ ತೋಟಗಳ ಅಭಿವೃದ್ಧಿ, ಹಳೆ ತೋಟಗಳ ಪುನಃಶ್ಚೇತನ, ಈರುಳ್ಳಿ ಶೇಖರಣಾ ಘಟಕಗಳ ಸೃಜನೆ, ಕೊಳವೆ ಬಾವಿ

		ಮರು ಪೂರಣ ಘಟಕಗಳ ಅಭಿವೃದ್ಧಿ, ಸರ್ಕಾರಿ ಸಂಸ್ಥೆಗಳ ಜಮೀನಿನಲ್ಲಿ ಪೋಷಕಾಂಶ ತೋಟಗಳ ಅಭಿವೃದ್ಧಿ, ತೋಟಗಾರಿಕೆ ಇಲಾಖೆ ಅಧೀನದ ಕ್ಷೇತ್ರಗಳ ಅಭಿವೃದ್ಧಿ ಇತ್ಯಾದಿ. ಈ ಕಾರ್ಯಕ್ರಮಗಳ ಮೂಲಕ ಈ ಸಾಲಿನಲ್ಲಿ 50 ಲಕ್ಷ ಸಂಖ್ಯೆ ಮಾನವ ದಿನಗಳನ್ನು ಸೃಜಿಸಲು, ರೂ.182.00 ಕೋಟಿ ಮೊತ್ತವನ್ನು ಫಲಾನುಭವಿಗಳಿಗೆ ಪಾವತಿಸಲು ಮತ್ತು ಆ ಮುಖೇನ 30,000 ಎಕರೆ ಪ್ರದೇಶದಲ್ಲಿ ಹೊಸ ತೋಟಗಳು ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳನ್ನು ಸೃಜಿಸಲು ಉದ್ದೇಶಿಸಲಾಗಿದೆ.
ಇ)	ನರೇಗಾ ಯೋಜನೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಮಂಜೂರಾದ ಮತ್ತು ಬಿಡುಗಡೆಯಾದ ಅನುದಾನವೆಷ್ಟು;	2020-21 ನೇ ಆರ್ಥಿಕ ವರ್ಷದಲ್ಲಿ ರಾಜ್ಯದಲ್ಲಿ ತೋಟಗಾರಿಕೆ ಇಲಾಖೆಗೆ ಸಂಬಂಧಪಟ್ಟಂತೆ ರೂ.182.00 ಕೋಟಿ ಮೊತ್ತದ ಅಂದಾಜು ಕ್ರಿಯಾ ಯೋಜನೆ ಅನುಮೋದನೆಯಾಗಿರುತ್ತದೆ. ನಿಗಧಿತ ಗುರಿಯನ್ವಯ ಪ್ರಗತಿಯಾದಂತೆ ಮಜೂರಿ ಮತ್ತು ಸಾಮಗ್ರಿ ವೆಚ್ಚಕ್ಕೆ ಸಂಬಂಧಿಸಿದ ಅನುದಾನವು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಧೀನದ ಉದ್ಯೋಗ ಖಾತರಿ ಯೋಜನೆಗೆಂದೇ ರಾಜ್ಯ ಮಟ್ಟದಲ್ಲಿ ಚಾಲ್ತಿಯಲ್ಲಿರುವ ಉದ್ಯೋಗ ಖಾತರಿ ಯೋಜನೆ ಖಾತೆಯಿಂದ ಸಂಬಂಧಪಟ್ಟ ರೈತ ಫಲಾನುಭವಿ ಮತ್ತು ಕೆಲಸಗಾರರ ಖಾತೆಗೆ ಜಮೆಗೊಳ್ಳುತ್ತದೆ. ತೋಟಗಾರಿಕೆ ಇಲಾಖೆಗೆ ಸಂಬಂಧಪಟ್ಟಂತೆ, ಇಲ್ಲಿಯವರೆಗೆ ರಾಜ್ಯದಲ್ಲಿ ಒಟ್ಟು ರೂ.131.26 ಕೋಟಿಯಷ್ಟು ಮೊತ್ತ ಕೆಲಸಗಾರರು ಮತ್ತು ರೈತ ಫಲಾನುಭವಿಗಳಿಗೆ ಪಾವತಿಯಾಗಿರುತ್ತದೆ.
ಈ)	ಈ ಯೋಜನೆಯಡಿ ರೂಪಿಸಲಾದ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)	ಆರ್ಥಿಕ ವರ್ಷದ ಪ್ರಾರಂಭದಲ್ಲಿಯೇ ಯೋಜನೆಯ ಅನುಷ್ಠಾನ ಕುರಿತ ಮಾರ್ಗಸೂಚಿಗಳು ಮತ್ತು 55 ಮಾದರಿ ಅಂದಾಜು ಪಟ್ಟಿಗಳನ್ನು ತೋಟಗಾರಿಕೆ ಇಲಾಖೆ ವತಿಯಿಂದ ಸಿದ್ಧಪಡಿಸಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅನುಮೋದನೆ ಪಡೆದು ಎಲ್ಲಾ ಹೋಬಳಿ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ನೀಡಲಾಗಿರುತ್ತದೆ. ನಿಗಧಿತ ಗುರಿಯಂತೆ ಮಾನವ ದಿನಗಳ ಸೃಜನೆಯ ಪ್ರಗತಿಯನ್ನು ನಿಯಮಿತವಾಗಿ ಪರಿಶೀಲಿಸಲಾಗುತ್ತಿದೆ. ಯೋಜನೆಯ ಕುರಿತು ಕ್ಷೇತ್ರ ಮಟ್ಟದಲ್ಲಿ ವ್ಯಾಪಕ ಪ್ರಚಾರ ಕೈಗೊಳ್ಳಲಾಗಿದೆ.

ಸಂಖ್ಯೆ: HORTI 384 HGM 2020

(ನಾರಾಯಣಗೌಡ)
ಪೌರಾಡಳಿತ, ತೋಟಗಾರಿಕೆ
ಮತ್ತು
ರೇಷ್ಮೆ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1650
2. ಸದಸ್ಯರ ಹೆಸರು : ಶ್ರೀ ಬಂಡೆಪ್ಪ ಖಾಶೆಂಪುರ್ (ಬೀದರ್ ದಕ್ಷಿಣ)
3. ಉತ್ತರಿಸುವ ದಿನಾಂಕ : 25.09.2020
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ.	ಬೀದರ್ ಜಿಲ್ಲೆಯ ಕೋಲಾರ ಕೈಗಾರಿಕಾ ಪ್ರದೇಶದಲ್ಲಿ ಕಾಮನ್ ಎಫ್ಲೂಯೆಂಟ್ ಟ್ರೀಟ್.ಮೆಂಟ್ ಪ್ಲಾಂಟ್ (Common Effluent Treatment Plant) ನಿರ್ಮಿಸಲಾಗುತ್ತಿದೆಯೇ;	ಹೌದು. ಬೀದರ್ ಜಿಲ್ಲೆಯ ಕೋಲ್ಹಾರ ಕೈಗಾರಿಕಾ ಪ್ರದೇಶದಲ್ಲಿ ಕಾಮನ್ ಎಫ್ಲೂಯೆಂಟ್ ಟ್ರೀಟ್‌ಮೆಂಟ್ ಪ್ಲಾಂಟ್ ಅನ್ನು (Common Effluent Treatment Plant) ನಿರ್ಮಿಸಲಾಗುತ್ತಿದೆ.
ಆ.	ಹಾಗಿದ್ದಲ್ಲಿ, ಸದರಿ ಘಟಕವನ್ನು ನಿರ್ಮಿಸಲು ಖರ್ಚು ಮಾಡಲಾಗುತ್ತಿರುವ ಮೊತ್ತವೆಷ್ಟು;	ಸದರಿ ಘಟಕವನ್ನು ನಿರ್ಮಿಸಲು ರೂ.44.34 ಕೋಟಿ ಮೊತ್ತವನ್ನು ಖರ್ಚು ಮಾಡಲಾಗುತ್ತಿದೆ.
ಇ.	ಈ ಘಟಕದ ನಿರ್ಮಾಣವನ್ನು ಯಾವಾಗ ಪ್ರಾರಂಭಿಸಲಾಗಿದೆ ಹಾಗೂ ಈಗ ಯಾವ ಹಂತದಲ್ಲಿದೆ;	ಸದರಿ ಕಾಮಗಾರಿಗೆ ದಿನಾಂಕ: 20.03.2017ರಂದು ಕಾರ್ಯದೇಶವನ್ನು ನೀಡಲಾಗಿದ್ದು, Airforce Authority ರವರಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯುವುದು ತಡವಾದ ಕಾರಣ ಕಾಮಗಾರಿಯ ಪ್ರಾರಂಭವು ವಿಳಂಬವಾಗಿರುತ್ತದೆ. ಪ್ರಸ್ತುತ Airforce Authority ರವರಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯಲಾಗಿದ್ದು ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಈ.	ಈ ಘಟಕವನ್ನು ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸಲಾಗುವುದೇ;	ಹೌದು.
ಉ.	ಇಲ್ಲದಿದ್ದಲ್ಲಿ, ಕೋಲಾರ ಕೈಗಾರಿಕಾ ಪ್ರದೇಶದಲ್ಲಿನ ಕೈಗಾರಿಕಾ ತ್ಯಾಜ್ಯದಿಂದ ಪರಿಸರಕ್ಕೆ ಹಾನಿಯಾಗುವುದಿಲ್ಲವೇ;	ಕೋಲ್ಹಾರ ಕೈಗಾರಿಕಾ ಪ್ರದೇಶದಲ್ಲಿ ಕಾರ್ಯ ನಿರ್ವಹಿಸುತ್ತಿರುವ ರಾಸಾಯನಿಕ ಕಾರ್ಖಾನೆಗಳಲ್ಲಿ ಉತ್ಪತ್ತಿಯಾಗುವ ಕೈಗಾರಿಕಾ ತ್ಯಾಜ್ಯಗಳನ್ನು ಸಂಸ್ಕರಿಸಲು ತಾತ್ಕಾಲಿಕವಾಗಿ ಸಂಸ್ಕರಣಾ ಘಟಕಗಳನ್ನು ನಿರ್ಮಿಸಿಕೊಂಡಿದ್ದು, ಪರಿಸರಕ್ಕೆ ಯಾವುದೇ ಹಾನಿಯಾಗುವ ಸಂಭವವಿರುವುದಿಲ್ಲ
ಊ.	ಹಾಗಿದ್ದಲ್ಲಿ, ಸದರಿ ಘಟಕವನ್ನು ನಿಗದಿತ ಕಾಲಾವಧಿಯೊಳಗೆ ಕಾರ್ಯಾರಂಭ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು)	ಪ್ರಸ್ತುತ Airforce Authority ರವರಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯಲಾಗಿದ್ದು ಕಾಮಗಾರಿಯು ಪ್ರಗತಿಯಲ್ಲಿರುತ್ತದೆ ಹಾಗೂ ಸದರಿ ಕಾಮಗಾರಿಯನ್ನು ಮಾರ್ಚ್-2021ರ ಒಳಗಾಗಿ ಪೂರ್ಣಗೊಳಿಸಲಾಗುತ್ತದೆ.

(ಜಗದೀಶ ಶೆಟ್ಟರ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಸಂಖ್ಯೆ: ಸಿಐ 173 ಐಎಪಿ (ಇ) 2020

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1653

ಸದಸ್ಯರ ಹೆಸರು : ಶ್ರೀಮತಿ ಕನೀಜ್ ಫಾತಿಮಾ (ಗುಲ್ಬರ್ಗಾ ಉತ್ತರ)

ಉತ್ತರಿಸುವ ದಿನಾಂಕ : 25.09.2020

ಉತ್ತರಿಸುವ ಸಚಿವರು : ಮಾನ್ಯ ನಗರಾಭಿವೃದ್ಧಿ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	2016-17 ಸಾಲಿನಲ್ಲಿ ಕಲಬುರಗಿ ಮಹಾನಗರ ಪಾಲಿಕೆ ವತಿಯಿಂದ ಬೀದಿ ವಿದ್ಯುತ್ ದೀಪಗಳ ನಿರ್ವಹಣೆಗೆ ಒಂದು ವರ್ಷದ ಅವಧಿಗೆ ಟೆಂಡರ್ ಕರೆಯಲಾಗಿತ್ತು. ಸದರಿ ಅವಧಿ ಮುಗಿದ ನಂತರದಲ್ಲಿ ಹೊಸದಾಗಿ ಟೆಂಡರುಗಳನ್ನು ಕರೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಅವಧಿ ಮುಗಿದ ನಂತರವೂ ಹೊಸದಾಗಿ ಟೆಂಡರುಗಳನ್ನು ಆಹ್ವಾನಿಸದೆ, 2016-17ನೇ ಸಾಲಿನ ಟೆಂಡರನ್ನೇ ಇದುವರೆಗೆ ಮುಂದುವರೆಸಲು ಕಾರಣಗಳೇನು (ವಿವರಗಳನ್ನು ಒದಗಿಸುವುದು)?	ಕಲಬುರಗಿ ಮಹಾನಗರ ಪಾಲಿಕೆಯ ದಾರಿ ದೀಪಗಳ ನಿರ್ವಹಣೆಯನ್ನು 3-ವಲಯಗಳಾಗಿ ವಿಂಗಡಿಸಿ ದಿನಾಂಕ: 16.09.2016ರಂದು ಕಾರ್ಯಾದೇಶ ನೀಡಲಾಗಿ, ಸದರಿ ಟೆಂಡರ್‌ನ ಅವಧಿ ದಿನಾಂಕ: 15.09.2017ಕ್ಕೆ ಮುಕ್ತಾಯಗೊಂಡಿರುತ್ತದೆ. ನಂತರ ಪಾಲಿಕೆಯಿಂದ ದಿನಾಂಕ:24.11.2017 ರಿಂದ ದಿನಾಂಕ: 14.09.2018ರವರೆಗೆ ಒಟ್ಟು 04 ಬಾರಿ ಟೆಂಡರ್ ಕರೆಯಲಾಗಿದ್ದು, ಎರಡು ಬಾರಿ ತಾಂತ್ರಿಕ ಕಾರಣಗಳಿಂದ, ಒಂದು ಬಾರಿ ಏಕ ಬಿಡ್ ಆದುದರಿಂದ, ಹಾಗೂ ಒಂದು ಬಾರಿ ಯಾವುದೇ ಬಿಡ್ ಇಲ್ಲದ ಕಾರಣ, ಸದರಿ ಟೆಂಡರ್‌ಗಳನ್ನು ರದ್ದುಗೊಳಿಸಲಾಗಿರುತ್ತದೆ. 5ನೇ ಸಲ ಟೆಂಡರನ್ನು ದಿನಾಂಕ: 05.03.2019ರಂದು ಕರೆಯಲಾಗಿ, 4 ಸಲ ಟೆಂಡರ್ ಕರೆದರೂ ಯಾವ ಗುತ್ತಿಗೆದಾರರು ಅರ್ಹರಾಗಿಲ್ಲದ ಕಾರಣ ದಿನಾಂಕ: 07.03.2019ರ ಜರುಗಿದ ಪಾಲಿಕೆಯ ಸರ್ವ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ 3 ಪ್ಯಾಕೇಜ್ ಬದಲಾಗಿ 6 ಪ್ಯಾಕೇಜ್ ಮಾಡಿ ಟೆಂಡರ್ ಕರೆಯಲು ನಿರ್ಣಯಿಸಿದ್ದರಿಂದ ಸದರಿ ಟೆಂಡರ್‌ಅನ್ನು ರದ್ದುಗೊಳಿಸಲಾಗಿರುತ್ತದೆ.

		LED ಬೀದಿ ದೀಪ ಯೋಜನೆಯನ್ನು ಅನುಷ್ಠಾನಗೊಳಿಸಬೇಕಾಗಿದ್ದು, ಹಾಲಿ ಇರುವ ಗುತ್ತಿಗೆದಾರರು ಅಂದಾಜು ದರಕ್ಕಿಂತ ಕಡಿಮೆ ಇರುವುದರಿಂದ ಪಾಲಿಕೆಗೆ ಯಾವುದೇ ಆರ್ಥಿಕ ಹೊರೆ ಆಗದಿರುವ ಕಾರಣ ಹಾಲಿ ಇರುವ ಗುತ್ತಿಗೆದಾರರನ್ನು ಸಿ.ಸಿ.ಎಮ್.ಎಸ್. ಅನುಷ್ಠಾನವಾಗುವರೆಗೂ ಪಾಲಿಕೆಯಿಂದ ತಾತ್ಕಾಲಿಕವಾಗಿ ಮುಂದುವರೆಸಲಾಗಿದೆ. ಅಲ್ಲದೆ ಕೋವಿಡ್-19 ಮಹಾಮಾರಿಯಿಂದಾಗಿ ಹೊಸ ಟೆಂಡರ್ ಪ್ರಕ್ರಿಯೆ ಅಂತಿಮಗೊಂಡಿರುವುದಿಲ್ಲ. ಪ್ರಸ್ತುತ 6ನೇ ಬಾರಿ ಟೆಂಡರ್ ಕರೆಯಲು ಪರಿಶೀಲಿಸಲಾಗುತ್ತಿದ್ದು, ಮಹಾನಗರಪಾಲಿಕೆ ವತಿಯಿಂದ ಆಡಳಿತಾಧಿಕಾರಿಗಳ ಆಡಳಿತಾತ್ಮಿಕ ಅನುಮೋದನೆಯ ಹಂತದಲ್ಲಿರುತ್ತದೆ.

ಕಡತ ಸಂಖ್ಯೆ: ನಅಇ 23 ಎಸಿಜಿ 2020 (ಇ)

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1659
ಸದಸ್ಯರ ಹೆಸರು	ಶ್ರೀ. ನಿರಂಜನ್ ಕುಮಾರ್ ಸಿ.ಎಸ್ (ಗುಂಡ್ಲುಪೇಟೆ)
ಉತ್ತರಿಸಬೇಕಾದ ದಿನಾಂಕ	25.09.2020
ಉತ್ತರಿಸುವವರು	ಮಾನ್ಯ ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಗುಂಡ್ಲುಪೇಟೆ ಪುರಸಭೆ ವ್ಯಾಪ್ತಿಯ ವಾರ್ಡ್‌ಗಳಲ್ಲಿನ ಖಾಸಗಿ ಆಸ್ತಿಗಳಿಗೆ ಇ-ಸ್ವತ್ತು ಮತ್ತು ಆಸ್ತಿ ವರ್ಗಾವಣೆ ಮಾಡಿಕೊಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಅಧಿಕೃತ ಖಾಸಗಿ ಆಸ್ತಿಗಳಿಗೆ ಇ-ಆಸ್ತಿ ಮುಖಾಂತರ ಆಸ್ತಿ ವರ್ಗಾವಣೆ ಮಾಡಲಾಗುತ್ತಿದೆ.
ಆ)	ಇ-ಸ್ವತ್ತು ಮತ್ತು ಆಸ್ತಿ ವರ್ಗಾವಣೆ ಮಾಡಲು ಸರ್ಕಾರದ ಮಾನದಂಡಗಳೇನು;	ಪೌರಾಡಳಿತ ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ: ಡಿಎಂಎ 29 ಪಿಟಿಐಎಸ್ 2015-16 ದಿ: 20.04.2016ರಲ್ಲಿ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಆಸ್ತಿಗಳ ನಿರ್ವಾಹಣೆಗೆ ಇ-ಆಸ್ತಿ ತಂತ್ರಾಂಶದ ಬಳಕೆಯನ್ನು ಕಡ್ಡಾಯಗೊಳಿಸಿ ಡಿಜಿಟಲ್ ಸಹಿಯುಳ್ಳ ನಮೂನೆ-3 (ಇ-ಖಾತಾ) ಸೃಜಿಸಬೇಕಿರುತ್ತದೆ. ತಂತ್ರಾಂಶದಲ್ಲಿ ಆಸ್ತಿಯ ಮಾಹಿತಿಯನ್ನು ದಾಖಲಿಸುವ ಸಮಯದಲ್ಲಿ ಈ ಕೆಳಗೆ ಕಾಣಿಸಿದ ದಾಖಲೆಗಳನ್ನು ಅಪ್‌ಲೋಡ್ ಮಾಡಿದಲ್ಲಿ ಸದರಿ ಆಸ್ತಿಗಳು ಅಧಿಕೃತ ಆಸ್ತಿಗಳಿಗೆ ಅರ್ಹವಿರುತ್ತದೆ. 1. ಅನುಮೋದನೆಗೊಂಡ ಲೇಔಟ್‌ಗಳಿಗೆ ಮತ್ತು ಕೈಗಾರಿಕಾ ಉದ್ದೇಶಕ್ಕೆ ಪರಿವರ್ತಿಸಿದ ಆದೇಶದ ಪ್ರತಿ, ಲೇಔಟ್ ಅನುಮೋದನೆಗೊಂಡ ಆದೇಶದ ಪ್ರತಿ, ಲೇಔಟ್ ನಕ್ಷೆ ಮತ್ತು ನಿವೇಶನಗಳನ್ನು ಬಿಡುಗಡೆ ಮಾಡಿದ ಆದೇಶದ ಪ್ರತಿ. 2. ಸರ್ಕಾರದ/ಸ್ಥಳೀಯ ಸಂಸ್ಥೆಗಳಿಂದ ಅನುಮೋದನೆಯಾದ ಆಸ್ತಿಗಳಿಗೆ ಹಕ್ಕು ಪತ್ರ. 3. ಗ್ರಾಮಠಾಣಾ ಆಸ್ತಿಗಳಿಗೆ ತಹಶೀಲ್ದಾರರು / ಸರ್ವೇಯರ್ ನೀಡಿರುವ ಆದೇಶದ ಪ್ರತಿ ಮತ್ತು ಗಣಕೀಕೃತ ಡಿಜಿಟಲ್ ಸಹಿಯುಳ್ಳ ನಮೂನೆ-೯ರ ಪ್ರತಿ. 4. ಕಟ್ಟಡ ಪರವಾನಿಗೆ ಹೊಂದಿರುವ ಆಸ್ತಿಗಳಿಗೆ ಕಟ್ಟಡ ಪರವಾನಿಗೆ.

		ಆಸ್ತಿ ವರ್ಗಾವಣೆಗೆ ಸಂಬಂಧಿಸಿದಂತೆ ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ಕಲಂ 111, 112, 113, 114 ರೀತ್ಯಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ವರ್ಗಾವಣೆ ಪಡೆದವರ ಹೆಸರನ್ನು ಸ್ವತ್ತು ತೆರಿಗೆ ರಿಜಿಸ್ಟರಿನಲ್ಲಿ ನಮೂದಿಸಲಾಗುವುದು. ಈ ನಿಯಮದಡಿ ಪೌರಾಡಳಿತ ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ: ಪೌನಿ/ಎಸ್ಎಎಸ್/38/2004-05 ದಿ: 14.10.2004 ರಂತೆ ಆಸ್ತಿ ತೆರಿಗೆದಾರರ ಹೆಸರನ್ನು ಬದಲಾವಣೆ ಮಾಡುವ ಮುನ್ನ 30 ದಿನಗಳ ಕಾಲವಕಾಶ ನೀಡಿ ಸಾರ್ವಜನಿಕ ಆಕ್ಷೇಪಣೆಯನ್ನು ಕೋರಿ ಕಛೇರಿಯ ನೋಟಿಸ್ ಫಲಕದಲ್ಲಿ ಪ್ರಕಟಣೆಯನ್ನು ಹೊರಡಿಸಬೇಕಾಗಿರುತ್ತದೆ. ನಂತರ ಕೆ.ಎಂ.ಎ 1964 ಕಲಂ.113 ರಂತೆ ಆಸ್ತಿ ತೆರಿಗೆ ಪುಸ್ತಕದಲ್ಲಿ ಹೆಸರನ್ನು ಬದಲಾವಣೆ ಮಾಡಲು ಕ್ರಮವಹಿಸಲಾಗುತ್ತಿರುತ್ತದೆ.
ಇ	ಇ-ಸ್ವತ್ತು ಮತ್ತು ಆಸ್ತಿ ವರ್ಗಾವಣೆ ಮಾಡದಿರಲು ಕಾರಣಗಳೇನು;	ಸರ್ಕಾರದ ಕಾಯ್ದೆ / ನಿಯಮಗಳಡಿ ನಗರ ಸ್ಥಳೀಯ ಸಂಸ್ಥೆಗಳು ಸಕ್ಷಮ ಪ್ರಾಧಿಕಾರಗಳಿಂದ ವಿನ್ಯಾಸ ಅನುಮೋದನೆ ಪಡೆಯದೇ ಇರುವ ನಿವೇಶನಗಳಿಗೆ ಖಾತೆಯನ್ನು ನೀಡಲು ಅವಕಾಶವಿರುವುದಿಲ್ಲ. ಆದ್ದರಿಂದ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯದೆ ಇರುವ ಅನಧಿಕೃತ ಮತ್ತು ನಿಯಮಬಾಹಿರ ನಿವೇಶನಗಳಿಗೆ ಮತ್ತು ಆಸ್ತಿಗಳಿಗೆ ಇ-ಆಸ್ತಿ ಮುಂಖಾಂತರ ಆಸ್ತಿ ವರ್ಗಾವಣೆ ಮಾಡುತ್ತಿರುವುದಿಲ್ಲ.
ಈ	ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಸರ್ಕಾರದ ಕ್ರಮಗಳೇನು; ಯಾವ ಕಾಲಮಿತಿಯೊಳಗೆ ಈ ಸಮಸ್ಯೆಯನ್ನು ಪರಿಹರಿಸಲಾಗುವುದು (ಸಂಪೂರ್ಣ ವಿವರ ನೀಡುವುದು)	ಅನಧಿಕೃತ ಆಸ್ತಿಗಳಿಗೆ ಖಾತೆ ಮಾಡಲು ಕಾಯ್ದೆ/ನಿಯಮಗಳಲ್ಲಿ ಪ್ರಸ್ತುತ ಅವಕಾಶವಿರುವುದಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಇ-ಸ್ವತ್ತು ಮತ್ತು ನಗರ ಪ್ರದೇಶಗಳಲ್ಲಿ ಇ-ಖಾತಾ(ನಮೂನೆ-3) ನೀಡುವ ಕುರಿತು ಪರಾಮರ್ಶಿಸಲು ಉಪಸಮಿತಿಯನ್ನು ರಚಿಸಲಾಗಿದೆ.

ಕಡತ ಸಂಖ್ಯೆ: ನಅಇ 109 ಜಿಇಎಲ್ 2020(ಇ)

(ಡಾ॥ ನಾರಾಯಣಗೌಡ)

ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1661
ಸದಸ್ಯರ ಹೆಸರು : ಶ್ರೀ ಪರಮೇಶ್ವರ ನಾಯಕ್ ಪಿ.ಟಿ (ಹಡಗಲಿ)
ಉತ್ತರಿಸಬೇಕಾದ ದಿನಾಂಕ : 25.09.2020
ಉತ್ತರಿಸುವ ಸಚಿವರು : ಸಹಕಾರ ಸಚಿವರು

<table>
<tr><th>ಕ್ರಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಕಳೆದ ಎರಡು ವರ್ಷಗಳಲ್ಲಿ ಸಹಕಾರ ಇಲಾಖಾ ವ್ಯಾಪ್ತಿಗೆ ಒಳಪಟ್ಟ ವಿವಿಧ ವಿಭಾಗಗಳಲ್ಲಿ ಸಿಬ್ಬಂದಿ ವರ್ಗದವರು ಅವ್ಯವಹಾರಗಳಲ್ಲಿ ಭಾಗಿಯಾಗಿರುವ ಎಷ್ಟು ಪ್ರಕರಣಗಳು ಗುರುತಿಸಲ್ಪಟ್ಟಿವೆ; ಅಂತಹವರುಗಳ ಮೇಲೆ ಕೈಗೊಂಡ ಕಾನೂನು ಕ್ರಮಗಳು ಯಾವುವು;</td><td>ಕಳೆದ ಎರಡು ವರ್ಷಗಳಲ್ಲಿ ಸಹಕಾರ ಇಲಾಖೆಯ ವ್ಯಾಪ್ತಿಗೊಳಪಡುವ ಇಲಾಖೆಗಳ ಸಿಬ್ಬಂದಿ ವರ್ಗದವರು ಅವ್ಯವಹಾರಗಳಲ್ಲಿ ಭಾಗಿಯಾಗಿರುವ ಪ್ರಕರಣಗಳು ಈ ಕೆಳಕಂಡಂತಿವೆ:-
<table>
<tr><th>ಕ್ರಸಂ.</th><th>ಇಲಾಖೆ</th><th>ಪ್ರಕರಣಗಳ ಸಂಖ್ಯೆ</th></tr>
<tr><td>1</td><td>ಸಹಕಾರ ಸಂಘಗಳ ನಿಬಂಧಕರ ಇಲಾಖೆ</td><td>06</td></tr>
<tr><td>2</td><td>ಕೃಷಿ ಮಾರಾಟ ಇಲಾಖೆ</td><td>19</td></tr>
<tr><td>3</td><td>ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ</td><td>ಯಾವುದು ಇರುವುದಿಲ್ಲ</td></tr>
<tr><td>4</td><td>ಕರ್ನಾಟಕ ರಾಜ್ಯ ಉಗ್ರಾಣ ನಿಗಮ</td><td>09</td></tr>
</table>
ಅವ್ಯವಹಾರಗಳಲ್ಲಿ ಭಾಗಿಯಾಗಿರುವವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು, 1957ರನ್ವಯ ಕ್ರಮ ಕೈಗೊಳ್ಳಲಾಗುತ್ತಿದೆ.</td></tr>
<tr><td>ಆ</td><td>ಸಿಬ್ಬಂದಿ ವರ್ಗದವರು ನಡೆಸಿರುವ ಅಥವಾ ಭಾಗಿಗಳಾಗಿರುವ ಪ್ರಕರಣಗಳಲ್ಲಿ ಇಲಾಖೆಯವರು ಸೇವಾ ನಿಯಮಾವಳಿಗಳ ಪ್ರಕಾರ ಜರುಗಿಸುವ ಕ್ರಮಗಳೇನು?</td><td>ಅವ್ಯವಹಾರಗಳಲ್ಲಿ ಭಾಗಿಯಾಗಿರುವ ಸಿಬ್ಬಂದಿಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು, 1957ರನ್ವಯ ಶಿಸ್ತು ಕ್ರಮ ಜರುಗಿಸಲಾಗುತ್ತಿದೆ.</td></tr>
<tr><td>ಇ</td><td>ಸದರಿ ಅವಧಿಯಲ್ಲಿ ಎಷ್ಟು ಜನರನ್ನು ಅಮಾನತ್ತಿನಲ್ಲಿರಿಸುವುದು ಮತ್ತಿತರ ಶಿಸ್ತಿನ ಕ್ರಮಗಳಿಗೆ ಒಳಪಡಿಸಲಾಗಿದೆ;</td><td>ಸದರಿ ಅವಧಿಯಲ್ಲಿ ಸಹಕಾರ ಇಲಾಖೆಯ ವ್ಯಾಪ್ತಿಗೊಳಪಡುವ ಇಲಾಖೆಗಳಲ್ಲಿ 31 ಜನರನ್ನು ಅಮಾನತ್ತಿನಲ್ಲಿರಿಸಲಾಗಿದೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು, 1957ರ ಅನುಸಾರ ವಿಚಾರಣೆ ನಡೆಸಿ ಶಿಸ್ತು ಕ್ರಮ ಜರುಗಿಸಲಾಗುವುದು.</td></tr>
</table>

2...

ಈ	ಇಂಥ ಪ್ರಕರಣಗಳಲ್ಲಿ ನ್ಯಾಯಾಲಯದಲ್ಲಿರುವ ಪ್ರಕರಣಗಳು ಎಷ್ಟು; ಸಿಬ್ಬಂದಿ ವರ್ಗದವರು ಮಾದರಿ ಸರ್ಕಾರಿ ಸೇವಕರಾಗಿ ಕರ್ತವ್ಯ ನಿರ್ವಹಿಸುವಲ್ಲಿ ಇಲಾಖೆಯವರು ಅನುಸರಿಸುತ್ತಿರುವ ಎಚ್ಚರಿಕೆಯ ಕ್ರಮಗಳೇನು?	ಸಹಕಾರ ಇಲಾಖೆಯ ವ್ಯಾಪ್ತಿಗೊಳಪಡುವ ಸಹಕಾರ ಸಂಘಗಳ ನಿಬಂಧಕರ ಇಲಾಖೆಯಲ್ಲಿ ಮಾತ್ರ 1 ಪ್ರಕರಣ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ. ಅಧಿಕಾರಿ / ಸಿಬ್ಬಂದಿ ವರ್ಗದವರು ಕರ್ತವ್ಯ ನಿರ್ವಹಣೆಯಲ್ಲಿ ನಿರ್ಲಕ್ಷತನ ತೋರಿದಲ್ಲಿ ತಿಳುವಳಿಕೆ ಪತ್ರ, ನೋಟೀಸ್ ನೀಡಿ ಎಚ್ಚರಿಕೆಯಿಂದ ಕರ್ತವ್ಯ ನಿರ್ವಹಿಸುವಂತೆ ನಿರ್ದೇಶನ ನೀಡಲಾಗುತ್ತಿದೆ ಹಾಗೂ ಅಧಿಕಾರಿ / ಸಿಬ್ಬಂದಿ ವರ್ಗದವರಿಗೆ ಕಾರ್ಯಕ್ಷಮತೆಯನ್ನು ಹೆಚ್ಚಿಸಿಕೊಳ್ಳಲು ಕಾಲಕಾಲಕ್ಕೆ ಅವಶ್ಯಕ ತರಬೇತಿ / ಸಲಹೆ ಸೂಚನೆಗಳನ್ನು ನೀಡಲಾಗುತ್ತಿದೆ.

ಸಂಖ್ಯೆ: ಸಇ 140 ರರವಿ 2020

(ಎಸ್.ಟಿ.ಸೋಮಶೇಖರ್)
ಸಹಕಾರ ಸಚಿವರು

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರು : ಶ್ರೀಮತಿ ಲಕ್ಷ್ಮೀ ಆರ್.ಹೆಬ್ಬಾಳ್ಕರ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1674

ಉತ್ತರಿಸಬೇಕಾದ ದಿನಾಂಕ : 25.09.2020

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಪ್ರಿಯದರ್ಶಿನಿ ಯೋಜನೆಯಡಿ ಈವರೆಗೆ ಎಷ್ಟು ಮಹಿಳೆಯರನ್ನು ವಿವಿಧ ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ಮಡಿಕೊಳ್ಳಲು ಸರ್ಕಾರ ಅನುದಾನ ನೀಡಿದೆ;	ಮಹಿಳೆಯರನ್ನು ಎಲ್ಲಾ ವಿಧದ ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೋಂದಾಯಿಸಲು ಪ್ರಿಯದರ್ಶಿನಿ ಯೋಜನೆಯನ್ನು 2014-15ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ. 2015-16ನೇ ಸಾಲಿನಲ್ಲಿ ಪ್ರಿಯದರ್ಶಿನಿ ಯೋಜನೆ, ಆಶಾಕಿರಣ ಯೋಜನೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರನ್ನು ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೋಂದಾಯಿಸಲು ಷೇರು ಸಹಾಯಧನವನ್ನು ಮಂಜೂರು ಮಾಡುವ ಯೋಜನೆಯನ್ನು ಒಗ್ಗೂಡಿಸಿ 2015-16ನೇ ಸಾಲಿನಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಮಹಿಳೆಯರನ್ನು ವಿಕಲಚೇತನರನ್ನು, ಹಿಂದುಳಿದ ವರ್ಗ/ಅಲೆಮಾರಿ ವರ್ಗ/ಅಲ್ಪಸಂಖ್ಯಾತ ವರ್ಗದವರನ್ನು ಎಲ್ಲಾ ವಿಧದ ಸಹಕಾರ ಸಂಘಗಳಲ್ಲಿ ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಸದಸ್ಯರಾಗಿಲ್ಲದಿರುವ ರಾಜ್ಯದ ಬಿ.ಪಿ.ಎಲ್ ಕುಟುಂಬದ ಒಟ್ಟು ಸದಸ್ಯರನ್ನು ನೋಂದಾಯಿಸಲು ಷೇರು ಸಹಾಯಧನವನ್ನು ಮಂಜೂರು ಮಾಡುವ ಯೋಜನೆ ಎಂದು ಮರುನಾಮಕರಣ ಮಾಡಿ ಅನುಷ್ಠಾನಗೊಳಿಸಲಾಗುತ್ತಿದೆ. ಪ್ರಿಯದರ್ಶಿನಿ ಯೋಜನೆಯಡಿಯಲ್ಲಿ 2014-15 ರಿಂದ 2019-20ನೇ ಸಾಲಿನವರೆಗೆ ಒಟ್ಟು 3,71,299 ಮಹಿಳೆಯರನ್ನು ಎಲ್ಲಾ ವಿಧದ ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೋಂದಾಯಿಸಲು ಸರ್ಕಾರದಿಂದ ರೂ 1697.95 ಲಕ್ಷಗಳ ಅನುದಾನವನ್ನು ನೀಡಲಾಗಿದೆ.
ಆ)	ಮಾಹಿತಿ ಕೊರತೆಯಿಂದ ಮಹಿಳೆಯರು ಸರ್ಕಾರದ ಈ ಯೋಜನೆ ಲಾಭವನ್ನು ಪಡೆಯಲು ಸಾಧ್ಯವಾಗುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಇಲ್ಲ.

ಇ)	ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ.	ಯೋಜನೆಯ ಬಗ್ಗೆ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು, ಉಪವಿಭಾಗೀಯ ಸಹಾಯಕ ನಿಬಂಧಕರು ಮತ್ತು ಕ್ಷೇತ್ರ ಸಿಬ್ಬಂದಿಗಳೊಂದಿಗೆ ಸಭೆಗಳನ್ನು ನಡೆಸಲಾಗಿದೆ. ಹಾಗೂ ಆಯಾ ಕಾರ್ಯಕ್ಷೇತ್ರದ ಸಂಘಗಳು ಹಾಗೂ ಗ್ರಾಮಗಳಿಗೆ ಭೇಟಿ ನೀಡಿ, ಪ್ರಚಾರ ಮಾಡಿ ಯೋಜನೆಯ ಬಗ್ಗೆ ಅರಿವು ಮೂಡಿಸಲಾಗಿದೆ. ಜಿಲ್ಲಾ ಮಟ್ಟದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ.

ಸಂಖ್ಯೆ: ಸಿಒ 351 ಸಿಎಲ್‌ಎಸ್ 2020

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1683
ಸದಸ್ಯರ ಹೆಸರು	ಶ್ರೀ ಆನಂದ ಸಿದ್ದು ನ್ಯಾಮಗೌಡ (ಜಮಖಂಡಿ)
ಉತ್ತರಿಸಬೇಕಾದ ದಿನಾಂಕ	25.09.2020.
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ಜಮಖಂಡಿ ಮತಕ್ಷೇತ್ರದಲ್ಲಿ ವಸತಿ ಯೋಜನೆಯಡಿಯಲ್ಲಿ ಫಲಾನುಭವಿಗಳಿಗೆ ಮಂಜೂರಾದ ಮನೆಗಳನ್ನು ನಿರ್ಮಿಸಲು ಕೃಷ್ಣ ನದಿಯಲ್ಲಿ ಮರಳಿನ ಪ್ರಮಾಣವಿದ್ದು ಅದಕ್ಕೆ ಮರಳು ಟೆಂಡರನ್ನು ಯಾವಾಗ ಆಹ್ವಾನಿಸಲಾಗುವುದು; ವಿಳಂಬವಾಗುತ್ತಿರಲು ಕಾರಣವನು	• ಜಮಖಂಡಿ ತಾಲ್ಲೂಕಿನ ತಮದಡ್ಡಿ, ಮುತ್ತೂರು, ಕಡಕೋಳ ಮತ್ತು ಚಿಕ್ಕಪಡಸಲಗಿ ಗ್ರಾಮಗಳ ವ್ಯಾಪ್ತಿಯ ಕೃಷ್ಣಾ ನದಿ ಪಾತ್ರದಲ್ಲಿ 04 ಮರಳು ಬ್ಲಾಕುಗಳನ್ನು ಗುರುತಿಸಿ, ಟೆಂಡರ್-ಕಂ-ಹರಾಜು ಮೂಲಕ ದಿನಾಂಕ:01.06.2017 ರಂದು ವಿಲೇ ಪಡಿಸಲಾಗಿತ್ತು. • ನಂತರ ದಿನಾಂಕ: 19.06.2019 ರಂದು ಜರುಗಿದ ಬಾಗಲಕೋಟೆ ಜಿಲ್ಲಾ ಮರಳು ಸಮಿತಿಯ ಸಭೆಯಲ್ಲಿ ಯಶಸ್ವಿ ಬಿಡ್ಡುದಾರರು ಪ್ರತಿ ಮೆ.ಟನ್ ಮರಳಿಗೆ ಮಾರುಕಟ್ಟೆ ದರಕ್ಕಿಂತ ಅತಿ ಹೆಚ್ಚಿನ ಮೊತ್ತಕ್ಕೆ ಬಿಡ್ಡು ಮಾಡಿರುವ ಕಾರಣ ಸಾರ್ವಜನಿಕರಿಗೆ ಕೈಗೆಟಕುವ ದರದಲ್ಲಿ ಮರಳು ಪೂರೈಕೆ ಮಾಡಲು ತಾಂತ್ರಿಕವಾಗಿ ಸಾಧ್ಯವಾಗುವುದಿಲ್ಲವೆಂದು ತೀರ್ಮಾನಿಸಿ, ಸದರಿ ಹರಾಜು ಪ್ರಕ್ರಿಯೆಯನ್ನು ರದ್ದುಗೊಳಿಸಲಾಗಿರುತ್ತದೆ. • ಕಳೆದ 2 ವರ್ಷಗಳಿಂದ ಕೃಷ್ಣ ನದಿ ಪಾತ್ರದ ಜಲಾಯನ ಪ್ರದೇಶದ ವ್ಯಾಪ್ತಿಯಲ್ಲಿ ಭಾರಿ ಮಳೆಯಾಗುತ್ತಿರುವ ಕಾರಣ ಹಾಗೂ ಸದರಿ ಮರಳು ಬ್ಲಾಕ್‌ಗಳು ಕೃಷ್ಣ ನದಿಯ ಆಲಮಟ್ಟಿ ಹಿನ್ನೀರಿನ ಪ್ರದೇಶದಲ್ಲಿ ಇದ್ದು, ನೀರಿನಿಂದ ಆವೃತವಾಗಿರುವುದರಿಂದ ಸದರಿ ಮರಳು ಬ್ಲಾಕ್‌ಗಳಿಗೆ ಟೆಂಡರ್ ಕರೆಯಲು ವಿಳಂಬವಾಗಿರುತ್ತದೆ. • ಪ್ರಸ್ತುತ ಕೃಷ್ಣಾ ನದಿಯು ನೀರಿನಿಂದ ತುಂಬಿ ಹರಿಯುತ್ತಿದ್ದು, ನದಿಯಲ್ಲಿ ನೀರಿನ ಹರಿವು ಕಡಿಮೆಯಾದ ನಂತರ ಸದರಿ ಮರಳು ಬ್ಲಾಕ್‌ಗಳನ್ನು ಜಿಲ್ಲಾ ಮರಳು ಸಮಿತಿಯಿಂದ ಪರಿಶೀಲನೆ ನಡೆಸಿ, ಮರಳಿನ ಪ್ರಮಾಣವನ್ನು ಅಂದಾಜಿಸಿ, ಹೊಸ ಮರಳು ನೀತಿ 2020 ರಂತೆ ಸರ್ಕಾರಿ ಸ್ವಾಮ್ಯದ ಸಂಸ್ಥೆಯಾದ ಹಟ್ಟಿ ಚಿನ್ನದ ಗಣಿ ನಿಯಮಿತದಿಂದ ಮರಳು ಗಣಿಗಾರಿಕೆ ಕೈಗೊಳ್ಳಲು ಜಿಲ್ಲಾ ಮರಳು ಸಮಿತಿಯಿಂದ ಅಧಿಸೂಚನೆ ಹೊರಡಿಸಲು ಕ್ರಮ ವಹಿಸಲಾಗುವುದು. ಸದರಿ 04 ಮರಳು ಬ್ಲಾಕ್‌ಗಳ ವಿವರಗಳು ಈ ಕೆಳಕಂಡಂತಿರುತ್ತವೆ.

--2

ಕ್ರ. ಸಂ.	ಗ್ರಾಮ & ಮರಳು ಬ್ಲಾಕ್ ಸಂಖ್ಯೆ	ನದಿ ಪಾತ್ರದ ಪಕ್ಕದ ಸರ್ವೇ ನಂ.	ಗುರುತಿಸಿರುವ ಮರಳು ಬ್ಲಾಕ್‌ಗಳ ವಿಸ್ತೀರ್ಣ (ಎಕರೆಗಳಲ್ಲಿ)
1	ಮತ್ತೂರು - 06	133 ರಿಂದ 136	13-20
2	ಕಡಕೋಳ - 08	8 ರಿಂದ 11 13 ರಿಂದ 16	13-20
3	ತಮದಡ್ಡಿ - 11	161 ರಿಂದ 164, 166 ರಿಂದ 182	24-00
4	ಚಿಕ್ಕಪಡಸಲಗಿ -12	166 ರಿಂದ 184 & 221	26-00

(ಆ)	ಮರಳು ಸಾಗಾಣಿಕೆ ಮಾಡುವ ಸಂಬಂಧ ಟೆಂಡರ್ ಪ್ರಕ್ರಿಯೆಯನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು (ಮಾಹಿತಿ ನೀಡುವುದು)	ನದಿ ಪಾತ್ರದಲ್ಲಿ ನೀರಿನ ಹರಿವು ಕಡಿಮೆಯಾದ ನಂತರ ಸದರಿ 04 ಮರಳು ಬ್ಲಾಕ್‌ಗಳನ್ನು ಜಿಲ್ಲಾ ಮರಳು ಸಮಿತಿಯಿಂದ ಪರಿಶೀಲನೆ ನಡೆಸಿ, ಮರಳಿನ ಪ್ರಮಾಣವನ್ನು ಅಂದಾಜಿಸಿ, ಹೊಸ ಮರಳು ನೀತಿ 2020 ರಂತೆ ಸರ್ಕಾರಿ ಸ್ವಾಮ್ಯದ ಸಂಸ್ಥೆಯಾದ ಹಟ್ಟಿ ಚಿನ್ನದ ಗಣಿ ನಿಯಮಿತದಿಂದ ಮರಳು ಗಣಿಗಾರಿಕೆ ಕೈಗೊಳ್ಳಲು ಜಿಲ್ಲಾ ಮರಳು ಸಮಿತಿಯಿಂದ ಅಧಿಸೂಚನೆ ಹೊರಡಿಸಲು ಕ್ರಮ ವಹಿಸಲಾಗುತ್ತಿದೆ.

ಸಿಐ 478 ಎಂಎಂಎನ್ 2020

(ಸಿ.ಸಿ. ಪಾಟೀಲ)
ಗಣಿ ಮತ್ತು ಭೂವಿಜ್ಞಾನ ಸಚಿವರು
ಸಿ.ಸಿ. ಪಾಟೀಲ
ಗಣಿ ಮತ್ತು ಭೂವಿಜ್ಞಾನ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1684

ಸದಸ್ಯರ ಹೆಸರು : ಶ್ರೀ ಆನಂದ್ ಸಿದ್ದು ನ್ಯಾಮಗೌಡ

ಉತ್ತರಿಸುವ ಸಚಿವರು : ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಉತ್ತರಿಸಬೇಕಾದ ದಿನಾಂಕ : 25-09-2020

ಕ್ರ ಸಂ	ಪ್ರಶ್ನೆ	ಉತ್ತರ
(ಅ)	2019-20 ನೇ ಸಾಲಿನಲ್ಲಿ ಜಮಖಂಡಿ ತಾಲ್ಲೂಕಿನ ರೈತರಿಗೆ ದ್ರಾಕ್ಷಿ ಬೆಳೆ ವಿಮೆ ಮಾಡಿಸಿದ್ದು, ಈವರೆಗೆ ವಿಮೆ ಹಣ ತಲುಪದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗೂ ರೈತರಿಗೆ ವಿಮೆ ಹಣ ತಲುಪಲು ವಿಳಂಬವಾಗಲು ಕಾರಣಗಳೇನು;	ಜಮಖಂಡಿ ತಾಲ್ಲೂಕಿನಲ್ಲಿ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ 2019-20 ನೇ ಸಾಲಿನ ಹಿಂಗಾರು ಹಂಗಾಮಿನಲ್ಲಿ 870 ರೈತರು ದ್ರಾಕ್ಷಿ ಬೆಳೆಗೆ ವಿಮೆ ಮಾಡಿಸಿದ್ದು, ನೋಂದಾಯಿಸಿದ ರೈತರುಗಳಿಗೆ ವಿಮಾ ಪರಿಹಾರ ಲೆಕ್ಕಾಚಾರ ಮಾಡಲು ಹವಾಮಾನ ಸೂಚ್ಯಂಕಗಳ ದತ್ತಾಂಶಗಳನ್ನು ಪಡೆದು, ವಿಮಾಘಟಕವಾರು ವಿಮಾ ಮೊತ್ತವನ್ನು ಲೆಕ್ಕಾಚಾರ ಮಾಡಲಾಗಿದ್ದು, ಸಂಬಂಧಿಸಿದ ವಿಮಾ ಕಂಪನಿಗಳ ವತಿಯಿಂದ ಪರಿಶೀಲನಾ ಕಾರ್ಯ ಪ್ರಗತಿಯಲ್ಲಿದೆ.
(ಆ)	2020 ರ ಮೇ ತಿಂಗಳಲ್ಲಿ ಅಕಾಲಿಕ ಆಲಿಕಲ್ಲು ಮಳೆ ಹಾಗೂ ಜುಲೈ ಮತ್ತು ಆಗಸ್ಟ್ ಮಾಹೆಯಲ್ಲಿ ಅಕಾಲಿಕ ಮಳೆಯಿಂದಾಗಿ ದ್ರಾಕ್ಷಿ ಬೆಳೆಯು ತೀವ್ರವಾಗಿ ರೋಗ ಬಾಧಿತವಾಗಿದ್ದು, ರೈತರಿಗೆ ಪರಿಹಾರ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	2020 ರ ಮೇ ತಿಂಗಳಲ್ಲಿ ಅಕಾಲಿಕ ಆಲಿಕಲ್ಲು ಮಳೆ ಹಾಗೂ ಜುಲೈ ಮತ್ತು ಆಗಸ್ಟ್ ಮಾಹೆಯಲ್ಲಿ ಅಕಾಲಿಕ ಮಳೆಯಿಂದಾಗಿ ದ್ರಾಕ್ಷಿ ಬೆಳೆಯು ಹಾನಿಯಾಗಿದ್ದು, NDRF/SDRF ಮಾರ್ಗಸೂಚಿಯನ್ವಯ ಬಹುವಾರ್ಷಿಕ ತೋಟಗಾರಿಕೆ ಬೆಳೆಗಳಿಗೆ ರೂ.18000/ಪ್ರತಿ ಹೆಕ್ಟೇರ್ ನಂತೆ ಗರಿಷ್ಠ 2 ಹೆಕ್ಟೇರ್ ಗೆ ಮಿತಿಗೊಳಿಸಿ ಪರಿಹಾರಧನ ವಿತರಿಸಲು ಅನುವಾಗುವಂತೆ ವರದಿಯನ್ನು ಕಂದಾಯ ಇಲಾಖೆಗೆ ಸಲ್ಲಿಸಿದ್ದು, ಪರಿಹಾರ ವಿತರಣೆಗೆ ಕ್ರಮವಹಿಸಲಾಗಿರುತ್ತದೆ.
(ಇ)	ಜಮಖಂಡಿ ತಾಲ್ಲೂಕಿನಲ್ಲಿ ಹೆಚ್ಚಿನ ಪ್ರದೇಶದಲ್ಲಿ ದ್ರಾಕ್ಷಿ ಮತ್ತು ಇತರೇ ತೋಟಗಾರಿಕೆ ಬೆಳೆ ಬೆಳೆಯುತ್ತಿದ್ದು; ಹನಿ ನೀರಾವರಿ ಯೋಜನೆಗೆ ಅನುದಾನ ಲಭ್ಯವಾಗುತ್ತಿಲ್ಲ ಹಾಗೂ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿಯಲ್ಲಿ ದ್ರಾಕ್ಷಿ ಬೆಳೆಯುವ ರೈತರಿಗೆ ಕೊಡುತ್ತಿರುವ ಅನುದಾನ ತುಂಬಾ ಕಡಿಮೆಯಾಗಿದ್ದು, ರೈತರಿಗೆ ಹೆಚ್ಚಿನ ಅನುದಾನ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?	2019-20ನೇ ಸಾಲಿನ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಸೂಕ್ಷ್ಮ ನೀರಾವರಿ ಕಾರ್ಯಕ್ರಮದಡಿ ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿಗೆ ಒಟ್ಟಾರೆ ರೂ.350.93 ಲಕ್ಷಗಳ ಅನುದಾನವನ್ನು ಬಿಡುಗಡೆಯಾಗಿದ್ದು, ರೂ.350.93 ಲಕ್ಷಗಳ ಸಹಾಯಧನವನ್ನು ಪಾವತಿಸಿ ಸಂಪೂರ್ಣ ವೆಚ್ಚ ಭರಿಸಲಾಗಿರುತ್ತದೆ. ಈ ಪೈಕಿ ರೂ.74.09 ಲಕ್ಷಗಳ ವೆಚ್ಚ ಭರಿಸಿ, 184.74 ಹೆಕ್ಟೇರ್ ಪ್ರದೇಶದಲ್ಲಿ ಬೆಳೆದ ದ್ರಾಕ್ಷಿ ಬೆಳೆಗಾರರಿಗೆ ಸಹಾಯಧನವನ್ನು ನೀಡಲಾಗಿರುತ್ತದೆ. ಇದರಿಂದ 227 ಸಂಖ್ಯೆಯ ಫಲಾನುಭವಿಗಳು ಪ್ರಯೋಜನ ಪಡೆದಿರುತ್ತಾರೆ. ದ್ರಾಕ್ಷಿ ಬೆಳೆ ಸೇರಿದಂತೆ, ಇತರೆ ತೋಟಗಾರಿಕೆ ಬೆಳೆಗಳಿಗೆ ನೀಡಲಾದ ಸಹಾಯಧನದ ವಿವರ ಕೆಳಕಂಡಂತೆ ನೀಡಲಾಗಿದೆ.

ಕ್ರ. ಸಂ.	ಬೆಳೆ	ನೀಡಲಾದ ಸಹಾಯಧನ (ರೂ.ಲಕ್ಷಗಳಲ್ಲಿ)	ಪ್ರದೇಶ (ಹೆಕ್ಟೇರ್ ಗಳಲ್ಲಿ)	ಫಲಾನುಭವಿಗಳ ಸಂಖ್ಯೆ
I	ಹಣ್ಣಿನ ಬೆಳೆಗಳು			
1.	ಬಾಳೆ	9.50	12.56	18
2.	ನಿಂಬೆ	0.20	0.60	1
3.	ದ್ರಾಕ್ಷಿ	74.09	184.74	227

4.	ಮಾವು	0.90	1.50	3
5.	ದಾಳಿಂಬೆ	19.43	48.12	68
6.	ಪೇರಲ (ಸೀಬೆ)	0.55	2.00	1
II	ಸಾಂಬಾರು ಬೆಳೆಗಳು			
1	ಅರಿಶಿನ	221.8544	213.38	225
III	ತೋಟದ ಬೆಳೆಗಳು			
1	ವೀಳ್ಯದೆಲೆ	1.4530	1.30	3
IV	ತರಕಾರಿ ಬೆಳೆಗಳು			
1.	ಟೊಮೆಟೊ	1.65	1.60	2
2.	ದೊಣ್ಣೆಮೆಣಸಿನಕಾಯಿ (ಕ್ಯಾಪ್ಸಿಕಂ)	7.50	7.05	8
3.	ಬದನೆಕಾಯಿ	4.65	3.45	5
4.	ಈರುಳ್ಳಿ	1.12	1.40	2
5.	ಕಲ್ಲಂಗಡಿ	1.26	1.80	2
6.	ಇತರೆ ತರಕಾರಿಗಳು	6.77	6.63	10
	ಒಟ್ಟು	350.93	486.13	575

2020-21ನೇ ಸಾಲಿಗೆ ಸದರಿ ಯೋಜನೆಯಡಿ ಜಮಖಂಡಿ ತಾಲ್ಲೂಕಿಗೆ ಒಟ್ಟು ರೂ.29.60 ಲಕ್ಷಗಳ ಅನುದಾನವನ್ನು ಬಿಡುಗಡೆಗೊಳಿಸಲಾಗಿದ್ದು, ವೆಚ್ಚ ಭರಿಸಲು ಕ್ರಮಕೈಗೊಳ್ಳಲಾಗುತ್ತಿದೆ.

ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿಯಲ್ಲಿ ದ್ರಾಕ್ಷಿ ಬೆಳೆಯುವ ರೈತರಿಗೆ ಹೆಚ್ಚಿನ ಅನುದಾನ ನೀಡುವ ಪ್ರಸ್ತಾವನೆ ಇರುವುದಿಲ್ಲ.

ಸಂಖ್ಯೆ: HORTI 385 HEG 2020

(ನಾರಾಯಣಗೌಡ)

ಪೌರಾಡಳಿತ, ತೋಟಗಾರಿಕೆ ಮತ್ತು

ರೇಷ್ಮೆ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1690
ಸದಸ್ಯರ ಹೆಸರು : ಶ್ರೀ ಕೃಷ್ಣ ಭೈರೇಗೌಡ (ಬ್ಯಾಟರಾಯನಪುರ)
ಉತ್ತರಿಸುವವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು
ಉತ್ತರಿಸುವ ದಿನಾಂಕ : 25.09.2020

<table>
<tr><th>ಕ್ರಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದಲ್ಲಿ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ "ಇನ್ವೆಸ್ಟ್ ಕರ್ನಾಟಕ" ನಡೆದಿರುವುದು ನಿಜವೇ;</td><td>ಹೌದು.</td></tr>
<tr><td>ಆ</td><td>ಹಾಗಿದ್ದಲ್ಲಿ, ರಾಜ್ಯದಲ್ಲಿ ನಡೆದಿರುವ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶಗಳಲ್ಲಿ ಆದಂತಹ ಒಪ್ಪಂದಗಳು ಯಾವುವು; ಹೂಡಿಕೆಯ ಮೊತ್ತ ಎಷ್ಟು; ಉದ್ಯೋಗ ಎಷ್ಟು;(ವಲಯವಾರು ಪ್ರತ್ಯೇಕ ವಿವರ ನೀಡುವುದು)</td><td>2000, 2010, 2012 ಹಾಗೂ 2016 ರಲ್ಲಿ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ/ ಇನ್ವೆಸ್ಟ್ ಕರ್ನಾಟಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಸದರಿ ಸಮಾವೇಶಗಳಲ್ಲಿ ಆದಂತಹ ಒಪ್ಪಂದಗಳು ; ಹೂಡಿಕೆಯ ಮೊತ್ತ; ಉದ್ಯೋಗ ಅವಕಾಶಗಳ ವಿವರಗಳು ಕೆಳಕಂಡಂತಿದೆ.
<table>
<tr><th>ಸಮಾವೇಶ</th><th>ಒಡಂಬಡಿಕೆ/ ಅನುಮೋದನೆಯಾದ ಯೋಜನೆಗಳ ವಿವರ</th><th>ಬಂಡವಾಳ ಹೂಡಿಕೆ</th><th>ಉದ್ಯೋಗ ಅವಕಾಶಗಳು</th></tr>
<tr><td>2000 ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ (5 ಮತ್ತು 8 ಜೂನ್ 2000)</td><td>254</td><td>27160.00</td><td>98965</td></tr>
<tr><td>2010 ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ (4 ಮತ್ತು 5 ಜೂನ್ 2010)</td><td>389</td><td>392768.00</td><td>735292</td></tr>
<tr><td>2012 ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ (7 ಮತ್ತು 8 ಜೂನ್ 2012)</td><td>751</td><td>677068.00</td><td>1527687</td></tr>
<tr><td>2016 ಇನ್ವೆಸ್ಟ್ ಕರ್ನಾಟಕ ಸಮಾವೇಶ (3,4 ಮತ್ತು 5 ಫೆಬ್ರವರಿ 2016)</td><td>1202</td><td>305584</td><td>652018</td></tr>
</table></td></tr>
<tr><td>ಇ</td><td>ಸದರಿ ಬಂಡವಾಳ ಹೂಡಿಕೆ ಸಮಾವೇಶದಿಂದ ರಾಜ್ಯಕ್ಕೆ ಆದಂತಹ ಪ್ರಯೋಜನಗಳೇನು; (ವಲಯಗಳ ಜಿಲ್ಲಾವಾರು ವಿವರ ನೀಡುವುದು)</td><td>ಸದರಿ ಬಂಡವಾಳ ಹೂಡಿಕೆ ಸಮಾವೇಶಗಳಿಂದ ರಾಜ್ಯದಲ್ಲಿ 372 ಯೋಜನೆಗಳು ಅನುಷ್ಠಾನಗೊಂಡಿದ್ದು, ಒಟ್ಟು ರೂ. 129399 ಕೋಟಿ ಬಂಡವಾಳ ಹೂಡಿಕೆಯಾಗಿದೆ ಹಾಗೂ 318624 ಜನರಿಗೆ ಉದ್ಯೋಗ ಸೃಜನೆಯಾಗಿದೆ. ಉಳಿದಂತೆ, 1418 ಯೋಜನೆಗಳು ವಿವಿಧ ಅನುಷ್ಠಾನ ಹಂತಗಳಲ್ಲಿ ಅನುಷ್ಠಾನಗೊಳ್ಳುತ್ತಿದ್ದು, ಇವುಗಳಿಂದ ರೂ.556712 ಕೋಟಿ ಬಂಡವಾಳ ಹೂಡಿಕೆಯಾಗಲಿದೆ.</td></tr>
<tr><td>ಈ</td><td>ಇನ್‌ವೆಸ್ಟ್ ಕರ್ನಾಟಕ ಮುಖಾಂತರ ರಾಜ್ಯದಲ್ಲಿ ನೂತನವಾಗಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?</td><td>ಇತ್ತೀಚೆಗೆ ದಿನಾಂಕ 20 ರಿಂದ 24ನೇ ಜನವರಿ 2020 ರವರೆಗೆ ಸ್ವಿಟ್ಜರ್‌ಲ್ಯಾಂಡ್‌ನ ದಾವೋಸ್‌ನಲ್ಲಿ ನಡೆದ ವಿಶ್ವ ಆರ್ಥಿಕ ಶೃಂಗಸಭೆಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ನಿಯೋಗವು ಭಾಗವಹಿಸಿ, ಸುಮಾರು 40 ವಿಶ್ವದ ಪ್ರಮುಖ ಕೈಗಾರಿಕೋದ್ಯಮಿಗಳೊಂದಿಗೆ ಸಭೆ ನಡೆಸಿ, ಕರ್ನಾಟಕದಲ್ಲಿ ಬಂಡವಾಳ ಹೂಡಿಕೆ ಮಾಡಲು ಆಹ್ವಾನಿಸಲಾಗಿದೆ.</td></tr>
</table>

	(ವಿವರ ನೀಡುವುದು)	ದಿನಾಂಕ 14.02.2020 ರಲ್ಲಿ ಇನ್‌ವೆಸ್ಟ್ ಕರ್ನಾಟಕ-ಹುಬ್ಬಳ್ಳಿ ಸಮಾವೇಶವನ್ನು ಆಯೋಜಿಸಿ ಒಟ್ಟು 54 ಕೈಗಾರಿಕೆಗಳೊಂದಿಗೆ ಬಂಡವಾಳ ಹೂಡಿಕೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಇವುಗಳಿಂದ ರಾಜ್ಯದಲ್ಲಿ ರೂ.73,714 ಕೋಟಿ ಬಂಡವಾಳ ಹೂಡಿಕೆಯಾಗಲಿದ್ದು, 90,507 ಜನರಿಗೆ ಉದ್ಯೋಗವಕಾಶಗಳು ಸೃಜನೆಯಾಗಲಿವೆ. ಮುಂದುವರೆದು, ಬಂಡವಾಳ ಹೂಡಿಕೆದಾರರ ಸಮಾವೇಶದ ಹಿನ್ನೆಲೆಯಲ್ಲಿ ಬಂಡವಾಳ ಹೂಡಿಕೆದಾರರನ್ನು ಆಕರ್ಷಿಸಲು ಡಿಸೆಂಬರ್ 23-2019 ರಂದು ಮುಂಬೈನಲ್ಲಿ ಮತ್ತು ಡಿಸೆಂಬರ್ 29-2019 ರಲ್ಲಿ ಹೈದರಾಬಾದ್‌ನಲ್ಲಿ ರೋಡ್‌ಶೋಗಳನ್ನು ನಡೆಸಲಾಗಿದೆ. ಇದಲ್ಲದೆ, ಕರ್ನಾಟಕ ರಾಜ್ಯದಲ್ಲಿ ಹೊಸದಾಗಿ ಕೈಗಾರಿಕೆಗಳನ್ನು ಪ್ರಾರಂಭಿಸಲು ಸರ್ಕಾರವು ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ. • ಕೈಗಾರಿಕೆಗಳನ್ನು ಸ್ಥಾಪಿಸುವವರಿಗೆ ಸಹಾಯಧನ ಮತ್ತು ರಿಯಾಯಿತಿಗಳನ್ನು ನೀಡುವ ಬಗ್ಗೆ ಹೊಸ ಕೈಗಾರಿಕಾ ನೀತಿ 2020-25ನ್ನು ಹೊರತರಲಾಗಿದೆ. • ದೇಶ ವಿದೇಶಗಳ ಹಲವಾರು ಪ್ರತಿಷ್ಠಿತ ಕಂಪನಿಗಳೊಂದಿಗೆ ಕರ್ನಾಟಕದಲ್ಲಿ ಬಂಡವಾಳ ಹೂಡಲು ಸಭೆಗಳನ್ನು ಮಾನ್ಯ ಕೈಗಾರಿಕ ಸಚಿವರ/ಪ್ರಧಾನ ಕಾರ್ಯದರ್ಶಿಗಳ / ಕೈಗಾರಿಕಾಭಿವೃದ್ಧಿ ಆಯುಕ್ತರ ನೇತೃತ್ವದಲ್ಲಿ ಸರಣಿ ಸಭೆಗಳನ್ನು ವೆಬಿನಾರ್ ಮುಖಾಂತರ ನಡೆಸಲಾಗುತ್ತಿದೆ. • ಕೈಗಾರಿಕೆಗಳನ್ನು ಪ್ರಾರಂಭಿಸಲು ಬೇಕಾಗಿರುವ ಭೂಮಿ ಖರೀದಿ ಪ್ರಕ್ರಿಯೆ ಸರಳೀಕರಣಗೊಳಿಸಲಾಗಿದೆ. • ಕೈಗಾರಿಕೆಗಳನ್ನು ಪ್ರಾರಂಭಿಸಲು ಬೇಕಾಗಿರುವ ಅನುಮತಿಗಳನ್ನು ಪಡೆಯಲು 3 ವರ್ಷಗಳ ವರೆಗೆ ಸಮಯವನ್ನು ವಿಸ್ತರಿಸಿ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ 2002ಕ್ಕೆ ತಿದ್ದುಪಡಿ ತರಲಾಗಿದೆ. • ಕೈಗಾರಿಕೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಾರ್ಮಿಕರಿಗೆ ಕಾರ್ಮಿಕ ಕಾನೂನನ್ನು ಸರಳೀಕರಣಗೊಳಿಸಲಾಗಿದೆ. • ಕೈಗಾರಿಕೆಗಳನ್ನು ಶೀಘ್ರವಾಗಿ ಅಡತಡೆಗಳಿಲ್ಲದೆ, ಪ್ರಾರಂಭಿಸಲು ಈಸ್ ಆಫ್ ಡೂಯಿಂಗ್ ಬಿಸಿನೆಸ್ ಜಾರಿಗೊಳಿಸಲಾಗಿದೆ.

ಸಿಐ 245 ಎಸ್‌ಪಿಐ 2020

(ಜಗದೀಶ್ ಶೆಟ್ಟರ್)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಸಾರ್ವಜನಿಕ ಉದ್ದಿಮೆಗಳ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1691
2. ಸದಸ್ಯರ ಹೆಸರು : ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ (ಕಿತ್ತೂರು)
3. ಉತ್ತರಿಸುವ ದಿನಾಂಕ : 25.09.2020
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ.	ಕಿತ್ತೂರು ಕೈಗಾರಿಕಾ ಪ್ರದೇಶದಲ್ಲಿ ಕೈಗಾರಿಕೆಗಳನ್ನು ಆರಂಭಿಸಲು ಸರ್ಕಾರ 600 ಎಕರೆ ಜಮೀನು ಗುರುತಿಸಿರುವುದು ನಿಜವೇ;	ಹೌದು.
ಆ.	ಹಾಗಿದ್ದಲ್ಲಿ, ಇಲ್ಲಿಯವರೆಗೆ ಯಾವುದೇ ಕೈಗಾರಿಕೆ ಆರಂಭವಾಗದಿರಲು ಕಾರಣವೇನು;	ಇದುವರೆವಿಗೂ 108 ಘಟಕಗಳಿಗೆ ನಿವೇಶನ ಹಂಚಿಕೆ ಮಾಡಲಾಗಿದೆ. ಈ ಪೈಕಿ 74 ಘಟಕಗಳು ಗುತ್ತಿಗೆ ಕರಾರು ಪತ್ರವನ್ನು ಪಡೆದಿದ್ದು, ಈ ಪೈಕಿ 36 ಘಟಕಗಳು ಕಟ್ಟಡ ನಕ್ಷೆ ಅನುಮೋದನೆ ಪಡೆದಿದ್ದು, ಇದರಲ್ಲಿ 3 ಘಟಕಗಳು ಪ್ರಾರಂಭವಾಗಿದೆ. 34 ಘಟಕಗಳು ಬಾಕಿ ಹಣ ಪಾವತಿಸುವ ಹಂತದಲ್ಲಿರುತ್ತದೆ. ಗುತ್ತಿಗೆ ಕರಾರು ಪತ್ರ ಮಾಡಿಕೊಂಡ ದಿನಾಂಕದಿಂದ ಯೋಜನೆಯನ್ನು ಅನುಷ್ಠಾನಗೊಳಿಸಲು 3 ವರ್ಷಗಳ ಕಾಲಾವಕಾಶವಿರುತ್ತದೆ.

ಇ.	ಕಿತ್ತೂರಿನಲ್ಲಿ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸಲು ಸರಕಾರದ ಕ್ರಮವೇನು;	ಈ ಭಾಗದ ನಿರುದ್ಯೋಗ ಸಮಸ್ಯೆ ನಿವಾರಿಸುವಲ್ಲಿ ಮತ್ತು ಆರ್ಥಿಕ ಮಟ್ಟವನ್ನು ಸುಧಾರಿಸುವ ನಿಟ್ಟಿನಲ್ಲಿ ಬೃಹತ್ ಕೈಗಾರಿಕೆಗಳ ಸ್ಥಾಪನೆಯ ಅವಶ್ಯಕತೆ ಇರುತ್ತದೆ. ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯು ನಿವೇಶನಗಳ ಲಭ್ಯತೆಯ ಬಗ್ಗೆ ಪ್ರಚಾರ ನೀಡಲಾಗುತ್ತಿದ್ದು, ಈ ಕುರಿತು ಆಸಕ್ತ ಕೈಗಾರಿಕೋದ್ಯಮಿಗಳು ಮುಂದೆ ಬಂದಲ್ಲಿ, ಸೂಕ್ತ ಸಹಕಾರ ನೀಡಲಾಗುವುದು.
ಈ.	ಯಾವ ಕಾಲಮಿತಿಯಲ್ಲಿ ಕಿತ್ತೂರು ಕೈಗಾರಿಕಾ ಪ್ರದೇಶದಲ್ಲಿ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸಲಾಗುವುದು?	

ಸಂಖ್ಯೆ: ಸಿಐ 176 ಐಎಪಿ (ಇ) 2020

(ಜಗದೀಶ ಶೆಟ್ಟರ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ : 1694

ಸದಸ್ಯರ ಹೆಸರು : ಶ್ರೀ. ರೇವಣ್ಣ ಹೆಚ್.ಡಿ

ಉತ್ತರಿಸುವ ಸಚಿವರು : ತೋಟಗಾರಿಕೆ ಸಚಿವರು

ಉತ್ತರಿಸಬೇಕಾದ ದಿನಾಂಕ : 25.09.2020

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಹಾಸನ ಜಿಲ್ಲೆಯಲ್ಲಿ ಪ್ರಮುಖ ತೋಟಗಾರಿಕಾ ಬೆಳೆಗಳಾದ ಆಲೂಗಡ್ಡೆ, ತೆಂಗು, ಕಾಫಿ, ಮೆಣಸು, ಏಲಕ್ಕಿ, ಅಡಿಕೆ, ಶುಂಠಿ ಹಾಗೂ ಹಣ್ಣಿನ ಬೆಳೆಗಳಾದ ಮಾವು, ಬಾಳೆ, ಸಪೋಟ, ಪಪ್ಪಾಯ ಹಾಗೂ ತರಕಾರಿ ಬೆಳೆಗಳಾದ ಟಮೆಟೋ, ಹಸಿರು ಮೆಣಸಿನಕಾಯಿ, ಬೀನ್ಸ್, ಈರುಳ್ಳಿ ಇಂತಹ ಬೆಳೆಗಳನ್ನು ಸುಮಾರು ಒಂದು ಲಕ್ಷ ತೊಂಭತ್ತು ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>2018-19ನೇ ಸಾಲಿನ ಅಂಕಿ ಅಂಶಗಳನ್ವಯ ಹಾಸನ ಜಿಲ್ಲೆಯಲ್ಲಿ ಒಟ್ಟು 1,86,893 ಹೆಕ್ಟೇರ್ ತೋಟಗಾರಿಕೆ ಬೆಳೆಗಳ ಪ್ರದೇಶವಿರುತ್ತದೆ. ಪ್ರಮುಖ ಬೆಳೆಗಳ ವಿವರಗಳು ಕೆಳಕಂಡಂತಿದೆ.
<table>
<tr><th>ಬೆಳೆಗಳು</th><th>ವಿಸ್ತೀರ್ಣ (ಹೆಕ್ಟೇರ್ ಗಳಲ್ಲಿ)</th></tr>
<tr><td>ಆಲೂಗೆಡ್ಡೆ</td><td>14586</td></tr>
<tr><td>ತೆಂಗು</td><td>101906</td></tr>
<tr><td>ಮೆಣಸು</td><td>34081</td></tr>
<tr><td>ಏಲಕ್ಕಿ</td><td>4977</td></tr>
<tr><td>ಅಡಿಕೆ</td><td>7782</td></tr>
<tr><td>ಶುಂಠಿ</td><td>4066</td></tr>
<tr><td>ಮಾವು</td><td>1671</td></tr>
<tr><td>ಬಾಳೆ</td><td>2005</td></tr>
<tr><td>ಸಪೋಟ</td><td>836</td></tr>
<tr><td>ಪಪ್ಪಾಯ</td><td>120</td></tr>
<tr><td>ಟೊಮೆಟೊ</td><td>1893</td></tr>
<tr><td>ಹಸಿರು ಮೆಣಸಿನಕಾಯಿ</td><td>1592</td></tr>
<tr><td>ಬಿನ್ಸ್</td><td>1318</td></tr>
<tr><td>ಈರುಳ್ಳಿ</td><td>32</td></tr>
<tr><td>ಇತರೆ</td><td>10028</td></tr>
<tr><td>ಒಟ್ಟು</td><td>186893</td></tr>
</table>

ಅಲ್ಲದೇ ಕಾಫಿ ಬೆಳೆಯನ್ನು ತೋಟಗಾರಿಕೆ ಬೆಳೆಗೆ ಸೇರಿಸಿರುವುದಿಲ್ಲ. ಕಾಫಿ ಮಂಡಳಿಯ ವರದಿಯನ್ವಯ ಹಾಸನ ಜಿಲ್ಲೆಯಲ್ಲಿ 40,410 ಹೆಕ್ಟೇರ್ ವಿಸ್ತೀರ್ಣದಲ್ಲಿ ಕಾಫಿ ಬೆಳೆಯಲಾಗುತ್ತಿದೆ.</td></tr>
<tr><td>ಆ)</td><td>ಪ್ರಮುಖ ಬೆಳೆಯಾದ ಆಲೂಗಡ್ಡೆ ಬೆಳೆ ಅಂಗಮಾರಿ ರೋಗ ಹಾಗೂ ತೆಂಗು ಬೆಳೆ ರುಗೋಸ್ ಸ್ಪೈರಲಿಂಗ್ ವೈಟ್ ಫ್ಲೈಗೆ (ಬಿಳಿ ನೊಣ) ತುತ್ತಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗೂ ಮೇಲ್ಕಂಡ ತೋಟಗಾರಿಕೆ ಬೆಳೆಗಳು ಇತರೆ ರೋಗಗಳಿಗೆ ಪದೇ ಪದೇ ತುತ್ತಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ವರ್ಷವಾರು ವಿವರ ನೀಡುವುದು)</td><td>ತೆಂಗು ಬೆಳೆಗೆ ರುಗೋಸ್ ಸ್ಪೈರಲಿಂಗ್ ವೈಟ್ ಫ್ಲೈ (ಬಿಳಿ ನೊಣ) ಕೀಟ ಬಾದೆಯ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆ.
ಸದರಿ ಕೀಟ ಬಾದೆಯು ತೆಂಗು ಬೆಳೆಯಲ್ಲಿ ಕಳೆದ ಮೂರು ವರ್ಷಗಳಿಂದ ಕಂಡುಬಂದಿದ್ದು ಕೀಟ ಬಾದೆಯ ಬಗ್ಗೆ ಜಾಗೃತಿ ಹಾಗೂ ನಿಯಂತ್ರಣ ಕ್ರಮಗಳ ಕುರಿತು ಜಿಲ್ಲೆಗಳ ಇಲಾಖಾ ಅಧಿಕಾರಿಗಳಿಗೆ ಹಾಗೂ ರೈತರಿಗೆ ವಿಷಯ ತಜ್ಞರಿಂದ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.
ಆಲೂಗಡ್ಡೆ, ತೆಂಗು, ಕಾಫಿ, ಮೆಣಸು, ಏಲಕ್ಕಿ, ಅಡಿಕೆ, ಶುಂಠಿ ಹಾಗೂ ಹಣ್ಣಿನ ಬೆಳೆಗಳಾದ ಮಾವು, ಬಾಳೆ, ಸಪೋಟ, ಪಪ್ಪಾಯ ಹಾಗೂ ತರಕಾರಿ ಬೆಳೆಗಳಾದ ಟೊಮೆಟೋ, ಹಸಿರು ಮೆಣಸಿನಕಾಯಿ, ಬೀನ್ಸ್, ಈರುಳ್ಳಿ ಇತ್ಯಾದಿ ಬೆಳೆಗಳು ಇತರೇ ರೋಗಗಳಿಗೆ ಪದೇ ಪದೇ ತುತ್ತಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.</td></tr>
</table>

- ಆಲೂಗಡ್ಡೆ ಬೆಳೆಯಲ್ಲಿ ಮೊದಲ ಹಂತದ ಅಂಗಮಾರಿ ರೋಗ, ಕೊನೆಯ ಹಂತದ ಅಂಗಮಾರಿ ರೋಗ, ದುಂಡಾಣು ಕೊಳೆ ರೋಗ, ತೆಂಗು ಬೆಳೆಯಲ್ಲಿ ಕಾಂಡ ಸೋರುವ ರೋಗ, ಅಣಬೆ ರೋಗ, ಕಣ್ಣು ಕೊಳೆ ರೋಗ, ಕಾಫಿ ಬೆಳೆಯಲ್ಲಿ ತುಕ್ಕು ರೋಗ, ಕಾಳುಮೆಣಸಿನಲ್ಲಿ ಸೊರಗು ರೋಗ, ಏಲಕ್ಕಿ ಬೆಳೆಯಲ್ಲಿ ಕಟ್ಟೆ ರೋಗ, ಅಡಿಕೆ ಬೆಳೆಯಲ್ಲಿ ಪ್ರಮುಖವಾಗಿ ಕೊಳೆರೋಗ, ಹಳದಿ ಎಲೆ ರೋಗ, ಶುಂಠಿ ಬೆಳೆಯಲ್ಲಿ ಎಲೆ ಚುಕ್ಕೆ ರೋಗ, ಹಾಗೂ
- ಹಣ್ಣಿನ ಬೆಳೆಗಳಾದ ಮಾವು ಬೆಳೆಯಲ್ಲಿ ಬೂದಿ ರೋಗ, ಡೈಬ್ಯಾಕ್ ಹಾಗೂ ಆಂತ್ರಾಕ್ನೋಸ್, ಬಾಳೆಯಲ್ಲಿ ಪನಾಮಾ ಸೊರಗು ರೋಗ, ಸಪೋಟ ಬೆಳೆಯಲ್ಲಿ ಎಲೆ ಚುಕ್ಕೆ ರೋಗ, ಪಪ್ಪಾಯ ಬೆಳೆಯಲ್ಲಿ ಬುಡಕೊಳೆ ರೋಗ, ಚಿಬ್ಬು ರೋಗ, ಉಂಗುರ ಚುಕ್ಕೆ ಮೊಸಾಯಿಕ್ ನಂಜು ರೋಗ ಹಾಗೂ
- ತರಕಾರಿ ಬೆಳೆಗಳಾದ ಟಮಟೋ ಬೆಳೆಯಲ್ಲಿ ಎಲೆ ಮುಟರು ರೋಗ, ಎಲೆ ಚುಕ್ಕೆ ರೋಗ, ಬೂದಿ ರೋಗ, ಹಸಿರು ಮೆಣಸಿನಕಾಯಿ ಬೆಳೆಯಲ್ಲಿ ಸಸಿ ಕೊಳೆ ರೋಗ, ಎಲೆ ಚುಕ್ಕೆ ರೋಗ, ಹಣ್ಣು ಕೊಳೆ ರೋಗ, ಬೀನ್ಸ್ ನಲ್ಲಿ ಹಳದಿ ನಂಜು ರೋಗ, ಚಿಬ್ಬು ರೋಗ, ಕಾಯಿ ಕೊಳೆ ರೋಗ, ಈರುಳ್ಳಿ ಬೆಳೆಯಲ್ಲಿ ಕಾಡಿಗೆ ರೋಗ, ನೇರಳೆ ಎಲೆ ಚುಕ್ಕೆ ರೋಗ, ಆಲ್ಟ್ರೇನೇರಿಯಾ ಬ್ಲೈಟ್ ರೋಗಗಳು ಕಂಡುಬಂದಿದ್ದು ಸರ್ಕಾರದಿಂದ ರೋಗ ನಿಯಂತ್ರಣಕ್ಕಾಗಿ ಪ್ರತೀ ವರ್ಷ ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.
- ತೋಟಗಾರಿಕೆ ಬೆಳೆಗಳಲ್ಲಿ ರೋಗ ನಿಯಂತ್ರಣ ಕುರಿತು ರೈತರಿಗೆ ಸಭೆಗಳು, ತರಬೇತಿಗಳು ಹಾಗೂ ಕರಪತ್ರಗಳನ್ನು ಹಂಚುವ ಮೂಲಕ ತಾಂತ್ರಿಕ ಮಾಹಿತಿ ನೀಡುವುದು.
- ಜಿಲ್ಲಾವಲಯ ರೈತರಿಗೆ ಸಹಾಯ ಯೋಜನೆಯಲ್ಲಿ ಸಸ್ಯಸಂರಕ್ಷಣಾ ಔಷದಿ ಖರೀದಿಗೆ ಶೇ. 50% ರಷ್ಟು ಸಹಾಯಧನವನ್ನು ನೀಡಲಾಗುತ್ತಿದೆ.
- ರಾಜ್ಯವಲಯ ತೋಟಗಾರಿಕೆ ಬೆಳೆಗಳ ಕೀಟ & ರೋಗಗಳ ಸಮಗ್ರ ನಿಯಂತ್ರಣ ಯೋಜನೆ ಯಲ್ಲಿ ಸಸ್ಯಸಂರಕ್ಷಣಾ ಔಷದಿ ಖರೀದಿಗೆ ಶೇ. 75% ರಷ್ಟು ಸಾಮಾನ್ಯ ವರ್ಗದವರಿಗೆ ಹಾಗೂ ಶೇ. 90% ರಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸಹಾಯಧನವನ್ನು ನೀಡಲಾಗುತ್ತಿದೆ.
- ಕೇಂದ್ರ ವಲಯ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಲ್ಲಿ ಸಮಗ್ರ ಕೀಟ & ರೋಗಗಳ ನಿಯಂತ್ರಣಕ್ಕೆ ಶೇ. 30% ರಷ್ಟು ಸಹಾಯಧನವನ್ನು ನೀಡಲಾಗುತ್ತಿದೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1700
ಸದಸ್ಯರ ಹೆಸರು	:	ಡಾ|| ಪರಮೇಶ್ವರ್. ಜಿ (ಕೊರಟಗೆರೆ)
ಉತ್ತರಿಸಬೇಕಾದ ದಿನಾಂಕ	:	25-09-2020
ಉತ್ತರಿಸುವ ಸಚಿವರು	:	ಮಾನ್ಯ ನಗರಾಭಿವೃದ್ಧಿ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ	ತುಮಕೂರು ನಗರದಲ್ಲಿ ಸ್ಮಾರ್ಟ್ ಸಿಟಿ ಯೋಜನೆ ಆರಂಭಗೊಂಡಿದ್ದು ಯಾವಾಗ;	ತುಮಕೂರು ನಗರವು ಸ್ಮಾರ್ಟ್ ಸಿಟಿ ಯೋಜನೆಯಡಿ ಅಕ್ಟೋಬರ್-2016 ರಂದು ಆಯ್ಕೆಯಾಗಿರುತ್ತದೆ. ಯೋಜನೆಯ ಅನುಷ್ಠಾನಕ್ಕಾಗಿ ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಎಂಬ ವಿಶೇಷ ಉದ್ದೇಶಿತ ವಾಹನ (SPV) ವನ್ನು ಸ್ಥಾಪಿಸಲಾಗಿರುತ್ತದೆ.
ಆ	ಯೋಜನೆಯು ಮಂದಗತಿಯಲ್ಲಿ ನಡೆಯುತ್ತಿರುವುದರಿಂದ ಸಾರ್ವಜನಿಕರು ಪ್ರತಿನಿತ್ಯ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿದೆ. ಸದರಿ ಯೋಜನೆಯಡಿ ಪ್ರಮುಖವಾಗಿ ಸ್ಮಾರ್ಟ್ ರಸ್ತೆಗಳ ಅಭಿವೃದ್ಧಿ, ಒಳಚರಂಡಿ ಹಾಗೂ ಇನ್ನಿತರೆ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದ್ದು, ಸದರಿ ಯೋಜನೆಗಳನ್ನು ನಗರದ ಜನನಿಬಿಡ ಪ್ರದೇಶಗಳಲ್ಲಿ ಅನುಷ್ಠಾನ-ಗೊಳಿಸಬೇಕಾಗಿರುತ್ತದೆ, ಅಲ್ಲದೇ ಈ ಯೋಜನೆಗಳಲ್ಲಿ ಬೆಸ್ಕಾಂ, ಬಿಎಸ್‌ಎನ್‌ಎಲ್, ನೀರು ಸರಬರಾಜು ಮಂಡಳಿ ಹಾಗೂ ಇತರೆ ಇಲಾಖೆಗಳ ಯುಟಿಲಿಟಿ ಶಿಫ್ಟಿಂಗ್ ಅವಶ್ಯಕತೆಯಿದ್ದು, ಇದರಿಂದ ಕಾಮಗಾರಿಗಳ ಅನುಷ್ಠಾನದಲ್ಲಿ ಹೆಚ್ಚಿನ ಸಮಯದ ಅವಶ್ಯಕತೆ ಇರುತ್ತದೆ. ಸ್ಮಾರ್ಟ್ ಸಿಟಿ ಕಾಮಗಾರಿಗಳನ್ನು ಬಹುತೇಕ ಈಗಾಗಲೇ ಅಭಿವೃದ್ಧಿ ಹೊಂದಿರುವ ಪ್ರದೇಶದಲ್ಲಿ ಕೈಗೊಳ್ಳುತ್ತಿರುವುದರಿಂದ ಈಗಾಗಲೇ ಈ ಪ್ರದೇಶದಲ್ಲಿನ ನೀರು ಸರಬರಾಜು, ಒಳಚರಂಡಿ, ವಿದ್ಯುತ್ ಹಾಗೂ ಟೆಲಿಕಾಂ ಕೇಬಲ್, ಗ್ಯಾಸ್ ಲೈನ್ ಮುಂತಾದ ಅನೇಕ ಉಪಯುಕ್ತತೆಗಳಿದ್ದು (Utilities) ಇವುಗಳನ್ನು ಯಾವುದೇ ಹಾನಿ ಇಲ್ಲದೆ ಸ್ಥಳಾಂತರಿಸುವುದು ಮುಂತಾದ ಚಟುವಟಿಕೆಗಳಿಂದ ರಸ್ತೆ ಕಾಮಗಾರಿಗಳಲ್ಲಿ ಸ್ವಲ್ಪ ಮಟ್ಟಿನ ವಿಳಂಬವಾಗಿದೆ. ಮುಂದುವರೆದು, ಕಳೆದ ವರ್ಷ ಮತ್ತು ಪ್ರಸ್ತುತ ವರ್ಷದಲ್ಲಿ ಹೆಚ್ಚಾದ ಮಳೆಯ ಸನ್ನಿವೇಶದಿಂದ ಮತ್ತು ಪ್ರಸ್ತುತ ವರ್ಷದಲ್ಲಿ ಕೋವಿಡ್-19 ಸಮಯದಲ್ಲಿ ಯೋಜನೆಯ ಅನುಷ್ಠಾನವು ಕುಂಠಿತಗೊಂಡಿದ್ದು, ಯೋಜನೆಗಳನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸಲು ಸಾಧ್ಯವಾಗಿರುವುದಿಲ್ಲ. ಯೋಜನೆಯ ಪ್ರಗತಿಯನ್ನು ಶೀಘ್ರಗತಿಯಲ್ಲಿ ಮುಂದುವರಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಸಮನ್ವಯ ಸಮಿತಿ

		ಸಭೆಯಲ್ಲಿ ಚರ್ಚಿಸಿ ನಿಗದಿತಕಾಲಾವಧಿಯನ್ನು ನಿಗದಿಪಡಿಸಿ, ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಮತ್ತು ಯೋಜನಾ ಸಲಹೆಗಾರರ ತಂಡದ ಅಭಿಯಂತರರ ಮೂಲಕ ಮೇಲುಸ್ತುವಾರಿಯನ್ನು ತೆಗೆದುಕೊಂಡು ಯೋಜನೆಗಳ ಅನುಷ್ಠಾನವನ್ನು ತ್ವರಿತಗೊಳಿಸಲಾಗುತ್ತಿದೆ.
ಇ	ಸದರಿ ಯೋಜನೆಯಡಿಯಲ್ಲಿನ ಕಾಮಗಾರಿಗಳು ಸಂಪೂರ್ಣವಾಗಿ ಮುಗಿಯಲು ಬೇಕಾಗುವ ಕಾಲಾವಧಿ ಎಷ್ಟು:	ಕೇಂದ್ರ ಸರ್ಕಾರದ ಸ್ಮಾರ್ಟ್ ಸಿಟಿ ಮಿಷನ್ ಮಾರ್ಗಸೂಚಿಗಳನ್ವಯ ಸ್ಮಾರ್ಟ್ ಸಿಟಿ ಅಭಿಯಾನವನ್ನು 5 ವರ್ಷಗಳ ಕಾಲಮಿತಿಯಲ್ಲಿ ಅನುಷ್ಠಾನಗೊಳಿಸಲು ನಿರ್ದೇಶನವಿರುತ್ತದೆ. ಅದರಂತೆ, ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ವಿಶೇಷ ಉದ್ದೇಶಿತ ವಾಹನವು ದಿನಾಂಕ:06.02.2017ರಂದು ಸ್ಥಾಪಿತಗೊಂಡಿದ್ದು, ಸ್ಮಾರ್ಟ್ ಸಿಟಿ ಮಿಷನ್ ಅಡಿಯಲ್ಲಿ ಹಮ್ಮಿಕೊಂಡಿರುವ ಯೋಜನೆಗಳನ್ನು ಫೆಬ್ರುವರಿ 2022 ರ ಅಂತ್ಯಕ್ಕೆ ಮುಕ್ತಾಯಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
ಈ	ಸದರಿ ಯೋಜನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇಲ್ಲಿಯವರೆಗೆ ಬಿಡುಗಡೆ ಮಾಡಿದ ಅನುದಾನ ಎಷ್ಟು?	ಸದರಿ ಯೋಜನೆಗೆ ಕೇಂದ್ರ ಸರ್ಕಾರದಿಂದ ರೂ.245.00 ಕೋಟಿ ಮತ್ತು ರಾಜ್ಯ ಸರ್ಕಾರದಿಂದ ರೂ.111.00 ಕೋಟಿ ಒಟ್ಟು ರೂ.356.00 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಸಂಖ್ಯೆ:ನಅಇ 271 ಸಿಎಸ್ಎಸ್ 2020

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1701
ವಿಧಾನ ಸಭೆ ಸದಸ್ಯರ ಹೆಸರು	:	ಶ್ರೀ ಪರಮೇಶ್ವರ್ ಜಿ. ಡಾ|| (ಕೊರಟಗೆರೆ)
ಉತ್ತರಿಸಬೇಕಾದ ದಿನಾಂಕ	:	25.09.2020
ಉತ್ತರಿಸುವ ಸಚಿವರು	:	ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದಲ್ಲಿ ಪ್ರಸ್ತುತ ಎಷ್ಟು ನ್ಯಾಯಬೆಲೆ ಅಂಗಡಿಗಳು ಕಾರ್ಯ ನಿರ್ವಹಿಸುತ್ತಿವೆ;</td><td>ಪ್ರಸ್ತುತ ರಾಜ್ಯದಲ್ಲಿ ಒಟ್ಟು 19,962 ನ್ಯಾಯಬೆಲೆ ಅಂಗಡಿಗಳು ಕಾರ್ಯ ನಿರ್ವಹಿಸುತ್ತಿವೆ.</td></tr>
<tr><td>ಆ</td><td>ಇವುಗಳಿಂದ ಪ್ರತಿ ತಿಂಗಳು ಎಷ್ಟು ಜನರಿಗೆ ಮತ್ತು ಎಷ್ಟು ಪ್ರಮಾಣದ ಪಡಿತರ ಧಾನ್ಯಗಳನ್ನು ವಿತರಣೆ ಮಾಡಲಾಗುತ್ತಿದೆ;</td><td>
<table>
<tr><th>ಪಡಿತರ ಚೀಟಿ</th><th>ಪಡಿತರ ಚೀಟಿಗಳ ಸಂಖ್ಯೆ</th><th>ಫಲಾನುಭವಿಗಳು</th></tr>
<tr><td>ಅಂತ್ಯೋದಯ ಅನ್ನ ಯೋಜನೆ (ಎಎವೈ)</td><td>10,93,702</td><td>46,16,040</td></tr>
<tr><td>ಆದ್ಯತಾ (ಬಿಪಿಎಲ್)</td><td>1,16,67,540</td><td>3,87,07,332</td></tr>
<tr><td>ಆದ್ಯತೇತರ (ಎಪಿಎಲ್)</td><td>20,79,787</td><td>73,60,898</td></tr>
<tr><td>ಒಟ್ಟು</td><td>1,48,41,029</td><td>5,06,84,270</td></tr>
</table>
ಪ್ರತಿ ಮಾಹೆ ಪ್ರತಿ ಎಎವೈ ಪಡಿತರ ಚೀಟಿಗೆ 35 ಕೆ.ಜಿ. ಅಕ್ಕಿ ಮತ್ತು ಪ್ರತಿ ಆದ್ಯತಾ ಕುಟುಂಬ ಫಲಾನುಭವಿಗೆ 5 ಕೆ.ಜಿ. ಅಕ್ಕಿಯನ್ನು ಹಂಚಿಕೆ ಮಾಡಲಾಗುತ್ತಿದೆ. ಇದಲ್ಲದೆ ರಾಜ್ಯದ ವತಿಯಿಂದ ಆದ್ಯತಾ ಕುಟುಂಬಗಳಿಗೆ ಪ್ರತಿ ಮಾಹೆ 2 ಕೆ.ಜಿ. ಗೋಧಿ ವಿತರಿಸಲಾಗುತ್ತಿದೆ. ಹಾಗೂ ಆದ್ಯತೇತರ ಪಡಿತರ ಚೀಟಿಯ ಒಬ್ಬ ಸದಸ್ಯರಿರುವ ಪಡಿತರ ಚೀಟಿಗೆ 5 ಕೆ.ಜಿ ಅಕ್ಕಿ ಹಾಗೂ 2 ಅಥವಾ ಹೆಚ್ಚಿನ ಸದಸ್ಯರಿರುವ ಪಡಿತರ ಚೀಟಿಗೆ 10 ಕೆ.ಜಿ ಅಕ್ಕಿಯನ್ನು ರೂ. 15 /- ಸಬ್ಸಿಡಿ ದರದಲ್ಲಿ ನೀಡಲಾಗುತ್ತಿದೆ.</td></tr>
<tr><td>ಇ</td><td>ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ನ್ಯಾಯಬೆಲೆ ಅಂಗಡಿಗಳಿಗೆ ನೀಡಲಾಗುತ್ತಿರುವ ಕಮೀಷನ್ ದರ ಎಷ್ಟು; ಮತ್ತು ಪ್ರತಿ ತಿಂಗಳು ಸಕಾಲಕ್ಕೆ ಕಮೀಷನ್ ಹಣವನ್ನು ಪಾವತಿ ಮಾಡಲಾಗುತ್ತಿದೆಯೇ;</td><td>ನ್ಯಾಯಬೆಲೆ ಅಂಗಡಿಗಳಿಗೆ ಪ್ರಸ್ತುತ ಪ್ರತಿ ಕ್ವಿಂಟಾಲ್‌ಗೆ ರೂ.100/- ರಂತೆ ಚಿಲ್ಲರೆ ಲಾಭಾಂಶ ನೀಡಲಾಗುತ್ತಿದೆ. ನ್ಯಾಯಬೆಲೆ ಅಂಗಡಿಗಳ ಕಮಿಷನ್ ಹಣವನ್ನು ಸಗಟು ಮಳಿಗೆಗಳಲ್ಲಿ ಹಣ ಪಾವತಿಸಿ ಪಡಿತರ ಎತ್ತುವಳಿ ಮಾಡುವ ಸಂದರ್ಭದಲ್ಲಿ ಕಡಿತಗೊಳಿಸಲಾಗುತ್ತಿದೆ ಹಾಗೂ ನ್ಯಾಯಬೆಲೆ ಅಂಗಡಿಗಳಿಗೆ ಈ ರೀತಿ ಕಡಿತಗೊಳಿಸಿದ ನಂತರವೂ ಪಾವತಿಸಬೇಕಾದ ಹೆಚ್ಚುವರಿ ಮೊತ್ತವನ್ನು ಪ್ರತ್ಯೇಕವಾಗಿ ಬಿಲ್ ಮಾಡಿ ಪಾವತಿಸಲಾಗುತ್ತಿದೆ.</td></tr>
</table>

ಈ	ಇಲ್ಲದಿದ್ದಲ್ಲಿ, ಪಾವತಿ ಮಾಡಬೇಕಾಗಿರುವ ಕಮೀಷನ್ ಹಣ ಎಷ್ಟು; ಮತ್ತು ಯಾವಾಗ ಪಾವತಿ ಮಾಡಲಾಗುವುದು;	2019-20ನೇ ಸಾಲಿಗೆ ಸಂಬಂಧಿಸಿದಂತೆ ಬಾಕಿ ಲಾಭಾಂಶದ ಮೊತ್ತ ರೂ.30.57 ಕೋಟಿಗಳಾಗಿರುತ್ತದೆ. 2020-21ನೇ ಸಾಲಿನಲ್ಲಿ ಚಿಲ್ಲರೆ ಲಾಭಾಂಶ ಪಾವತಿಗಾಗಿ ಆಗಸ್ಟ್ 2020 ರ ಮಾಹೆಯವರೆಗೆ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.
ಉ	ಕೊರೋನಾ ಸಂಕಷ್ಟದ ಸಮಯದಲ್ಲಿ ಕೆಲಸ ನಿರ್ವಹಿಸಿದ ವಾರಿಯರ್ಸ್ ಗಳಿಗೆ ವಿಮಾ ಸೌಲಭ್ಯ ಕಲ್ಪಿಸಿರುವ ರೀತಿಯಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ಕರ್ತವ್ಯ ನಿರ್ವಹಿಸಿದ ನ್ಯಾಯಬೆಲೆ ಅಂಗಡಿಯವರಿಗೂ ವಿಮಾ ಸೌಲಭ್ಯ ಒದಗಿಸುವ ಪ್ರಸ್ತಾವನೆ ಸರ್ಕಾರದ ಮುಂದೆಯೇ;	ಪರಿಶೀಲನೆಯಲ್ಲಿದೆ.

ಆನಾಸ 266 ಡಿಆರ್‌ಎ 2020 (ಇ-ಆಫೀಸ್)

(ಕೆ.ಗೋಪಾಲಯ್ಯ)

ಆಹಾರ, ನಾಗರಿಕ ಸರಬರಾಜು ಮತ್ತು

ಗ್ರಾಹಕರ ವ್ಯವಹಾರಗಳ ಹಾಗೂ

ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರು : ಶ್ರೀ ಸಿದ್ದು ಸವದಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1708

ಉತ್ತರಿಸಬೇಕಾದ ದಿನಾಂಕ : 25.09.2020

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಸಾಲ ಮನ್ನಾ ಸೌಲಭ್ಯ ಪಡೆದುಕೊಂಡ ರೈತರ ಸಂಖ್ಯೆ ಎಷ್ಟು; ಸಾಲ ಮನ್ನಾ ಪಡೆಯದೆಯಿರುವ ರೈತರ ಸಂಖ್ಯೆ ಎಷ್ಟು; ಯಾವ ಕಾರಣದಿಂದ ಉಳಿದ ರೈತರುಗಳಿಗೆ ಸಾಲ ಮನ್ನಾ ಮಾಡಿರುವುದಿಲ್ಲ ಮತ್ತು ಯಾವಾಗ ಸಾಲ ಮನ್ನಾ ಮಾಡಲಾಗುವುದು;</td><td>
ಸಹಕಾರ ಸಂಘಗಳಲ್ಲಿನ ರೂ.1.00 ಲಕ್ಷಗಳ ಸಾಲ ಮನ್ನಾ ಯೋಜನೆಯಲ್ಲಿ 16.41 ಲಕ್ಷ ರೈತರು ಸಾಲ ಮನ್ನಾ ಸೌಲಭ್ಯ ಪಡೆದಿರುತ್ತಾರೆ.
ಇನ್ನೂ 1.70 ಲಕ್ಷ ರೈತರ ಸಾಲ ಮನ್ನಾ ಗುರುತಿಸಲು ಬಾಕಿ ಇದ್ದು, ಬಾಕಿ ಇರಲು ಕಾರಣಗಳು ಈ ಕೆಳಗಿನಂತಿರುತ್ತವೆ.
<table>
<tr><th>ಕ್ರ.ಸಂ.</th><th>ಅರ್ಹತೆ ಗುರುತಿಸುವುದಕ್ಕೆ ಬಾಕಿ ಇರಲು ಕಾರಣಗಳು</th><th>ರೈತರ ಸಂಖ್ಯೆ</th></tr>
<tr><td>1</td><td>ರೈತರ ದಾಖಲೆಗಳು ಸರಿ ಇದ್ದು, ಕುಟುಂಬಕ್ಕೆ ರೂ.1 ಲಕ್ಷಗಳು ಮೀರಿರುವ ಮತ್ತು ಎರಡು ಸಹಕಾರ ಸಂಘಗಳಲ್ಲಿ ಸಾಲ ಪಡೆದಿರುವ ರೈತರ ವಿವರ</td><td>45137</td></tr>
<tr><td>2</td><td>ಆಧಾರ್ ಕಾರ್ಡ್, ಆರ್‌ಟಿಸಿ ಮತ್ತು ರೇಷನ್ ಕಾರ್ಡ್ ತಪ್ಪಾಗಿ ನೀಡಿರುವುದರಿಂದ ಅರ್ಹತೆ ಗುರುತಿಸಲು ಬಾಕಿ ಇರುವ ರೈತರ ಸಂಖ್ಯೆ</td><td>23361</td></tr>
<tr><td>3</td><td>ತಾಲ್ಲೂಕು ಮಟ್ಟದ ಸಮಿತಿಯಲ್ಲಿ ತಿರಸ್ಕರಿಸಿದ ರೈತರ ಸಂಖ್ಯೆ</td><td>6893</td></tr>
<tr><td>4</td><td>ರೂ.1.00 ಲಕ್ಷಕ್ಕಿಂತ ಹೆಚ್ಚಿನ ಅಸಲು ಮತ್ತು ಸುಸ್ತಿ ಬಡ್ಡಿ ಪಾವತಿಸಲು ವಿಫಲವಾಗಿರುವುದರಿಂದ ಅರ್ಹತೆ ಹೊಂದದೆ ಇರುವ ರೈತರ ಸಂಖ್ಯೆ</td><td>7311</td></tr>
<tr><td>5</td><td>ಬ್ಯಾಂಕಿನ ಮತ್ತು ಇಲಾಖಾ ಅಧಿಕಾರಿಗಳು ಪರಿಶೀಲಿಸಲು ಬಾಕಿ ಇರುವ & ರೈತರು ನೀಡಿರುವ ದಾಖಲೆಗಳನ್ನು ತಂತ್ರಾಂಶದಲ್ಲಿ ಅಳವಡಿಸದೇ ಇರುವ ರೈತರ ಸಂಖ್ಯೆ</td><td>9835</td></tr>
<tr><td>6</td><td>ಆದಾಯ ತೆರಿಗೆ ಪಾವತಿದಾರರು, ವೇತನದಾರರು ಮತ್ತು ಪಿಂಚಣಿದಾರರಾಗಿರುವುದರಿಂದ ಮತ್ತು ಇತರೆ ಕಾರಣಗಳಿಗೆ ಅರ್ಹತೆ ಹೊಂದದೆ ಇರುವ ರೈತರ ಸಂಖ್ಯೆ</td><td>9920</td></tr>
<tr><td>7</td><td>ರೈತರು ಪಡಿತರ ಚೀಟಿಯನ್ನು ಹೊಸದಾಗಿ ಪಡೆದಿದ್ದು, ಕುಟುಂಬದಲ್ಲಿ ಒಬ್ಬನೇ ಸದಸ್ಯನಿರುವ ರೈತರ ವಿವರ</td><td>68032</td></tr>
<tr><td></td><td>ಬಾಕಿ ಉಳಿದ ಒಟ್ಟು ಅರ್ಜಿಗಳು</td><td>170489</td></tr>
</table>
ಈ ಬಗ್ಗೆ ದಿನಾಂಕ: 18-09-2020 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ ರವರು ಕಾರ್ಯದರ್ಶಿ, ಡಿಪಿಎಆರ್ ಹಾಗೂ ಬೆಳೆ ಸಾಲಮನ್ನಾ ವಿಶೇಷ ಕೋಶ ಮತ್ತು ಇಲಾಖಾ ಅಧಿಕಾರಿಗಳೊಂದಿಗೆ ಸಭೆ ಜರುಗಿಸಿದ್ದು, ಇನ್ನೂ ಅರ್ಹತೆ ಬರದೇ ಇರುವ ರೈತರ ದಾಖಲಾತಿಗಳನ್ನು ತಾಲ್ಲೂಕು ಮಟ್ಟದ ಸಮಿತಿಯಲ್ಲಿ ಗುರುತಿಸಲು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲು ತೀರ್ಮಾನಿಸಲಾಗಿದ್ದು, ಶೀಘ್ರದಲ್ಲೇ ಸಾಲ ಮನ್ನಾ ಪೂರ್ಣಗೊಳಿಸಲು ಕ್ರಮ
</td></tr>
</table>

		ಜರುಗಿಸಲಾಗುತ್ತಿದೆ.
ಆ)	ಇಲ್ಲಿಯವರೆಗೆ ಸದರಿ ಯೋಜನೆಗೆ ಖರ್ಚಾದ ಹಣವೆಷ್ಟು:	ಇಲ್ಲಿಯವರೆಗೂ **ರೂ.7637.32 ಕೋಟಿ** ಮೊತ್ತದ ಸಾಲ ಮನ್ನಾ ಅನುದಾನವನ್ನು ರೈತರಿಗೆ ಬಿಡುಗಡೆ ಮಾಡಲಾಗಿದೆ.
ಇ)	ರಾಜ್ಯದಿಂದ ರೈತ ಸಮ್ಮಾನ್ ಯೋಜನೆಯಡಿಯಲ್ಲಿ ಎಷ್ಟು ರೈತರಿಗೆ ಹಣ ಸಂದಾಯವಾಗಿದೆ: ಇನ್ನೂ ಎಷ್ಟು ರೈತರಿಗೆ ಹಣ ಸಂದಾಯವಾಗಬೇಕಿದೆ: ಬಾಕಿ ಉಳಿದವರಿಗೆ ಯಾವಾಗ ಹಣ ಬಿಡುಗಡೆಗೊಳಿಸಲಾಗುವುದು? (ವಿವರ ನೀಡುವುದು)	ಕೇಂದ್ರ ಸರ್ಕಾರದ ಪಿ.ಎಂ.ಕಿಸಾನ್ ಯೋಜನೆಯ ಅರ್ಹ ರೈತರಿಗೆ ದಿನಾಂಕ:14.08.2019 ರಿಂದ ರಾಜ್ಯ ಸರ್ಕಾರ ಹೆಚ್ಚುವರಿಯಾಗಿ ರೂ.4000/-ಗಳ ಆರ್ಥಿಕ ನೆರವನ್ನು ಎರಡು ಕಂತುಗಳಲ್ಲಿ **ಪಿ.ಎಂ.ಕಿಸಾನ್-ಕರ್ನಾಟಕ** ಯೋಜನೆಯಡಿ ನೀಡುತ್ತಿದೆ. ಪಿ.ಎಂ ಕಿಸಾನ್ ಕರ್ನಾಟಕ ಯೋಜನೆಯಡಿ ಸರ್ಕಾರದ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 195 ವೆಚ್ಚ-4/2020 ದಿನಾಂಕ:15.06.2020 ರನ್ವಯ 5109426 ಫಲಾನುಭವಿಗಳಿಗೆ ಆರ್ಥಿಕ ನೆರವು ವರ್ಗಾವಣೆ ಮಾಡಬೇಕಿದ್ದು, ಇಲ್ಲಿಯವರೆಗೆ ಒಟ್ಟು 5060195 ರೈತರಿಗೆ 1012.03 ಕೋಟಿಗಳ ಆರ್ಥಿಕ ನೆರವು ವರ್ಗಾವಣೆ ಅನುಮೋದನೆ ನೀಡಲಾಗಿರುತ್ತದೆ. ಬಾಕಿ ಉಳಿದ 49231 ರೈತರಿಗೆ ಆರ್ಥಿಕ ನೆರವು ವರ್ಗಾವಣೆ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಸಂಖ್ಯೆ: ಸಿಒ 349 ಸಿಎಲ್‌ಎಸ್ 2020

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1709
ಸದಸ್ಯರ ಹೆಸರು	ಶ್ರೀ. ಮಹದೇವ ಕೆ. (ಪಿರಿಯಾಪಟ್ಟಣ)
ಉತ್ತರಿಸಬೇಕಾದ ದಿನಾಂಕ	25.09.2020
ಉತ್ತರಿಸುವವರು	ಮಾನ್ಯ ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಪಿರಿಯಾಪಟ್ಟಣ ಪುರಸಭೆಯ ವ್ಯಾಪ್ತಿಯ ಬಡಾವಣೆಗಳಲ್ಲಿ ಇ-ಆಸ್ತಿಗೆ ಒಳಪಟ್ಟಿರುವ ಹಾಗೂ ಒಳಪಡದಿರುವ ನಿವೇಶನಗಳೆಷ್ಟು; (ವಿವರ ನೀಡುವುದು)	ಪಿರಿಯಾಪಟ್ಟಣ ಪುರಸಭಾ ವ್ಯಾಪ್ತಿಯ ಬಡಾವಣೆಗಳಲ್ಲಿ 2554 ನಿವೇಶನಗಳು ಇ-ಆಸ್ತಿಗೆ ಒಳಪಟ್ಟಿರುತ್ತವೆ ಹಾಗೂ 1982 ನಿವೇಶನಗಳು ಇ-ಆಸ್ತಿಗೆ ಒಳಪಟ್ಟಿರುವುದಿಲ್ಲ.
ಆ)	ಪುರಸಭೆಯ ಬಡಾವಣೆ ವ್ಯಾಪ್ತಿಯ ನಿವೇಶನಗಳನ್ನು ಇದುವರೆವಿಗೆ ಇ ಸ್ವತ್ತುಗಳಿಗಾಗಿ ಒಳಪಡಿಸದಿರಲು ಕಾರಣವೇನು;	ಪಿರಿಯಾಪಟ್ಟಣ ಪಟ್ಟಣ ಪಂಚಾಯಿತಿಯು ಸರ್ಕಾರದ ಆದೇಶ ಸಂಖ್ಯೆ: ನಅಇ 132 ಎಂಎಲ್‌ಆರ್ 2014, ಬೆಂಗಳೂರು ದಿನಾಂಕ: 15.05.2015ರಂತೆ ಪುರಸಭೆಯಾಗಿ 2015ರಲ್ಲಿ ಮೇಲ್ದರ್ಜೆಗೇರಿಸಲಾಗಿರುತ್ತದೆ ಹಾಗೂ ಈ ಹಿಂದೆ ಪಟ್ಟಣ ಪಂಚಾಯಿತಿಯಾಗಿದ್ದ ಸಂದರ್ಭದಲ್ಲಿ ಆಸ್ತಿಗಳ ಸರ್ವೆಯನ್ನು ಮಾಡಿ ಪಿಐಡಿ ಗಳನ್ನು ನೀಡಲಾಗಿರುತ್ತದೆ. ಸದರಿ ಆಸ್ತಿಗಳಿಗೆ ಇ-ಆಸ್ತಿ ತಂತ್ರಾಂಶದ ಮೂಲಕ ಹೆಚ್ಚಿನ ಮಾಹಿತಿಯನ್ನು ದಾಖಲಿಸಿ ನಮೂನೆ-3 ರನ್ನು ಸೃಜನೆ ಮಾಡಬೇಕಿರುತ್ತದೆ. ಆಸ್ತಿಗಳ ಸರ್ವೆಯಾದ ನಂತರ ಹೊಸದಾಗಿ ಸೇರ್ಪಡೆಗೊಂಡಿರುವ ಬಡಾವಣೆಗಳನ್ನು / ಆಸ್ತಿಗಳನ್ನು ಇ-ಆಸ್ತಿ ತಂತ್ರಾಂಶದಲ್ಲಿ ಸೇರ್ಪಡೆಗೊಳಿಸಲು ಅವಕಾಶವಿರುತ್ತದೆ. ಪಟ್ಟಣ ಪಂಚಾಯಿತಿಯು ಪುರಸಭೆಯಾಗಿ ಮೇಲ್ದರ್ಜೆಗೇರಿದ ನಂತರ ಹಲವು ಗ್ರಾಮ ಪಂಚಾಯಿತಿ ಪ್ರದೇಶಗಳು ಪುರಸಭೆಗೆ ವಿಲೀನಗೊಂಡಿದ್ದು, ನಿರ್ದೇಶನಾಲಯದಿಂದ ಕೈಬರಹದ ನಮೂನೆ-3 ನ್ನು ನೀಡಲು ರದ್ದುಗೊಳಿಸಿರುವುದರಿಂದ ನಾಗರೀಕರ ಬೇಡಿಕೆಯ ಮೇರೆಗೆ ಹಂತ ಹಂತವಾಗಿ ಇ-ಆಸ್ತಿ ತಂತ್ರಾಂಶದಲ್ಲಿ ದಾಖಲಿಸಲಾಗುತ್ತಿದೆ.

ಇ)	ಸದರಿ ಪುರಸಭೆಯ ಬಡಾವಣೆಯ ಎಲ್ಲಾ ನಿವೇಶನಗಳನ್ನು ಇ-ಸ್ವತ್ತುಗಳಾಗಿ ಒಳಪಡಿಸಲು ಸರ್ಕಾರ ಯಾವ ಕ್ರಮಕೈಗೊಂಡಿದೆ?	ಇ-ಆಸ್ತಿ ತಂತ್ರಾಂಶದಲ್ಲಿ ಆಸ್ತಿಗಳಿಗೆ ಆಸ್ತಿ ಗುರುತಿನ ಸಂಖ್ಯೆಯು (PUID-Property Unique Identification Number) ಸ್ವಯಂ ಚಾಲಿತವಾಗಿ ಸೃಜನೆಯಾಗುವ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲಾಗಿದೆ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಹಂತದಲ್ಲಿಯೇ ಹೊಸ ಬಡಾವಣೆಗಳ ರಸ್ತೆಗಳನ್ನು ಸೇರ್ಪಡೆಗೊಳಿಸಲು ತಂತ್ರಾಂಶದಲ್ಲಿ ಅವಕಾಶಕಲ್ಪಿಸಲಾಗಿರುತ್ತದೆ. ಇದರಿಂದ ನಗರ ಸ್ಥಳೀಯ ಸಂಸ್ಥೆಗಳು ಈ ಹಿಂದೆ ಪಿಐಡಿ ನೀಡಲು ಆಗುತ್ತಿದ್ದ ವಿಳಂಬವನ್ನು ತಪ್ಪಿಸಲಾಗಿದೆ. ಮೊಬೈಲ್ ತಂತ್ರಾಂಶವನ್ನೂ ಕೂಡ ಅಭಿವೃದ್ಧಿಗೊಳಿಸಲಾಗುತ್ತಿದ್ದು ಇನ್ನೂ ಕೆಲವೇ ದಿನಗಳಲ್ಲಿ ಇದನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ಲಭ್ಯವಾಗುವಂತೆ ಮಾಡಲಾಗುವುದು. ಮೊಬೈಲ್ ತಂತ್ರಾಂಶವು ಲಭ್ಯವಾದ ನಂತರ ನಗರ ಸ್ಥಳೀಯ ಸಂಸ್ಥೆಗಳು ಸ್ಥಳದಲ್ಲಿಯೇ ಆಸ್ತಿಗಳ ಮಾಹಿತಿಯನ್ನು ದಾಖಲಿಸಬಹುದಾಗಿರುತ್ತದೆ. ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲೂ ವಾರ್ಡವಾರು ಎಲ್ಲಾ ಆಸ್ತಿಗಳನ್ನು ಹಂತ ಹಂತವಾಗಿ ಇ-ಆಸ್ತಿ ತಂತ್ರಾಂಶದಲ್ಲಿ ದಾಖಲಿಸಲು ಕ್ರಮವಹಿಸಲಾಗುವುದು.

ಕಡತ ಸಂಖ್ಯೆ: ನಅಇ 112 ಜಿಇಎಲ್ 2020(ಇ)

(ಡಾ॥ ನಾರಾಯಣಗೌಡ)

ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

ಕರ್ನಾಟಕ ವಿಧಾನಸಭೆ

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ	:	1714
2.	ಸದಸ್ಯರ ಹೆಸರು	:	ಶ್ರೀ.ಕುಮಾರಸ್ವಾಮಿ ಹೆಚ್.ಕೆ.
3.	ಉತ್ತರಿಸುವ ಸಚಿವರು	:	ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು
4.	ಉತ್ತರಿಸಬೇಕಾದ ದಿನಾಂಕ	:	25-09-2020

ಕ್ರಸಂ	ಪ್ರಶ್ನೆ	ಉತ್ತರ
ಅ)	ಹಾಸನ ಜಿಲ್ಲೆಯಲ್ಲಿ ಆಲೂಗಡ್ಡೆ ಪ್ರಮುಖ ಬೆಳೆಯಾಗಿದ್ದು, ಸುಮಾರು ಒಂದು ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯುತ್ತಿದ್ದು, ಕಳೆದ 8-10 ವರ್ಷಗಳಿಂದ ಅಂಗಮಾರಿ ರೋಗಕ್ಕೆ ಬೆಳೆಯು ತುತ್ತಾಗಿ, ರೈತರು ಸಂಕಷ್ಟಕ್ಕೀಡಾಗಿದ್ದರಿಂದ ಹಾಗೂ ರಾಜ್ಯದ ಆಲೂಗಡ್ಡೆ ಬೆಳೆಗಾರರ ಹಿತ ದೃಷ್ಟಿಯಿಂದ 2019-20 ನೇ ಸಾಲಿನಲ್ಲಿ ಆಲೂಗಡ್ಡೆ ಬೆಳೆಗೆ ಪ್ರೋತ್ಸಾಹಧನ ಯೋಜನೆಯನ್ನು ಜಾರಿಗೆ ತಂದು ರೈತರಿಗೆ ಶೇಕಡ 50 ರ ಸಹಾಯಧನ ಸೌಲಭ್ಯ ಒದಗಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು, ಬಂದಿದೆ.
ಆ)	ರಾಜ್ಯದಲ್ಲಿ ಈ ಯೋಜನೆಯಡಿ ಎಷ್ಟು ಆಲೂಗಡ್ಡೆ ಬೆಳೆಗಾರರಿಗೆ ಶೇಕಡ 50 ರಷ್ಟು ಸಹಾಯಧನ ಸೌಲಭ್ಯವನ್ನು ನೀಡಲಾಗಿದೆ (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)	2019-20 ನೇ ಸಾಲಿನಲ್ಲಿ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಆಲೂಗಡ್ಡೆ ಬೆಳೆಯುವ ರೈತರಿಗೆ ಪ್ರೋತ್ಸಾಹಧನ ಉಪ-ಯೋಜನೆಯಡಿ ಒಟ್ಟು 25401 ಆಲೂಗಡ್ಡೆ ಬೆಳೆಗಾರರಿಗೆ ಶೇಕಡ 50 ರಷ್ಟು ಸಹಾಯಧನ ಸೌಲಭ್ಯವನ್ನು ನೀಡಲಾಗಿದೆ. ಜಿಲ್ಲಾವಾರು ಮಾಹಿತಿ ಈ ಕೆಳಕಂಡಂತಿದೆ.

2019-20 ನೇ ಸಾಲಿನ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಆಲೂಗಡ್ಡೆ ಬೆಳೆಯುವ ರೈತರಿಗೆ ಶೇ. 50 ರ ಸಹಾಯಧನ ಸೌಲಭ್ಯ ನೀಡಿರುವ ಜಿಲ್ಲಾವಾರು ವಿವರ

ಕ್ರಸಂ	ಜಿಲ್ಲೆಗಳು	ಸಹಾಯಧನ ಮೊತ್ತ (ರೂ.ಲಕ್ಷಗಳಲ್ಲಿ)	ಶೇ. 50 ರ ಸಹಾಯಧನ ಸೌಲಭ್ಯ ಪಡೆದಿರುವ ಆಲೂಗಡ್ಡೆ ಬೆಳೆಯುವ ರೈತ ಫಲಾನುಭವಿಗಳ ಸಂಖ್ಯೆ
1	ಬೆಂಗಳೂರು (ಗ್ರಾ)	10.02155	94
2	ಬೆಳಗಾವಿ	101.79	2556
3	ಚಾಮರಾಜನಗರ	50.9382	1102
2	Devanahalli	TMC	2018-19	196	159	158.91	14	14	0	0
3	Devanahalli	TMC	2019-20	168	168	142.49	43	33	10	0
4	Devanahalli	TMC	2020-21	62.19	20.88	0	0	0	0	0
		TOTAL		**632.7**	**515.22**	**468.74**	**63**	**53**	**10**	**0**
1	Vijayapura	TMC	2017-18	139.32	112.89	108.98	6	6	0	0
2	Vijayapura	TMC	2018-19	132	107	106.09	7	7	0	0
3	Vijayapura	TMC	2019-20	113	84.75	81.09	23	14	8	1
4	Vijayapura	TMC	2020-21	41.86	14.09	7.81	1	0	0	1
		TOTAL		**426.18**	**318.73**	**303.97**	**37**	**27**	**8**	**2**

SFC Drinking Water PROGRAMME

1	Devanahalli	TMC	2017-18	101.48	101.48	100.63	8	8	0	0
2	Devanahalli	TMC	2018-19	20	20	20	1	1	0	0
3	Devanahalli	TMC	2019-20	31	31	31	7	7	0	0
4	Devanahalli	TMC	2020-21	5	5	0	1	0	0	1
		TOTAL		**157.48**	**157.48**	**151.63**	**17**	**16**	**0**	**1**
1	Vijayapura	TMC	2017-18	147.72	147.72	147.77	18	18	0	0
2	Vijayapura	TMC	2018-19	20	20	19.72	5	5	0	0
3	Vijayapura	TMC	2019-20	26	26	23.79	4	4	0	0
4	Vijayapura	TMC	2020-21	5	5	0	1	0	0	1
		TOTAL		**198.72**	**198.72**	**191.28**	**28**	**27**	**0**	1

M. Vijayalakshmi

Chief Project Officer

Directorate of Municipal Administration

Annexure-J

Bengaluru Rural Devanahalli TMC Nagarothana phase-3(Munisipalities) work List Details

Sl No	Name of work	Estimated cost	Expenditure	Work type Generaleral/SCP/TSP	Work status
1	Construction of Roads and drains and deckslab in Vinayakanagar harijanacolony and akkupet barrial ground	25	0	SCP	Under Progress
2	Construction of CC Roads in Maralu bagilu roads and near Narayanaswamy, Kallugowda house	25	15	General	Under Progress
3	Devlopment of Roads in Budigere road to gare ravikumar layout and Stadium	59.33	46.65	SCP	Completed
4	Devlopement of Roads in Channarayanapatana Main roads to in front of BMTC Bus depot	41.36	40.83	General	Completed
5	Construction of Roads in Neleri to on the way Nandi hills rds	25	24.04	General	Completed
6	Devlopment of Roads in Akkupete Gopalappa house to Kodimanchenahalli Main Road	25	25	General	Completed
7	Construction of Roads and Drains in Akshaya Tipan center to Haddinahalla	67.5	0	General	Under Progress
8	Devlopment of Raj canel in DVM Colony Chinnappa House to Taluk Panchath	25	16.05	SCP	Completed
9	Consruction of of Raj canel and roads in Channarayapatna roads to Kurlukunte House and in front of Botimunirajappa house	44.31	31.56	TSP	Completed
10	Construction of Pump house and drilling of Borewell and Pipe line in Bettakote lake	220	0	General	Tender to be Invited
11	Devlopement of Present sea water lake(purified raj canel water and STP filterbed)	80	0	General	Tender to be Invited

Chief Engineer I/C
Directorate of Muncipal Administration

ಕರ್ನಾಟಕ ವಿಧಾನಸಭೆ

ವಿಧಾನ ಸಭೆಯ ಸದಸ್ಯರ ಹೆಸರು	:	ಶ್ರೀ. ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ)
ಕ್ರಮ ಸಂಖ್ಯೆ / ಪ್ರಶ್ನೆ ಸಂಖ್ಯೆ	:	501
ಉತ್ತರಿಸಬೇಕಾದ ದಿನಾಂಕ	:	25-09-2020
ಉತ್ತರಿಸಬೇಕಾದವರು	:	ನಗರಾಭಿವೃದ್ಧಿ ಸಚಿವರು

ಸಂಖ್ಯೆ	ಪ್ರಶ್ನೆ	ಉತ್ತರ
ಅ)	ವಿಜಯಪುರ ಜಿಲ್ಲೆಯ ಇಂಡಿ ಪಟ್ಟಣದಲ್ಲಿ ಒಳಚರಂಡಿ ಕಾಮಗಾರಿಯನ್ನು ಸಮರ್ಪಕವಾಗಿ ಕೈಗೊಳ್ಳದ ಕಾರಣ ಒಳಚರಂಡಿಯ ಪೈಪುಗಳು ಪದೇ ಪದೇ ಬ್ಲಾಕ್ ಆಗಿ ಒಡೆದು ಹೋಗುತ್ತಿದ್ದು, ದುರ್ವಾಸನೆಯಿಂದ ಪಟ್ಟಣದಲ್ಲಿ ಜನ ಸಂಚಾರಕ್ಕೆ ತೀವ್ರ ಕಷ್ಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಬಂದಿದ್ದಲ್ಲಿ, ಸದರಿ ಕಾಮಗಾರಿಯನ್ನು ಹೊಸದಾಗಿ ಕೈಗೊಳ್ಳುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಒಳಚರಂಡಿ ದುರಸ್ತಿ ಅಥವಾ ಆಧುನೀಕರಣ ಕಾಮಗಾರಿಯನ್ನು ಯಾವಾಗ ಕೈಗೊಳ್ಳಲಾಗುವುದು (ವಿವರ ನೀಡುವುದು);	ಇಂಡಿ ಪಟ್ಟಣಕ್ಕೆ ಸಮಗ್ರ ಒಳಚರಂಡಿ ಯೋಜನೆಯು ರೂ.1420.00 ಲಕ್ಷಗಳ ಅಂದಾಜು ಪಟ್ಟಿಗೆ ಸರ್ಕಾರವು ಆದೇಶ ಸಂಖ್ಯೆ: ನಅಇ 04 ಯುಡಿಎಸ್ 2009, ದಿ: 28.02.2009 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿರುತ್ತದೆ. ಯೋಜನೆಯನ್ನು ದಿನಾಂಕ: 31-03-2016 ರಲ್ಲಿ ಚಾಲನೆಗೊಳಿಸಲಾಗಿದೆ. ಯೋಜನೆಯ ದೋಷ ಹೊಣೆಗಾರಿಕೆ ಅವಧಿಯು ದಿನಾಂಕ: 30-03-2017 ರಂದು ಪೂರ್ಣಗೊಂಡಿರುತ್ತದೆ. ಸದರಿ ಯೋಜನೆಯ ನಿರ್ವಹಣೆ ಮತ್ತು ದುರಸ್ತಿ ಪುರಸಭೆಯದ್ದಾಗಿರುತ್ತದೆ. ಸದರಿ ಯೋಜನೆಯ ಕಾಮಗಾರಿಗಳ ಪ್ರಭಾರ ಪಟ್ಟಿಯನ್ನು ತಯಾರಿಸಿ ಮುಖ್ಯಾಧಿಕಾರಿಗಳು, ಪುರಸಭೆ, ಇಂಡಿ ಇವರಿಗೆ ಮುಂದಿನ ನಿರ್ವಹಣೆಗಾಗಿ ಸ್ಥಳೀಯ ಸಂಸ್ಥೆಗೆ ನೀಡಲಾಗಿದ್ದು, ನಿರ್ವಹಣೆ ಕೊರತೆಯಿಂದ ಹಲವು ಕಡೆ ಪದೇ, ಪದೇ Over Flow ಆಗುವುದು ಸಾಮಾನ್ಯವಾಗಿರುತ್ತದೆ. ಇಂಡಿ ಪಟ್ಟಣಕ್ಕೆ ಒಳಚರಂಡಿ ಗೃಹ ಸಂಪರ್ಕ ಕಲ್ಪಿಸುವ ಕಾಮಗಾರಿಯು ರೂ.832.00 ಲಕ್ಷಗಳ ಅಂದಾಜು ಪಟ್ಟಿಗೆ ಸರ್ಕಾರವು ಆದೇಶ ಸಂಖ್ಯೆ. ನಅಇ 20 ಯುಡಿಎಸ್ 2014, ದಿನಾಂಕ: 13.12.2017 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿರುತ್ತದೆ. ಸದರಿ ಯೋಜನೆಯಡಿ 5200

		ಮನೆಗಳಿಗೆ ಒಳಚರಂಡಿ ಗೃಹ ಸಂಪರ್ಕ ಕಲ್ಪಿಸಿ, ಕಾಮಗಾರಿಯನ್ನು ದಿನಾಂಕ:31.01.2020 ರಂದು ಪೂರ್ಣಗೊಳಿಸಲಾಗಿದೆ. ಇದರಿಂದ ಎಲ್ಲಾ ಮನೆಗಳ ತ್ಯಾಜ್ಯ ನೀರು ಆಳಗುಂಡಿಗಳ / ಆಂತರಿಕ ಕೊಳವೆಮಾರ್ಗಗಳ ಮುಖಾಂತರ ತ್ಯಾಜ್ಯ ನೀರು ಸಂಸ್ಕರಣ ಘಟಕಕ್ಕೆ ಬಂದು ಸೇರುತ್ತದೆ. ಇಂಡಿ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಒದಗಿಸುವ ಯೋಜನೆಯನ್ನು ಸುಸ್ಥಿತಿಯಲ್ಲಿಡಲು ಸಕಾಲದಲ್ಲಿ ಯೋಜನೆಯ ನಿರ್ವಹಣೆ ಮತ್ತು ದುರಸ್ತಿಯನ್ನು ಮಾನದಂಡಗಳನುಸಾರ, ಸ್ಥಳೀಯ ಸಂಸ್ಥೆಯು ನಿರ್ವಹಿಸುವುದು ಅಗತ್ಯವಿರುತ್ತದೆ.
ಇ)	ಸದರಿ ಒಳಚರಂಡಿಯ ನೀರು ಸಮರ್ಪಕವಾಗಿ ಹರಿಯುವಂತೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು (ವಿವರ ನೀಡುವುದು)?	ಇಂಡಿ ಪಟ್ಟಣಕ್ಕೆ ಸಮಗ್ರ ಒಳಚರಂಡಿ ಅಳವಡಿಸುವ ಯೋಜನೆಯ ರೂ.1599.00 ಲಕ್ಷಗಳ ಪರಿಷ್ಕೃತ ಅಂದಾಜು ಪಟ್ಟಿಗೆ ಸರ್ಕಾರವು ಆದೇಶ ಸಂಖ್ಯೆ: ನಅಇ 12 ಯು.ಡಬ್ಲ್ಯೂ.ಎಸ್ 2018, ದಿನಾಂಕ: 26.06.2019 ರಲ್ಲಿ ಆಳತಾತ್ಮಕ ಅನುಮೋದನೆ ನೀಡಿರುತ್ತದೆ. ಸದರಿ ಅಂದಾಜಿನಲ್ಲಿನ ಉಳಿತಾಯ ಮೊತ್ತದಲ್ಲಿ, ಪಟ್ಟಣದ ಆಳಗುಂಡಿಗಳ ಮತ್ತು ಆಂತರಿಕ ಒಳಚರಂಡಿ ಕೊಳವೆಮಾರ್ಗಗಳ ದುರಸ್ತಿ ಹಾಗೂ ಬ್ಲಾಕೇಜ್ ಕ್ಲೀನಿಂಗ್ ಕಾಮಗಾರಿಯನ್ನು ರೂ.28.00 ಲಕ್ಷಗಳ ವೆಚ್ಚದಲ್ಲಿ ಕೈಗೆತ್ತಿಕೊಂಡು, ಒಳಚರಂಡಿ ವ್ಯವಸ್ಥೆಯಲ್ಲಿ ನೀರು ಸಮರ್ಪಕವಾಗಿ ಹರಿಯುವಂತೆ ಮಾಡಲಾಗಿದೆ. ಇಂಡಿ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಒದಗಿಸುವ ಯೋಜನೆಯನ್ನು ಸುಸ್ಥಿತಿಯಲ್ಲಿಡಲು ಸಕಾಲದಲ್ಲಿ ಯೋಜನೆಯ ನಿರ್ವಹಣೆ ಮತ್ತು ದುರಸ್ತಿಯನ್ನು ಮಾನದಂಡಗಳನುಸಾರ, ಸ್ಥಳೀಯ ಸಂಸ್ಥೆಯು ನಿರ್ವಹಿಸುವುದು ಅಗತ್ಯವಿರುತ್ತದೆ.

ಸಂಖ್ಯೆ: ನಅಇ 133 ಯುಎಂಎಸ್ 2020

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 516
ವಿಧಾನ ಸಭೆ ಸದಸ್ಯರ ಹೆಸರು	: ಶ್ರೀ ನರೇಂದ್ರ ಆರ್. (ಹನೂರು)
ಉತ್ತರಿಸಬೇಕಾದ ದಿನಾಂಕ	: 25.09.2020
ಉತ್ತರಿಸುವ ಸಚಿವರು	: ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ರಾಜ್ಯಾದ್ಯಂತ ಪಡಿತರದಲ್ಲಿ ನೀಡುತ್ತಿರುವ ಅಕ್ಕಿ ಕಾಳ ಸಂತೆಯಲ್ಲಿ ಮಾರಾಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಆ	ಬಂದಿದ್ದಲ್ಲಿ, ಈ ವಿಷಯದ ಬಗ್ಗೆ ದಾಖಲು ಮಾಡಿರುವ ಪ್ರಕರಣಗಳು ಎಷ್ಟು; (ಜಿಲ್ಲಾವಾರು ವಿವರ ನೀಡುವುದು)	ಈವರೆಗೆ ರಾಜ್ಯಾದ್ಯಂತ ಡಿಸೆಂಬರ್ 2019 ರಿಂದ ಆಗಸ್ಟ್ 2020 ರವರೆಗೆ ಕಳೆದ 9 ತಿಂಗಳ ಅವಧಿಯಲ್ಲಿ ಒಟ್ಟು 80 ಪ್ರಕರಣಗಳು ದಾಖಲಾಗಿವೆ. (ಜಿಲ್ಲಾವಾರು ಮಾಹಿತಿಯನ್ನು ಅನುಬಂಧ ಒದಗಿಸಲಾಗಿದೆ)
ಇ	ಕಾಳ ಸಂತೆ ವ್ಯಾಪಾರವನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು)	ರಾಜ್ಯದ ಸಾರ್ವಜನಿಕ ವಿತರಣಾ ಪದ್ಧತಿಯಡಿ ವಿತರಿಸುತ್ತಿರುವ ಪಡಿತರ ಪದಾರ್ಥಗಳು ಸಂಪೂರ್ಣವಾಗಿ ಫಲಾನುಭವಿಗಳಿಗೆ ತಲುಪಲು ವ್ಯವಸ್ಥೆಯಲ್ಲಿ ಹಲವಾರು ಸುಧಾರಣೆಗಳನ್ನು ಜಾರಿಗೆ ತರಲಾಗಿದೆ. 1. ರಾಜ್ಯದ ಎಲ್ಲಾ ಪಡಿತರ ಚೀಟಿಗಳು ಮತ್ತು ಫಲಾನುಭವಿಗಳನ್ನು ಅವರ ಆಧಾರ್ ನೊಂದಿಗೆ ಜೋಡಣೆ ಮಾಡಲಾಗಿರುತ್ತದೆ. 2. ಪ್ರತಿ ಮಾಹೆ ಪಡಿತರ ಪದಾರ್ಥಗಳನ್ನು ನೇರವಾಗಿ ಫಲಾನುಭವಿಗಳಿಗೆ ತಲುಪಿಸಲು ಬಯೋಮೆಟ್ರಿಕ್ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. 3. ಎಲ್ಲಾ ನ್ಯಾಯಬೆಲೆ ಅಂಗಡಿಗಳಲ್ಲಿ ಪಿ.ಓ.ಎಸ್ ವ್ಯವಸ್ಥೆ ಜಾರಿಗೊಳಿಸಿದ್ದು, ನೈಜ ಫಲಾನುಭವಿಗೆ ಬಯೋಮೆಟ್ರಿಕ್ ಮೂಲಕ ಪಾರದರ್ಶಕವಾಗಿ ಪಡಿತರ ವಿತರಣೆಯಾಗುವುದನ್ನು ಖಾತರಿಪಡಿಸಲಾಗುತ್ತದೆ.

		4. ಪಡಿತರ ಪದಾರ್ಥಗಳನ್ನು ಸಗಟು ಮಳಿಗೆಗಳಲ್ಲಿ ದಾಸ್ತಾನಿರಿಸುವುದು ಹಾಗೂ ನ್ಯಾಯಬೆಲೆ ಅಂಗಡಿಗಳಿಗೆ ಬಿಲ್ಲಿಂಗ್ ಮಾಡುವ ವ್ಯವಸ್ಥೆಯನ್ನು ಸಂಪೂರ್ಣ ಗಣಕೀಕರಣಗೊಳಿಸಲಾಗಿದ್ದು, ಆನ್‌ಲೈನ್ ವ್ಯವಸ್ಥೆ ಜಾರಿಯಲ್ಲಿದೆ. 5. ಪಡಿತರ ವ್ಯವಸ್ಥೆಯಲ್ಲಿ ಪಾರದರ್ಶಕತೆಯನ್ನು ಜಾರಿಗೆ ತರುವುದರೊಂದಿಗೆ ಫಲಾನುಭವಿಗಳ ಕುಂದುಕೊರತೆ ನಿವಾರಣಾ ವ್ಯವಸ್ಥೆಯನ್ನು ಕೂಡ ಜಾರಿಗೆ ತರಲು ಆಹಾರ ಅಧಾಲತ್, ಜಾಗೃತ ಸಮಿತಿಗಳು, ಸಹಾಯವಾಣಿ, ಹಂಚಿಕೆ ಬಗ್ಗೆ ಪಡಿತರ ಚೀಟಿದಾರರಿಗೆ ಎಸ್.ಎಂ.ಎಸ್ ರವಾನೆ ಇತ್ಯಾದಿ ಕ್ರಮಗಳೂ ಕೂಡ ಜಾರಿಯಲ್ಲಿವೆ. ಮೇಲಿನ ಎಲ್ಲಾ ಸುಧಾರಣೆಗಳಂತೆ ನ್ಯಾಯಬೆಲೆ ಅಂಗಡಿಗಳಲ್ಲಿ ಪಿ.ಓ.ಎಸ್ ವ್ಯವಸ್ಥೆಯಲ್ಲಿ ಪಡಿತರ ಚೀಟಿದಾರರಿಗೆ ಆಧಾರ್ ಬಯೋಮೆಟ್ರಿಕ್ ಮುಖಾಂತರ ವಿತರಣೆ ಮಾಡಲಾಗುತ್ತಿದ್ದು, ಅಂಗಡಿ ಮಾಲೀಕರು ಸರ್ಕಾರಕ್ಕೆ ತಪ್ಪು ಲೆಕ್ಕವನ್ನು ತೋರಿಸಲು ಅವಕಾಶವಿರುವುದಿಲ್ಲ. ಹಾಗೂ ಅಂಗಡಿಯಲ್ಲಿ ಉಳಿಕೆಯಾಗುವ ಪದಾರ್ಥವನ್ನು ಲೆಕ್ಕಕ್ಕೆ ತೆಗೆದುಕೊಂಡು ಮುಂದಿನ ಮಾಹೆಯ ಅಂಗಡಿ ಹಂಚಿಕೆಯಲ್ಲಿ ಆರಂಭಿಕ ದಾಸ್ತಾನಾಗಿ ಕಡಿತಗೊಳಿಸಲಾಗುತ್ತದೆ. ಈ ಮೂಲಕ ಪಡಿತರ ವ್ಯವಸ್ಥೆಯಲ್ಲಿ ಮಾರ್ಗಾಂತರ ಮತ್ತು ಕಾಳಸಂತೆ ಪ್ರಕರಣಗಳನ್ನು ತಡೆಗಟ್ಟಲು ಹಲವಾರು ಸುಧಾರಣೆಗಳನ್ನು ಜಾರಿಗೊಳಿಸಲಾಗಿದೆ.

ಆನಾಸ **255** ಡಿಆರ್‌ಎ **2020** (ಇ-ಆಫೀಸ್)

(ಕೆ.ಗೋಪಾಲಯ್ಯ)

ಆಹಾರ, ನಾಗರಿಕ ಸರಬರಾಜು ಮತ್ತು

ಗ್ರಾಹಕರ ವ್ಯವಹಾರಗಳ ಹಾಗೂ

ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕರ್ನಾಟಕ ವಿಧಾನ ಸಭೆ

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	893
2.	ಸದಸ್ಯರ ಹೆಸರು	:	ಶ್ರೀ ಪಾಟೀಲ್ ಹೆಚ್.ಕೆ. (ಗದಗ)
3.	ಉತ್ತರಿಸಬೇಕಾದ ದಿನಾಂಕ	:	25-09-2020
4.	ಉತ್ತರಿಸುವ ಸಚಿವರು	:	ಮಾನ್ಯ ನಗರಾಭಿವೃದ್ಧಿ ಸಚಿವರು.

ಕ್ರ. ಸಂ.	ಪ್ರಶ್ನೆಗಳು	ಉತ್ತರ
ಅ)	ಗದಗ-ಬೆಟಗೇರಿ ಅವಳಿ ನಗರಗಳಿಗೆ ಕುಡಿಯುವ ನೀರನ್ನು ಸರಬರಾಜು ಮಾಡಲು ಅನುಕೂಲವಾಗುವಂತೆ ಜಲ ಸಂಗ್ರಹಾಗಾರ (Impounding Reservoir) ವನ್ನು ADB ನೆರವಿನ NKUSIP ಯೋಜನೆಯಡಿ ನಿರ್ಮಾಣ ಮಾಡುವ ಯೋಜನೆ ಸರ್ಕಾರದ ಗಮನಕ್ಕೆ ಬಂದಿದೆಯೇ;	ಗದಗ-ಬೆಟಗೇರಿ ಅವಳಿ ನಗರಗಳಿಗೆ ಕುಡಿಯುವ ನೀರನ್ನು ಸರಬರಾಜು ಮಾಡಲು ಅನುಕೂಲವಾಗುವಂತೆ ಜಲ ಸಂಗ್ರಹಾಗಾರ (Impounding Reservoir) ವನ್ನು ADB ನೆರವಿನ NKUSIP ಯೋಜನೆಯಡಿ ನಿರ್ಮಾಣ ಮಾಡುವ ಯೋಜನೆ ಸರ್ಕಾರದ ಮುಂದಿರುವುದಿಲ್ಲ.
ಆ)	ಹಾಗಿದ್ದಲ್ಲಿ, ಅನುದಾನ ಬಿಡುಗಡೆ ಮಾಡಲು ವಿಳಂಬವಾಗಿರುವುದರಿಂದ ಬೇಸಿಗೆ ಸಮಯದಲ್ಲಿ ನೀರು ಸರಬರಾಜು ಮಾಡುವಲ್ಲಿ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	
ಇ)	ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಸರ್ಕಾರ ಈ ಯೋಜನೆಯನ್ನು ಪೂರ್ಣಗೊಳಿಸಲಿದೆ? (ವಿವರ ನೀಡುವುದು).	ಗದಗ-ಬೆಟಗೇರಿ ಅವಳಿ ನಗರದಲ್ಲಿ ಕೆರೆ (Impounding Reservoir) ನಿರ್ಮಿಸಲು 60.24 ಎಕರೆ ಜಮೀನು ಬೇಕಾಗಿರುತ್ತದೆ, ಇದರಲ್ಲಿ 11.90 ಎಕರೆ ಸರ್ಕಾರಿ ಜಮೀನು ಇರುತ್ತದೆ, ಉಳಿದ 48.34 ಎಕರೆ ಖಾಸಗಿ ಜಮೀನನ್ನು ಭೂಸ್ವಾಧೀನ ಪಡಿಸಿ ಜಿಲ್ಲಾಡಳಿತವು ಹಸ್ತಾಂತರಿಸಬೇಕಾಗಿರುತ್ತದೆ. ಜಿಲ್ಲಾಡಳಿತವು ಭೂಸ್ವಾಧೀನಕ್ಕೆ ಬೇಕಾದ ಅನುದಾನ ರೂ.6.65 ಕೋಟಿಗಳನ್ನು ಮಂಜೂರು ಮಾಡಲು ಕೋರಿ ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ. ಕೆರೆಯನ್ನು 2 ಹಂತದಲ್ಲಿ ನಿರ್ಮಿಸಲು ಯೋಜಿಸಿದ್ದು ಮೊದಲನೇ ಹಂತದಲ್ಲಿ 8.00 ಮೀ ಎತ್ತರ ಹಾಗೂ 2ನೇ ಹಂತದಲ್ಲಿ 8.00 ಮೀ ನಿಂದ 19.0 ಮೀ ಎತ್ತರಕ್ಕೆ ಏರಿಯನ್ನು ನಿರ್ಮಿಸಲು ಉದ್ದೇಶಿಸಿದೆ. ಈ ಕೆರೆಗೆ ನೀರಾವರಿ ನಾಲೆಯಿಂದ ನೀರನ್ನು ಕೊಳವೆ ಮುಖಾಂತರ ಪಂಪ್ ಮಾಡಲು ಉದ್ದೇಶಿಸಿದೆ.

ಕ್ರ. ಸಂ.	ಪ್ರಶ್ನೆಗಳು	ಉತ್ತರ
		ಮೊದಲನೇ ಹಂತದ ವಿಸ್ತೃತ ವರದಿ ರೂ.13.66 ಕೋಟಿಗೆ ಆಡಳಿತಾತ್ಮಕ ಅನುಮೋದನೆಗೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಕರ್ನಾಟಕ ನೀರಾವರಿ ನಿಗಮದವರು ನೀರಾವರಿ ನಾಲೆಯಿಂದ ನೀರು ಪಡೆಯಲು ಅನುಮತಿ ನೀಡಬೇಕಾಗಿದ್ದು, ಈ ಬಗ್ಗೆ ಅನುಮತಿ ನೀಡುವಂತೆ ಕೋರಿ ಕಡತ ಸಂಖ್ಯೆ:UDD 118 PRJ 2019 (P-4) ಅನ್ನು ಜಲಸಂಪನ್ಮೂಲ ಇಲಾಖೆಗೆ ದಿನಾಂಕ:13-08-2020 ರಂದು ಕಳುಹಿಸಿದ್ದು, ಜಲಸಂಪನ್ಮೂಲ ಇಲಾಖೆಯಿಂದ ಸಹಮತಿ ದೊರಕಿದ ಕೂಡಲೇ ಈ ಕುರಿತು ಅಗತ್ಯ ಕ್ರಮವಹಿಸಲಾಗುವುದು.

ನಅಇ 202 ಪಿ.ಆರ್.ಜೆ 2020

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1472
ಸದಸ್ಯರ ಹೆಸರು	ಶ್ರೀ ದೇವಾನಂದ್ ಫುಲಸಿಂಗ್ ಚವಾಣ್ (ನಾಗಠಾಣ)
ಉತ್ತರಿಸಬೇಕಾದ ದಿನಾಂಕ	25.09.2020.
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
(ಅ)	ವಿಜಯಪುರ ಜಿಲ್ಲೆಯ ಸಿಂಧಗಿ ತಾಲ್ಲೂಕಿನ ಘತ್ತರಗಿ ಹಾಗೂ ಕಲಬುರ್ಗಿ ಜಿಲ್ಲೆಯ ಅಪಜಲಪುರ ಮಧ್ಯದ ಭೀಮಾನದಿಯಿಂದ ಮತ್ತು ಇಂಡಿ ತಾಲ್ಲೂಕಿನ ಇಂಗಾಣಿ ಮರಳು ಡಿಪೋಗಳಿಂದ ನಕಲಿ ಪಾಸ್ ಬಳಸಿ, ಲಾರಿಗಳಲ್ಲಿ ಮರಳು ಸಾಗಾಣಿಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: (ವಿವರ ನೀಡುವುದು)	ವಿಜಯಪುರ ಜಿಲ್ಲೆಯ ಭೀಮಾ ನದಿ ಪಾತ್ರದಲ್ಲಿ ಮಾನ್ಯ ಹಸಿರು ಪೀಠ ನ್ಯಾಯಾಲಯ,ನವದೆಹಲಿ ಇವರಿಂದ ಮರಳು ಗಣಿಗಾರಿಕೆಗೆ ತಡೆಯಾಜ್ಞೆ ಇರುವುದರಿಂದ ಯಾವುದೇ ಮರಳು ಗಣಿಗಾರಿಕೆ /ಸಾಗಾಣಿಕೆ ಚಟುವಟಿಕೆ ಇರುವುದಿಲ್ಲ. ಇಂಡಿ ತಾಲ್ಲೂಕಿನ ಹಿಂಗಣಿ ಗ್ರಾಮ ವ್ಯಾಪ್ತಿಯಲ್ಲಿ ಯಾವುದೇ ಮರಳು ಸ್ಟಾಕ್ ಯಾರ್ಡ್ (ಡಿಪೊ) ಗಳು ಇರುವುದಿಲ್ಲ ಹಾಗೂ ನಕಲಿ ಪಾಸ್ ಭಳಸಿ ಮರಳು ಸಾಗಾಣಿಕೆ ಮಾಡಿರುವುದು ಕಂಡುಬಂದಿರುವುದಿಲ್ಲ. ಕಲಬುರಗಿ ಜಿಲ್ಲೆ ಅಪಜಲಪುರ ತಾಲ್ಲೂಕಿನ ಘತ್ತರಗಿ ಹಾಗೂ ಶಿವಪೂರ ಗ್ರಾಮಗಳ ವ್ಯಾಪ್ತಿಯ ಭೀಮಾ ನದಿ ಪಾತ್ರದಲ್ಲಿ 2 ಮರಳು ಬ್ಲಾಕ್ ಗಳನ್ನು ಟೆಂಡರ್ ಕಂ–ಇ–ಹರಾಜು ಮೂಲಕ ಮರಳು ಗುತ್ತಿಗೆ ಮಂಜೂರು ಮಾಡಲಾಗಿರುತ್ತದೆ. ಸದರಿ ಮರಳು ಗುತ್ತಿಗೆದಾರರು ಸ್ಟಾಕ್ ಯಾರ್ಡ್ ನಲ್ಲಿ ಸಂಗ್ರಹಿಸಿದ ಮರಳನ್ನು ಪರವಾನಿಗೆ ಪಡೆಯದೇ ಅನಧಿಕೃತವಾಗಿ ಸಾಗಾಣಿಕೆ ಮಾಡಿದಕ್ಕೆ ಸದರಿ ಗುತ್ತಿಗೆದಾರರುಗಳಿಂದ ರೂ.90.04 ಲಕ್ಷ ದಂಡವನ್ನು ವಸೂಲಿ ಮಾಡಲಾಗಿರುತ್ತದೆ. ಆದರೆ ಗುತ್ತಿಗೆದಾರರು ನಕಲಿ ಪಾಸ್ ಬಳಸಿ ಮರಳು ಸಾಗಾಣಿಕೆ ಮಾಡಿರುವುದು ಕಂಡುಬಂದಿರುವುದಿಲ್ಲ.
(ಆ)	ಚಡಚಣ ತಾಲ್ಲೂಕಿನ ಭೀಮಾನದಿ ದಂಡೆಯಲ್ಲಿ ಅಕ್ರಮವಾಗಿ ಮರಳು ಗಣಿಗಾರಿಕೆ ನಡೆಯುತ್ತಿದ್ದು ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು:	ಪ್ರಸ್ತುತ ವಿಜಯಪುರ ಜಿಲ್ಲೆಯ ಭೀಮಾ ನದಿ ಪಾತ್ರದಲ್ಲಿ ಮಾನ್ಯ ಹಸಿರು ಪೀಠ ನ್ಯಾಯಾಲಯದಿಂದ ಮರಳು ಗಣಿಗಾರಿಕೆಗೆ ತಡೆಯಾಜ್ಞೆ ಇರುವುದರಿಂದ ಸದರಿ ನದಿ ಪಾತ್ರದಲ್ಲಿ ಮರಳು ಗಣಿಗಾರಿಕೆಗೆ ಅವಕಾಶ ನೀಡಿರುವುದಿಲ್ಲ. ಮುಂದುವರೆದು, ಜಿಲ್ಲಾ ಹಾಗೂ ತಾಲ್ಲೂಕು ಮರಳು ಸಮಿತಿಯಿಂದ ಹಾಗೂ ಸ್ಥಳೀಯರ ಸಹಕಾರದಿಂದ ಚಡಚಣ ತಾಲ್ಲೂಕಿನ ಭೀಮಾ ನದಿ ಪಾತ್ರದಲ್ಲಿ ಯಾವುದೇ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳು ನಡೆಯದಂತೆ ಕ್ರಮವಹಿಸಲಾಗಿರುತ್ತದೆ.

--2

(ಇ)	ಅಕ್ರಮವಾಗಿ ಮರಳು ಸಾಗಾಣಿಕೆ ಮಾಡುತ್ತಿರುವ ಮರಳು ದಂಧೆಕೋರರ ಮೇಲೆ ಹಾಗೂ ಅಕ್ರಮ ಮರಳು ಗಣಿಗಾರಿಕೆಗೆ ಕಡಿವಾಣ ಹಾಕಲು ಸರ್ಕಾರ ಕೈಗೊಂಡ ಕ್ರಮಗಳೇನು;	ಅನಧಿಕೃತ ಮರಳು ಗಣಿಗಾರಿಕೆ/ಸಾಗಾಣಿಕೆ ಚಟುವಟಿಕೆಗಳನ್ನು ತಡೆಗಟ್ಟಲು ಸರ್ಕಾರದಿಂದ ಈ ಕೆಳಕಂಡಂತೆ ಕ್ರಮ ವಹಿಸಲಾಗಿರುತ್ತದೆ. • ಅನಧಿಕೃತ ಮರಳು ಗಣಿಗಾರಿಕೆ, ದಾಸ್ತಾನು, ಸಾಗಾಣಿಕೆಯನ್ನು ತಡೆಗಟ್ಟಲು ಆಯಾ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮರಳು ಸಮಿತಿ ಹಾಗೂ ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮರಳು ಸಮಿತಿಯನ್ನು ರಚಿಸಲಾಗಿರುತ್ತದೆ. • ಮೇಲ್ಕಂಡ ಸಮಿತಿಯಲ್ಲಿ ಕಂದಾಯ, ಪೊಲೀಸ್, ಅರಣ್ಯ, ಲೋಕೋಪಯೋಗಿ, ಜಿಲ್ಲಾ ಪಂಚಾಯತ್, ಗಣಿ ಮತ್ತು ಭೂವಿಜ್ಞಾನ ಹಾಗೂ ಪ್ರಾದೇಶಿಕ ಸಾರಿಗೆ ಇಲಾಖೆ ಅಧಿಕಾರಿಗಳು ಸದಸ್ಯರುಗಳಾಗಿರುತ್ತಾರೆ. ಸದರಿ ಇಲಾಖೆಗಳ ಅಧಿಕಾರಿಗಳಿಗೆ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳನ್ನು ತಡೆಯಲು ಗಣಿ ಮತ್ತು ಖನಿಜ(ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ 1957ರ ಕಲಂ 4(1), 4(1-A) ಮತ್ತು ಕಲಂ 21 ಮತ್ತು 22ರಡಿಯಲ್ಲಿ ಹಾಗೂ ಕರ್ನಾಟಕ ಉಪ ಖನಿಜ (ತಿದ್ದುಪಡಿ) ರಿಯಾಯಿತಿ ನಿಯಮಾವಳಿ 1994ರ ನಿಯಮ 31-Rರ ಉಪ ನಿಯಮ 13 ರಡಿಯಲ್ಲಿ ಸಂಬಂಧಪಟ್ಟ ಪೊಲೀಸ್ ಠಾಣೆಗಳಲ್ಲಿ ಹಾಗೂ ನ್ಯಾಯಾಲಯಗಳಲ್ಲಿ ಮೊಕದ್ದಮೆ ದಾಖಲಿಸಲು ಅಧಿಕಾರ ಪ್ರತ್ಯೋಜಿಸಲಾಗಿರುತ್ತದೆ. • ಅನಧಿಕೃತ ಮರಳು ಗಣಿಗಾರಿಕೆ/ಸಾಗಾಣಿಕೆಯನ್ನು ನಿಯಂತ್ರಿಸಲು ಜಿಲ್ಲಾ ಮರಳು ಉಸ್ತುವಾರಿ ಸಮಿತಿಗಳಿಂದ ರಾಜ್ಯದಲ್ಲಿ ಆಯಾಕಟ್ಟಿನ ಪ್ರದೇಶಗಳಲ್ಲಿ ಮರಳು ತನಿಖಾ ಠಾಣೆಗಳನ್ನು ತೆರೆದು ಕಾರ್ಯ ನಿರ್ವಹಿಸಲಾಗುತ್ತಿದೆ. ಅಲ್ಲದೆ ಆಯಾ ಜಿಲ್ಲಾ ವ್ಯಾಪ್ತಿಗಳಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಚಾಲಿತ ದಳವನ್ನು ರಚಿಸಿಕೊಂಡು ಅನಧಿಕೃತ ಮರಳು ಗಣಿಗಾರಿಕೆ/ಸಾಗಾಣಿಕೆಯನ್ನು ನಿಯಂತ್ರಿಸಲಾಗುತ್ತಿದೆ. • ಸರ್ಕಾರವು ದಿನಾಂಕ:30.06.2020 ರಂದು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ-1994 ರ ನಿಯಮ 43 ಕ್ಕೆ ತಿದ್ದುಪಡಿ ತಂದಿದ್ದು ಸದರಿ ತಿದ್ದುಪಡಿ ನಿಯಮದಲ್ಲಿ ಅನಧಿಕೃತ ಮರಳು ಹಾಗೂ ಇತರೆ ಉಪಖನಿಜಗಳ ಸಾಗಾಣಿಕೆಯಡಿಯಲ್ಲಿ ಹೆಚ್ಚಿನ ದಂಡದ ಮೊತ್ತವನ್ನು ವಸೂಲಿ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ.

--3

		• ಅದರಂತೆ, 2019–20 ಮತ್ತು 2020–21 ನೇ ಸಾಲಿನ ಅಗಸ್ಟ್ ಅಂತ್ಯದವರೆಗೆ ವಿಜಯಪುರ ಹಾಗೂ ಕಲಬುರಗಿ ಜಿಲ್ಲೆಗಳಲ್ಲಿ ಅನಧಿಕೃತ ಸಾಗಾಣಿಕೆಯಡಿಯಲ್ಲಿ ಸಂಗ್ರಹಿಸಲಾದ ದಂಡದ ಮೊತ್ತ ಹಾಗೂ ದಾಖಲಿಸಲಾದ ಮೊಕದ್ದಮೆಗಳ ವಿವರಗಳು ಈ ಕೆಳಕಂಡಂತಿರುತ್ತದೆ.

ಜಿಲ್ಲೆ	ಅನಧಿಕೃತ ಮರಳು ಸಾಗಾಣಿಕೆ		
	ಪತ್ತೆ ಹಚ್ಚಿದ ಪ್ರಕರಣಗಳ ಸಂಖ್ಯೆ	ದಾಖಲಿಸಿದ ಮೊಕದ್ದಮ್ಮೆಗಳ ಸಂಖ್ಯೆ	ವಸೂಲಾದ ದಂಡ (ರೂ.ಲಕ್ಷಗಳಲ್ಲಿ)
ವಿಜಯಪುರ	**16**	**16**	**0.00**
ಕಲಬುರಗಿ	**293**	**270**	**11.82**

ಈ)	ಅಕ್ರಮ ಮರಳು ಸಾಗಾಣಿಕೆ ಕುರಿತು ವಿಜಯಪುರ ಜಿಲ್ಲೆಯಲ್ಲಿ ದಾಖಲಾದ ಪ್ರಕರಣಗಳೆಷ್ಟು, ಇವು ಯಾವ ಹಂತದಲ್ಲಿವೆ? (ಸಂಪೂರ್ಣವಾದ ಮಾಹಿತಿ ನೀಡುವುದು)	ಅನಧಿಕೃತ ಮರಳು ಸಾಗಾಣಿಕೆಯಡಿಯಲ್ಲಿ ವಿಜಯಪುರ ಜಿಲ್ಲಾ ವ್ಯಾಪ್ತಿಯಲ್ಲಿ 2019–20 ಮತ್ತು 2020–21ನೇ ಸಾಲಿನ ಅಗಸ್ಟ್ ಅಂತ್ಯದವರೆಗೆ ವಿವಿಧ ಪೊಲೀಸ್ ಠಾಣೆಗಳಲ್ಲಿ ಒಟ್ಟು 16 ಪ್ರಕರಣಗಳು ದಾಖಲಿಸಲಾಗಿದ್ದು ಈ ಪೈಕಿ 9 ಪ್ರಕರಣಗಳು ನ್ಯಾಯಾಲಯದಲ್ಲಿದ್ದು, ಉಳಿದ 7 ಪ್ರಕರಣಗಳು ತನಿಖೆ ಹಂತದಲ್ಲಿರುತ್ತವೆ. ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಸಂಖ್ಯೆ: ಸಿಐ 468 ಎಂಎಂಎನ್ 2020

(ಸಿ.ಸಿ. ಪಾಟೀಲ)
ಗಣಿ ಮತ್ತು ಭೂವಿಜ್ಞಾನ ಸಚಿವರು

ಸಿ.ಸಿ. ಪಾಟೀಲ
ಗಣಿ ಮತ್ತು ಭೂವಿಜ್ಞಾನ ಸಚಿವರು

ಕರ್ನಾಟಕ ವಿಧಾನಸಭೆ

ವಿಧಾನ ಸಭೆಯ ಸದಸ್ಯರ ಹೆಸರು	:	ಶ್ರೀ ಎಸ್.ಎನ್. ನಾರಾಯಣಸ್ವಾಮಿ.ಕೆ.ಎಂ (ಬಂಗಾರಪೇಟೆ)
ಕ್ರಮ ಸಂಖ್ಯೆ / ಪ್ರಶ್ನೆ ಸಂಖ್ಯೆ	:	1475
ಉತ್ತರಿಸಬೇಕಾದ ದಿನಾಂಕ	:	25-09-2020
ವಿಷಯ	:	ನಗರಾಭಿವೃದ್ಧಿ ಸಚಿವರು

	ಪ್ರಶ್ನೆ	ಉತ್ತರ
ಅ)	ಸಂಕೇಶ್ವರ ಪುರಸಭೆ ವ್ಯಾಪ್ತಿಯಲ್ಲಿ ಒಳಚರಂಡಿ ನಿರ್ಮಾಣ ಮಾಡಲು ಅನುಮೋದನೆ ನೀಡಲಾಗಿದೆಯೇ;	ಹೌದು.
ಆ)	ಹಾಗಿದ್ದಲ್ಲಿ, ಯಾವಾಗ ಅನುಮೋದನೆ ನೀಡಲಾಗಿದೆ; ಮತ್ತು ಎಷ್ಟು ಅನುದಾನಕ್ಕೆ ಅನುಮೋದನೆ ನೀಡಲಾಗಿದೆ;	ಸಂಕೇಶ್ವರ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಒದಗಿಸುವ ಯೋಜನೆಯ ರೂ. 1981.00 ಲಕ್ಷಗಳ ಅಂದಾಜು ಪಟ್ಟಿಗೆ ಸರ್ಕಾರದಿಂದ ಆದೇಶ ಸಂಖ್ಯೆ: 03/ಒಚಯೋ/2012 ದಿನಾಂಕ: 05.06.2012 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.
ಇ)	ಸದರಿ ಕಾಮಗಾರಿಗಳಿಗೆ ಮರು ಅಂದಾಜು ತಯಾರಿಸಲಾಗಿದೆಯೇ; ಹಾಗಿದ್ದಲ್ಲಿ, ಸದರಿ ಕಾಮಗಾರಿಗಳ ಅಂದಾಜು ಮೊತ್ತವೆಷ್ಟು; (ಪೂರ್ಣ ವಿವರ ನಿಡುವುದು)	ಹೌದು. ಸಂಕೇಶ್ವರ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಒದಗಿಸುವ ಮಾರ್ಪಡಿತ ಅಂದಾಜು ಪಟ್ಟಿಯನ್ನು ರೂ. 9660.00 ಲಕ್ಷಗಳಿಗೆ ತಯಾರಿಸಿ ಮಂಡಳಿಯ ಪತ್ರ ಸಂಖ್ಯೆ: 274, ದಿನಾಂಕ:08.05.2019 ರಂದು ಆಡಳಿತಾತ್ಮಕ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಸದರಿ ಯೋಜನೆಯಲ್ಲಿ, ಪಟ್ಟಣದಲ್ಲಿ ಅಭಿವೃದ್ಧಿ ಹೊಂದಿದ ಬಡಾವಣೆಗಳಿಗೂ ಒಳಚರಂಡಿ ವ್ಯವಸ್ಥೆ ಒದಗಿಸುವುದು, ಗೃಹ ಸಂಪರ್ಕ ಅಳವಡಿಕೆ, ವೆಟ್‌ವೆಲ್, ಎಸ್‌ಬಿಆರ್ ಮಾದರಿಯ ತ್ಯಾಜ್ಯ ನೀರು ಸಂಸ್ಕರಣ ಘಟಕ ನಿರ್ಮಾಣ ಮತ್ತು ಇನ್ನಿತರ ಸಂಬಂಧಿತ ಕಾಮಗಾರಿಗಳಿಗೆ ಅವಕಾಶ ಕಲ್ಪಿಸಿ, ಹಾಲಿ ದರಪಟ್ಟಿಯನ್ನಾಧರಿಸಿ ತಯಾರಿಸಲಾಗಿರುತ್ತದೆ.

ಈ)	ಮರು ಅಂದಾಜಿನ ಪ್ರಕಾರ, ಸದರಿ ಕಾಮಗಾರಿಗಳಿಗೆ ಅನುಮೋದನೆ ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು;	ಇದು ಸರ್ಕಾರದ ಪರಿಶೀಲನೆಯಲ್ಲಿದೆ.
ಉ)	ಈ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ಹಾಕಿಕೊಂಡ ಕಾಲಮಿತಿಯೇನು?	ಪ್ರಸ್ತಾವನೆಗೆ ಸರ್ಕಾರದಿಂದ ಅನುಮೋದನೆ ನೀಡಿದ ನಂತರ 3 ವರ್ಷಗಳ ಅವಧಿಯಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ನಅಇ 149 ಯುಎಂಎಸ್ 2020

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1497
ಸದಸ್ಯರ ಹೆಸರು	ಶ್ರೀ ರಾಜೇಗೌಡ ಟಿ.ಡಿ.(ಶೃಂಗೇರಿ)
ಉತ್ತರಿಸಬೇಕಾದ ದಿನಾಂಕ	25.09.2020.
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಶೃಂಗೇರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮರಳು ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿರುತ್ತದೆ.
ಆ)	ಹಾಗಿದ್ದಲ್ಲಿ ಸದರಿ ಸಮಸ್ಯೆ ನಿವಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು	• ಶೃಂಗೇರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕೊಪ್ಪ ತಾಲ್ಲೂಕಿನ ಹಾಲ್ಮತ್ತೂರು- ಚಾವಲ್‌ಮನೆ, ಶೃಂಗೇರಿ ತಾಲ್ಲೂಕಿನ ಹಾಲಂದೂರು ಹಾಗೂ ಎನ್.ಆರ್. ಪುರ ತಾಲ್ಲೂಕಿನ ಬನ್ನೂರು ಗ್ರಾಮಗಳ ವ್ಯಾಪ್ತಿಯ ನದಿ ಪಾತ್ರಗಳಲ್ಲಿ ಟೆಂಡರ್ ಕಂ-ಇ-ಹರಾಜು ಮೂಲಕ ವಿಲೇವಾರಿಯಾದ 03 ಮರಳು ಗಣಿ ಗುತ್ತಿಗೆಗಳು ಚಾಲ್ತಿಯಲ್ಲಿರುತ್ತವೆ. ಸದರಿ ಮರಳು ಬ್ಲಾಕ್ ಗಳಿಂದ ತಾಲ್ಲೂಕಿನ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಮರಳು ಪೂರೈಕೆಯಾಗುತ್ತಿರುತ್ತದೆ. • ಚಿಕ್ಕಮಗಳೂರು ಜಿಲ್ಲಾ ವ್ಯಾಪ್ತಿಯಲ್ಲಿ 10 ಎಂ-ಸ್ಯಾಂಡ್ ಘಟಕಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ಎಂ-ಸ್ಯಾಂಡ್ ಘಟಕಗಳಿಂದ ಸಹ ಜಿಲ್ಲೆಯ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಎಂ-ಸ್ಯಾಂಡ್ ಮರಳು ಪೂರೈಕೆಯಾಗುತ್ತಿರುತ್ತದೆ. • ಅಲ್ಲದೇ ಚಿಕ್ಕಮಗಳೂರು ಜಿಲ್ಲಾ ವ್ಯಾಪ್ತಿಯ ತುಂಗಾ, ಭದ್ರಾ ಮತ್ತು ಹೇಮಾವತಿ ನದಿ ಪಾತ್ರಗಳಲ್ಲಿ 5 ಮರಳು ಬ್ಲಾಕ್ ಗಳನ್ನು ಹೊಸ ಮರಳು ನೀತಿ, 2020 ರಂತೆ ದಿನಾಂಕ 10.08.2020 ರಂದು ಕರ್ನಾಟಕ ಸ್ಟೇಟ್ ಕಾರ್ಪೋರೇಶನ್ ಇವರಿಗೆ ಮರಳು ಗಣಿಗಾರಿಕೆ ನಡೆಸಲು ಜಿಲ್ಲಾ ಮರಳು ಸಮಿತಿಯಿಂದ ಅಧಿಸೂಚನೆ ಹೊರಡಿಸಿ. ಆಶಯ ಪತ್ರವನ್ನು ನೀಡಲಾಗಿರುತ್ತದೆ. ಸದರಿ ಸಂಸ್ಥೆಯವರು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಪರಿಸರ ಅನುಮತಿ ಪತ್ರ ಪಡೆದು ಸಲ್ಲಿಸಿದ ನಂತರ ಜಿಲ್ಲಾ ಮರಳು ಸಮಿತಿಯಿಂದ ಸದರಿ ಸಂಸ್ಥೆಯವರಿಗೆ ಮರಳು ಗಣಿಗಾರಿಕೆ ನಡೆಸಲು ಅವಕಾಶ ಕಲ್ಪಿಸಲಾಗುವುದು.

--2

<table>
<tr><td></td><td></td><td>

- ಮುಂದುವರೆದು, ಚಿಕ್ಕಮಗಳೂರು ಜಿಲ್ಲೆಯ I, II & III ನೇ ಶ್ರೇಣಿಯ ಹಳ್ಳ/ತೊರೆಗಳಲ್ಲಿ ಪ್ರಾಥಮಿಕ ಹಂತದಲ್ಲಿ ಒಟ್ಟು 25 ಮರಳು ನಿಕ್ಷೇಪ ಪ್ರದೇಶಗಳನ್ನು ಗ್ರಾಮ ಪಂಚಾಯಿತಿಯಿಂದ ವಿಲೇಪಡಿಸಲು ಗುರುತಿಸಲಾಗಿರುತ್ತದೆ.

ಮೇಲ್ಕಂಡಂತೆ, ಶೃಂಗೇರಿ ವಿಧಾನ ಸಭೆಯ ವ್ಯಾಪ್ತಿಯಲ್ಲಿ ಮರಳಿನ ಸಮಸ್ಯೆಯನ್ನು ಬಗೆ ಹರಿಸಲು ಸರ್ಕಾರದಿಂದ ಕ್ರಮ ವಹಿಸಲಾಗಿದೆ.
</td></tr>
<tr><td>ಇ)</td><td>ಗ್ರಾಮ ಪಂಚಾಯಿತಿ ಮೂಲಕ ಮರಳು ಖರೀದಿಗೆ ಅವಕಾಶ ಕಲ್ಪಿಸಿದ್ದು, ಈಗ ಸ್ಥಗಿತಗೊಳಿಸಿರುವುದು ನಿಜವೇ (ವಿವರ ನೀಡುವುದು)</td><td>

- ಹೊಸ ಮರಳು ನೀತಿ, 2020 ರಂತೆ, I, II & III ನೇ ಶ್ರೇಣಿಯ ಹಳ್ಳ/ತೊರೆಗಳಲ್ಲಿ ಹಾಗೂ ಕೆರೆಗಳು ಲಭ್ಯವಿರುವ ಮರಳನ್ನು ತೆಗೆದು ವಿಲೇವಾರಿ ಮಾಡುವ ಜವಾಬ್ದಾರಿಯನ್ನು ಗ್ರಾಮ ಪಂಚಾಯಿತಿಗಳಿಗೆ ವಹಿಸಲಾಗಿರುತ್ತದೆ.
- ಅದರಂತೆ, ಪ್ರಾಥಮಿಕ ಹಂತದಲ್ಲಿ ಚಿಕ್ಕಮಗಳೂರು ಜಿಲ್ಲೆಯ I, II & III ನೇ ಶ್ರೇಣಿಯ ಹಳ್ಳ/ತೊರೆಗಳಲ್ಲಿ ಒಟ್ಟು 25 ಮರಳು ನಿಕ್ಷೇಪ ಪ್ರದೇಶಗಳನ್ನು ಗ್ರಾಮ ಪಂಚಾಯಿತಿಯಿಂದ ವಿಲೇಪಡಿಸಲು ಗುರುತಿಸಲಾಗಿರುತ್ತದೆ. ವಿವರಗಳು ಈ ಕೆಳಕಂಡಂತಿರುತ್ತವೆ.

<table>
<tr><th>ತಾಲ್ಲೂಕು</th><th>ಗ್ರಾಮ ಪಂಚಾಯಿತಿ ಹೆಸರು</th><th>ಹಳ್ಳ ಪ್ರದೇಶವಿರುವ ಗ್ರಾಮದ ಹೆಸರು</th><th>ಹಳ್ಳದ ಪಾತ್ರದ ಪಕ್ಕದ ಸ.ನಂ.</th></tr>
<tr><td rowspan="12">ಕೊಪ್ಪ</td><td rowspan="3">ಹಿರೇಕೊಡಿಗೆ</td><td>ಬೊಮ್ಲಾಪುರ</td><td>164</td></tr>
<tr><td>ಹಿರೇಕೊಡಿಗೆ</td><td>98</td></tr>
<tr><td>ಬೋಳಾಪುರ</td><td>83</td></tr>
<tr><td rowspan="2">ನಿಲುವಾಗಿಲು</td><td>ನಿಲುವಾಗಿಲು</td><td>160, 176, 203</td></tr>
<tr><td>ಹೆಗ್ಗಾರ್</td><td>113</td></tr>
<tr><td rowspan="6">ಹರಿಹರಪುರ</td><td>ಹರಿಹರಪುರ</td><td>129</td></tr>
<tr><td>ಹರಿಹರಪುರ</td><td>129</td></tr>
<tr><td>ಹರಿಹರಪುರ</td><td>177</td></tr>
<tr><td>ಹರಿಹರಪುರ</td><td>97, 24</td></tr>
<tr><td>ಹರಿಹರಪುರ</td><td>129</td></tr>
<tr><td>ಮತ್ವಾನಿ ಹಳ್ಳ</td><td>76</td></tr>
<tr><td>ಕೆಸವೆ</td><td>ಹೊಳೆಗದ್ದೆ, ಗೋಳ್ಗಾರ್, ವಾಟೇಸರಳು</td><td>57</td></tr>
<tr><td></td><td></td><td>ಕೆಳಕುಳಿ, ಕಾಡ್ದರೆ, ಹಾಳಗಾರು</td><td>61</td></tr>
</table>
</td></tr>
</table>

1497

		ಕಳಕುಳಿ, ಬಾಂದಡ್ಲು	85
	ಹರಂದೂರು	ಗುಣವಂತೆ	57
	ಶಾನುವಳ್ಳಿ	ಶಾನುವಳ್ಳಿ	–
ಶೃಂಗೇರಿ	ಮರ್ಕಲ್	ಮರ್ಕಲ್	132
		ಯಡುದಳ್ಳಿ	87, 119
		ಯಡದಾಳು	138
ಎನ್.ಆರ್.ಪುರ	ಹೊನ್ನೇಕೊಡಿಗೆ	ವರ್ಕಾಟೆ	103, 20
		ಹೊನ್ನೆಕೊಡಿಗೆ	1-10
		ಸಾರ್ಯ,	73
		ಸಾಲೂರು	104
		ಹಂದೂರು, ಬಿಳಾಲ್ ಕೊಪ್ಪ, ಲಕ್ಕಂದ	104, 70
		ನಿಡುವಳ್ಳಿ	–

ಈ ರೀತಿ ಗುರುತಿಸಿದ ಮರಳು ನಿಕ್ಷೇಪಗಳಿಂದ, ಮರಳು ಮಾರಾಟ ಪ್ರಕ್ರಿಯೆಯನ್ನು ಸಂಬಂಧಪಟ್ಟ ಗ್ರಾಮ ಪಂಚಾಯಿತಿಗಳಿಂದ ಕೈಗೊಳ್ಳಲು ಕ್ರಮವಹಿಸಲಾಗುತ್ತದೆ.

ಈ)	ಹಾಗಿದ್ದಲ್ಲಿ, ಗ್ರಾಮ ಪಂಚಾಯಿತಿಗಳಿಗೆ ಅವಕಾಶ ನೀಡುವುದರ ಮೂಲಕ ಸಣ್ಣ, ಮಧ್ಯಮ ವರ್ಗ, ಆಶ್ರಯ ಯೋಜನೆಗಳ ಮನೆ ನಿರ್ಮಾಣಕ್ಕೆ ಮರಳು ಖರೀದಿಸಲು ಅವಕಾಶ ಕಲ್ಪಿಸಲಾಗುವುದೇ ಹಾಗೂ ನಿಗದಿಪಡಿಸಿರುವ ಮಾರ್ಗ ಸೂಚಿಗಳೇನು? (ಆದೇಶದ ಪ್ರತಿ ನೀಡುವುದು)	ಹೊಸ ಮರಳು ನೀತಿ, 2020 ರಂತೆ I, II & III ನೇ ಶ್ರೇಣಿಯ ಹಳ್ಳ/ತೊರೆಗಳಲ್ಲಿ ಲಭ್ಯವಿರುವ ಮರಳನ್ನು ಗ್ರಾಮ ಪಂಚಾಯಿತಿಯಿಂದ ಆಯಾ ತಾಲ್ಲೂಕಿನ ಸ್ಥಳೀಯ ಯಾವುದೇ ಸಾರ್ವಜನಿಕ, ಸರ್ಕಾರಿ ನಿರ್ಮಾಣ ಕಾಮಗಾರಿ ಮತ್ತು ಸಮುದಾಯತ್ವ ನಿರ್ಮಾಣ ಕಾಮಗಾರಿಗಳಿಗೆ ಬಳಸಿಕೊಳ್ಳಲು ಅವಕಾಶ ಕಲ್ಪಿಸಿದೆ. ಆದೇಶದ ಪ್ರತಿಯನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

ಸಂಖ್ಯೆ: ಸಿಐ 470 ಎಂಎಂಎನ್ 2020

(ಸಿ.ಸಿ. ಪಾಟೀಲ)
ಗಣಿ ಮತ್ತು ಭೂವಿಜ್ಞಾನ ಸಚಿವರು

ಸಿ.ಸಿ. ಪಾಟೀಲ
ಗಣಿ ಮತ್ತು ಭೂವಿಜ್ಞಾನ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1498
2. ಸದಸ್ಯರ ಹೆಸರು : ಡಾ|| ಕೆ. ಶ್ರೀನಿವಾಸಮೂರ್ತಿ (ನೆಲಮಂಗಲ)
3. ಉತ್ತರಿಸುವ ದಿನಾಂಕ : 25.09.2020
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ನೆಲಮಂಗಲ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಕೈಗಾರಿಕಾ ಪ್ರದೇಶಗಳ ಸಂಖ್ಯೆಯೆಷ್ಟು; ಯಾವ ಕೈಗಾರಿಕೆ ಪ್ರದೇಶಕ್ಕೆ ಎಷ್ಟೆಷ್ಟು ಭೂಮಿಯನ್ನು ಹಂಚಿಕೆ ಮಾಡಲಾಗಿದೆ;</td><td>ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕಿನಲ್ಲಿ ಒಟ್ಟು 5 ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಿದ್ದು, ವಿವರ ಈ ಕೆಳಕಂಡಂತಿದೆ:
<table>
<tr><th>ಕ್ರ. ಸಂ</th><th>ಕೈಗಾರಿಕಾ ಪ್ರದೇಶ</th><th>ವಿಸ್ತೀರ್ಣ (ಎಕರೆಗಳಲ್ಲಿ)</th></tr>
<tr><td>1.</td><td>ದಾಬಸ್‌ಪೇಟೆ 1ನೇ ಹಂತ</td><td>276.55</td></tr>
<tr><td>2.</td><td>ದಾಬಸ್‌ಪೇಟೆ 2ನೇ ಹಂತ</td><td>62.00</td></tr>
<tr><td>3.</td><td>ಸೋಂಪುರ 1 ಮತ್ತು 2ನೇ ಹಂತ</td><td>1321.00</td></tr>
<tr><td>4.</td><td>ದಾಬಸ್‌ಪೇಟೆ 4ನೇ ಹಂತ</td><td>844.23</td></tr>
<tr><td>5.</td><td>ದಾಬಸ್‌ಪೇಟೆ 5ನೇ ಹಂತ</td><td>839.90</td></tr>
</table></td></tr>
<tr><td>ಆ.</td><td>ಕೆ.ಐ.ಎ.ಡಿ.ಬಿ. ಯಿಂದ ಭೂಮಿಯನ್ನು ಯಾವ್ಯಾವ ಉದ್ದೇಶಕ್ಕೆ ಹಂಚಿಕೆ ಮಾಡಲಾಗಿದೆ (ಸಂಪೂರ್ಣ ವಿವರ ನೀಡುವುದು)</td><td>ಸದರಿ ಕೈಗಾರಿಕಾ ಪ್ರದೇಶಗಳಲ್ಲಿ ಕೈಗಾರಿಕೆ ಮತ್ತು ಕೈಗಾರಿಕೆಗಳಿಗೆ ಪೂರಕವಾದ ಉದ್ದೇಶಗಳಿಗಾಗಿ ಜಮೀನನ್ನು ಹಂಚಿಕೆ ಮಾಡಲಾಗಿದೆ.</td></tr>
</table>

ಇ.	ಸದರಿ ಕ್ಷೇತ್ರದ ವ್ಯಾಪ್ತಿಯಲ್ಲಿ ರೈತರಿಂದ ಕೆ.ಐ.ಎ.ಡಿ.ಬಿ. ಸ್ವಾಧೀನಪಡಿಸಿಕೊಂಡ ಜಮೀನುಗಳೆಷ್ಟು; ಪ್ರತಿ ಎಕರೆ ಜಮೀನಿಗೆ ರೈತರಿಗೆ ನೀಡಿದ ಹಣವೆಷ್ಟು; (ಸರ್ವೆ ನಂಬರ್ ಸಹಿತ ರೈತರ ವಿಳಾಸದ ಸಮೇತ ಮಾಹಿತಿ ನೀಡುವುದು)	ಸದರಿ ಕೈಗಾರಿಕಾ ಪ್ರದೇಶಗಳಿಗಾಗಿ ಸ್ವಾಧೀನಪಡಿಸಿಕೊಂಡಿರು ಜಮೀನಿನ ವಿವರ ಮತ್ತು ಪ್ರತಿ ಎಕರೆಗೆ ನೀಡಿದ ಪರಿಹಾರ ದರ ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಿದೆ. ಅಂತಿಮ ಅಧಿಸೂಚನೆ ಪ್ರತಿಗಳನ್ನು ಅನುಬಂಧ-2 ರಲ್ಲಿ ಒದಗಿಸಿದೆ.
ಈ.	ಈ ಕ್ಷೇತ್ರದ ಎಡೆಹಳ್ಳಿಯಲ್ಲಿ ಭೂ ಸ್ವಾಧೀನ ಮಾಡಲಾಗಿದೆಯೇ; ಮಾಡಿದ್ದಲ್ಲಿ, ಎಷ್ಟು ಎಕರೆ ಜಮೀನು ಭೂಸ್ವಾಧೀನ ಮಾಡಿಕೊಳ್ಳಲಾಗಿದೆ; ಪ್ರತಿ ಎಕರೆ ಜಮೀನಿಗೆ ಸರ್ಕಾರ ನಿಗದಿ ಮಾಡಿದ ಹಣವೆಷ್ಟು; ಕೆ.ಐ.ಎ.ಡಿ.ಬಿ.ಯಿಂದ ಇದುವರೆಗೂ ಎಷ್ಟು ರೈತರಿಗೆ ಹಣ ಸಂದಾಯವಾಗಿದೆ; ಬಾಕಿ ?ರುವ ರೈತರಿಗೆ ಯಾವ ?ಮಯದಲ್ಲಿ ಪರಿಹಾರಧನ	ಎಡೇಹಳ್ಳಿ ಗ್ರಾಮದ 282-33 ಎಕರೆ ಜಮೀನನ್ನು ಕೈಗಾರಿಕಾ ಪ್ರದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾಗಿದೆ. ಈ ಪೈಕಿ 276-22 ಎಕರೆ ಜಮೀನಿಗೆ ಎಕರೆ ಒಂದಕ್ಕೆ ರೂ.1.10 ಲಕ್ಷ (1992ನೇ ಸಾಲಿನಲ್ಲಿ ಭೂಸ್ವಾಧೀನಪಡಿಸಿದ ಜಮೀನು) ಮತ್ತು 6-11 ಎಕರೆ ಜಮೀನಿಗೆ ಎಕರೆ ಒಂದಕ್ಕೆ ರೂ.1.00 ಕೋಟಿ (2018ನೇ ಸಾಲಿನಲ್ಲಿ ಭೂಸ್ವಾಧೀನಪಡಿಸಿದ ಜಮೀನು) ಪರಿಹಾರ ದರ ನಿಗದಿಪಡಿಸಲಾಗಿದೆ. 277-16 ಎಕರೆ ಜಮೀನಿನ ಪರಿಹಾರ ಪಾವತಿ ಕಾರ್ಯ ಪ್ರಗತಿಯಲ್ಲಿದ್ದು, ಉಳಿಕೆ 5-17 ಎಕರೆ ಜಮೀನಿನ ಪರಿಹಾರ ಪಾವತಿ ಕಾರ್ಯ ಪ್ರಗತಿಯಲ್ಲಿರುತ್ತದೆ.

	ಸಿಗಲಿದೆ; (ಸಂಪೂರ್ಣ ವಿವರ ನೀಡುವುದು)	
ಉ.	ಕೆ.ಐ.ಎ.ಡಿ.ಬಿ.ಯಿಂದ ಕೈಗಾರಿಕೆ ಸ್ಥಾಪನೆಗೆ ಭೂಮಿ ಹಂಚಿಕೆ ಮಾಡಲು ಇರುವ ಮಾನದಂಡಗಳೇನು; ಪ್ರತಿ ಎಕರೆ ಜಮೀನಿಗೆ ನಿಗದಿ ಮಾಡಿರುವ ಮೊತ್ತವೆಷ್ಟು; ನೆಲಮಂಗಲ ಕ್ಷೇತ್ರದ ಕೆ.ಐ.ಎ.ಡಿ.ಬಿ. ಪ್ರದೇಶಗಳಲ್ಲಿ ಎಷ್ಟು ನಿವೇಶನಗಳ ಖಾಲಿ ಇವೆ; (ವಿವರ ನೀಡುವುದು)	(see below)

ಕೈಗಾರಿಕಾ ಪ್ರದೇಶಗಳಲ್ಲಿ ನಿವೇಶನ ಹಂಚಿಕೆಗೆ ಇರುವ ನಿಯಮಾವಳಿಗಳನ್ನು ಅನುಬಂಧ-3 ರಲ್ಲಿ ಒದಗಿಸಿದೆ.

ಕ್ರ. ಸಂ	ಕೈಗಾರಿಕಾ ಪ್ರದೇಶ	ತಾತ್ಕಾಲಿಕ ಹಂಚಿಕೆ ದರ (ರೂ. ಲಕ್ಷಗಳಲ್ಲಿ)
1.	ದಾಬಸ್‌ಪೇಟೆ 1ನೇ ಹಂತ	70.00
2.	ದಾಬಸ್‌ಪೇಟೆ 2ನೇ ಹಂತ	70.00
3.	ಸೋಂಪುರ 1 ಮತ್ತು 2ನೇ ಹಂತ	185.00
4.	ದಾಬಸ್‌ಪೇಟೆ 4ನೇ ಹಂತ	150.00
5.	ದಾಬಸ್‌ಪೇಟೆ 5ನೇ ಹಂತ	139.00

ಹಾಲಿ ಸೋಂಪುರ 1ನೇ ಮತ್ತು 2ನೇ ಹಂತದ ಕೈಗಾರಿಕಾ ಪ್ರದೇಶಗಳಲ್ಲಿ 24.69 ಎಕರೆ ಮತ್ತು ದಾಬಸ್‌ಪೇಟೆ 4ನೇ ಹಂತದ ಕೈಗಾರಿಕಾ ಪ್ರದೇಶದಲ್ಲಿ 51.82 ಎಕರೆ ಜಮೀನು ಇರುತ್ತದೆ (ಇದರಲ್ಲಿ ತಕರಾರು ಇರುವ ಜಮೀನು ಒಳಗೊಂಡಿರುತ್ತದೆ).

ದಾಬಸ್‌ಪೇಟೆ 5ನೇ ಹಂತದ ಕೈಗಾರಿಕಾ ಪ್ರದೇಶದಲ್ಲಿ 618.00 ಎಕರೆ ಜಮೀನಿದ್ದು, ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಲಾಗುತ್ತಿದ್ದು, ಈ ಪೈಕಿ 261.00 ಎಕರೆ ಜಮೀನನ್ನು ಕೇಂದ್ರ ಸಾರಿಗೆ ಇಲಾಖೆಯ **Multi Modal Logistics Park** ಯೋಜನೆಗೆ ಮೀಸಲಿಡಲಾಗಿದೆ.

ರಾಜ್ಯ ಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿ ಸಭೆಗಳಲ್ಲಿ 300.00 ಎಕರೆ ಜಮೀನಿನ ಹಂಚಿಕೆಗೆ ಯೋಜನೆಗಳು ಅನುಮೋದನೆಗೊಂಡಿರುತ್ತವೆ.

		57.00 ಎಕರೆ ಪ್ರದೇಶವು ಕೈಗಾರಿಕಾ ಪ್ರದೇಶ ಅಭಿವೃದ್ಧಿಯಾ... ನಂತರ ಹಂಚಿಕೆಗೆ ಲಭ್ಯವಾಗುತ್ತದೆ.
ಊ.	ಕಳೆದ 3 ವರ್ಷಗಳಿಂದ ಕ್ಷೇತ್ರದಲ್ಲಿರುವ ಕೈಗಾರಿಕಾ ಪ್ರದೇಶಗಳಿಗೆ ಮೂಲಭೂತ ಸೌಲಭ್ಯಗಳನ್ನು ನೀಡಲು ಎಷ್ಟು ಅನುದಾನ ಮಂಜೂರು ಮಾಡಲಾಗಿದೆ; ಮಂಜೂರು ಮಾಡಿದ ಅನುದಾನದಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ? (ವಿವರ ನೀಡುವುದು)	ಎ) ಕ್ಲಿಷ್ಟಕರ ಮೂಲಭೂತ ಸೌಕರ್ಯ ಯೋಜನೆಯಡಿಯಲ್ಲಿ ಕಳೆದ 3 ವರ್ಷಗಳಲ್ಲಿ ನೆಲಮಂಗಲ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಸಂಬಂಧಪಟ್ಟ ಮಂಜೂರು ಮಾಡಿದ ಅನುದಾನದಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ :-

Sl. No.	Name of Industrial Area	Name of Work	Contract Amount (Rs. in lakhs)	Year
1)	Dobaspet 1st and 2nd Phase	Upgradation of Infrastructure facilities such as Roads, Drains, Culverts etc., in Dobaspet 1st and 2nd Phase Industrial Area, Nelamangala Taluk, Bangaluru Rural District.	964.78	2017-18
2)	Sompura 1st & 2nd Stage	Up-gradation of 45m wide Road No. 18, 19 & 24m wide roads No. 3, 9, 11 & 24 construction of RCC side drains at Sompura 1st & 2nd Stage Industrial Area, Bengaluru Rural District.	427.78	2019-20

ಬಿ) ಮಂಡಳಿಯ ಅನುದಾನದಲ್ಲಿ ಆಯವ್ಯಯದಲ್ಲಿ ನಿಗಧಿಪಡಿಸಿರುವಂತೆ ಕೆಳಕಂಡ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ:

Sl No.	Name of Industrial Area	Name of Work	Contract Amount (in Lakhs)	Year
1)	Dobaspet 4th Phase (Sub Layout Plot No.28 & 29-A)	Formation sub-layout in plot nos 28 & 29 A of 18 m wide roads (Road nos. 4A& 4B) Including asphalting construction of RCC Side drains, RCC cross drainage works & HDPE Water supply pipe line at Dobaspet 4th phase	368.80	2019-20
2)	Sompura 2nd Stage (Sub Layout Plot No.557)	Formation of 18M Wide Road including asphalting construction of RCC Side drains, spur culvert and Box Culvert at Sub Layout in Plot No.557 of Sompu... Indu...	449.48	2019-20

1498

		3)	Dobaspet 5th Phase	Formation of 45 m wide roads, construction of RCC side drains, RCC cross drainage works and HDPE water supply pipeline at Avverahalli Industrial Area, Nelamangala Taluk, Bengaluru Rural District.	4806.45	2019-20
		4)	Sompura 2nd Stage	Formation including asphalting of balance untackled roads & missing roads, construction of RCC side drain, RCC cross drainage works, RCC Storm water drain & HDPE dual water supply pipeline & chain link fencing at Sompura Industrial Area, 2nd Stage, Nelamangala Taluk, Bengaluru Rural District.	928.12	2019-20
		5)	Dobaspet 4th Phase (Sub Layout Plot No.278)	Formation including asphalting 18.00 m wide roads, construction of RCC side drain, RCC cross drainage work and HDPE pipe line at Sub-Layout is plot no:278, Avverahalli Industrial Area, Nelamangala Taluk, Benagluru Rural District-Regarding	102.32	2019-20

(ಜಗದೀಶ ಶೆಟ್ಟರ)

ಸಂಖ್ಯೆ: ಸಿಐ 162 ಐಎಪಿ (ಇ) 2020

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕರ್ನಾಟಕ ವಿಧಾನಸಭೆ

ವಿಧಾನಸಭೆ ಸದಸ್ಯರ ಹೆಸರು	:	ಡಾ|| ಶ್ರೀನಿವಾಸಮೂರ್ತಿ ಕೆ. (ನೆಲಮಂಗಲ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1500
ಉತ್ತರಿಸಬೇಕಾದ ದಿನಾಂಕ	:	25/09/2020.
ಉತ್ತರಿಸಬೇಕಾದವರು	:	ಮಾನ್ಯ ನಗರಾಭಿವೃದ್ಧಿ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ)	ನೆಲಮಂಗಲ ವಿಧಾನಸಭಾ ಕ್ಷೇತ್ರದ ನೆಲಮಂಗಲ ನಗರಸಭೆಯ ವ್ಯಾಪ್ತಿಯಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಈ ಪ್ರದೇಶಗಳಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ನಿರ್ಮಾಣ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೇ;	**ನೀರು ಸರಬರಾಜು ಯೋಜನೆ:** ನೆಲಮಂಗಲ ನಗರದ ಹಾಲಿ ಜನಸಂಖ್ಯೆ ಸುಮಾರು 70000 ಇದ್ದು, ಸಾರ್ವಜನಿಕರಿಗೆ ಕುಡಿಯುವ ನೀರು ಸರಬರಾಜು ಮೂಲವು 268 ಕೊಳವೆ ಬಾವಿಗಳಿಂದಾಗುತ್ತಿದ್ದು, ದಿನಂಪ್ರತಿ 70 ಲೀಟರ್‌ನಂತೆ 3 ರಿಂದ 4 ದಿನಗಳಿಗೊಮ್ಮೆ ನೀರು ಸರಬರಾಜನ್ನು ನಗರಸಭೆ ವತಿಯಿಂದ ಮಾಡಲಾಗುತ್ತಿದೆ. ಆದರೆ, ನೆಲಮಂಗಲ ನಗರಕ್ಕೆ ಮೇಲ್ಮೈ ಜಲಮೂಲದಿಂದ ಕುಡಿಯುವ ನೀರು ಸರಬರಾಜು ಮಾಡಲು ಸಮೀಪದಲ್ಲಿ ಯಾವುದೇ ನದಿ ಅಥವಾ ಮೇಲ್ಮೈ ಜಲ ಮೂಲಗಳಿರುವುದಿಲ್ಲ. ಅದುದರಿಂದ ನಗರದ ನೀರಿನ ಅಭಾವವನ್ನು ನೀಗಿಸಲು ಶಾಶ್ವತ ಮೂಲದಿಂದ ನೀರು ಸರಬರಾಜು ಯೋಜನೆಯನ್ನು ಕೈಗೊಳ್ಳಲು ಅವಶ್ಯವಿರುವ 0.41 ಟಿ.ಎಂ.ಸಿ ನೀರನ್ನು ಹೇಮಾವತಿ ನಾಲೆಯಿಂದ ಪಡೆಯಲು ಅನುಮತಿ ಕೋರಿ ವ್ಯವಸ್ಥಾಪಕ ನಿರ್ದೇಶಕರು, ಕ.ನ.ನೀ.ಸ ಮತ್ತು ಒ.ಚ ಮಂಡಳಿ ಬೆಂಗಳೂರು ಇವರ ಪತ್ರ ಸಂಖ್ಯೆ: 3506 ದಿನಾಂಕ:01.03.2017ರಲ್ಲಿ ಘನ ಸರ್ಕಾರವನ್ನು ಕೋರಲಾಗಿದ್ದು, ಈವರೆಗೆ ನೀರಿನ ಹಂಚಿಕೆ ಅನುಮತಿ ದೊರೆತಿರುವುದಿಲ್ಲ. **ಒಳಚರಂಡಿ ಯೋಜನೆ:** ನೆಲಮಂಗಲ ಪಟ್ಟಣವು ಪುರಸಭೆಯಿಂದ ನಗರಸಭೆಯಾಗಿ ಮೇಲ್ದರ್ಜೆಗೇರಿಸಿರುವುದರಿಂದ, ಪೌರಾಯುಕ್ತರು ನಗರಸಭೆ ಇವರ ದಿನಾಂಕ 16/4/2020 ರ ಪತ್ರದಲ್ಲಿ ಕೋರಿರುವಂತೆ ಹೊಸದಾಗಿ ನಗರಸಭೆಗೆ ಸೇರ್ಪಡೆಗೊಂಡಿರುವ ಗ್ರಾಮಗಳನ್ನು ಸಹ ಸೇರಿಸಿ ಸರ್ವೆ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ. ಅದರಂತೆ ಸಮಗ್ರ ಒಳಚರಂಡಿ ಯೋಜನೆಯ ಅಂದಾಜು ಪಟ್ಟಿಯನ್ನು ಶೀಘ್ರವಾಗಿ ತಯಾರಿಸಿ ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗುವುದು.

ಇ)	ಬಂದಿದ್ದಲ್ಲಿ, ಯಾವ ಹಂತದಲ್ಲಿದೆ; ಯಾವಾಗ ಮಂಜೂರು ಮಾಡಲಾಗುವುದು; (ವಿವರ ನೀಡುವುದು)	ಹೇಮಾವತಿ ನಾಲೆಯಿಂದ ನೀರಿನ ಹಂಚಿಕೆಯಾದ ನಂತರ, ಕುಡಿಯುವ ನೀರಿನ ಯೋಜನೆಯ ಅಂದಾಜು ಪಟ್ಟಿಯನ್ನು ತಯಾರಿಸಿ ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗುವುದು. ಒಳಚರಂಡಿ ಯೋಜನೆಯ ಅಂದಾಜು ಪಟ್ಟಿ ತಯಾರಿಕಾ ಹಂತದಲ್ಲಿದ್ದು, ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗುವುದು.
ಈ)	ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಯ ಯೋಜನಾ ವೆಚ್ಚವೆಷ್ಟು;	ಅಂದಾಜು ಪಟ್ಟಿಗಳು ತಯಾರಿಕಾ ಹಂತದಲ್ಲಿವೆ.
ಉ)	ನೆಲಮಂಗಲ ನಗರಸಭಾ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಿಗೆ ಶುದ್ಧ ಕುಡಿಯುವ ನೀರನ್ನು ಪೂರೈಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;	ನೆಲಮಂಗಲ ನಗರಸಭಾ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಿಗೆ ಶುದ್ಧ ಕುಡಿಯುವ ನೀರನ್ನು ಸರಬರಾಜು ಮಾಡಲು ಹೇಮಾವತಿ ನಾಲೆಯಿಂದ ನೀರಿನ ಹಂಚಿಕೆಯಾದ ನಂತರ, ಅಂದಾಜು ಪಟ್ಟಿಯನ್ನು ತಯಾರಿಸಿ ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗುವುದು.
ಊ)	ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಯನ್ನು ಕೈಗೊಳ್ಳಲು ನೆಲಮಂಗಲ ನಗರಸಭೆಯಿಂದ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಪಡೆದಿರುವ ಶುಲ್ಕವೆಷ್ಟು;(ಮಾಹಿತಿ ನೀಡುವುದು)	ನೀರು ಸರಬರಾಜು ವ್ಯವಸ್ಥೆ ಕಲ್ಪಿಸುವ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲು ನಗರಸಭೆವತಿಯಿಂದ ಯಾವುದೇ ಶುಲ್ಕವನ್ನು ಪಡೆದಿರುವುದಿಲ್ಲ. ಒಳಚರಂಡಿ ವ್ಯವಸ್ಥೆ ಕಲ್ಪಿಸುವ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲು ಸರ್ವೆಶುಲ್ಕ ರೂ.41.75 ಲಕ್ಷಗಳನ್ನು ನಗರಸಭೆವತಿಯಿಂದ ಮಂಡಳಿಗೆ ಪಾವತಿಸಲಾಗಿದೆ.
ಋ)	ನೆಲಮಂಗಲ ನಗರವು ಬೆಂಗಳೂರಿನ ಸಮೀಪದಲ್ಲಿದ್ದು, ಬಹಳ ಬೇಗ ಅಭಿವೃದ್ಧಿ ಹೊಂದುತ್ತಿರುವ ಪ್ರದೇಶವಾಗಿರುವುದು ನಿಜವಲ್ಲವೇ; ಸದರಿ ಪ್ರದೇಶವು ಪುರಸಭೆಯಿಂದ ನಗರಸಭೆಯಾಗಿ ಮೇಲ್ದರ್ಜೆಗೇರಿಸಿದ್ದು, ಹೆಚ್ಚಿನ ಜನಸಂಖ್ಯೆಯಿಂದ ನೈರ್ಮಲ್ಯ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಒಳಚರಂಡಿ ವ್ಯವಸ್ಥೆ ಹಾಗೂ ನೀರು ಸರಬರಾಜು ಮಾಡಲು ವಿಳಂಬ ನೀತಿ ಅನುಸರಿಸುತ್ತಿರಲು ಕಾರಣವೇನು; ಸದರಿ ಕಾಮಗಾರಿಗಳನ್ನು ಶೀಘ್ರವಾಗಿ ಪ್ರಾರಂಭ ಮಾಡಲು ಸರ್ಕಾರಕ್ಕಿರುವ ತೊಂದರಗಳೇನು?	ಬಂದಿದೆ. ಜಲಸಂಪನ್ಮೂಲ ಇಲಾಖೆಯಿಂದ ನೀರಿನ ಹಂಚಿಕೆ ಅನುಮತಿ ದೊರೆತ ನಂತರ ನೀರು ಸರಬರಾಜು ಯೋಜನೆಯ ವಿವರವಾದ ಅಂದಾಜು ಪಟ್ಟಿಯನ್ನು ತಯಾರಿಸಲಾಗುವುದು ಹಾಗೂ ಒಳಚರಂಡಿ ಯೋಜನೆಯ ಅಂದಾಜನ್ನು ಸಿದ್ದಪಡಿಸಲಾಗುತ್ತಿದ್ದು, ಸರ್ಕಾರಕ್ಕೆ ಅನುಮೋದನೆಗೆ ಶೀಘ್ರವಾಗಿ ಸಲ್ಲಿಸಲಾಗುವುದು.

ಸಂಖ್ಯೆ: ನಅಇ 148 ಯುಎಂಎಸ್ 2020

(ಬಿ.ಎ. ಬಸವರಾಜು)
ನಗರಾಭಿವೃದ್ಧಿ ಸಚಿವರು

1505

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1505
ಸದಸ್ಯರ ಹೆಸರು	:	ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ)
ಉತ್ತರಿಸುವವರು	:	ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು
ಉತ್ತರಿಸುವ ದಿನಾಂಕ	:	25.09.2020

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಮತ್ತು ಸ್ಥಗಿತಗೊಂಡಿರುವ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)	ರಾಜ್ಯದಲ್ಲಿರುವ ಒಟ್ಟು 542 ಬೃಹತ್ ಮತ್ತು ಮಧ್ಯಮ ವರ್ಗದ ಕೈಗಾರಿಕೆಗಳು ಇದ್ದು ವಿವರಗಳನ್ನು **ಅನುಬಂಧ-1 ರಲ್ಲಿ** ನೀಡಲಾಗಿದೆ. ಇವುಗಳಲ್ಲಿ 31 ಕೈಗಾರಿಕೆಗಳು ಮುಚ್ಚಿರುತ್ತವೆ ವಿವರಗಳನ್ನು **ಅನುಬಂಧ-2 ರಲ್ಲಿ** ನೀಡಲಾಗಿದೆ.
ಆ	ರಾಜ್ಯದಲ್ಲಿರುವ ಬೃಹತ್ ಮತ್ತು ಮಧ್ಯಮಗಳ ಕೈಗಾರಿಕೆಗಳ ವಸಾಹತುಗಳೆಷ್ಟು; (ಜಿಲ್ಲಾವಾರು ವಸಾಹತುಗಳ ಸಂಖ್ಯೆ ಮತ್ತು ವಸಾಹತುಗಳ ವಿಸ್ತರಣಾ ಮಾಹಿತಿ ಒದಗಿಸುವುದು)	(see table below)

ಕ್ರ. ಸಂ.	ಜಿಲ್ಲೆ	ಕೈಗಾರಿಕಾ ಪ್ರದೇಶ	ವಿಸ್ತೀರ್ಣ (ಎಕರೆಗಳಲ್ಲಿ)
1	ಬಾಗಲಕೋಟೆ	3	392.62
2	ಬೆಂಗಳೂರು ನಗರ	16	6700.96
3	ಬೆಂಗಳೂರು ಗ್ರಾಮಾಂತರ	17	8779.37
4	ಬೆಳಗಾವಿ	8	1979.20
5	ಬಳ್ಳಾರಿ	9	1706.09
6	ಬೀದರ್	8	232.76
7	ವಿಜಯಪುರ	4	1156.32
8	ಚಾಮರಾಜ ನಗರ	1	1460.47
9	ಚಿಕ್ಕ ಬಳ್ಳಾಪುರ	4	1305.48
10	ಚಿಕ್ಕಮಂಗಳೂರು	2	144.47
11	ಚಿತ್ರದುರ್ಗ	1	87.23
12	ದಕ್ಷಿಣ ಕನ್ನಡ	7	2462.47
13	ದಾವಣಗೆರೆ	7	651.61
14	ಧಾರವಾಡ	14	4863.23
15	ಗದಗ	1	162.75
16	ಕಲಬುರ್ಗಿ	4	1293.99
17	ಹಾಸನ	7	2196.53
18	ಹಾವೇರಿ	1	100.00
19	ಕೊಡಗು	1	250.00
20	ಕೋಲಾರ	8	3141.33
21	ಕೊಪ್ಪಳ	1	38.08
22	ಮಂಡ್ಯ	4	562.28
23	ಮೈಸೂರು	12	6262.25
24	ರಾಯಚೂರು	6	2217.11
25	ರಾಮನಗರ	7	4337.06
26	ಶಿವಮೊಗ್ಗ	7	823.86

27	ತುಮಕೂರು	12	6586.90
28	ಉಡುಪಿ	4	264.84
29	ಉತ್ತರ ಕನ್ನಡ	2	39.14
30	ಯಾದಗಿರಿ	2	3314.90
	ಒಟ್ಟು	**180**	**65613.10**

ಇ ರಾಜ್ಯದಲ್ಲಿ ಎಷ್ಟು ಕೈಗಾರಿಕಾ ವಸಾಹತು ಪ್ರದೇಶಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ? (ಮಾಹಿತಿ ಒದಗಿಸುವುದು)

ಪ್ರಸ್ತುತ 2018-19ನೇ ಸಾಲಿನಲ್ಲಿ ಅಭಿವೃದ್ಧಿಗೊಳ್ಳುತ್ತಿರುವ ಕೈಗಾರಿಕಾ ಪ್ರದೇಶಗಳು.

ಕ್ರ. ಸಂ.	**ಜಿಲ್ಲೆ**	**ಕೈಗಾರಿಕಾ ಪ್ರದೇಶ**	**ವಿಸ್ತೀರ್ಣ (ಎಕರೆಗಳಲ್ಲಿ)**
1	ಮೈಸೂರು	ತಾಂಡ್ಯ 2 ನೇ ಹಂತ	646.12
2	ಬಾಗಲಕೋಟೆ	ಬಲಕುಂದಿ	94.03
3	ತುಮಕೂರು	ಶಿರಾ 1ನೇ ಹಂತ	815.27
4	ಉತ್ತರ ಕನ್ನಡ	ಅಂಬೇವಾಡಿ ಆಟೋ ನಗರ	5.00
5	ಬಳ್ಳಾರಿ	ಸ್ಟೀಲ್ ಆನ್ಸಿಲರಿ ಝೋನ್	538.437
6	ದಾವಣಗೆರೆ	ಕುರುಬರಹಳ್ಳಿ-ಸಾರಥಿ	290.32

ಪ್ರಸ್ತುತ 2019-20ನೇ ಸಾಲಿನಲ್ಲಿ ಅಭಿವೃದ್ಧಿಗೊಳ್ಳುತ್ತಿರುವ ಕೈಗಾರಿಕಾ ಪ್ರದೇಶಗಳು.

ಕ್ರ. ಸಂ.	**ಜಿಲ್ಲೆ**	**ಕೈಗಾರಿಕಾ ಪ್ರದೇಶ**	**ವಿಸ್ತೀರ್ಣ (ಎಕರೆಗಳಲ್ಲಿ)**
1	ಬೆಂಗಳೂರು ಗ್ರಾಮಾಂತರ	ಆದಿನಾರಾಯಣಹೊಸಹಳ್ಳಿ ಕೈಗಾರಿಕಾ ಪ್ರದೇಶ	195.33
2		ದಾಬಾಸ್‌ಪೇಟೆ ೫ನೇ ಹಂತ ಕೈಗಾರಿಕಾ ಪ್ರದೇಶ	839.90
3	ಬೆಳಗಾವಿ	ಕನಾಗಾಲ ಕೈಗಾರಿಕಾ ಪ್ರದೇಶ	818.10
4	ವಿಜಯಪುರ	ಮುಳವಾಡ ಕೈಗಾರಿಕಾ ಪ್ರದೇಶ	562.50

ಸಿಐ 243 ಎಸ್‌ಪಿಐ 2020

(ಜಗದೀಶ್ ಶೆಟ್ಟರ್)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಸಾರ್ವಜನಿಕ ಉದ್ದಿಮೆಗಳ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1526
ಮಾನ್ಯ ಸದಸ್ಯರ ಹೆಸರು	:	ಶ್ರೀ ಯತೀಂದ್ರ ಸಿದ್ದರಾಮಯ್ಯ ಡಾ|| (ವರುಣ)
ಉತ್ತರಿಸಬೇಕಾದ ದಿನಾಂಕ	:	25-09-2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ನಗರ ಸ್ಥಳೀಯ ಸಂಸ್ಥೆಗಳಲ್ಲಿ ಎನ್‌ಜಿಟಿ ವತಿಯಿಂದ ಸೂಚಿಸಿರುವ ಪರಿಸರ ಸಂರಕ್ಷಣೆ ಮಾರ್ಗಸೂಚಿಗಳೇನು; ಇದರನ್ವಯ, ಯಾವ ನಗರಗಳಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಕಸ ನಿರ್ವಹಣೆ ಮತ್ತು ಘನತ್ಯಾಜ್ಯ ವಿಲೇವಾರಿ ಕುರಿತು ಕ್ರಮ ಕೈಗೊಳ್ಳಲಾಗಿದೆ; (ವಿವರ ನೀಡುವುದು)	ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯು (ಎನ್.ಜಿ.ಟಿ.) ಪರಿಸರ ಸಂರಕ್ಷಣೆ, ಕಾಡುಗಳು ಮತ್ತು ಇತರೆ ನೈಸರ್ಗಿಕ ಸಂಪನ್ಮೂಲ ಸಂರಕ್ಷಣೆಗೆ ಸಂಬಂಧಿಸಿದ ಪ್ರಕರಣಗಳನ್ನು ಪರಣಾಮಕಾರಿಯಾಗಿ ಮತ್ತು ತ್ವರಿತವಾಗಿ ವಿಲೇವಾರಿ ಮಾಡಲು ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ ಕಾಯ್ದೆ (2010) ಅಡಿಯಲ್ಲಿ ಸ್ಥಾಪಿಸಲಾದ ವಿಶೇಷ ಸಂಸ್ಥೆಯಾಗಿದೆ. ಪರಿಸರಕ್ಕೆ ಸಂಬಂಧಿಸಿದ ಏಳು ಕಾಯ್ದೆಗಳ ಅಡಿಯಲ್ಲಿ ಎನ್.ಜಿ.ಟಿ. ವ್ಯವಹರಿಸುತ್ತದೆ. • ಜಲ (ಮಾಲಿನ್ಯ ತಡೆಗಟ್ಟುವಿಕೆ ಮತ್ತು ನಿಯಂತ್ರಣ) ಕಾಯ್ದೆ1974 • ಜಲ (ಮಾಲಿನ್ಯ ತಡೆಗಟ್ಟುವಿಕೆ ಮತ್ತು ನಿಯಂತ್ರಣ) ಸೆಸ್ ಕಾಯ್ದೆ1977 • ಅರಣ್ಯ (ಸಂರಕ್ಷಣೆ) ಕಾಯ್ದೆ 1980 • ವಾಯು (ಮಾಲಿನ್ಯ ತಡೆಗಟ್ಟುವಿಕೆ ಮತ್ತು ನಿಯಂತ್ರಣ) ಕಾಯ್ದೆ 1981 • ಪರಿಸರ (ಸಂರಕ್ಷಣೆ) ಕಾಯ್ದೆ 1986 • ಸಾರ್ವಜನಿಕ ಹೊಣೆಗಾರಿಕೆ ವಿಮಾ ಕಾಯ್ದೆ 1991 • ಜೈವಿಕ ವೈವಿಧ್ಯತೆ ಕಾಯ್ದೆ 2002 ಅದರಂತೆ, ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮೇಲ್ಕಂಡ ಕಾಯ್ದೆಗಳಲ್ಲಿ ಅನ್ವಯಿಸುವ ವಿಷಯಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ನಿರ್ದೇಶನಗಳನ್ನು ಆಯಾ ಪ್ರಕರಣದ ವಿಚಾರಣೆಯ ವೇಳೆ ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯ ಪೀಠವು ನೀಡುತ್ತಿರುತ್ತದೆ. ಮಾನ್ಯ ಹಸಿರು ನ್ಯಾಯ ಪೀಠದಲ್ಲಿ ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ಇದುವರೆವಿಗೂ ಒಟ್ಟಾರೆ 32,626 ಪ್ರಕರಣಗಳು ದಾಖಲಾಗಿದ್ದು, 29,760 ಪ್ರಕರಣಗಳನ್ನು ವಿಲೇ ಮಾಡಲಾಗಿದೆ ಮತ್ತು 2866 ಪ್ರಕರಣಗಳು ಬಾಕಿ ಇರುತ್ತವೆ. ಮಾನ್ಯ ಹಸಿರು ನ್ಯಾಯ ಪೀಠವು ಪ್ರಕರಣ ಸಂಖ್ಯೆ: O.A. No. 606/2018 ರಲ್ಲಿ, ಘನ ತ್ಯಾಜ್ಯ ವಸ್ತು ನಿರ್ವಹಣೆ ನಿಯಮಗಳು,

		2016 ರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಹಲವಾರು ನಿರ್ದೇಶನಗಳನ್ನು ಕಳೆದ 2 ವರ್ಷಗಳಿಂದ ನೀಡುತ್ತಿದ್ದು, ಇದರನ್ವಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು ದಿನಾಂಕ 31-03-2021 ರೊಳಗಾಗಿ ಘನ ತ್ಯಾಜ್ಯ ವಸ್ತು ನಿರ್ವಹಣೆಯ ಯೋಜನೆಯನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸಬೇಕಿರುತ್ತದೆ. ಅದರಂತೆ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಘನ ತ್ಯಾಜ್ಯ ವಸ್ತು ನಿರ್ವಹಣೆಗೆ ಸಂಬಂಧಿಸಿದಂತೆ ಪ್ರಾಥಮಿಕ ತ್ಯಾಜ್ಯ ಸಂಗ್ರಹಣೆ, ದ್ವಿತೀಯ ಹಂತದ ತ್ಯಾಜ್ಯ ಸಾಗಾಣಿಕೆ, ತ್ಯಾಜ್ಯ ಸಂಸ್ಕರಣೆ ಮತ್ತು ವೈಜ್ಞಾನಿಕ ವಿಲೇವಾರಿ ಮಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ. ನಗರ ಸ್ಥಳೀಯ ಸಂಸ್ಥೆಗಳಲ್ಲಿ ಘನ ತ್ಯಾಜ್ಯ ವಸ್ತು ನಿರ್ವಹಣೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾಧಿಸಿರುವ ಪ್ರಗತಿಯ ವಿವರಗಳನ್ನು **ಅನುಬಂಧ-1** ರಲ್ಲಿ ಲಗತ್ತಿಸಲಾಗಿದೆ.
ಆ)	ಎನ್.ಜಿ.ಟಿ ಸೂಚನೆಯನ್ವಯ, ಯು.ಜಿ.ಡಿ. ಹಾಗೂ ಎಸ್.ಟಿ.ಪಿ. ಗಳನ್ನು ನಿರ್ಮಿಸಲು ನಿಗದಿಪಡಿಸಿದ ಅವಧಿಯೆಷ್ಟು; ಯಾವ ಕಾಲ ಮಿತಿಯಲ್ಲಿ ಯೋಜನೆಗಳನ್ನು ಪೂರ್ಣಗೊಳಿಸಲಾಗುವುದು;	ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಯು.ಜಿ.ಡಿ. ಮತ್ತು ಎಸ್.ಟಿ.ಪಿ. ಗಳನ್ನು ನಿರ್ಮಿಸಲು, 1) ಪ್ರಕರಣ ಸಂಖ್ಯೆ: O.A. No. 593/2017 ರಲ್ಲಿ NGT ಯು ದಿನಾಂಕ: 28-08-2019ರ ಆದೇಶದಲ್ಲಿ, ಎಲ್ಲಾ ಸ್ಥಳೀಯ ಸಂಸ್ಥೆಗಳು ಮತ್ತು ಸಂಬಂಧಿಸಿದ ರಾಜ್ಯ ಸರ್ಕಾರದ ಇಲಾಖೆಗಳು ಶೇ. 100ರಷ್ಟು ಕೊಳಚೆ ನೀರಿನ ಶುದ್ಧೀಕರಣವನ್ನು ದಿನಾಂಕ 31-03-2020ರ ಒಳಗೆ ನಿರ್ಧಿಷ್ಟವಾಗಿ ಮಾಡಲು ನಿರ್ದೇಶಿಸಿದೆ ಹಾಗು ಅದಕ್ಕೆ ಮುನ್ನ ಕೊಳಚೆ ನೀರು ಉತ್ಪತ್ತಿಯಾಗುವ ಮೂಲಗಳನ್ನು ಮತ್ತು ಚರಂಡಿಗಳನ್ನು ಎಸ್.ಟಿ.ಪಿ.ಗೆ ಸಂಪರ್ಕ ನೀಡುವ ಕಾಮಗಾರಿಗಳನ್ನು ಹಾಗು ಎಸ್.ಟಿ.ಪಿ. ನಿರ್ಮಾಣ ಕಾಮಗಾರಿಗಳನ್ನು ಪ್ರಾರಂಭಿಸಲು ನಿರ್ದೇಶಿಸಿದೆ. 2) ಪ್ರಕರಣ ಸಂಖ್ಯೆ: O.A. No. 673/2018 ರಲ್ಲಿ NGT ಯು ದಿನಾಂಕ: 08-04-2019ರ ಆದೇಶದಲ್ಲಿ ಎಸ್.ಟಿ.ಪಿ. ಗಳ ನಿರ್ಮಾಣ ಮತ್ತು ಚಾಲನೆಯ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ತಯಾರಿಸಿ, ದಿನಾಂಕ 01-04-2019 ರಿಂದ ಎರಡು ವರ್ಷಗಳ ಅವಧಿಯಲ್ಲಿ ಅಂದರೆ, ದಿನಾಂಕ: 31-03-2021ರ ಒಳಗೆ ಪೂರ್ಣಗೊಳಿಸಲು ನಿರ್ದೇಶಿಸಿದೆ. ಸರ್ಕಾರದಿಂದ ಒದಗಿಸುವ ಅನುದಾನದ ಲಭ್ಯತೆಯ ಮೇರೆಗೆ ಹಾಗು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಲಭ್ಯವಿರುವ ಅನುದಾನದಿಂದ ನಗರ / ಪಟ್ಟಣಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ನದಿ / ಕೆರೆಗಳಿಗೆ ಶುದ್ಧೀಕರಿಸದೆ ವಿಸರ್ಜಿಸುವುದನ್ನು ತಡೆಗಟ್ಟಲು ದಿನಾಂಕ: 31-03-2021ರ ಒಳಗೆ ಪೂರ್ಣಗೊಳಿಸಲು ಕ್ರಮ ವಹಿಸಲು ಯೋಜಿಸಲಾಗಿದೆ.

ಇ)	ಸದರಿ ಯೋಜನೆಗಳನ್ನು ಕೈಗೊಳ್ಳಲು ಸರ್ಕಾರವು ನಿಗದಿಪಡಿಸಿರುವ ಅನುದಾನವೆಷ್ಟು (ಸ್ಥಳೀಯ ಸಂಸ್ಥೆವಾರು ವಿವರ ನೀಡುವುದು)	ಸರ್ಕಾರದ ಹಂತದಲ್ಲಿ ಅನುದಾನ ನಿಗದಿಪಡಿಸಿಲ್ಲ. ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯು ನೀಡಿರುವ ವಿವಿಧ ಆದೇಶಗಳಲ್ಲಿ ನಿಗದಿತ ಕಾಲಾವಧಿಯೊಳಗೆ ಒಳಚರಂಡಿ ತ್ಯಾಜ್ಯ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸುವವರೆಗೂ ಕೂಡಲೇ ಒಳಚರಂಡಿ ತ್ಯಾಜ್ಯದ ನೀರನ್ನು ನದಿಗಳಿಗೆ ವಿಸರ್ಜಿಸುವುದನ್ನು ನಿಲ್ಲಿಸಲು ಹಾಗು ಫೈಟೋ-ರೆಮೆಡಿಯೇಷನ್ ನಂತಹ ಸರಳ ಸಂಸ್ಕರಣಾ ವಿಧಾನಗಳನ್ನು ಅನುಸರಿಸಿ ತ್ಯಾಜ್ಯ ನೀರನ್ನು ಸಂಸ್ಕರಿಸಲು ಸೂಚಿಸಲಾಗಿದೆ. ನಗರ ಸ್ಥಳೀಯ ಸಂಸ್ಥೆಗಳಲ್ಲಿ ಉತ್ಪತ್ತಿಯಾಗುವ ಒಳಚರಂಡಿ ತ್ಯಾಜ್ಯದ ನೀರು ನದಿಗೆ ಅಥವಾ ಬೇರೆ ಯಾವುದೇ ಜಲಮೂಲಗಳಿಗೆ ವಿಸರ್ಜನೆಯಾಗುತ್ತಿದ್ದಲ್ಲಿ ಅದನ್ನು ಕೂಡಲೇ ತಡೆದು ಹರಿವನ್ನು ಮಾರ್ಗಾಂತರ ಮಾಡಿ Phyto-remediation, Bio-remediation ಮುಂತಾದ ಸರಳ ವಿಧಾನಗಳನ್ನು ಅನುಸರಿಸಿ ತ್ಯಾಜ್ಯ ನೀರನ್ನು ಸಂಸ್ಕರಿಸಲು ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ಹಾಗೂ ಒಂದುವೇಳೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಎಸ್.ಟಿ.ಪಿ. ಇದ್ದು ಅದರ ಸಾಮರ್ಥ್ಯಕ್ಕಿಂತ ಕಡಿಮೆ ಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿದ್ದಲ್ಲಿ ಚರಂಡಿ / ಒಳಚರಂಡಿ ಮೂಲಕ ನದಿಗೆ ಸೇರುತ್ತಿರುವ ತ್ಯಾಜ್ಯದ ನೀರನ್ನು Intersection & Diversion ವಿಧಾನ ಅನುಸರಿಸಿ ಎಸ್.ಟಿ.ಪಿ. ಗೆ ಮಾರ್ಗಾಂತರ ಮಾಡಲು ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ನಗರ ಸ್ಥಳೀಯ ಸಂಸ್ಥೆಗಳಿಗೆ ನಿರ್ದೇಶನಗಳನ್ನು ನೀಡಲಾಗಿರುತ್ತದೆ. ಸ್ವಚ್ಛ ಭಾರತ್ ಮಿಷನ್ (ನಗರ) ಯೋಜನೆಯಡಿ ಘನತ್ಯಾಜ್ಯ ವಸ್ತು ನಿರ್ವಹಣೆಗಾಗಿ ಈಗಾಗಲೇ ಅನುಮೋದಿತಗೊಂಡಿರುವ ಡಿ.ಪಿ.ಆರ್. ಗಳ ಅನುಸಾರ ರಾಜ್ಯದ 218 ನಗರ ಸ್ಥಳೀಯ ಸಂಸ್ಥೆಗಳಿಗೆ ನಿಗದಿಗೊಳಿಸಲಾಗಿರುವ ಅನುದಾನದ ವಿವರಗಳನ್ನು **ಅನುಬಂಧ-2** ರಲ್ಲಿ ಲಗತ್ತಿಸಿದೆ. ಉಳಿಕೆ 65 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಡಿ.ಪಿ.ಆರ್. ಗಳು ಅನುಮೋದನೆಗೊಂಡ ನಂತರ ಸದರಿ ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನವನ್ನು ನಿಗಧಿಗೊಳಿಸಲಾಗುವುದು.

ಸಂಖ್ಯೆ: ನಅಇ 268 ಸಿಎಸ್ಎಸ್ 2020

(ಡಾ|| ನಾರಾಯಣ ಗೌಡ)
ಪೌರಾಡಳಿತ ಹಾಗೂ
ತೋಟಗಾರಿಕೆ ಮತ್ತು ರೇಷ್ಮೆ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **1531**

ವಿಧಾನ ಸಭೆ ಸದಸ್ಯರ ಹೆಸರು : ಶ್ರೀ ದೇಶಪಾಂಡೆ ಆರ್.ವಿ. (ಹಳಿಯಾಳ)

ಉತ್ತರಿಸಬೇಕಾದ ದಿನಾಂಕ : 25.09.2020

ಉತ್ತರಿಸುವ ಸಚಿವರು : ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿ ವಿತರಿಸಲಾದ ಸೀಮೆಎಣ್ಣೆಯ ಪ್ರಮಾಣವೆಷ್ಟು (ವರ್ಷವಾರು, ಜಿಲ್ಲಾವಾರು ಹಾಗೂ ತಾಲ್ಲೂಕುವಾರು ವಿವರ ನೀಡುವುದು);	ಜಿಲ್ಲಾವಾರು ಮಾಹಿತಿಯನ್ನು ಅನುಬಂಧ 1ರಲ್ಲಿ ಲಗತ್ತಿಸಿದೆ.
ಆ	ಉತ್ತರ ಕನ್ನಡ ಜಿಲ್ಲೆಗೆ 2020ನೇ ಜನವರಿಯಿಂದ 31 ಆಗಸ್ಟ್ 2020ರವರೆಗೆ ತಾಲ್ಲೂಕುವಾರು ವಿತರಿಸಿದ ಸೀಮೆಎಣ್ಣೆ ಪ್ರಮಾಣವೇಷ್ಟು;	ಉತ್ತರ ಕನ್ನಡ ಜಿಲ್ಲೆಯ ತಾಲ್ಲೂಕುವಾರು ಮಾಹಿತಿಯನ್ನು ಅನುಬಂಧ 2ರಲ್ಲಿ ಲಗತ್ತಿಸಿದೆ.
ಇ	ಪ್ರಸ್ತುತ ಯಾವ ಕುಟುಂಬಕ್ಕೆ ಎಷ್ಟು ಲೀಟರ್ ಸೀಮೆಎಣ್ಣೆ ವಿತರಿಸಲಾಗುತ್ತದೆ;	ಪ್ರಸ್ತುತ ಅನಿಲ ಸಂಪರ್ಕ ಇಲ್ಲದ ಅರ್ಹ ಕುಟುಂಬಕ್ಕೆ ಮಾತ್ರ 3 ಲೀಟರ್ ನಂತೆ ಸೀಮೆಎಣ್ಣೆಯನ್ನು ಪ್ರತಿ ಲೀಟರ್ ಗೆ ರೂ.35/-ರ ದರದಲ್ಲಿ ವಿತರಿಸಲಾಗುತ್ತಿದೆ. ಇದಲ್ಲದೆ, ಗ್ರಾಮಾಂತರ ಪ್ರದೇಶದಲ್ಲಿ ಅನಿಲ ಸಂಪರ್ಕ ಹೊಂದಿರುವಂತಹ ಯಾವುದೇ ವರ್ಗದ ಪಡಿತರ ಚೀಟಿದಾರರು ಸೀಮೆಎಣ್ಣೆಗಾಗಿ ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದಲ್ಲಿ ಅಂತಹ ಪ್ರತಿ ಪಡಿತರ ಚೀಟಿದಾರರಿಗೆ ಪ್ರತಿ ಮಾಹೆ 1 ಲೀಟರ್ ಸೀಮೆಎಣ್ಣೆಯನ್ನು ಪ್ರತಿ ಲೀಟರ್‌ಗೆ ರೂ.35/-ರ ದರದಲ್ಲಿ ವಿತರಿಸಲಾಗುತ್ತಿದೆ.
ಈ	ಹಳಿಯಾಳ ಕ್ಷೇತ್ರದ ಹಳಿಯಾಳ ತಾಲ್ಲೂಕು ಮತ್ತು ಜೋಯಿಡಾ ತಾಲ್ಲೂಕಿನ ಗ್ರಾಮಗಳಲ್ಲಿ ಕಡಿಮೆ ಸೀಮೆಎಣ್ಣೆ ವಿತರಿಸಲು ಕಾರಣವೇನು	ರಾಜ್ಯದಲ್ಲಿನ ಅಡುಗೆ ಅನಿಲ ಸಂಪರ್ಕಗಳ ಸಂಖ್ಯೆಗನುಗುಣವಾಗಿ ಕೇಂದ್ರ ಸರ್ಕಾರದಿಂದ ಸೀಮೆಎಣ್ಣೆ ಹಂಚಿಕೆ ಪ್ರಮಾಣವನ್ನು ನಿರ್ಧರಿಸಿ, ಅಡುಗೆ ಅನಿಲ ಸಂಪರ್ಕಗಳ

	(ಸಂಪೂರ್ಣ ವಿವರ ನೀಡುವುದು)	ಸಂಖ್ಯೆಗನುಸಾರ ಸೀಮೆಎಣ್ಣೆ ಹಂಚಿಕೆ ಪ್ರಮಾಣವನ್ನು ಕಡಿಮೆಗೊಳಿಸಲಾಗಿದೆ. ಪ್ರಧಾನ ಮಂತ್ರಿ ಉಜ್ವಲ ಯೋಜನೆ, ರಾಜ್ಯದ ಮುಖ್ಯ ಮಂತ್ರಿ ಅನಿಲ ಭಾಗ್ಯ ಯೋಜನೆ ಮತ್ತು ಇತರೆ ಮಾರ್ಗಗಳೊಂದಿಗೆ ಬಹುತೇಕ ಫಲಾನುಭವಿಗಳಿಗೆ ಈಗಾಗಲೇ ಅಡುಗೆ ಅನಿಲ ಸಂಪರ್ಕ ಲಭ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿಯೂ ಸಹ ಸೀಮೆಎಣ್ಣೆ ಹಂಚಿಕೆ ಪ್ರಮಾಣವನ್ನು ಕಡಿಮೆ ಮಾಡಲಾಗಿದೆ.
ಉ	ಜೋಯಿಡಾ ತಾಲ್ಲೂಕಿನಲ್ಲಿ ವಿದ್ಯುತ್ ಸೌಲಭ್ಯವಿಲ್ಲದ ಮನೆಗಳು/ ಮಜಿರೆಗಳಿಗೆ ಸೀಮೆಎಣ್ಣೆ ಪ್ರಮಾಣ ಕಡಿಮೆ ಮಾಡಿದರೆ ಜನರಿಗೆ ಸಮಸ್ಯೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು. ಜಿಲ್ಲೆಯಲ್ಲಿನ ಅಡುಗೆ ಅನಿಲ ಸಂಪರ್ಕ ಹೊಂದಿರದ ಫಲಾನುಭವಿಗಳನ್ನು ಗುರುತಿಸಿ ಅವರಿಗೆ ಸೀಮೆಎಣ್ಣೆಯನ್ನು ಪೂರೈಕೆ ಮಾಡುವ ಬಗ್ಗೆ ತಾಲ್ಲೂಕುವಾರು ಹಾಗೂ ಪ್ರದೇಶವಾರು ಸಮಗ್ರ ಸ್ಥಳ ತನಿಖೆಯೊಂದಿಗೆ ಕಾರ್ಯ ನಿರ್ವಹಿಸುವಂತೆ ಜಿಲ್ಲಾಡಳಿತಕ್ಕೆ ಅಗತ್ಯ ಸೂಚನೆಯನ್ನು ನೀಡಲಾಗಿದೆ.
ಊ	ಬಂದಿದ್ದಲ್ಲಿ, ಸರ್ಕಾರ ಯಾವಾಗ ಪರಿಹರಿಸಲಿದೆ (ವಿವರ ನೀಡುವುದು)?	ಗ್ರಾಮಾಂತರ ಪ್ರದೇಶದಲ್ಲಿ ವಿದ್ಯುತ್ ಸೌಲಭ್ಯ ಕೊರತೆ ಇರುವ ಪ್ರದೇಶಗಳಲ್ಲಿ ಪ್ರತಿ ಪಡಿತರ ಚೀಟಿದಾರರಿಗೆ ಪ್ರತಿ ಮಾಹೆ 1 ಲೀಟರ್ ಸೀಮೆಎಣ್ಣೆಯನ್ನು ಪ್ರತಿ ಲೀಟರ್‌ಗೆ ರೂ.35/-ರ ದರದಲ್ಲಿ ವಿತರಿಸಲಾಗುತ್ತಿದೆ.

ಆನಾಸ 259 ಡಿಆರ್‌ಎ 2020 (ಇ-ಆಫೀಸ್)

(ಕೆ.ಗೋಪಾಲಯ್ಯ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

1531

ಅನುಬಂಧ - 1 LAQ : 1531

2020-21 ಸೀಮೆ ಎಣ್ಣೆ ಹಂಚಿಕೆ ವಿವರ

ಕ್ರ. ಸಂ	ಜಿಲೆ ಯ ಹೆಸರು	Apr & May-2020	Jun-20	Jul-20	Aug-20	Sep-20	Total
1	ಬಾಗಲಕೋಟೆ	413174	205717	116334	102579	96847	934651
2	ಬೆಂಗಳೂರು (ನಗರ)	0	0	0	0	0	0
3	ಬೆಂಗಳೂರು (ಗ್ರಾ)	81636	40818	40817	40817	40817	244905
4	ಬೆಳಗಾವಿ	838884	386641	365418	379160	451459	2421562
5	ಬಳ್ಳಾರಿ	35224	17928	17932	17906	17777	106767
6	ಬೀದರ್	149506	44979	4800	4539	4494	208318
7	ವಿಜಯಪುರ	698604	347766	153152	126007	90074	1415604
8	ಚಾಮರಾಜನಗರ	334636	167205	124900	118457	110112	855311
9	ಚಿಕ್ಕಮಗಳೂರು	232168	117021	95736	92420	82186	619531
10	ಚಿತ್ರದುರ್ಗ	65004	32438	19758	17906	15657	150763
11	ದಕ್ಷಿಣ ಕನ್ನಡ	0	0	0	0	0	0
12	ದಾವಣಗೆರೆ	0	0	0	0	0	0
13	ಧಾರವಾಡ	244220	97929	63300	57440	53142	516031
14	ಗದಗ	418310	207697	96767	80635	58428	861837
15	ಕಲಬುರ್ಗಿ	862654	424007	190944	148417	109465	1735487
16	ಹಾಸನ	362888	181732	182072	182314	182599	1091605
17	ಹಾವೇರಿ	280736	139864	139647	139655	151222	851124
18	ಕೊಡಗು	167458	81763	65426	61508	60350	436505
19	ಕೋಲಾರ	88170	44135	44222	36689	44273	257489
20	ಕೊಪ್ಪಳ	497348	248641	109561	90104	63588	1009242
21	ಮಂಡ್ಯ	542986	271588	271943	272063	272387	1630967
22	ಮೈಸೂರು	737368	368823	369136	369231	369457	2214015
23	ರಾಯಚೂರು	12884	6442	6788	6789	6829	39732
24	ಶಿವಮೊಗ್ಗ	311914	156046	156249	156390	156649	937248
25	ತುಮಕೂರು	390616	195515	195794	195851	196872	1174648
26	ಉಡುಪಿ	253064	109689	102895	99739	100937	666324
27	ಉತ್ತರ ಕನ್ನಡ	642236	313122	210905	196549	179388	1542200
28	ಚಿಕ್ಕಬಳ್ಳಾಪುರ	114460	57324	57468	58291	59919	347462
29	ರಾಮನಗರ	178014	89317	89497	89599	90098	536525
30	ಯಾದಗಿರಿ	240476	119788	54097	43912	30773	489046
31	ಬೆಂಗಳೂರು (ಅಪ)	0	0	0	0	0	0
Total		9194638	4473935	3345558	3184969	3095798	23294899

2019-20 ಸೀಮೆ ಎಣ್ಣೆ ಹಂಚಿಕೆ ವಿವರ														
ಕ್ರ. ಸಂ	ಜಿಲೆಯ ಹೆಸರು	Apr-19	May-19	Jun-19	Jul-19	Aug-19	Sep-19	Oct-19	Nov-19	Dec-19	Jan-20	Feb-20	Mar-20	Total
1	ಬಾಗಲಕೋಟೆ	463511	460554	437047	223102	202550	202920	201932	201932	200910	273858	257582	251870	3377768
2	ಬೆಂಗಳೂರು (ನಗರ)	0	0	0	0	0	0	0	0	0	0	0	0	0
3	ಬೆಂಗಳೂರು (ಗ್ರಾ)	40893	40892	40892	40859	40858	40862	40868	24000	40815	40815	40814	40817	473385
4	ಬೆಳಗಾವಿ	1206160	1196700	1196809	709732	660844	659370	654452	654452	652822	808218	789305	685424	9874289
5	ಬಳ್ಳಾರಿ	228348	224886	217206	112759	75019	68353	38184	38184	30150	36822	36312	41792	1148017
6	ಬೀದರ್	344954	327538	323852	162600	146693	146155	142826	142826	127621	164925	156705	101164	2287859
7	ವಿಜಯಪುರ	547816	546613	546592	269104	242289	221640	214138	214138	201974	289090	305399	387445	3986238
8	ಚಾಮರಾಜನಗರ	243912	235202	233745	155354	148534	149348	142698	142698	131248	155820	161732	176226	2076516
9	ಚಿಕ್ಕಮಗಳೂರು	233627	233889	234553	142382	132487	128494	125366	125366	122318	125359	121365	128430	1853635
10	ಚಿತ್ರದುರ್ಗ	213780	212052	211504	103463	93771	93396	91567	91567	54318	65348	62587	38862	1332216
11	ದಕ್ಷಿಣ ಕನ್ನಡ	239831	232406	232427	165370	156848	156469	149499	0	0	0	0	0	1332850
12	ದಾವಣಗೆರೆ	64263	61794	60499	17484	13044	4572	3575	0	0	0	0	0	225231
13	ಧಾರವಾಡ	186244	181094	180412	109245	102457	101424	99694	99694	97041	120902	125759	144300	1548266
14	ಗದಗ	282094	269884	268565	129737	117202	117386	117603	117603	115853	169846	181803	230087	2117663
15	ಕಲಬುರ್ಗಿ	653767	650740	646501	313434	280398	275701	267326	267326	257952	362128	382033	468812	4826118
16	ಹಾಸನ	401400	389181	387377	241786	132460	150486	160770	159991	174210	177727	179191	180735	2735314
17	ಹಾವೇರಿ	373372	373421	372729	211593	196090	190328	180044	180044	158649	192218	175466	155530	2759484
18	ಕೊಡಗು	107884	104173	104331	70299	68446	70391	71559	71559	75179	88968	90573	89202	1012564
19	ಕೋಲಾರ	180267	173159	172069	104077	97485	95212	45397	40883	41452	43086	43725	43928	1080739
20	ಕೊಪ್ಪಳ	412242	408009	407592	200917	180835	180251	178638	178638	170452	229278	244663	298535	3090050
21	ಮಂಡ್ಯ	427226	426145	419531	318222	276099	228979	237918	237914	257970	265527	269040	270923	3635495
22	ಮೈಸೂರು	407744	407493	407996	383555	381064	379595	377023	377023	374091	366112	366324	367921	4595941
23	ರಾಯಚೂರು	397723	380261	377474	177572	156212	143764	122522	122522	83927	13666	6443	6442	1988528
24	ಶಿವಮೊಗ್ಗ	148165	148249	148490	149097	150108	151162	152235	152226	154121	154697	155096	155652	1819298
25	ತುಮಕೂರು	500647	485201	481426	312957	295209	292405	281204	281204	238952	258919	183308	192558	3803989
26	ಉಡುಪಿ	156346	156098	156128	121345	118615	120670	122049	122049	124529	138411	138285	148206	1622732
27	ಉತ್ತರ ಕನ್ನಡ	411427	406930	406190	251994	237254	238232	239549	239549	241796	297780	303743	341232	3615676
28	ಚಿಕ್ಕಬಳ್ಳಾಪುರ	223250	223650	225236	133919	125574	115961	114066	114066	53721	51264	54544	56636	1491887
29	ರಾಮನಗರ	216981	216426	204165	131785	121691	103042	96490	96490	79668	83574	86311	88339	1524960
30	ಯಾದಗಿರಿ	353280	349356	330153	158228	142269	138664	131458	131458	71405	94151	100375	127223	2128020
31	ಬೆಂಗಳೂರು (ಅಪ)	0	0	0	0	0	0	0	0	0	0	0	0	0
	ಒಟ್ಟು	9667154	9521996	9431491	5621971	5092407	4965234	4800647	4625400	4333143	5068509	5018484	5218291	73364726

1531

1531
3

2018-19 ಸೀಮೆ ಎಣ್ಣೆ ಹಂಚಿಕೆ ವಿವರ

ಕ್ರ. ಸಂ	ಜಿಲ್ಲೆಯ ಹೆಸರು	Apr-18	May-18	Jun-18	Jul-18	Aug-18	Sep-18	Oct-18	Nov-18	Dec-18	Jan-19	Feb-19	Mar-19	Total
1	ಬಾಗಲಕೋಟೆ	479798	480122	480134	481580	483948	486375	486317	487222	488211	488018	473406	466938	5782069
2	ಬೆಂಗಳೂರು (ನಗರ)	0	0	0	0	0	0	0	0	0	0	0	0	0
3	ಬೆಂಗಳೂರು (ಗ್ರಾ)	40247	40257	40268	40282	40372	40458	40493	40516	40539	40658	40720	40879	485689
4	ಬೆಳಗಾವಿ	1143226	1147550	1154089	1167092	1183602	1201573	1213094	1223034	1231579	1237561	1226350	1228439	14357189
5	ಬಳ್ಳಾರಿ	348451	350906	351423	351529	351488	351500	345230	341469	341324	339241	325147	320862	4118570
6	ಬೀದರ್	394199	394244	394281	394350	394550	394117	392982	393029	393203	392777	381253	380726	4699711
7	ವಿಜಯಪುರ	584017	583972	584046	584020	584073	582964	579363	579075	578773	577414	565748	552004	6935469
8	ಚಾಮರಾಜನಗರ	227621	229140	231326	234558	238437	242522	244012	246381	248606	249776	246524	246164	2885067
9	ಚಿಕ್ಕಮಗಳೂರು	230897	231686	232389	233292	235859	237794	238855	240301	242657	243135	240924	238508	2846297
10	ಚಿತ್ರದುರ್ಗ	254996	254973	254919	255032	255504	251571	250322	250645	250969	250742	244186	241947	3015806
11	ದಕ್ಷಿಣ ಕನ್ನಡ	218070	220229	222720	228184	237265	244003	247600	252351	254271	254714	255244	254493	2889144
12	ದಾವಣಗೆರೆ	72236	72227	72209	72179	72176	72165	71866	71862	71215	71051	69022	68696	856904
13	ಧಾರವಾಡ	177788	178117	178534	180206	184073	186895	189352	190977	192445	193004	189541	187424	2228356
14	ಗದಗ	304462	304499	304646	304854	305499	305655	303945	303918	303739	303507	294034	288654	3627412
15	ಕಲಬುರ್ಗಿ	699588	699345	698916	698916	696345	694812	688060	687670	687214	686573	668889	666316	8272644
16	ಹಾಸನ	397581	399536	401219	404071	408785	411396	415891	420766	426319	430465	421512	412670	4950211
17	ಹಾವೇರಿ	369217	373445	375595	378009	383901	388042	389835	392396	394496	396022	385236	380992	4607186
18	ಕೊಡಗು	103961	104290	104818	105859	107432	108324	109529	110563	111305	111953	112228	113224	1303486
19	ಕೋಲಾರ	198215	199544	200002	201096	202362	202731	202913	203617	204185	204551	197475	196299	2412990
20	ಕೊಪ್ಪಳ	435802	435868	435882	435916	435888	436178	434536	434601	434733	434013	423485	422194	5199096
21	ಮಂಡ್ಯ	414087	416900	419027	422366	426612	431288	433118	434844	438659	441269	436091	430693	5144954
22	ಮೈಸೂರು	379706	382900	385625	389110	393204	396122	399306	402019	403970	406036	406413	407666	4752077
23	ರಾಯಚೂರು	448668	448423	448400	448351	447681	446777	442186	441696	441253	440692	434777	431089	5319993
24	ಶಿವಮೊಗ್ಗ	94709	96894	98542	102389	121134	129253	134797	137297	140259	142630	144891	147694	1490489
25	ತುಮಕೂರು	512033	512544	513427	517698	526927	532899	525500	525917	530636	533535	525487	526480	6283083
26	ಉಡುಪಿ	131309	133635	136491	144662	157313	163016	167084	169333	171425	172715	171866	170897	1889746
27	ಉತ್ತರ ಕನ್ನಡ	399983	402194	404662	406943	412076	416122	417808	419874	421801	423137	421357	421454	4967411
28	ಚಿಕ್ಕಬಳ್ಳಾಪುರ	304487	304783	305294	306545	307929	308392	308225	295827	289623	287412	279741	224051	3522309
29	ರಾಮನಗರ	207518	207651	207769	207974	210223	212907	215753	218624	220630	218375	215845	216925	2560194
30	ಯಾದಗಿರಿ	385957	385730	385692	385716	385487	385079	382142	381875	381397	380946	374871	367728	4582620
31	ಬೆಂಗಳೂರು (ಅಪ)	0	0	0	0	0	0	0	0	0	0	0	0	0
	ಒಟ್ಟು	9958829	9991604	10022345	10082779	10190145	10260930	10270114	10297699	10335436	10351922	10172263	10052106	121986172

ಅನುಬಂಧ - 2

LAQ:1531

ತಾಲೂಕುವಾರು ಸೀಮೆಎಣ್ಣೆ ಹಂಚಿಕೆ

ತಾಲ್ಲೂಕ	ಜನೇವರಿ 2020	ಪೆಬ್ರವರಿ2020	ಮಾರ್ಚ2020	ಎಪ್ರೀಲ್& ಮೇ 2020	ಜೂನ2020	ಜುಲೈ2020	ಅಗಸ್ಟ 2020
ಕಾರವಾರ	16.979	20.778	22.372	42.752	21.38	17.012	15.463
ಅಂಕೋಲಾ	20.006	25.865	27.991	57.502	26.744	20.281	17.849
ಕುಮಟಾ	32.085	41.124	45.706	85.012	40.703	30.250	26.680
ಹೊನ್ನಾವರ	26.675	30.728	31.667	60.342	30.255	25.280	23.951
ಭಟ್ಕಳ	16.358	18.807	19.099	35.540	17.77	15.588	14.816
ಸಿದ್ದಾಪುರ	18.959	23.553	24.665	42.46	21.278	16.985	15.648
ಶಿರಸಿ	28.414	35.875	39.899	75.236	34.655	25.678	22.646
ಮುಂಡಗೋಡ	17.056	20.857	19.594	29.806	15.585	12.453	11.712
ಹಳಿಯಾಳ	30.417	45.506	52.785	90.26	45.084	29.187	23.386
ಜೊಯಿಡಾ	14	20.239	23.055	43.744	21.866	14.540	11.820
ಯಲ್ಲಾಪುರ	14.438	20.411	22.814	42.268	21.196	14.132	11.561
	235.387	303.743	329.647	604.922	296.516	221.386	195.532

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1532
2. ಸದಸ್ಯರ ಹೆಸರು : ಶ್ರೀ ದೇಶಪಾಂಡೆ ಆರ್.ವಿ. (ಹಳಿಯಾಳ)
3. ಉತ್ತರಿಸುವ ದಿನಾಂಕ : 25.09.2020
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ಕಳೆದ ಮೂರು ವರ್ಷಗಳಲ್ಲಿ ಕೆ.ಐ.ಎ.ಡಿ.ಬಿ. ವತಿಯಿಂದ ಇದುವರೆವಿಗೂ ಕೈಗಾರಿಕೆಗಳ ಉಪಯೋಗಕ್ಕಾಗಿ ಸ್ವಾಧೀನಪಡಿಸಿಕೊಂಡಿರುವ ಭೂಮಿಯ ವಿಸ್ತೀರ್ಣವೆಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು);</td><td>ಕಳೆದ ಮೂರು ವರ್ಷಗಳಿಂದ ಇದುವರೆಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಸ್ವಾಧೀನಪಡಿಸಿಕೊಂಡ ವಿಸ್ತೀರ್ಣದ ವಿವರ ಈ ಕೆಳಕಂಡಂತಿದೆ:-
<table><tr><td>ಕೈಗಾರಿಕಾ ಪ್ರದೇಶ</td><td>5100-26 ಎಕರೆ</td></tr><tr><td>ಏಕಘಟಕ ಸಂಕೀರ್ಣ ಯೋಜನೆ</td><td>3594-11 ಎಕರೆ</td></tr><tr><td>ಒಟ್ಟು</td><td>8694-37 ಎಕರೆ</td></tr></table>ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ಒದಗಿಸಿದೆ.</td></tr>
<tr><td>ಆ.</td><td>ಕೆ.ಐ.ಎ.ಡಿ.ಬಿ. ವತಿಯಿಂದ ರೈತರ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವಾಗ ಅನುಸರಿಸಿರುವ ಮಾನದಂಡಗಳೇನು (ವಿವರಗಳನ್ನು ನೀಡುವುದು);</td><td>ಕೆ.ಐ.ಎ.ಡಿ.ಬಿ. ವತಿಯಿಂದ ಕೈಗಾರಿಕಾ ಉದ್ದೇಶಕ್ಕಾಗಿ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳುವಾಗ ಸರ್ಕಾರದ ದಿನಾಂಕ: 18.03.2013ರ ಸುತ್ತೋಲೆ ಸಂಖ್ಯೆ: ಸಿಐ 590 ಎಸ್.ಪಿಕ್ಯೂ 2012 ರಲ್ಲಿ ನಿಗದಿಪಡಿಸಿರುವ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ.</td></tr>
</table>

		(ಸುತ್ತೋಲೆ ಪ್ರತಿಯನ್ನು ಅನುಬಂಧ-2 ರಲ್ಲಿ ಒದಗಿಸಿದೆ.)
ಇ.	ಇದಕ್ಕಾಗಿ ಸಂಬಂಧಪಟ್ಟ ರೈತರಿಗೆ ಪ್ರತಿ ಎಕರೆಗೆ ಎಷ್ಟು ಪ್ರಮಾಣದ ಪರಿಹಾರಧನವನ್ನು ನೀಡಲಾಗಿದೆ (ಜಿಲ್ಲಾವಾರು ವಿವರಗಳನ್ನು ನೀಡುವುದು)?	ಜಿಲ್ಲಾವಾರು ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಿದೆ.

ಸಂಖ್ಯೆ: ಸಿಐ 168 ಐಎಪಿ (ಇ) 2020

(ಜಗದೀಶ ಶೆಟ್ಟರ)

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

1532

ಅನುಬಂಧ-1

ಕಳೆದ ಮೂರು ವರ್ಷಗಳಿಂದ ಇದುವರೆಗೆ ಕೆಐಎಡಿಬಿ ವತಿಯಿಂದ ಕೈಗಾರಿಕಾ ಪ್ರದೇಶ ಮತ್ತು ಏಕಘಟಕ ಸಂಕೀರ್ಣಗಳಿಗಾಗಿ ಸ್ವಾಧೀನಪಡಿಸಿಕೊಳ್ಳಲಾಗಿರುವ ಜಮೀನುಗಳ ಜಿಲ್ಲಾವಾರು ವಿವರ ಕೆಳಗಿನಂತಿದೆ.

ಕ್ರ ಸಂ	ಜಿಲ್ಲೆಯ ಹೆಸರು	ಕಳೆದ ಮೂರು ವರ್ಷಗಳಿಂದ ಇದುವರೆಗೆ ಸ್ವಾಧೀನಪಡಿಸಿಕೊಂಡಿರುವ ಜಮೀನಿನ ವಿಸ್ತೀರ್ಣ (ಎ-ಗು)		
		ಕೈಗಾರಿಕಾ ಪ್ರದೇಶ	ಏಕಘಟಕ ಸಂಕೀರ್ಣ	ಒಟ್ಟು
1	ಬೆಂಗಳೂರು ನಗರ	30-38	233-29	264-27
2	ಬೆಂಗಳೂರು ಗ್ರಾಮಾಂತರ	2090-21	56-05	2146-26
3	ರಾಮನಗರ	912-12	-	912-12
4	ಚಿಕ್ಕಬಳ್ಳಾಪುರ	495-26	-	495-26
5	ಕೋಲಾರ	335-16	-	335-16
6	ತುಮಕೂರು	155-22	49-30	205-12
7	ದಾವಣಗೆರೆ	56-27	-	56-27
8	ಬಳ್ಳಾರಿ	-	213-00	213-00
9	ಚಿತ್ರದುರ್ಗ	-	41-18	41-18
10	ಮೈಸೂರು	296-26	50-23	347-09
11	ಮಂಡ್ಯ	14-35	2-11	17-06
12	ಚಾಮರಾಜನಗರ	-	-	-
13	ಹಾಸನ	-	216-39	216-39
14	ದಕ್ಷಿಣ ಕನ್ನಡ	9-25	962-00	971-25
15	ಚಿಕ್ಕಮಗಳೂರು	236-38	-	236-38
16	ಶಿವಮೊಗ್ಗ	-	-	
17	ಉಡುಪಿ	-	-	
18	ಕೊಡಗು	-	-	
19	ಧಾರವಾಡ	4-00	-	4-00
20	ಹಾವೇರಿ	-	-	-
21	ಕೊಪ್ಪಳ	270-01	698-10	968-11
22	ಬೆಳಗಾವಿ	173-28	14-21	188-09
